ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕಮಿನ್ಸ್ ಕೈಚಳಕ ದಿಂಡುರುಳಿದ ಡೆಲ್ಲಿ

ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ತಮ್ಮ ಮೂರು ಓವರ್‌ಗಳ ಮೊದಲ ಎಸೆತದಲ್ಲಿ ವಿಕೆಟ್ ಪಡೆಯುವ ಮೂಲಕ ಐಪಿಎಲ್‌ನಲ್ಲಿ ಹೊಸ ದಾಖಲೆ ಮಾಡಿದ್ದಾರೆ. ಕಮಿನ್ಸ್ ದಾಳಿಗೆ ಕುಸಿದ ಡೆಲ್ಲಿ ತಂಡವು ನಿಗದಿತ 20 ಓವರ್‌ನಲ್ಲಿ ಕೇವಲ 133 ರನ್ ಗಳಿಸಲಷ್ಟೇ ಶಕ್ತವಾಯಿತು.

ಪಾಕ್ ಮೇಲೆ ದಾಳಿಗೆ ಭಾರತ ಸನ್ನದ್ಧ
ನಾಳೆ ದೇಶಾದ್ಯಂತ ಅಣಕು ತಾಲೀಮು
ಯುದ್ಧ ಸನ್ನಿಹಿತ

ದೆಹಲಿ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧದ ಕಾರ್ಮೋಡ ಮತ್ತಷ್ಟು ದಟ್ಟವಾಗಿದೆ. ಈ ನಡುವೆಯೇ ಮೇ 7ರಂದು ಮಾಕ್ ಡ್ರಿಲ್ ನಡೆಸುವಂತೆ ನಡೆಸುವಂತೆ ಕೇಂದ್ರ ಗೃಹ ಸಚಿವಾಲಯವು ಹಲವು ರಾಜ್ಯಗಳಿಗೆ ಸೂಚಿಸಿದೆ.

ವಾಯುದಾಳಿಯ ಸೈರನ್ ವ್ಯವಸ್ಥೆ ಇರುವಂತೆ ನೋಡಿಕೊಳ್ಳಿ ಮತ್ತು ಪ್ರತಿಕೂಲ ದಾಳಿಯ ಸಂದರ್ಭದಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಪರಿಣಾಮಕಾರಿ ರಕ್ಷಣಾ ಅಂಶಗಳ ಕುರಿತು ತರಬೇತಿ ನೀಡಬೇಕು. ಪ್ರತಿಕೂಲ ದಾಳಿಯ ಸಂದರ್ಭದಲ್ಲಿ ಸಿದ್ಧತೆಯನ್ನು ಪರೀಕ್ಷಿಸಲು ಮತ್ತು ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸಲು ಮೇ 7ರಂದು ಸಮಗ್ರ ನಾಗರಿಕ ರಕ್ಷಣಾ ಅಣಕು ಕವಾಯತುಗಳನ್ನು ನಡೆಸಬೇಕು. ಕ್ರ್ಯಾಶ್ ಬ್ಲ್ಯಾಕೌಟ್ ಕ್ರಮಗಳನ್ನು ಒದಗಿಸಬೇಕು, ಪ್ರಮುಖ ಸ್ಥಾವರಗಳು ಮತ್ತು ಪ್ರಮುಖ ಕಟ್ಟಡಗಳನ್ನು ಮರೆಮಾಚುವಿಕೆ ಮತ್ತು ನಾಗರಿಕರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ನಡೆಸುವ ಬಗ್ಗೆ ಪೂರ್ವಾಭ್ಯಾಸ ಮಾಡಬೇಕು ಎಂದು ಸೂಚಿಸಲಾಗಿದೆ.

ರಕ್ಷಣಾ ಕಾರ್ಯದರ್ಶಿ ಜತೆ ಪ್ರಧಾನಿ ಚರ್ಚೆ: ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಳಿಕ ಭಾರತ ಹಾಗೂ ಪಾಕಿಸ್ತಾನ ನಡುವೆ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ದಾಳಿಯಲ್ಲಿ ಭಾಗಿಯಾ ದವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವುದಾಗಿ ಕೇಂದ್ರ ಸರಕಾರ ಹೇಳಿದೆ. → 4

ಭಾರತಕ್ಕೆ ರಷ್ಯಾ, ಜಪಾನ್ ಬೆಂಬಲ



ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ದೂರವಾಣಿ ಕರೆ ಮಾಡಿ, ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ. ಜತೆಗೆ, ಪಹಲ್ಗಾಮ್ ಉಗ್ರ ದಾಳಿಕೋರರಿಗೆ ಮಣ್ಣುಮುಕ್ಕಿಸಿ ಎಂದು ಹೇಳಿದ್ದಾರೆ. ಭಾರತದ ಪ್ರವಾಸದಲ್ಲಿರುವ ಜಪಾನ್‌ನ ರಕ್ಷಣಾ ಸಚಿವ ಜನರಲ್ ನಕಾಟಾನಿ ಅವರನ್ನು ಭೇಟಿಯಾಗಿರುವ ರಕ್ಷಣಾ ಸಚಿವ ರಾಜನಾಥ ಸಿಂಗ್, ಭಯೋತ್ಪಾದನೆ, ಇಂಡೋ-ಫೆಸಿಫಿಕ್‌ನಲ್ಲಿ ಚೀನಾ ಮಿಲಿಟರಿ ನಿಲುವು ಸೇರಿದಂತೆ ದ್ವಿಪಕ್ಷೀಯ ರಕ್ಷಣಾ ಬಾಂಧವ್ಯ ವಿಸ್ತರಿಸುವ ಸಂಬಂಧ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯನ್ನು ಜಪಾನ್‌ನ ರಕ್ಷಣಾ ಸಚಿವರು ಖಂಡಿಸಿದ್ದು, ಭಾರತಕ್ಕೆ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ.

ಉಗ್ರರ ಅಡಗುತಾಣ ಪತ್ತೆ

ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಅರಣ್ಯದಲ್ಲಿ ಉಗ್ರರ ಅಡಗುತಾಣವನ್ನು ಪತ್ತೆ ಮಾಡಿರುವ ಭದ್ರತಾ ಪಡೆಗಳು ಐದು ಕಚ್ಚಾಬಾಂಬ್‌ಗಳು ಮತ್ತು ಎರಡು ವೈರ್‌ಲೆಸ್‌ಗಳನ್ನು ವಶಕ್ಕೆ ಪಡೆದಿವೆ. ಬಳಕೆಗೆ ಸಜ್ಜುಗೊಳಿಸಿ ಇಟ್ಟಿದ್ದ ಅರ್ಧ ಕೆ.ಜಿಯಿಂದ ಐದು ಕೆ.ಜಿ ತೂಗುತ್ತಿದ್ದ ಕಚ್ಚಾ ಬಾಂಬ್‌ಗಳನ್ನು ಸ್ಥಳದಲ್ಲೇ ನಿಷ್ಕ್ರಿಯಗೊಳಿಸಲಾಗಿದೆ. ಸುರಾನ್ ಕೋಟ್ ಸಮೀಪದ ಸುರಂತಾಲ್‌ನಲ್ಲಿ ಜಂಟಿ ಕಾರ್ಯಾಚರಣೆಯಲ್ಲಿ ಬಕೆಟ್ ಮತ್ತು ಟಿಫನ್ ಬಾಕ್ಸ್‌ನಲ್ಲಿ 5 ಸ್ಫೋಟಕಗಳು, ಗ್ಯಾಸ್ ಸಿಲಿಂಡರ್, ಬೈನಾಕ್ಯುಲರ್ ಮತ್ತಿತರ ವಸ್ತುಗಳು ಪತ್ತೆಯಾಗಿವೆ.

ಪಾಕಿಸ್ತಾನಕ್ಕೆ ಚೀನಾ ಬಲ

ಪಾಕಿಸ್ತಾನದಲ್ಲಿರುವ ಚೀನಾ ರಾಯಭಾರಿ ಜಿಯಾಂಗ್ ಜೈಡಾಂಗ್ ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರನ್ನು ಭೇಟಿ ಮಾಡಿ ಭಾರತದೊಂದಿಗೆ ನಡೆಯುತ್ತಿರುವ ಪರಿಸ್ಥಿತಿಯ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದು, 'ಯಾವುದೇ ಕ್ಷಣದಲ್ಲೂ ನಿಮ್ಮನ್ನು ಬಿಟ್ಟು ಕೊಡುವುದಿಲ್ಲ' ಎಂದು ಪಾಕಿಸ್ತಾನಕ್ಕೆ ಚೀನಾ ಅ ಭಯ ನೀಡಿದೆ.

ಪಾಕ್: ಮತ್ತೆ ಕ್ಷಿಪಣಿ ಪರೀಕ್ಷೆ

ಭಾರತದ ಜತೆ ಉದ್ವಿಗ್ನ ಪರಿಸ್ಥಿತಿ ಇರುವಾಗಲೇ ಪಾಕಿಸ್ತಾನವು 120 ಕಿ.ಮೀ. ದೂರ ಕ್ರಮಿಸುವ ಸಾಮರ್ಥ್ಯ ಇರುವ 'ಫತೇಹ್' ಸರಣಿಯ ನೆಲ ಕ್ಷಿಪಣಿಯ ತರಬೇತಿ ಉಡಾವಣೆಯನ್ನು ಸೋಮವಾರ ಯಶಸ್ವಿಯಾಗಿ ನೆರವೇರಿಸಿದೆ. 26 ಮಂದಿ ಸಾವಿಗೆ ಕಾರಣವಾದ ಪಹಲ್ಗಾಮ್ ದಾಳಿಯ ಬಳಿಕ ಉಭಯ ರಾಷ್ಟ್ರಗಳು ಸಮರಾಭ್ಯಾಸ ನಡೆಸುತ್ತಿವೆ.

ಉಗ್ರರಿಗೆ ಆಸರೆ ಕಾಶ್ಮೀರಿ ಖತಂ

ಉಗ್ರರಿಗೆ ಊಟ-ಆಶ್ರಯ ನೀಡಿ ನೆರವು ನೀಡಿದ್ದ ಇಮ್ತಿಯಾಜ್ ಅಹ್ಮದ್ ಮಾಗ್ರೆ (23) ಎಂಬಾತ ಭದ್ರತಾ ಪಡೆಗಳಿಂದ ತಪ್ಪಿಸಿಕೊಳ್ಳಲು ಹೋಗಿ, ನದಿಗೆ ಹಾರಿ ಮುಳುಗಿ ಸಾವನ್ನಪ್ಪಿದ್ದಾನೆ. ಇಮ್ತಿಯಾಜ್‌ನನ್ನು ಭಯೋತ್ಪಾದಕರು ಅಡಗಿದ್ದ ಸ್ಥಳಕ್ಕೆ ಕೊಂಡೊಯ್ಯುತ್ತಿದ್ದಾಗ, ತಪ್ಪಿಸಿಕೊಳ್ಳಲು ಯತ್ನಿಸಿ, ನದಿಗೆ ಹಾರಿದ್ದಾನೆ. ಈಜಲಾಗದೆ ಮೃತಪಟ್ಟಿದ್ದಾನೆ.

ನಾಗಮೋಹನ್ ದಾಸ್ ನೇತೃತ್ವದ ಆಯೋಗದಿಂದ ಸಮೀಕ್ಷೆ ಆರಂಭ
ಒಳಮೀಸಲು ಸಮೀಕ್ಷೆಗೆ 100 ಕೋಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರಿ ವಿವಾದ ಸೃಷ್ಟಿಸಿದ್ದ, ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಮುಖ ಘೋಷಣೆಗಳಲ್ಲಿ ಒಂದಾಗಿದ್ದ ಒಳಮೀಸಲು ಜಾರಿಗೆ ಸಂಬಂಧಿಸಿದ ಸಮೀಕ್ಷೆಗೆ ಸೋಮವಾರದಿಂದ ಅಧಿಕೃತ ಚಾಲನೆ ಸಿಕ್ಕಿದ್ದು, ಮುಂದಿನ 18 ದಿನ ವಿವಿಧ ಹಂತಗಳಲ್ಲಿ ಪರಿಶಿಷ್ಟ ಜಾತಿಯಲ್ಲಿರುವ ಒಳ ಮೀಸಲಿಗೆ ಸಂಬಂಧಿಸಿದಂತೆ ಸಮೀಕ್ಷೆ ನಡೆಯಲಿದೆ.

ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಆಯೋಗ ಒಳ ಮೀಸಲಿಗೆ ಸಂಬಂಧಿಸಿದ ಸಮೀಕ್ಷೆಯನ್ನು 58 ಸಾವಿರ ಶಿಕ್ಷಕರ ಸಹಾಯದೊಂದಿಗೆ ಆರಂಭಿಸಿದ್ದು, ಇದೀಗ ಈ ಸಮೀಕ್ಷೆಗೆ ಬರೋಬ್ಬರಿ ನೂರು ಕೋಟಿ ರು. ಅಗತ್ಯವಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದ್ದಾರೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಒಟ್ಟು 101 ಜಾತಿಗಳಿವೆ. ಈ ಪೈಕಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ, ಉಪ ಜಾತಿಗಳು ಯಾವ ಜಾತಿಗೆ ಸೇರಿವೆ ಎಂಬ ಗೊಂದಲವನ್ನೂ ಇತ್ಯರ್ಥಪಡಿಸಬೇಕಾಗಿದೆ. ದಾಖಲೆ, ಪುರಾವೆ, ಅಂತರ್ ಹಿಂದುಳಿದಿರುವಿಕೆ ಇನ್ನಿತರ ಮಾಹಿತಿ ಸಂಗ್ರಹಿಸಿ ವೈಜ್ಞಾನಿಕ ಮತ್ತು ತರ್ಕಬದ್ಧವಾಗಿ ಎಸ್‌ಸಿ ಮೀಸಲು ವರ್ಗೀಕರಣ ನಡೆಸುವ ಜವಾಬ್ದಾರಿಯಿದೆ.

ಹಂತ	ದಿನಾಂಕ	ವಿವರ
ಹಂತ 1	ಮೇ 5ರಿಂದ 17	ಮನೆ ಮನೆಗೆ ಹೋಗಿ ದತ್ತಾಂಶ ಸಂಗ್ರಹ
ಹಂತ 2	ಮೇ 19ರಿಂದ 21	ವಿಶೇಷ ಶಿಬಿರಗಳ ಮೂಲಕ ಮಾಹಿತಿ ಸಂಗ್ರಹ
ಹಂತ 3	ಮೇ 19ರಿಂದ 23	ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶ

ಹೇಗಿರಲಿದೆ ಸಮೀಕ್ಷಾ ಕಾರ್ಯ?

ಸಮೀಕ್ಷೆ ವೇಳೆ ಕುಟುಂಬದ ಯಾರಾದರೂ ಒಬ್ಬರು ಗಣತಿದಾರರಿಗೆ ಆಧಾರ್ ಕಾರ್ಡ್ ಅಥವಾ ಕುಟುಂಬದ ಪಡಿತರ ಚೀಟಿಯನ್ನು ತೋರಿಸಬೇಕು. ಅಂತರಜಾತಿ ವಿವಾಹವಾದ ಪ್ರಕರಣಗಳಲ್ಲಿ ಹೆಂಡತಿ ಅಥವಾ ಸೊಸೆಗೆ ಜಾತಿ ಬೇರೆಯಿದ್ದರೆ, → 4

ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ವರದಿ ಜಾರಿ ಬಗ್ಗೆ ಘೋಷಣೆ ಮಾಡಿದ್ದೆವು. ಒಳಮೀಸಲಾತಿ ಪರವಾಗಿ ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ಸಮುದಾಯದ ಸಂಘಟನೆಗಳು, ಮುಖಂಡರಿಗೂ ನಾವು ಒಳಮೀಸಲಾತಿ ಬಗ್ಗೆ ಭರವಸೆ ನೀಡಿದ್ದೆವು. ಆದ್ದರಿಂದ ದತ್ತಾಂಶ ಸಂಗ್ರಹ ಸಮೀಕ್ಷೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ಮಾಹಿತಿ ಕೊಡಿ. ಎಲ್ಲ ಸಂಘಟನೆಗಳೂ ಇದಕ್ಕೆ ಸಹಕರಿಸಿ.
- **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಮಾಜಿ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಜನ್ಮದಿನದ ಅಂಗವಾಗಿ ಅವರ ಪ್ರತಿಮೆ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಸೀಲ್ ಇಲ್ಲದ ಪ್ರಶ್ನೆಪತ್ರಿಕೆ ಬಂಡಲ್, ಪರೀಕ್ಷಾರ್ಥಿಗಳ ಆರೋಪ, ಆಯೋಗಕ್ಕೆ ದೂರು
ಕೆಎಎಸ್ ಪ್ರಶ್ನೆಪತ್ರಿಕೆ ಮತ್ತೆ ಸೋರಿಕೆ?

ಬೆಂಗಳೂರು: ಸದಾ ಒಂದಿಲ್ಲೊಂದು ವಿವಾದಗಳಿಂದಲೇ ಸುದ್ದಿಯಾಗುವ ಕೆಪಿಎಸ್‌ಸಿ, ಹಲವು ಗೊಂದಲಗಳ ನಡುವೆ ನಡೆಸಿದ ಕೆಎಸ್ ಮುಖ್ಯಪರೀಕ್ಷೆಯ ಪ್ರಶ್ನೆ ಪತ್ರಿಕೆಯೂ ಎರಡು ದಿನಗಳ ಮೊದಲೇ ಸೋರಿಕೆಯಾಗಿದೆ ಎನ್ನುವ ಗಂಭೀರ ಆರೋಪ ಕೇಳಿಬಂದಿದೆ.

ಮೈಸೂರು ರಸ್ತೆಯ ಬಿಬಿಎಂಪಿ ಪಿಯು ಕಾಲೇಜುನಲ್ಲಿ ನಡೆದ ಈ ಘಟನೆಯಿಂದ ಪರೀಕ್ಷಾ ನಿಯಮಾವಳಿಗಳ ಉಲ್ಲಂಘನೆಯಾಗಿದೆ. ಕೆಎಎಸ್ ಮುಖ್ಯ ಪರೀಕ್ಷೆಯ ಎರಡನೇ ದಿನದ ಪ್ರಬಂಧ ಮಾದರಿ ಪರೀಕ್ಷೆಯ ಸಂದರ್ಭದಲ್ಲಿ, ಪ್ರಶ್ನೆ ಪತ್ರಿಕೆ ಬಂಡಲ್‌ನ ಸೀಲ್ ಮೊದಲೇ ತೆರೆದ ಸ್ಥಿತಿಯಲ್ಲಿ ಕಂಡುಬಂದಿದೆ. → 4

ಪ್ರತಿಕ್ರಿಯೆ ನೀಡದ ಕೆಪಿಎಸ್‌ಸಿ

ಅಭ್ಯರ್ಥಿಗಳು ಘಟನೆಯ ಬಗ್ಗೆ ಬಿಬಿಎಂಪಿ ಪಿಯು ಕಾಲೇಜಿನ ಪ್ರಾಂಶುಪಾಲರಿಗೆ ಪ್ರಾಥಮಿಕ ದೂರು ಸಲ್ಲಿಸಿದ್ದಾರೆ. ಜತೆಗೆ, ಕೆಪಿಎಸ್‌ಸಿಗೆ ಪತ್ರ ಬರೆದು, ಈ ವಿಷಯದ ತನಿಖೆಗೆ ಒತ್ತಾಯಿಸಿದ್ದಾರೆ. ಕೆಪಿಎಸ್‌ಸಿ ಈ ಆರೋಪಗಳ ಕುರಿತು ಯಾವುದೇ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ. ಅಭ್ಯರ್ಥಿಗಳ ಒತ್ತಾಯದ ಮೇರೆಗೆ ತನಿಖೆ ನಡೆಯುವ ಸಾಧ್ಯತೆಯಿದೆ. ಪರೀಕ್ಷೆಯ ವಿಶ್ವಾಸಾರ್ಹತೆ ಕಾಪಾಡಲು ಕೆಪಿಎಸ್‌ಸಿ ಕ್ರಮಕೈಗೊಳ್ಳಬೇಕು ಎಂದು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ವಕ್ಫ್ ವಿಚಾರಣೆ ಮುಂದೂಡಿಕೆ

ದೆಹಲಿ: ವಿವಾದಾತ್ಮಕ ವಕ್ಫ್(ತಿದ್ದುಪಡಿ) ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ಬ್ಯಾಚ್ ಅನ್ನು ಮೇ 15ರಂದು ಭಾರತದ ನಿಯೋಜಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ವಿಚಾರಣೆ ನಡೆಸಲಿದ್ದಾರೆ ಎಂದು ಸುಪ್ರೀಂಕೋರ್ಟ್ ಸೋಮವಾರ ಹೇಳಿದೆ.

ಮೇ 13ರಂದು ನಿವೃತ್ತರಾಗಲಿರುವ ಹಾಲಿ ಸಿಜೆಐ ಸಂಜೀವ್ ಖನ್ನಾ ಅವರು, ಕಾನೂನಿನ ಕೆಲವು ಅಂಶಗಳಿಗೆ ಸ್ಪಷ್ಟೀಕರಣದ ಅಗತ್ಯವಿರುವುದರಿಂದ ಈ ವಿಷಯದ ಕುರಿತು ತೀರ್ಪು ಅಥವಾ ಮಧ್ಯಂತರ ಆದೇಶವನ್ನು ಕಾಯ್ದಿರಿಸಲು ಬಯಸುವುದಿಲ್ಲ ಎಂದು ತಿಳಿಸಿದರು. ಮೇ 15ರಿಂದ ಗವಾಯಿ ನೇತೃತ್ವದ ಪೀಠ ವಿಚಾರಣೆ ಮುಂದುವರಿಸಲಿದೆ.

ಸುಹಾಸ್ ಶೆಟ್ಟಿ ಹತ್ಯೆಗೆ ವಿದೇಶದಿಂದ ಹಫ್ತಾ?

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ವಾಕ್ಸಮರಕ್ಕೆ ಕಾರಣವಾಗಿರುವ ಸುಹಾಸ್ ಶೆಟ್ಟಿ ಹತ್ಯೆಗೆ ವಿದೇಶದಿಂದ ಬಂದ ಹಣದ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕೊಲೆ ಪ್ರಕರಣದಲ್ಲಿ ಈಗಾಗಲೇ ಬಂಧಿತರಾಗಿರುವ 8 ಆರೋಪಿಗಳ ವಿವಿಧ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆದಿದೆ. ಕೊಲೆಯಾಗಿರುವ ಫಾಝಿಲ್ ಸಹೋದರ ಆದಿಲ್ ಆರೋಪಿಗಳಿಗೆ 5 ಲಕ್ಷ ರು. ಸುಪಾರಿ ಕೊಟ್ಟಿರುವುದಲ್ಲದೇ ವಿವಿಧ ಮೂಲಗಳಿಂದ ಆರೋಪಿಗಳಿಗೆ ಹಣ ಬಂದಿರುವ ಶಂಕೆ ಇದೆ.

ಜನಿವಾರ ತೆಗೆಸಿದ್ದ ಇಬ್ಬರು ಬಂಧನ

ಕಲಬುರಗಿ: ನೀಟ್ ಬರೆಯಲು ಬಂದಿದ್ದ ವಿದ್ಯಾರ್ಥಿಗೆ ಜನಿವಾರ ತೆಗೆಯುವಂತೆ ಒತ್ತಾಯಿಸಿದ ಆರೋಪದ ಮೇಲೆ ಶರಣಗೌಡ ಮತ್ತು ಗಣೇಶ್ ಎಂಬ ಪರೀಕ್ಷಾ ಕೇಂದ್ರದ ಸಿಬ್ಬಂದಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ವಿದ್ಯಾರ್ಥಿ ಶ್ರೀಪಾದ್ ಪಾಟೀಲ್ ನೀಡಿದ ದೂರಿನ ಆಧಾರದ ಮೇಲೆ ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸರು ಭಾರತೀಯ ನ್ಯಾಯ ಸಂಹಿತಾ ಕಾಯ್ದೆಯ ಸೆಕ್ಷನ್ 298ರ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಂಧಿತರು ಖಾಸಗಿ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದು, ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಕಲಬುರಗಿ ಪೊಲೀಸ್ ಆಯುಕ್ತ ಎಸ್.ಡಿ.ಶರಣಪ್ಪ ತಿಳಿಸಿದ್ದಾರೆ.

ಉಬರ್: ಆರ್‌ಸಿಬಿ ಅರ್ಜಿ ವಜಾ

ದೆಹಲಿ: ಐಪಿಎಲ್‌ನ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸ್ಫೋಟಕ ಬ್ಯಾಟರ್ ಟ್ರಾವಿಸ್ ಹೆಡ್ ಅವರನ್ನೊಳಗೊಂಡ ಉಬರ್ ಮೋಟೋದ ಯೂಟ್ಯೂಬ್ ಜಾಹೀರಾತಿಗೆ ಮಧ್ಯಂತರ ತಡೆ ಕೋರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ. ನ್ಯಾಯಮೂರ್ತಿ ಸೌರಭ್ ಬ್ಯಾನರ್ಜಿ, ಆಕ್ಷೇಪಾರ್ಹ ಜಾಹೀರಾತು ಕ್ರಿಕೆಟ್‌ಗೆ ಸಂಬಂಧಿಸಿದೆ. ಈ ಹಂತದಲ್ಲಿ ಜಾಹೀರಾತು ಸಮಸ್ಯಾತ್ಮಕ ಅಥವಾ ಕಾನೂನುಬಾಹಿರ ಎನ್ನಲಾಗುವುದಿಲ್ಲ. ಹೀಗಾಗಿ ಅದರಲ್ಲಿ ಹಸ್ತಕ್ಷೇಪ ಸಾಧ್ಯವಿಲ್ಲ. ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಲಾಗಿದೆ ಎಂದು ನ್ಯಾಯಾಲಯ ಹೇಳಿದೆ.

ರೈತರ ಪಂಪ್‌ಸೆಟ್‌ಗೆ ಹಗಲಲ್ಲೇ ಕರೆಂಟ್

ಹಾವೇರಿ: ಕುಸುಮ್ ಯೋಜನೆ ಮೂಲಕ ಪ್ರತಿ ತಾಲೂಕಿನಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕ ಸ್ಥಾಪನೆ ಮಾಡಿ ಇದರಿಂದ ಹಗಲು ಹೊತ್ತಿನಲ್ಲಿಯೇ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ನೀಡಲು ಸರಕಾರ ತೀರ್ಮಾನ ಮಾಡಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಮಾಜಿ ಸಿಎಂ ಬಂಗಾರಪ್ಪ ಅವರ ಅವಧಿಯಲ್ಲಿ ರೈತರ ಪಂಪ್ ಸೆಟ್ ಗೆ ಉಚಿತ ವಿದ್ಯುತ್ ನೀಡಲಾಯಿತು. 2013 ರ ಕಾಂಗ್ರೆಸ್ ಸರಕಾರದ ವೇಳೆ ನಾನು ಇಂಧನ ಸಚಿವನಾಗಿದ್ದಾಗ ರೈತರ ಪಂಪ್ ಸೆಟ್‌ಗಳಿಗೆ ನೀಡುವ ತ್ರೀ ಫೇಸ್ ವಿದ್ಯುತ್ ಪೂರೈಕೆಯನ್ನು 6 ಗಂಟೆಯಿಂದ 7 ಗಂಟೆಗೆ ಹೆಚ್ಚಳ ಮಾಡಲಾಯಿತು ಎಂದು ಹೇಳಿದರು.

ಕ್ಷಮೆ ಕೇಳಲು ಚಲನಚಿತ್ರ ವಾಣಿಜ್ಯ ಮಂಡಳಿ ಪಟ್ಟು | ಗಾಯಕನ ವಿರುದ್ಧ ಎಫ್‌ಐಆರ್ ದಾಖಲು
ಸೋನು ನಿಗಮ್‌ಗೆ ಕನ್ನಡ ಚಿತ್ರರಂಗ ಬಹಿಷ್ಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಕನ್ನಡ ಹಾಡುಗಳನ್ನು ಹೇಳುವಂತೆ ಕೇಳಿದ ಕನ್ನಡಿಗರನ್ನು ಪಹಲ್ಗಾಮ್ ಉಗ್ರರಿಗೆ ಹೋಲಿಕೆ ಮಾಡಿ ದುರ್ವರ್ತನೆ ತೋರಿಸಿದ ಗಾಯಕ ಸೋನು ನಿಗಮ್ ವಿರುದ್ಧ ಕನ್ನಡ ಚಿತ್ರರಂಗದಿಂದ ಅಸಹಕಾರ ನಿರ್ಣಯ ಕೈಗೊಳ್ಳಲಾಗಿದೆ. ಕನ್ನಡ ಚಿತ್ರರಂಗದಿಂದ ಜೀವನ ಕಟ್ಟಿಕೊಂಡ ಹಿಂದಿ ಗಾಯಕ ಸೋನು ನಿಗಮ್ ಕಾಲೇಜೊಂದರ ಕಾರ್ಯಕ್ರಮಕ್ಕೆ ಬಂದು ಕನ್ನಡದ ಹಾಡುಗಳನ್ನು ಹೇಳುವಂತೆ ಕೇಳಿದ ಕನ್ನಡಿಗರನ್ನು ಪಹಲ್ಗಾಮ್ ಉಗ್ರರಿಗೆ ಹೋಲಿಕೆ ಮಾಡಿ ಕುಚೇಷ್ಟೆ ಮೆರೆದಿದ್ದರು. ಇದರ ಬಳಿಕ ಕನ್ನಡಪರ ಸಂಘಟನೆಗಳು ಕ್ಷಮೆ ಕೋರುವಂತೆ ಆಗ್ರಹಿಸಿದ ನಂತರ, ಕ್ಷಮೆ ಕೇಳದೇ ತನ್ನ ಹೇಳಿಕೆಗೆ ಸ್ಪಷ್ಟನೆ ಕೊಡುವ ಜತೆಗೆ ಮತ್ತೊಮ್ಮೆ ಕನ್ನಡಿಗರನ್ನು ಪುಂಡರು ಎಂದು ಹೇಳಿ ವಿಡಿಯೋ ಹರಿಬಿಟ್ಟಿದ್ದಾರೆ. → 4

ನಾರಾಯಣ ಗೌಡ ನೇತೃತ್ವದಲ್ಲಿ ಕರವೇ ಪ್ರತಿಭಟನೆ.

ಬಂಧನಕ್ಕೆ ಒತ್ತಾಯ

ಕಾಶ್ಮೀರದಲ್ಲಿ ಇತ್ತೀಚಿಗೆ ನಡೆದ ಭಯೋತ್ಪಾದನಾ ದಾಳಿಗೆ ಸಂಬಂಧ ಕಲ್ಪಿಸಿ ಕನ್ನಡ ಮತ್ತು ಕನ್ನಡಿಗರಿಗೆ ಅವಮಾನ ಮಾಡಿರುವ ಗಾಯಕ ಸೋನು ನಿಗಮ್‌ನನ್ನು ಬಂಧಿಸಿ ಕಾನೂನು ಪ್ರಕಾರ ಶಿಕ್ಷೆ ವಿಧಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಾರಾಯಣಗೌಡ ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ.

ಕ್ಷಮೆ ಕೇಳಿದ ಸೋನು

ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳುಕು ಹಾಕಿ ಕನ್ನಡಿಗರಿಂದ ಭಾರಿ ವಿರೋಧ ಎದುರಿಸಿದ ಗಾಯಕ ಸೋನು ನಿಗಮ್ ಕ್ಷಮೆ ಯಾಚಿಸಿದ್ದಾರೆ. ಈ ಬಗ್ಗೆ ಇನ್ಸ್ಟಾಗ್ರಾಮ್‌ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. 'ಖಟ್ಟಡ ಒಚ್ಚಚಿಟ್ಟುಚ', ನಿಮ್ಮ ಮೇಲಿನ ನನ್ನ ಪ್ರೀತಿ ಅಹಂಗಿಂತ ದೊಡ್ಡದು. ಯಾವಾಗಲೂ ನಿಮ್ಮನ್ನು ಪ್ರೀತಿಸುವೆ ಎಂದು ಬರೆದು ಕೊಂಡಿದ್ದಾರೆ.

ಗೋವಾಕ್ಕೆ ಹೆದರಿದ ಪ್ರಧಾನಿ

ಹುಬ್ಬಳ್ಳಿ: ಗೋವಾ ರಾಜ್ಯಕ್ಕೆ ಹೆದರಿಕೊಂಡು ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರು ಮಹದಾಯಿ ಯೋಜನೆಗೆ ಅನುಮತಿ ಕೊಡಿಸುತ್ತಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಅವರು ಭಾನುವಾರ ಗಂಭೀರ ಆರೋಪ ಮಾಡಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಹ್ಲಾದ್ ಜೋಶಿ ಮೊದಲು ಮಹದಾಯಿ ಬಗ್ಗೆ ಮಾತಾಡಲಿ. ಮಹದಾಯಿ ಯೋಜನೆಗೆ ಎನ್ವಿರಾನ್ಮೆಂಟ್ ಕ್ಲಿಯರೆನ್ಸ್ ಯಾಕೆ ಕೊಡಿಸುತ್ತಿಲ್ಲಾ? ಗೋವಾಕ್ಕೆ ಹೆದರಿಕೊಂಡು ಮೋದಿ ಅವರು ಅನುಮತಿ ಕೊಡಿಸುತ್ತಿಲ್ಲ. ಪ್ರಲ್ಹಾದ್ ಜೋಶಿ ಆ ಬಗ್ಗೆ ಪ್ರಧಾನಿ ಮೋದಿ ಮುಂದೆ ಮಾತಾಡುತ್ತಿಲ್ಲ. ನಾವು ಅನೇಕ ಸಲ ಕೇಂದ್ರಕ್ಕೆ ಹೋಗಿ ಮನವಿ ಮಾಡಿದ್ದೇವೆ. ಆದರೂ ಪ್ರಯೋಜನವಾಗಿಲ್ಲ ಎಂದು ಹೇಳಿದರು.

ಆಧಾರರಹಿತ ಆರೋಪಗಳನ್ನು ಮಾಡುವ ಬದಲು ಕೇಂದ್ರ ಸಚಿವ ಸಂಪುಟದ ಹಿರಿಯ ಸದಸ್ಯರಾಗಿ ಜೋಶಿ ಅವರು ದೀರ್ಘಕಾಲದಿಂದ ಬಾಕಿ ಇರುವ ಯೋಜನೆಗೆ ಅಗತ್ಯವಾದ ಅನುಮೋದನೆಗಳನ್ನು ಪಡೆಯಲು ತಮ್ಮ ಪ್ರಭಾವವನ್ನು ಬಳಸಬೇಕು. ಮಹದಾಯಿ ಯೋಜನೆ ಕುರಿತು ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ತಿಳಿಸಿದರು.

ಸೊಂಪಾದ ಪುಟಗಳು

ಶಾಂತಿಯ ತೋಟಕ್ಕೆ ಒಲ್ಲೆಕೆಯೇ ತೊಡಕು
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ಕನ್ನಡ ಉಳಿಸುವುದು, ಬೆಳೆಸುವುದು ನಮ್ಮ ಕೈಲಿದೆ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

ದಾರಿದೀಪೋಕ್ತಿ

ಯಾರೂ ಸಹ ಯಾವತ್ತೂ ಬ್ಯುಸಿಯಾಗಿರುವುದಿಲ್ಲ. ನೀವು ಯಾವಾಗ ಕೇಳಿದರೂ ಅವರು ಬ್ಯುಸಿ ಎಂದು ಹೇಳಿದರೆ ಅವರಿಗೆ ನಿಮ್ಮನ್ನು ಭೇಟಿಯಾಗುವ ಮನಸ್ಸು ಇಲ್ಲ ಎಂದರ್ಥ. ನಿಮ್ಮನ್ನು ಭೇಟಿ ಮಾಡಲು ಬಯಸಿದವರು ಸಮಯ ಇಲ್ಲ ಎನ್ನುವ ಕಾರಣ ನೀಡುವುದಿಲ್ಲ.

ವಕ್ರತುಂಡೋಕ್ತಿ

ಎಲ್ಲಿ ತನಕ ಏನೂ ಆಗುವುದಿಲ್ಲವೋ, ಅಲ್ಲಿ ತನಕ ವಿಮಾನ ಪ್ರಯಾಣ ಅತ್ಯಂತ ಸುರಕ್ಷಿತ.

ರೌಡಿಶೀಟರ್ ಕೊಲೆ

ಮೈಸೂರು: ತಾಲೂಕಿನ ವರುಣಾ ಗ್ರಾಮದ ಬಳಿಯ ಹೋಟೆಲ್ ಮುಂಭಾಗ ಭಾನುವಾರ ತಡರಾತ್ರಿ ರೌಡಿಶೀಟರ್‌ನನ್ನು ಮಚ್ಚಿನಿಂದ ಹಲ್ಲೆ ಮಾಡಿ ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ. ನಗರದ ಕ್ಯಾತಮಾರನಹಳ್ಳಿ ನಿವಾಸಿ ಕಾರ್ತಿಕ್ (33) ಕೊಲೆಯಾದ ವ್ಯಕ್ತಿ. ಹಳೆ ವೈಷಮ್ಯದಿಂದ ಕೊಲೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ವರುಣಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ವೇದಿಕೆ ಮೇಲೆ ಕುಸಿದುಬಿದ್ದ 'ಲೈಟ್ ಕಂಬ'. ಓಡಿ ಜೀವ ಉಳಿಸಿಕೊಂಡ ಸಂಸದ



ಸಮಾಚಾರ ಸಣ್ಣದಲ್ಲ

ಈಡಿಗ ಮಂಡಳಿಗೆ ಅಧ್ಯಕ್ಷರ ನೇಮಕ

ಚಿತ್ರದುರ್ಗ: ರಾಷ್ಟ್ರೀಯ ಈಡಿಗ ಮಹಾಮಂಡಳಿ ಆರ್ಯ ಈಡಿಗ ಸಮಾಜದ ಕರ್ನಾಟಕ ರಾಜ್ಯ ಅಧ್ಯಕ್ಷರಾಗಿ ಸಿ. ತಿಪ್ಪೇಸ್ವಾಮಿ ನೇಮಕ ಮಾಡಲಾಗಿದೆ ಎಂದು ಶ್ರೀ ಪ್ರಣವನಂದ ಸ್ವಾಮಿಗಳು ಘೋಷಣೆ ಮಾಡಿದ್ದಾರೆ. ರಾಷ್ಟ್ರೀಯ ಈಡಿಗ ಮಹಾಮಂಡಳಿಯ 2025-2026ನೇ ಸಾಲಿನ ವಾರ್ಷಿಕ ಮಹಾ ಸಭೆಯೂ ಇತ್ತೀಚೆಗೆ ರಾಣೆಬೆನ್ನೂರು ತಾಲೂಕಿನ ಹರೇಮಲ್ಲಾಪುರ ನಾರಾಯಣ ಗುರುಗಳ ಶಕ್ತಿ ಪೀಠದಲ್ಲಿ ನಡೆದಿದ್ದು, ಇದರಲ್ಲಿ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಚಿತ್ರದುರ್ಗ ಜಿಲ್ಲಾಧ್ಯಕ್ಷರಾಗಿದ್ದ ಸಿ.ತಿಪ್ಪೇಸ್ವಾಮಿ ಯವರನ್ನು ಶ್ರೀ ಪ್ರಣವನಂದ ಸ್ವಾಮಿಗಳು ರಾಷ್ಟ್ರೀಯ ಈಡಿಗ ಮಹಾಮಂಡಳಿ ಆರ್ಯ ಈಡಿಗ ಸಮಾಜದ ಕರ್ನಾಟಕ ರಾಜ್ಯ ಅಧ್ಯಕ್ಷರಾಗಿ ನೇಮಕ ಮಾಡಿದ್ದಾರೆ.

ಪಾಕಿಸ್ತಾನ ಪ್ರಜೆಗಳನ್ನು ಕಳಿಸಿಕೊಡಲು ಮನವಿ

ಚಿತ್ರದುರ್ಗ: ರಾಜ್ಯದಲ್ಲಿ ಇನ್ನೂ ಪಾಕಿಸ್ತಾನದ ಪ್ರಜೆಗಳು ವಾಸವಿದ್ದು, ಅವರನ್ನು ಕಳಿಸಿಕೊಡಲು ಕರ್ನಾಟಕ ಸರಕಾರಕ್ಕೆ ನಿರ್ದೇಶನ ನೀಡುವಂತೆ ಒತ್ತಾಯಿಸಿ ಬಿಜೆಪಿ ಚಿತ್ರದುರ್ಗ ಜಿಲ್ಲಾ ಘಟಕದಿಂದ ಅಪರ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಚಿತ್ರದುರ್ಗ ಜಿಲ್ಲೆಯಲ್ಲೂ ಇನ್ನೂ ಪಾಕಿಸ್ಥಾನದ ಪ್ರಜೆಗಳಿರುವ ಬಗ್ಗೆ ಮಾಹಿತಿಗಳಿದ್ದು, ಜಿಲ್ಲಾಡಳಿತ ಎಚ್ಚೆತ್ತು ಹೊರಗೆ ಹಾಕುವ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿ ದರು. ಈ ವೇಳೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯ ದರ್ಶಿಗಳಾದ ಸುರೇಶ್ ಸಿದ್ದಾಪುರ, ಬಾಳೆಕಾಯಿ ರಾಮದಾಸ್, ಮುಖಂಡರಾದ ಡಾ.ಸಿದ್ಧಾರ್ಥ್ ಗುಂಡಾರ್ಪಿ, ಜಯಪಾಲಯ್ಯ, ವೆಂಕಟೇಶ್ ಯಾದವ್, ನಾಗರಾಜ್ ಬೇದ್ರೆ, ರಾಮರೆಡ್ಡಿ, ಶೈಲೇಶ್, ಜಿಂಕಲ್ ಬಸವರಾಜ್, ಯಶವಂತ್, ಕಿರಣ್ ಇತರರಿದ್ದರು.

ನೂತನ ಬಸ್ ಡಿಪೋ ಉದ್ಘಾಟನೆಗೆ ಒತ್ತಾಯ

ಹಿರಿಯೂರು: ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಕೆಎಸ್ಆರ್‌ಟಿಸಿ ಬಸ್ ಡಿಪೋ ಉದ್ಘಾಟನೆ ಮಾಡುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಕೆಎಸ್ಆರ್ ಟಿಸಿಬಸ್ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿ ದರು. ರೈತ ಮುಖಂಡರಾದ ರಂಗಸ್ವಾಮಿ, ತಿಪ್ಪೇ ಸ್ವಾಮಿ, ಸಿದ್ದರಾಮಣ್ಣ, ತಿಮ್ಮಾರೆಡ್ಡಿ, ಹಳ್ಳಿಕೆರೆ ತಿಪ್ಪೇಸ್ವಾಮಿ, ಎಂಆರ್ ಈರಣ್ಣ, ಮೀಸೆ ರಾಮಣ್ಣ, ತಿಮ್ಮ ರೆಡ್ಡಿ, ರಂಗಸ್ವಾಮಿ, ನಾಗರಾಜ್ ಸೇರಿದಂತೆ ಇತರರಿದ್ದರು.

ಬಾಲ ಭಾರತಿ ಶಾಲೆಗೆ ಕೀರ್ತಿ ತಂದ ಪ್ರತೀಕ್ಷಾ

ನಾಯಕನಹಟ್ಟಿ: ಹೋಬಳಿಯ ಅಬ್ಬೇನಹಳ್ಳಿ ಗ್ರಾ.ಪಂ. ವ್ಯಾಪ್ತಿಗೆ ಸೇರಿದ ಗುಂತಕೋಲಮ್ಮನಹಳ್ಳಿ ಗ್ರಾಮದ ತಂದೆ ಶ್ರೀನಿವಾಸ್, ತಾಯಿ ಆಶಾ ಇವರ ಜೇಷ್ಠ ಪುತ್ರಿ ಪ್ರತೀಕ್ಷಾ ಶ್ರೀನಿವಾಸ್ ರವರು ಜಗಳೂರು ಪಟ್ಟಣದ ಬಾಲ ಭಾರತಿ ಇಂಗ್ಲಿಷ್ ಮೀಡಿಯಂ ಸ್ಕೂಲ್ ಶಾಲೆಯ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕ 591 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಸರಕಾರಿ ಪ್ರೌಢಶಾಲೆಗೆ ಶೇ. 56 ಫಲಿತಾಂಶ



ಹೊಸದುರ್ಗ: ನಗರದ ಸರಕಾರಿ ಪಿಯು ಕಾಲೇಜಿನ ಪ್ರೌಢಶಾಲಾ ವಿಭಾಗಕ್ಕೆ ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 56ರಷ್ಟು ಫಲಿತಾಂಶ ಪಡೆದಿದೆ. ಪರೀಕ್ಷೆಗೆ ಅರ್ಹರಾದ 241 ವಿದ್ಯಾರ್ಥಿಗಳಲ್ಲಿ 134 ವಿದ್ಯಾರ್ಥಿಗಳು ಉತ್ತೀರ್ಣ ರಾಗಿದ್ದಾರೆ. ಅದರಲ್ಲಿ ಅತ್ಯುತ್ತಮ ಶ್ರೇಣಿ 17, ಪ್ರಥಮ ಶ್ರೇಣಿ 83, ದ್ವಿತೀಯ ಶ್ರೇಣಿ 31, 3 ವಿದ್ಯಾರ್ಥಿಗಳು ಉತ್ತೀರ್ಣ ರಾಗಿದ್ದಾರೆ. ವಿದ್ಯಾರ್ಥಿನಿ ಚಿಂತನ 614 ಅಂಕ ಗಳಿಸುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಶಾಂತಕುಮಾರ್ 613 ಅಂಕಗಳಿಸಿ ದ್ವಿತೀಯ ಸ್ಥಾನ, ಪ್ರಸಿಂದು 599 ಅಂಕಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ಎನ್‌ಎಸ್ ಕ್ಯೂಎಫ್ ವಿಭಾಗದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಬ್ಯೂಟಿಷಿಯನ್ ಕೋರ್ಸ್ ನಲ್ಲಿ ಶೇಕಡ ನೂರರಷ್ಟು ಫಲಿತಾಂಶಗಳಿಸಿದೆ. ಹೆಚ್ಚು ಅಂಕಗಳಿಸಿ ಶಾಲೆ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿಗಳನ್ನು ಪ್ರಾಂಶುಪಾಲರಾದ ಎಚ್. ನಾಗೇಂದ್ರಪ್ಪ, ಸಿಬ್ಬಂದಿ ವರ್ಗ ಎಸ್ ಡಿಎಂಸಿ ಕಮಿಟಿ ಹಾಗೂ ಹಿರಿಯ ವಿದ್ಯಾರ್ಥಿ ಸಂಘದವರು ಅಭಿನಂದಿಸಿದ್ದಾರೆ.

{ನಳಿನ್‌ಕುಮಾರ್ ಕಟೀಲು} ಮಾಜಿ ಸಂಸದ

ಹಿಂದೂ ಸಮಾಜದ ಪರ ಇರುವ ಎಲ್ಲರ ಮೇಲೆ ದಾಳಿ ನಡೆಯುತ್ತಿದೆ. ಸಿದ್ದರಾಮಯ್ಯ, ಡಿಕೆಶಿ ವಿರುದ್ಧ ಬರೆದರೆ ಬಂಧಿಸುತ್ತಾರೆ. ಸಾಮಾಜಿಕ ಕಾರ್ಯಕರ್ತರ ವಿರುದ್ಧವೂ ಕೇಸ್ ದಾಖಲಿಸುತ್ತಾರೆ. ಆದರೆ ಗೃಹಸಚಿವ ಪರಮೇಶ್ವರ್ ಅವರಿಗೆ ಧಮ್ಕಿ ಹಾಕಿದ ಮುಸ್ಲಿಂ ಮುಖಂಡರನ್ನು ಬಂಧಿಸಲು ಸರಕಾರಕ್ಕೆ ತಾಕತ್ತಿಲ್ಲ.

ಎಸ್ಸಿ ಜಾತಿ ಗಣತಿ ಸಮೀಕ್ಷೆಗೆ ಡಿಸಿ - ಸಿಇಒ ಚಾಲನೆ | ಮಾಜಿ ಸಚಿವ ಎಚ್. ಆಂಜನೇಯ ಮನವಿ

ಮಾಹಿತಿ ನೀಡಿ ಗಣತಿಗೆ ಸಹಕರಿಸಿ

ಚಿತ್ರದುರ್ಗ: ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ ಕುರಿತು ವಿವಿಧ ಅಂಶಗಳ ಬಗ್ಗೆ ದತ್ತಾಂಶ ಸಂಗ್ರಹಣೆಗಾಗಿ ಸಮೀಕ್ಷೆ ಕಾರ್ಯಕ್ಕೆ ಸೋಮವಾರ ಚಿತ್ರದುರ್ಗದ ಗಾಂಧಿನಗರದಲ್ಲಿ ವಿಧ್ಯುಕ್ತವಾಗಿ ಚಾಲನೆ ದೊರೆಯಿತು.

ನಗರದ ಐಯುಡಿಪಿ ಬಡಾವಣೆ ಸಮೀಪದ ಗಾಂಧಿ ನಗರದಲ್ಲಿ ಸಮಗ್ರ ಸಮೀಕ್ಷೆಗೆ ಜಿಲ್ಲಾಧಿಕಾರಿ ಟಿ. ವೆಂಕಟೇಶ್, ಜಿಪಂ ಸಿಇಒ ಎಸ್.ಜೆ. ಸೋಮಶೇಖರ್ ಅವರು ಮಾಜಿ ಸಚಿವ ಎಚ್. ಆಂಜನೇಯ, ಮತ್ತಿತರ ಮುಖಂಡರ ಉಪಸ್ಥಿತಿಯಲ್ಲಿ ಚಾಲನೆ ನೀಡಿ ಮಾತನಾಡಿದರು.

ಸಮಾನತೆ ಮತ್ತು ಸಾಮಾಜಿಕ ನ್ಯಾಯ ಎಲ್ಲಾ ವರ್ಗದವರಿಗೆ ಎಲ್ಲಾ ಕಾಲದಲ್ಲಿಯೂ ನೀಡುವುದು ಸರಕಾರದ ಅತಿ ದೊಡ್ಡ ಆಕಾಂಕ್ಷೆಯಾಗಿದೆ. ಈ ಸಮಾನತೆಯ ಪರಿಕಲ್ಪನೆ ಅನೇಕ ಶ್ರೇಷ್ಠ ಚಿಂತನಶೀಲರು ಮತ್ತು ದಾರ್ಶನಿಕರಿಂದ ಸ್ಫೂರ್ತಿ ಪಡೆದಿದೆ. ವಿಭಿನ್ನ ಸ್ಥಳಗಳಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಜನ ಸಮೂಹಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಸೌಲಭ್ಯ- ಅವಕಾಶ ನೀಡಬೇಕಿದೆ. ಅಸಮಾನತೆ ತೊಡೆದು ಹಾಕಲು ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನ ಮಾಡಬೇಕಾಗಿದೆ. ಸರ್ವೋಚ್ಚ ನ್ಯಾಯಾಲಯ ಕೂಡ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ನೀಡಲು ರಾಜ್ಯ ಸರಕಾರಗಳಿಗೆ ಅಧಿಕಾರ ಇದೆ ಎಂದು ತೀರ್ಪು ನೀಡಿದೆ ಎಂದರು.

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿರುವ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಔದ್ಯೋಗಿಕ ಪ್ರಾತಿನಿಧ್ಯತೆ ಇತ್ಯಾದಿ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ಮಾಡುವುದು ನಾಗಮೋಹನ್‌ದಾಸ್ ಆಯೋಗದ ಉದ್ದೇಶ. ಪರಿಶಿಷ್ಟ ಜಾತಿಗಳ ಸ್ಥಿತಿಗತಿಗಳ ಬಗ್ಗೆ ವೈಜ್ಞಾನಿಕವಾಗಿ ಮತ್ತು ವಾಸ್ತವಿಕ ಮಾಹಿತಿ ಪಡೆದುಕೊಂಡು ಒಳ ಮೀಸಲಾತಿಯನ್ನು ವರ್ಗೀಕರಿಸಿ ಸರಕಾರಕ್ಕೆ ಶಿಫಾರಸ್ಸು ಮಾಡಬೇಕಿದೆ.

ನಗರದ ಐಯುಡಿಪಿ ಬಡಾವಣೆ ಸಮೀಪದ ಗಾಂಧಿ ನಗರದಲ್ಲಿ ಸಮಗ್ರ ಸಮೀಕ್ಷೆಗೆ ಜಿಲ್ಲಾಧಿಕಾರಿ ಟಿ. ವೆಂಕಟೇಶ್, ಜಿಪಂ ಸಿಇಒ ಎಸ್.ಜೆ. ಸೋಮಶೇಖರ್ ಅವರು ಮಾಜಿ ಸಚಿವ ಎಚ್. ಆಂಜನೇಯ, ಮತ್ತಿತರ ಮುಖಂಡರ ಉಪಸ್ಥಿತಿಯಲ್ಲಿ ಚಾಲನೆ ನೀಡಿದರು.

ಸಮೀಕ್ಷೆಯಿಂದ ಬಂದ ಅಂಶಗಳ ಆಧಾರದಲ್ಲಿ ಈ ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಾನಮಾನ ನೀಡಬೇಕಿದೆ. ಎಲ್ಲಾ ಪರಿಶಿಷ್ಟ ಜಾತಿಗಳ ಮನೆ-ಮನೆಗೆ ಭೇಟಿ ನೀಡಿ ಸಮಗ್ರ ಸಮೀಕ್ಷೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಮನೆಗೆ ಬಂದಾಗ ಗಣತಿದಾರರಿಗೆ ಅಗತ್ಯ ಮಾಹಿತಿ ನೀಡಿ ಸಮೀಕ್ಷಾ ಕಾರ್ಯ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಸಂಬಂಧ ಪರಿಶಿಷ್ಟ ಜಾತಿ ಕುಟುಂಬಗಳ ಸಮೀಕ್ಷೆ ಆರಂಭಗೊಂಡಿದ್ದು, ಈ ಸಮೀಕ್ಷೆಯು ಮೂರು ಹಂತಗಳಲ್ಲಿ ನಡೆಯಲಿದೆ. ಮೇ 5 ರಿಂದ 17 ರವರೆಗೆ ನಡೆಯುವ ಮೊದಲ ಹಂತದ ಸಮೀಕ್ಷೆಯಲ್ಲಿ ಮನೆ-ಮನೆ ಭೇಟಿ ನೀಡಲಾಗುತ್ತದೆ. ಮೇ 19 ರಿಂದ 21 ರವರೆಗಿನ ಎರಡನೇ ಹಂತದಲ್ಲಿ ವಿಶೇಷ ಶಿಬಿರಗಳನ್ನು ಕೈಗೊಂಡು, ಬಿಟ್ಟುಹೋದ ಕುಟುಂಬಗಳ ಮಾಹಿತಿಯನ್ನು ಸಂಗ್ರಹಿಸುವುದು. ಮೂರನೇ ಹಂತ ಮೇ 19 ರಿಂದ 21 ರವರೆಗೆ ನಡೆಯಲಿದ್ದು ಸ್ವಯಂ ಘೋಷಣೆ ಸಮೀಕ್ಷೆಗೆ ಮಾಹಿತಿ ಒದಗಿಸಬಹುದಾಗಿದೆ ಎಂದರು.

1,825 ಶಿಕ್ಷಕರ ನೇಮಕ

ಸಮೀಕ್ಷೆಯಲ್ಲಿ ಮೊಬೈಲ್ ಆ್ಯಪ್ ಮೂಲಕ ದತ್ತಾಂಶ ಸಂಗ್ರಹಿಸಲಾಗುವುದು. ಸಮೀಕ್ಷಾ ಕಾರ್ಯ ಕೈಗೊಳ್ಳಲು ಒಟ್ಟು 1,825 ಶಿಕ್ಷಕರನ್ನು ಶಿಕ್ಷಣ ಇಲಾಖೆಯಿಂದ ನಿಯೋಜಿ ಸಲಾಗಿದೆ. ಜಿಲ್ಲಾ ಮಟ್ಟದ 6 ನೋಡೆಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಈ ವೇಳೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ. ಸೋಮಶೇಖರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ, ನಗರಸಭೆ ಪೌರಾಯುಕ್ತೆ ಎಂ.ರೇಣುಕಾ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್ .ನಾಗಭೂಷಣ್ ಇದ್ದರು.

ಯುವ ಜನತೆಗೆ ಭಗೀರಥ ಮಹರ್ಷಿಗಳು ಪ್ರೇರಣೆ

ಚಳ್ಳಕೆರೆ: ಗಂಗೆಯನ್ನು ಭೂಮಿಗೆ ತರುವಾಗ ಹಲವಾರು ಕಷ್ಟಗಳನ್ನು ಎದುರಿಸಿ ಸುಮಾರು ಒಂದು ಸಾವಿರ ವರ್ಷಗಳ ಕಾಲ ಪಂಚಾಗ್ನಿ ತಪಸ್ಸನ್ನು ಮಾಡಿ ಗಂಗೆಯನ್ನು ಭೂಮಿಗೆ ತಂದು ಪೂರ್ವನರಿಗೆ ಸದ್ಗತಿ ದೊರಕಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ನಗರಸಭೆ ಅಧ್ಯಕ್ಷೆ ಆರ್.ಮಂಜುಳಾ ಪ್ರಸನ್ನ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಶಾಸಕರ ಭವನದಲ್ಲಿ ಕಸಬಾ ಮತ್ತು ಪರಶುರಾಂಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡ ಭಗೀರಥ ಜಯಂತಿಯ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾಧಿಸುವ ಛಲವಿದ್ದರೆ ಎಂತಹ ಕೆಲಸವನ್ನಾದರೂ ಕೈಗೊಳ್ಳಬಹುದು ಎಂಬುದಕ್ಕೆ ಭಗೀರಥ ಮಹರ್ಷಿ ನಿದರ್ಶನರಾಗಿದ್ದಾರೆ. ಯುವ ಜನತೆ ಅವರು ಪ್ರೇರಣೆಯಾಗಬೇಕು. ಭಗೀರಥ ಪೂರ್ವಜರಿಗೆ ಸದ್ಗತಿ ಸಿಗಲೆಂದು ಗಂಗೆಯನ್ನು ಭೂಮಿಗೆ ತರಲು ಪ್ರಯತ್ನಿಸುತ್ತಾರೆ, ಪ್ರಯತ್ನ ಫಲ ಇದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಮಂಜುಳಾ ಪ್ರಸನ್ನಕುಮಾರ್, ಉಪಾಧ್ಯಕ್ಷೆ ಕವಿತಾ ಬೋರಯ್ಯ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ್, ಸದಸ್ಯರುಗಳಾದ ರಮೇಶ್ ಗೌಡ, ರಾಘವೇಂದ್ರ, ಸುಮಾ ಭರಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶಶಿಧರ, ವಿರಭದ್ರಯ್ಯ, ಹನುಮಂತಪ್ಪ, ಉಪ್ಪಾರ ಸಮುದಾಯದವರು ಇದ್ದರು.

ನಗರದ ಶಾಸಕರ ಭವನದಲ್ಲಿ ಕಸಬಾ ಮತ್ತು ಪರಶುರಾಂಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಭಗೀರಥ ಜಯಂತಿಯ ಕಾರ್ಯಕ್ರಮ ಆಚರಿಸಲಾಯಿತು.

ದೇವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ

ದಾವಣಗೆರೆ: ನಗರದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಮೇ 7ರಿಂದ 11ರ ವರೆಗೆ ಶ್ರೀ ಮೈಲಾರಲಿಂಗೇಶ್ವರ, ಶ್ರೀ ಗಂಗಮಾಳಮ್ಮ, ಸಂಪಿಗೆ ಸಿದ್ದೇಶ್ವರ ದೇವರುಗಳ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ನೂತನ ಶಿಲಾಮಯ ದೇವಸ್ಥಾನ ಲೋಕಾರ್ಪಣೆ ಮತ್ತು ಕಳಸಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಕೆ. ಎಚ್. ಮಲ್ಲೇಶ್ ಖಂಡ್ರಳ್ಳಿ ತಿಳಿಸಿದರು.

ನಗರದ ಕೊಂಡಜ್ಜಿ ರಸ್ತೆಯ ದೇವಸ್ಥಾನ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 7ರಂದು ಬೆಳಗ್ಗೆ ಗುರುಪ್ರಾರ್ಥನೆ, ಗಣಪತಿ ಪೂಜೆ, ಹೋಮ ಮತ್ತು ನವಗ್ರಹ ಹೋಮ, ಸಂಜೆ ವಾಸ್ತುಪೂಜಾ ಬಲಿ, ಬಿಂಬಶುದ್ಧಿ ಹೋಮ ಮತ್ತು ಬಿಂಬಶುದ್ಧಿ ಪ್ರಕ್ರಿಯೆಗಳು ಜರುಗಲಿದ್ದು, ಮೇ 8ರಂದು ಗುರು ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ ವಾಚನ, ಅಗ್ನಿಜನನ ಹೋಮ ಮತ್ತು ಸಂಜೆ ರತ್ನನ್ಯಾಸಾದಿ ಪ್ರಕ್ರಿಯೆಗಳು ನಡೆಯುವವವು ಎಂದರು.

ಮೇ 9ರಂದು ಗುರು ಗಣಪತಿ ಪೂಜಾ, ಸ್ವಸ್ತಿ ಪುಣ್ಯಾಹ ವಾಚನ ಮಿಥುನ ಲಗ್ನದಲ್ಲಿ ದೇವತಾ ಪ್ರತಿಷ್ಠಾಪನೆ, ಬೆಳಗ್ಗೆ 9.35ಕ್ಕೆ ಶಿಖರ ಪದರತಿಷ್ಠಾ ವಿಧಿ ಮತ್ತು ಮಹಾಮಂಗಳಾರತಿ ನಡೆಯುವವು.

10ರ ಬೆಳಗ್ಗೆ 8ಕ್ಕೆ ತತ್ವಕಲಶ ಸ್ಥಾಪನೆ, ತತ್ವಹೋಮ, ತತ್ವ ಕಲಶಾಭಿಷೇಕ ಮತ್ತು ಮಹಾಪೂಜೆ ಮತ್ತು ಸಂಜೆ ಬ್ರಹ್ಮ ಕಲಶ ಸ್ಥಾಪನೆ ಮತ್ತು ಆಧಿವಾಸ ಹೋಮ ನಡೆಯುವುದು. ಮೇ 11ರಂದು ಬೆಳಗ್ಗೆ ಚಂದ್ರಗಿರಿ ಮಠದ ಮುರುಳೀಧರ ಶ್ರೀಗಳಿಂದ ಬ್ರಹ್ಮ ಕಲಶಾಭಿಷೇಕ, ಮಹಾಪೂಜೆ, ತೀರ್ಥ ಪ್ರಸಾದ, ಮಹಾಪ್ರಸಾದ ವಿತರಣೆ ನಡೆಯಲಿದೆ. ಕಾರ್ಯಕ್ರಮ ನಡೆವ ದಿನಗಳಂದು ನಿತ್ಯವೂ ಪ್ರಸಾದ ವ್ಯವಸ್ಥೆ ಇದೆ ಎಂದರು.

ಎಸ್. ವಡಿವೇಲ್ ಮತ್ತು ರಾಜು ದೇವಸ್ಥಾನ ವಾಸ್ತುಶಿಲ್ಪಿಗಳಾಗಿದ್ದು, ಕೊಟ್ಟೂರಿನ ವೀರೇಶ್ ಆಚಾರ್ ಮೂರ್ತಿ ಶಿಲ್ಪಿಗಳಾಗಿದ್ದಾರೆ. ಎಲ್ಲ ಭಕ್ತರ ಧನ ಸಹಾಯದಿಂದ ದೇವಸ್ಥಾನ ನಿರ್ಮಾಣಗೊಂಡಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಚ್.ಜೆ. ವೀರಪ್ಪ, ಎಂ. ಜಯಪ್ಪ ಬಳ್ಳಾರಿ, ಗೋಪಾಲರಾವ್ ಸಾವಂತ್, ಜಿ.ಕೆ. ಪಂಚಣ್ಣ, ಕೆ.ಬಿ. ಶಂಕರ್ ನಾರಾಯಣ, ವೈ. ಮಲ್ಲೇಶ್, ಎಚ್.ಆರ್. ಜಯಪ್ರಕಾಶ್, ಎಚ್.ಎಸ್. ಜಗದೀಶ್ ಇದ್ದರು.

ಸಚಿವ ಮಲ್ಲಿಕಾರ್ಜುನ್‌ರಿಂದ ಜಿಲ್ಲಾ ಗ್ಯಾರಂಟಿಗಳ ಸಮಿತಿ ಕಚೇರಿ ಉದ್ಘಾಟನೆ

ಗ್ಯಾರಂಟಿಗಳಿಂದ ಜನರ ಆರ್ಥಿಕಾಭಿವೃದ್ಧಿ

ದಾವಣಗೆರೆ: ರಾಜ್ಯ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಿಂದ ಜನರ ಆರ್ಥಿಕಾಭಿವೃದ್ಧಿಯಾಗುತ್ತಿದ್ದು ಯೋಜನೆಗಳ ಬಗ್ಗೆ ಅಪಸ್ವರವೆತ್ತಿದವರು ರಾಜ್ಯಕ್ಕೆ ಬಂದು ಗ್ಯಾರಂಟಿಗಳನ್ನು ಅಧ್ಯಯನ ಮಾಡುವಂತಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇಂಧನ, ಸಾರಿಗೆ ವಿವಿಧ ಇಲಾಖೆಗಳಿಂದ ನಡೆದ ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಕಚೇರಿ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಪಂಚ ಗ್ಯಾರಂಟಿ ಯೋಜನೆ ಜಾರಿಗೆ ತರುವುದು ಕಷ್ಟ, ಇದರಿಂದ ಆರ್ಥಿಕ ನಷ್ಟವಾಗಿ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ವಿರೋಧ ಪಕ್ಷದವರು ಮಾತನಾಡುತ್ತಿದ್ದರು. ಆದರೆ ಯೋಜನೆ ಕಳೆದೆರಡು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿವೆ. ಈ ಯೋಜನೆಗಳ ಕುರಿತು ವಿವಿಧ ರಾಜ್ಯಗಳು ಕರ್ನಾಟಕಕ್ಕೆ ಬಂದು ಅಧ್ಯಯನ ಮಾಡುವಂತಾಗಿದೆ. ಪ್ರತಿ ಕುಟುಂಬಕ್ಕೆ 4 ರಿಂದ 6 ಸಾವಿರ ರು. ಸಿಗುತ್ತಿದೆ, ಇದರಿಂದ ಜನರ ಜೀವನ ಮಟ್ಟ ಸುಧಾರಣೆ ಜತೆ ಜೀವನ ನಿರ್ವಹಣಾ ಮಟ್ಟ ಹೆಚ್ಚಳವಾಗಿದೆ ಎಂದರು.

ರಾಜ್ಯ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಮಾತನಾಡಿ, ಸರಕಾರ ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಕಳೆದೆರಡು ವರ್ಷಗಳಲ್ಲಿ 82 ಸಾವಿರ ಕೋಟಿ ರು. ವೆಚ್ಚ ಮಾಡಿದೆ. ಈ ಯೋಜನೆಗಳನ್ನು ಬರೀ ಚುನಾವಣೆಗಾಗಿ ರೂಪಿಸಿಲ್ಲ, ಜನರ ಕಲ್ಯಾಣಕ್ಕಾಗಿ ಅನುಷ್ಠಾನ ಮಾಡುತ್ತಿದೆ. ಕಳೆದ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿ ಮಾಡಿದ್ದು ಈ ಯೋಜನೆಗಳು ಮನೆ ಮಾತಾಗಿವೆ ಎಂದರು.

ದಾವಣಗೆರೆಯಲ್ಲಿ ಸಚಿವ ಮಲ್ಲಿಕಾರ್ಜುನ್‌ರಿಂದ ಜಿಲ್ಲಾ ಗ್ಯಾರಂಟಿಗಳ ಸಮಿತಿ ಕಚೇರಿ ಕಾರ್ಯಕ್ರಮ ಉದ್ಘಾಟಿಸಿದರು.

ಶಾಸಕ ಕೆ.ಎಸ್.ಬಸವಂತಪ್ಪ ಮಾತನಾಡಿ, ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ, ಯುವನಿಧಿ ಪಂಚ ಗ್ಯಾರಂಟಿಗಳನ್ನು ಪ್ರಜೆಗಳ ಹಿತಕ್ಕಾಗಿ ಜಾರಿಗೊಳಿಸಲಾಗಿದ್ದು, ನಿರಂತರ 2 ವರ್ಷಗಳಿಂದ ಈ ಯೋಜನೆಯ ನೀಡುತ್ತಾ ಬಂದಿದೆ. ಇವುಗಳನ್ನು ಅರ್ಹ ಫಲಾನುಭವಿಗೆ ತಲುಪಿಸುವ ಸಲುವಾಗಿ ಗ್ಯಾರಂಟಿ ಯೋಜನಾ ಸಮಿತಿ ಸ್ಥಾಪಿಸಲಾಗಿದೆ ಎಂದರು.

ಶಾಸಕ ಡಿ.ಜಿ.ಶಾಂತನಗೌಡ ಮಾತನಾಡಿದರು. ಜಿಲ್ಲಾಧಿಕಾರಿ. ಜಿ.ಎಂ.ಗಂಗಾಧರಸ್ವಾಮಿ, ಜಿ.ಪಂ. ಸಿಇಒ ಸುರೇಶ್ ಬಿ.ಇಟ್ನಾಳ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಶಾಮನೂರು ಟಿ. ಬಸವರಾಜ್, ದೂಡ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ರಾಜ್ಯ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವನಾಯ್ಕ, ಮಾಜಿ ಮೇಯರ್ ಚಮನ್ ಸಾಬ್ ಇದ್ದರು.

ಶಾಲೆಗಳ ಅಭಿವೃದ್ಧಿಗೆ ಗಮನ ಅಗತ್ಯ

ದಾವಣಗೆರೆ: ದೇವಸ್ಥಾನ ನಿರ್ಮಾಣ ಮಾಡಲು ನಾವು ಎಷ್ಟು ಕಾಳಜಿ ತೋರಿಸುತ್ತೇವೆಯೋ ಅಷ್ಟೇ ಕಾಳಜಿ, ಗಮನವನ್ನು ಶಾಲೆಗಳ ಅಭಿವೃದ್ಧಿಗೆ ನೀಡಬೇಕಾದ ಅವಶ್ಯಕತೆ ಇದೆ ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಹಾಗೂ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಪ್ರತಿಪಾದಿಸಿದರು.

ಜಿಲ್ಲೆಯ ಹೊನ್ನಾಳಿ ತಾಲೂಕಿನ ಯರಲಬನ್ನಿಕೋಡು ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಕರಿಯಮ್ಮದೇವಿ ಮತ್ತು ಶ್ರೀ ಮಾತಂಗಮ್ಮ ದೇವಾಲಯದ ನೂತನ ಶಿಲಾಮೂರ್ತಿ ಪ್ರತಿಷ್ಠಾಪನೆ, ಕರಿಗಲ್ಲು ಸ್ಥಾಪನೆ ಮತ್ತು ನೂತನ ಗೋಪುರ ಕಳಸಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ರಾಮೀಣ ಪ್ರದೇಶದ ಮಕ್ಕಳು ಐಎಎಸ್, ಐಪಿಎಸ್ ಆಗಬೇಕಾದರೆ ನಮ್ಮೂರಿನ ಶಾಲೆಗಳು ಅಭಿವೃದ್ಧಿ ಆಗಬೇಕು ನನ್ನ ಬಲವಾದ ನಂಬಿಕೆ. ದೇವಸ್ಥಾನ ಕಟ್ಟಲು ಆರಂಭದಿಂದ ಹಿಡಿದು ಕೊನೆಯವರೆಗೂ ಎಚ್ಚರ ವಹಿಸುತ್ತೇವೆ. ಅನುದಾನ ಪಡೆಯುತ್ತೇವೆ. ಕಾಳಜಿ ವಹಿಸಿ ಶ್ರದ್ಧಾ ಭಕ್ತಿಯಿಂದ ಕೆಲಸ ಮಾಡುತ್ತೇವೆ. ಅದೇ ರೀತಿಯಲ್ಲಿ ಗ್ರಾಮದ ಶಾಲೆಗಳ ಅಭಿವೃದ್ಧಿಗೆ ಟೊಂಕ ಕಟ್ಟಿ ನಿಂತರೆ ಸುಸಜ್ಜಿತ, ಸುಂದರ ಶಾಲೆ ನಿರ್ಮಾಣ ಅಸಾಧ್ಯವೇನಲ್ಲ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಹೊನ್ನಾಳಿ ಹಿರೇಕಲ್ಮಠದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ, ರಾಮಘಟ್ಟದ ರೇವಣಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ, ಶಾಸಕ ಡಿ. ಜಿ. ಶಾಂತನಗೌಡ, ಮಾಜಿ ಶಾಸಕ ಎಂ. ಪಿ. ರೇಣುಕಾಚಾರ್ಯ, ಜಿ. ಪಂ. ಮಾಜಿ ಸದಸ್ಯರಾದ ಕೆ. ಎಚ್. ಗುರುಮೂರ್ತಿ, ಶೀಲಾ ಗದ್ದಿಗೇಶ್, ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಕೆ. ಎಚ್. ಷಣ್ಮುಖಪ್ಪ, ತಾ. ಪಂ. ಮಾಜಿ ಸದಸ್ಯ ಅಂಬುಜಾ ಮರುಳಸಿದ್ದಪ್ಪ, ರತ್ನಮ್ಮ ಮಲ್ಲಪ್ಪ, ಹೊನ್ನಾಳಿ ಎಪಿಎಂಸಿ ಮಾಜಿ ನಿರ್ದೇಶಕಿ ರೂಪಾ ಡಿ. ದೇವರಾಜ್, ಜಗದೀಶ್, ಮರುಳಸಿದ್ದಪ್ಪ, ಮೋಹನ್, ಸಿದ್ದೇಶ್, ಮಂಜು ಪಾಲ್ಗೊಂಡಿದ್ದರು.

ನೂತನ ಗೋಪುರ ಕಳಸಾರೋಹಣ ಕಾರ್ಯಕ್ರಮವನ್ನು ವಿನಯ್ ಕುಮಾರ್ ಉದ್ಘಾಟಿಸಿದರು.

ಬನ್ನಿಕೋಡು ಗ್ರಾಮದಲ್ಲಿ ಗ್ರಂಥಾಲಯ ನಿರ್ಮಾಣ ಆಗಬೇಕು. ಪುಸ್ತಕ, ಪೇಪರ್ ಓದುವ ಸಂಸ್ಕೃತಿ ಯುವಕರಲ್ಲಿ ಬರುವಂತಾಗಬೇಕು. ಗ್ರಾಮದಲ್ಲಿ ಗ್ರಂಥಾಲಯ ನಿರ್ಮಾಣಕ್ಕೆ ನನ್ನ ಕಡೆಯಿಂದ 20 ಸಾವಿರ ಪುಸ್ತಕಗಳನ್ನು ನೀಡಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳನ್ನೂ ನೀಡುತ್ತೇನೆ.

-ಜಿ.ಬಿ.ವಿನಯ್ ಕುಮಾರ್, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ

ನನ್ನೊಂದಿಗೆ ನಿಂತವರ ಅಭಿಮಾನಕ್ಕೆ ಋಣಿ: ವಿನಯ್

ದಾವಣಗೆರೆ: ಕಳೆದ ಒಂದೂವರೆ ವರ್ಷದಿಂದ ನನ್ನೊಟ್ಟಿಗೆ ಗಟ್ಟಿಯಾಗಿ ನಿಂತ ನಿಮ್ಮೆಲ್ಲರಿಗೂ ಎಂದೆಂದಿಗೂ ಚಿರಋಣಿಯಾಗಿರುತ್ತೇನೆ. ರಾಜಕೀಯ ಪಯಣದಲ್ಲಿ ನನ್ನ ಜತೆ ನಿಲ್ಲಲು ನಿಮ್ಮಲ್ಲೂ ಗುಂಡಿಗೆ, ಧೈರ್ಯ, ಸ್ವಾಭಿಮಾನ ಬೇಕಿತ್ತು. ಅದು ನಿಮ್ಮಲ್ಲಿದೆ ಎಂದು ಇನ್‌ಸೈಟ್ಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಹಾಗೂ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ತಿಳಿಸಿದರು.

ನಗರದ ಪೂಜಾ ಇಂಟರ್ ನ್ಯಾಷನಲ್ ಸಭಾಂಗಣದಲ್ಲಿ ಸ್ವಾಭಿಮಾನಿ ಅಭಿಮಾನಿ ಬಳಗ, ಅಭಿಮಾನಿಗಳು ಏರ್ಪಡಿಸಿದ್ದ ತನ್ನ 41ನೇ ಜನುಮ ದಿನಾಚರಣೆಯಲ್ಲಿ ಮಾತನಾಡಿ, ರಾಜಕಾರಣದಲ್ಲಿ ಆರಂಭ ಇದು, ಅಂತ್ಯವಲ್ಲ ಎಂದು ದಾವಣಗೆರೆ ಲೋಕಸಭೆ ಚುನಾವಣೆಗೆ ಮುನ್ನ ಹೇಳಿದ್ದೆ. ಚುನಾವಣೆ ಆದ ಬಳಿಕ ನಾನು ಇಲ್ಲಿಂದ ಜಾಗ ಖಾಲಿ ಮಾಡುತ್ತೇನೆ ಎಂದುಕೊಂಡಿದ್ದರು. ನಾನೆಲ್ಲಿಗೂ ಹೋಗಿಲ್ಲ, ಇಲ್ಲಿಯೇ ಇದ್ದೇನೆ ಎಂದರು.

ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಪ್ರಸನ್ನಕುಮಾರ್ ಮಾತನಾಡಿ, ಜಿ. ಬಿ. ವಿನಯ್ ಕುಮಾರ್ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಕೆಲಸ ಮಾಡಿದವರು ಶಾಸಕರಾಗಬೇಕು. ಅವರ ನಡೆ, ನುಡಿ, ಪ್ರಯತ್ನ, ಜನರ ಪ್ರೀತಿ ಸಂಪಾದನೆ ಮಾಡಿರುವುದು ನೋಡಿದರೆ ವಿಧಾನಸಭೆ ಪ್ರವೇಶಿಸುವಂತಾಗಬೇಕು ಎಂದು ಆಶಿಸಿದರು.

ದಾವಣಗೆರೆಯಲ್ಲಿ ಜಿ.ಬಿ. ವಿನಯ್‌ಕುಮಾರ್ ಅವರ ಜನ್ಮದಿನ ಆಚರಿಸಲಾಯಿತು.

ಜಿಬಿವಿ ಘೋಷಣೆ ಯಾವುದಾದರೂ ಕ್ಷೇತ್ರದಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಮಾಡುವುದು ಖಚಿತ. ರಾಷ್ಟ್ರೀಯ ಪಕ್ಷಗಳು ಟಿಕೆಟ್ ಕೊಟ್ಟರೆ ಸರಿ. ಇಲ್ಲದಿದ್ದರೆ ಪಕ್ಷೇತರನಾಗಿಯಾದರೂ ಕಣಕ್ಕಿಳಿಯಲು ಸಿದ್ಧನಿದ್ದೇನೆ. ದಾವಣಗೆರೆ ಉತ್ತರ, ಹೊನ್ನಾಳಿ, ಹರಿಹರ, ಹರಪನಹಳ್ಳಿ ಕ್ಷೇತ್ರದಲ್ಲಿಯೂ ಸ್ಪರ್ಧೆ ಮಾಡಬೇಕೆಂಬ ಒತ್ತಡ ಇದೆ. ಈ ನಿಟ್ಟಿನಲ್ಲಿ ಆಲೋಚನೆ ಮಾಡುತ್ತಿದ್ದೇನೆ. ಚುನಾವಣೆ ಹತ್ತಿರ ಬಂದಾಗ ಸರ್ವೆ ಮಾಡಿಸಿ ಎಲ್ಲಿ ಗೆಲ್ಲುವ ಸಾಧ್ಯತೆ ಹೆಚ್ಚಿದೆಯೋ ಆ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ ಎಂದು ಘೋಷಿಸಿದರು.

-ಜಿ.ಬಿ.ವಿನಯ್ ಕುಮಾರ್, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ

ಡಿಡಿಪಿಐ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ

ಹೊನ್ನಾಳಿ: ಪಟ್ಟಣದ ದುರ್ಗಿಗುಡಿ ಬಡಾವಣೆಯ ಐದನೆಯ ಕ್ರಾಸ್‌ನ ಸ್ವಾಮಿ ವಿವೇಕಾನಂದ ಮೆಮೋರಿಯಲ್ ಆಂಗ್ಲ ಮಾಧ್ಯಮ ಶಾಲೆಯ ತಡಯಾಜ್ಞೆಯ ಆದೇಶಕ್ಕೆ, ಡಿಡಿಪಿಐ ಆದೇಶಕ್ಕೆ ಹೈಕೋರ್ಟ್ ನಿಂದ ತಡೆಯಾಜ್ಞೆ ನೀಡಿರುವುದಾಗಿ ಸ್ವಾಮಿ ವಿವೇಕಾನಂದ ಮೆಮೋರಿಯಲ್ ಆಂಗ್ಲ ಮಾಧ್ಯಮ ಶಾಲೆ ಅಧ್ಯಕ್ಷ ಆರ್. ರೇವಣಸಿದ್ದಪ್ಪ ತಿಳಿಸಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಹೈಕೋರ್ಟ್ ನಿಂದ ತಂದಿದ್ದ ತಡೆಯಾಜ್ಞೆ ಆದೇಶ ಪ್ರತಿಯನ್ನು ಬಹಿರಂಗ ಪಡಿಸಿ ಮಾಹಿತಿ ವಿವರಿಸಿದರು.

ಸ್ವಾಮಿ ವಿವೇಕಾನಂದ ಮೆಮೋರಿಯಲ್ ಎಜ್ಯುಕೇಷನ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಸ್ವಾಮಿ ವಿವೇಕಾನಂದ ಶಾಲೆಯು ಮೆಮೋರಿಯಲ್ 1992-9300 ಇಲ್ಲಿಯವರೆಗೆ ಮಾನ್ಯತೆ ನವೀಕರಣ ಪಡೆದಿರುತ್ತದೆ. ಪ್ರತಿ ವರ್ಷ ಶಿಕ್ಷಣ ಸಂಸ್ಥೆಗೆ ಸರ್ವಜನಿಕ ಶಿಕ್ಷಣ ಇಲಾಖಾಧಿಕಾರಿಗಳು ಭೇಟಿ ನೀಡಿ ಎಲ್ಲಾ ದಾಖಲೆಗಳು ಹಾಗೂ ಸೌಲಭ್ಯಗಳ ಪರಿಶೀಲಿಸಿದ್ದಾರೆ ಎಂದರು.

ಕಳೆದ 32ವರ್ಷಗಳಿಂದ ಶಾಲೆಯನ್ನು ಸುಸ್ಥಿತಿಯಲ್ಲಿ ನಡೆಸುತ್ತಾ ಬಂದಿದ್ದುಪ್ರತಿ ವರ್ಷ ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮವಾಗಿ ಬರುತ್ತಿದ್ದು ಇಲಾಖೆಯಿಂದ ನಡೆಯುವ ಗುಣಮಟ್ಟ ಶಿಕ್ಷಣ ಸೂಚಿಯಿಂದ ಎ ಗ್ರೇಡ್ ಪಡೆದಿದೆ. ಆದರೆ ಹೊನ್ನಾಳಿಯ ಅನಾಮಿಕ ವ್ಯಕ್ತಿಯೊಬ್ಬರು ಬಿಇಒ ಹಾಗೂ ಡಿಡಿಪಿಐ ಕಚೇರಿಗೆ ಮೂಲ ಸೌಕರ್ಯಗಳು ಇರುವುದಿಲ್ಲ ಎಂದು ದೂರು ದಾಖಲಿಸಿದ್ದರಿಂದ ಶಿಕ್ಷಣ ಇಲಾಖೆ ಶಾಲೆಯ ಮಾನ್ಯತೆ ಹಿಂಪಡೆದ ಆದೇಶ ನೀಡಿದ್ದಾರೆ. ಈ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ತರಲಾಗಿದೆ. ಪೋಷಕರು ವಿದ್ಯಾರ್ಥಿಗಳು ಯಾವುದೇ ಆತಂಕಕ್ಕೆ ಒಳಗಾಗಬಾರದೆಂದು ತಿಳಿಸಿದರು.

ಪುರಸಭೆಯ ನಾಮನಿ ಸದಸ್ಯರಾದ ರೇವಣಸಿದ್ದಪ್ಪ ಮೂಲಿ, ಶಾಲೆ ಮುಖ್ಯ ಶಿಕ್ಷಕರಾದ ಮಲ್ಲಿಕಾರ್ಜನ, ಕೆಂಚಪ್ಪ ಹರೀಶ್ ಇಂದ್ರೇಶ್ ಶಕೀಲ್ ಪ್ರದೀಪ್, ಪೋಷಕರಾದ ಮಂಜಪ್ಪ, ಚಂದ್ರಪ್ಪ ಮೆಣಸಿನಕಾಯಿ ಇನ್ನಿತರರಿದ್ದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಆರ್. ರೇವಣಸಿದ್ದಪ್ಪ ಮಾತನಾಡಿದರು.

ಉಗ್ರರ ಮಟ್ಟ ಹಾಕಲು 140 ಕೋಟಿ ಜನ ಬೆಂಬಲ

ಚಿತ್ರದುರ್ಗ: ನಮ್ಮ ಜಿಲ್ಲೆಯಲ್ಲಿ ಯಾರೇ ಪಾಕಿಸ್ತಾನದ ಪ್ರಜೆಗಳು ಇದ್ದರು ಅವರನ್ನ ಹೊರ ಹಾಕುವ ಕೆಲಸ ಜಿಲ್ಲಾಡಳಿತ ಮಾಡಬೇಕು ಈ ಕುರಿತು ಕೇಂದ್ರ ಸರಕಾರ ಸಹ ಸೂಚನೆ ಕೊಟ್ಟಿದ್ದು, ರಾಜ್ಯ ಸರಕಾರ ದಿಟ್ಟ ನಿರ್ಧಾರ ತೆಗೆದುಕೊಂಡು ಅವರನ್ನ ಹೊರ ಹಾಕಬೇಕು ಎಂದು ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಚಿತ್ರದುರ್ಗದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪಹಲ್ ಗಾಮ್‌ನ ಉಗ್ರರ ದಾಳಿ ಖಂಡಿಸಿ ತಕ್ಕ ಉತ್ತರಕ್ಕೆ ಪ್ರಧಾನಿಗಳು ಐದು ಪ್ರಮುಖ ನಿರ್ಣಯಗಳನ್ನು ಕೈಗೊಂಡಿದ್ದಾರೆ. ಈ ಹಿನ್ನೆಲೆ ನಾವೆಲ್ಲ ಸರಕಾರದ ಜತೆ ಇದ್ದು ಭಯೋತ್ಪಾದನಾ ಚಟುವಟಿಕೆ ತಡೆಗೆ ಬಹುತೇಕ ದೇಶಗಳು ನಮ್ಮ ದೇಶದ ಜತೆ ಇದ್ದಾವೆ. ಈ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ತಕ್ಕ ಉತ್ತರ ಕೊಡುವ ನಿಟ್ಟಿನಲ್ಲಿ ಪಾಕಿಸ್ತಾನದ ಜತೆ ನಮ್ಮ ಸಂಬಂಧವನ್ನ ಕಡಿದು ಹಾಕಿದ್ದೇವೆ ಎಂದರು.

ಭಯೋತ್ಪಾದಕರ ಮಟ್ಟ ಹಾಕಲಿಕ್ಕೆ ದೇಶದ 140 ಕೋಟಿ ಜನ ಕೇಂದ್ರ ಸರಕಾರದ ಜತೆಯಲ್ಲಿ ಇದ್ದಾರೆ. ಭಯೋತ್ಪಾದನಾ ಚಟುವಟಿಕೆಯನ್ನು ತಡೆಗಟ್ಟಲಿಕ್ಕೆ ಪ್ರಮುಖ ರಾಷ್ಟ್ರಗಳು ಭಾರತದ ಜತೆ ನಿಲ್ಲುವ ಭರವಸೆಯನ್ನು ನೀಡಿವೆ.

ಚಿತ್ರದುರ್ಗದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಗೋವಿಂದ ಕಾರಜೋಳ ಮಾತನಾಡಿದರು.

ಮೇ.8ರಂದು ನಡೆಯುವ ಜನಾಕ್ರೋಶ ಯಾತ್ರೆಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ವಿಚಾರಧಾರೆಗಳ ಮಂಡನೆ ಜತೆಗೆ ಅಂಬೇಡ್ಕರ್‌ರವರ ಭಾವಚಿತ್ರ ಮೆರವಣಿಗೆಯನ್ನು ಮಾಡಲಿದ್ದೇವೆ. ಸಿದ್ದರಾಮಯ್ಯರವರು ನಡೆಸಿದ ಜಾತಿ ಗಣತಿ ಬೋಗಸ್ ಜಾತಿ ಗಣತಿ. ಬಿಜೆಪಿ ಪಕ್ಷವು ಜಾತಿ ಗಣತಿ ಮಾಡುವಂತೆ ಹೋರಾಟ ಮಾಡುತ್ತಾ ಬಂದಿದೆ. ಆದರೆ ಸಿದ್ದರಾಮಯ್ಯನವರ ವರದಿಯ ಬಗ್ಗೆ ವಿರೋಧವಿದೆ.

-ಕೆ.ಎಸ್ ನವೀನ್, ವಿಧಾನ ಪರಿಷತ್ ಸದಸ್ಯ

ಪಾಕಿಸ್ತಾನಿಗಳು ನಮ್ಮ ದೇಶದಲ್ಲಿ ಇನ್ನೂ ಉಳಿದಿದ್ದಾರೆ ಅವರನ್ನು ಹೊರ ಹಾಕಲಿಕ್ಕೆ ಕಠಿಣ ಕ್ರಮ ಕೈಗೊಳ್ಳಬೇಕು ಬೆಂಗಳೂರು, ಗುಲ್ಬರ್ಗದಂತಹ ನಗರಗಳಲ್ಲಿ ಇನ್ನೂ ಇದ್ದಾರೆ ಎಂಬ ಮಾಹಿತಿಯಿದೆ ಅವರನ್ನು ಹೊರ ಹಾಕಬೇಕು ಹೊರ ಹಾಕಲಿಕ್ಕೆ ರಾಜ್ಯ ಸರಕಾರ ಯಾವುದೇ ಹಿಂದೇಟು ಹಾಕಬಾರದು ಎಂದರು.

ಗೋಷ್ಠಿಯಲ್ಲಿ ಮಾಜಿ ಶಾಸಕ ಜಿಎಚ್ .ತಿಪ್ಪಾರೆಡ್ಡಿ, ಮಧುಗಿರಿ ಬಿಜೆಪಿ ಜಿಲ್ಲಾಧ್ಯಕ್ಷ ಹನುಮಂತೇಗೌಡ, ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ಸುರೇಶ್ ಸಿದ್ದಾಪುರ, ರಾಮದಾಸ್, ಬಿಜೆಪಿ ಮುಖಂಡ ಗುಂಡಾರ್ಪಿ ಸಿದ್ದಾರ್ಥ್, ಜೈಪಾಲಯ್ಯ, ವೆಂಕಟೇಶ್ ಯಾದವ್, ನಾಗರಾಜ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಅಭಿಷೇಕ್ ರಾಜ್ಯಕ್ಕೆ 5ನೇ ರ‍್ಯಾಂಕ್

ಹೊಸನಗರ: ನಗರದ ಗುಬ್ಬಿಗಾ ವಾಸಿಯಾದ ಅಭಿಷೇಕ್ ಕಶ್ಯಪ್, ಈ ಬಾರಿಯ ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 621ಅಂಕ ಪಡೆಯುವುದ ರೊಂದಿಗೆ ರಾಜ್ಯಕ್ಕೆ 5ನೇ ರ‍್ಯಾಂಕ್ ಪಡೆದು ಹೊಸನಗರಕ್ಕೆ ಕೀರ್ತಿ ತಂದಿದ್ದಾರೆ ಇವರು ಗುಬ್ಬಾಗ ಅನಂತರಾವ್‌ರವರ ಮೊಮ್ಮಗನಾಗಿದ್ದು ಗುಬ್ಬಿಗಾ ಸುನೀಲ್‌ರವರ ಪುತ್ರರಾಗಿದ್ದಾರೆ.

ಪ್ರಣವ್ ರಾಜ್ಯಕ್ಕೆ 4ನೇ ರ‍್ಯಾಂಕ್



ಹೊಸನಗರ: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ತಾಲೂಕಿನ ಪಟ್ಟಣದ ಶ್ರೀರಾಮಕೃಷ್ಣ ವಿದ್ಯಾಸಂಸ್ಥೆಯ ವಿದ್ಯಾರ್ಥಿ ಎಚ್.ಡಿ ಪ್ರಣವ್ 625ಕ್ಕೆ 622ಅಂಕ ಪಡೆಯುವ ಮೂಲಕ ರಾಜ್ಯಕ್ಕೆ 4ನೇ ರ‍್ಯಾಂಕ್‌ಗಳಿಸಿದ್ದಾರೆ. ಮೇಲಿನಬೆಸಿಗೆ ಗ್ರಾಮದ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಹಾಗೂ ಶಿಕ್ಷಕರ ಪತ್ತಿನ ಸಹಕಾರಿ ಸಂಘದ ಪ್ರದಾನ ಕಾರ್ಯದರ್ಶಿ ಡಿ ಧರ್ಮಪ್ಪ ಹಾಗೂ ಶಿಕ್ಷಕಿ ಸಾವಿತ್ರಿ ದಂಪತಿಗಳ ಪುತ್ರರಾಗಿದ್ದು ಇವರ ಈ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಆರ್. ಕೃಷ್ಣಮೂರ್ತಿರವರು ಅಭಿನಂದಿಸಿದ್ದಾರೆ.

ಹೋಲಿ ರಿಡೀಮರ್ ಶಾಲೆಗೆ 100% ಫಲಿತಾಂಶ

ಹೊಸನಗರ: ನಗರದ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಒಂದಾಗಿರುವ ಹೋಲಿ ರಿಡೀಮರ್ ಪ್ರೌಢಶಾಲೆಗೆ 2024-25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇಖಡ 100% ಫಲಿತಾಂಶ ಬಂದಿದೆ. ಈ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ 51 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅದರಲ್ಲಿ 28ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದು 23 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತೀರ್ಣರಾಗಿರುತ್ತಾರೆ. ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 51ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿದ್ದು ಶಾಲೆಗೆ ಕೀರ್ತಿ ತರಲು ಸಹಕರಿಸಿದ ಶಾಲೆಯ ಉಪನ್ಯಾಸಕರ ವೃಂದಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ಶಾಲೆಯ ಮುಖ್ಯ ಶಿಕ್ಷಕಿಯಾದ ವಿಲ್ಮಾಪಿಂಟೋರವರು ಅಭಿನಂದಿಸಿದ್ದಾರೆ.

ಅತ್ಯುನ್ನತ ಶ್ರೇಣಿ

ಹೊಸನಗರ: ತಾಲೂಕಿನ ಮಾರುತಿಪುರ ಸರಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿದ ಸಮರ್ಥ್‌ಶ್ರೀನಾಥ 578 ಅಂಕದೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಈತ ಮಾರುತಿಪುರದ ಕೃಷಿಕರಾದ ಮೈತ್ರಿ ಮತ್ತು ಶ್ರೀನಾಥ ದಂಪತಿ ಪುತ್ರ.

ಗುರೂಜಿ ಶಾಲೆಗೆ ಶೇ.100 ಫಲಿತಾಂಶ

ಹೊಸನಗರ: ಪಟ್ಟಣದ ಖಾಸಗಿ ಶಾಲೆಗಳಲ್ಲಿ ಒಂದಾಗಿರುವ ಗುರೂಜಿ ಇಂಟರ್ ನ್ಯಾಶನಲ್ ರೆಸಿಡೆನ್ಷಿಯಲ್ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 100% ಫಲಿತಾಂಶ ಬಂದಿದೆ ಎಂದು ಕಾರ್ಯದರ್ಶಿ ಶಾಂತಮೂರ್ತಿಯವರು ಪತ್ರಿಕೆ ತಿಳಿಸಿದ್ದಾರೆ. ಈ ಶಾಲೆಯಲ್ಲಿ ಒಟ್ಟು 34 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು 14ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 18 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ 2ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಶಾಲೆಗೆ ಕೀರ್ತಿಗೆ ತಂದಿರುವ ಸಾಧನೆಗೆ ಶಾಲೆಯ ಅಧ್ಯಕ್ಷ ಸುದೇಶ್ ಕಾಮತ್, ಸಂತೋಷ್ ಕಾಮತ್ ಶಾಲೆಯ ಅಭಿವೃದ್ಧಿ ಸಮಿತಿಯವರು ಅಭಿನಂದಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಪ್ರಲ್ಹಾದ ಜೋಶಿ} ಸಚಿವ
ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರಕಾರ ಹಾಗೂ ಖೇಲೋ ಇಂಡಿಯಾ ಅಭಿಯಾನ ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಪ್ರೇರಣೆಯಿಂದ ಧಾರವಾಡ ಲೋಕಸಭಾ ಕ್ಷೇತ್ರದ ಕ್ರೀಡಾಪಟುಗಳ ಅಭಿವೃದ್ಧಿಯ ದೃಷ್ಟಿಯಿಂದ ಈ ಕ್ರೀಡಾ ಸಂಕೀರ್ಣ ಸ್ಥಾಪಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಎಸ್‌ಎಸ್‌ಎಲ್‌ಸಿ ಉತ್ತಮ ಫಲಿತಾಂಶಕ್ಕೆ ಸಹಕರಿಸಿದವರಿಗೆ ಅಭಿನಂದನೆ: ಮಧು ಬಂಗಾರಪ್ಪ

ಶಿವಮೊಗ್ಗ ಜಿಲ್ಲೆಗೆ ರಾಜ್ಯದಲ್ಲಿ 4ನೇ ಸ್ಥಾನ

ಶಿವಮೊಗ್ಗ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಮಧು ಬಂಗಾರಪ್ಪ ಸೋಮವಾರದಂದು ನಗರದ ಉಸ್ತುವಾರಿ ಸಚಿವರ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಅರ್ಜಿಗಳನ್ನು ಸ್ವೀಕರಿಸಿದರು.

ಶಿವಮೊಗ್ಗ-ಭದ್ರಾವತಿ ಮೀಟರ್ ಟ್ಯಾಕ್ಸಿ ಅಸೋಸಿಯೇಷನ್‌ನವರು ತಮ್ಮ ಟ್ಯಾಕ್ಸಿಗಳಿಗೆ ಜಿಪಿಎಸ್ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಕೆ ಮಾಡಬೇಕೆಂಬ ಆದೇಶವಿರುತ್ತದೆ. ಈ ವ್ಯವಸ್ಥೆ ಇಲ್ಲದಿದ್ದಲ್ಲಿ ಆರ್‌ಟಿಓ ಕಚೇರಿಯಿಂದ ಎಫ್‌ಸಿ ಮಾಡಿಸಲು ಬರುವುದಿಲ್ಲ. ಆದರೆ ಈ ವ್ಯವಸ್ಥೆ ಅಳವಡಿಕೆಯಿಂದ ಟ್ಯಾಕ್ಸಿ ನಡೆಸುವವರಿಗೆ ಅಧಿಕ ಖರ್ಚು ಬರುತ್ತದೆ. ಹಾಗೂ ಈ ಟ್ಯಾಕ್ಸಿಗಳು ಶಿವಮೊಗ್ಗ ಮತ್ತು ಭದ್ರಾವತಿ ನಡುವೆ ಮಾತ್ರ ಕಾರ್ಯಾಚರಣೆ ಮಾಡುತ್ತಿರುವ ಕಾರಣ ಮತ್ತು ಅಧಿಕ ಖರ್ಚು ಆಗುವುದರಿಂದ ಸದರಿ ವ್ಯವಸ್ಥೆಯನ್ನು ರದ್ದುಪಡಿಸಿ ಅನುಕೂಲ ಮಾಡಿಕೊಡಬೇಕೆಂದು ಸಚಿವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ತೆಲುಗು ಅರುಂಧತಿ ಆದಿಕರ್ನಾಟಕ ಸಮಾಜದವರು ನಗರದ 27 ನೇ ವಾರ್ಡಿನಲ್ಲಿ ಅರ್ಧಕ್ಕೆ ನಿಲ್ಲಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ಪೂರ್ಣಗೊಳಿಸಲು ರು.50 ಲಕ್ಷ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿದರು.

ಬನಶಂಕರಿ ಬಡಾವಣೆಯ ಆಂಜನೇಯ ಸಮಿತಿಯವರು ದೇವಸ್ಥಾನ ನಿರ್ಮಿಸಲು ಅನುದಾನ ನೀಡುವಂತೆ ಕೋರಿದರು. ಹಾಗೂ ಉದ್ಯೋಗ ಒದಗಿಸುವಂತೆ ಕೋರಿ ಇಬ್ಬರು ಮಹಿಳೆಯರು ಅರ್ಜಿ ನೀಡಿದರು. ಸಚಿವರು 10 ಕ್ಕೂ ಅಧಿಕ ಅಹವಾಲು ಅರ್ಜಿಗಳನ್ನು ಸ್ವೀಕರಿಸಿದರು.

ನಗರದ ಉಸ್ತುವಾರಿ ಸಚಿವರ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ-ಉತ್ತಮ ಫಲಿತಾಂಶಕ್ಕೆ ಸಹಕರಿಸಿದವರಿಗೆ ಅಭಿನಂದನೆ:

ಇದೇ ವೇಳೆ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆ ರಾಜ್ಯದಲ್ಲಿ 4 ನೇ ಸ್ಥಾನ ಪಡೆದಿದ್ದು, ಜಿಲ್ಲೆಯ ಗೋಪಾಳದ ರಾಮಕೃಷ್ಣ ವಿದ್ಯಾಲಯದ ನಿತ್ಯ ಎಂ ಕುಲಕರ್ಣಿ, ಪ್ರಿಯದರ್ಶಿನಿ ಶಾಲೆಯ ನಮನ ಹಾಗೂ ಆದಿಚುಂಚನಗಿರಿ ವಿದ್ಯಾ ಸಂಸ್ಥೆಯ ಸಹಿಷ್ಣು ಎಂಬ ವಿದ್ಯಾರ್ಥಿಗಳು 625 ಕ್ಕೆ 625 ಅಂಕ ಪಡೆದು ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ ಎಂದರು.

2024-25 ರ ಪರೀಕ್ಷೆ 1 ರ ಫಲಿತಾಂಶವು ಕಳೆದ ಸಾಲಿಗಿಂತ ಶೇ.8.5 ರಷ್ಟು ಅಧಿಕವಾಗಿದೆ. ಈ ವರ್ಷ ಶೇ.75 ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆ(ಶೇ.60) ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ್ದಾರೆ. ಕಳೆದ ವರ್ಷ ಶೇ.54 ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆ ಪಡೆದಿದ್ದರು. ಈ ಬಾರಿ ಶೇ.75 ರಷ್ಟು ಆರ್‌ಟಿಇ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಉತ್ತಮ ಫಲಿತಾಂಶ ಬರಲು ಇಲಾಖೆಯಲ್ಲಿ ಸಾಕಷ್ಟು ಬದಲಾವಣೆಯನ್ನು ಈ ಬಾರಿ ತರಲಾಗಿತ್ತು. ರಾಜ್ಯಾದ್ಯಂತ ಎಲ್ಲ ಶಾಲೆಗಳಲ್ಲಿ ಸಂಜೆ ಹೊತ್ತು ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ನಡೆಸಲಾಗಿತ್ತು. ಅಣಕು ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲಾಗಿತ್ತು. ಜಿಲ್ಲಾಡಳಿತ, ಜಿ.ಪಂ, ಇತರೆ ಇಲಾಖೆಗಳು ಹಾಗೂ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳ ಪರಿಶ್ರಮದಿಂದ ಉತ್ತಮ ಫಲಿತಾಂಶ ಬಂದಿದ್ದು, ಇದಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದರು.

ಗ್ರಾಮೀಣ, ಹಿಂದುಳಿದ, ರೈತರು ಮತ್ತು ಬಡ ಮಕ್ಕಳಿಗೆ ಅನುಕೂಲವಾಗಲೆಂದು ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ ಕಟ್ಟಲು ಯಾವುದೇ ಶುಲ್ಕವನ್ನು ವಿಧಿಸಿಲ್ಲ. ಜತೆಗೆ ಆನ್‌ಲೈನ್ ನಲ್ಲೇ ತಕ್ಷಣ ಪರೀಕ್ಷೆ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು ಇದು ಅತ್ಯಂತ ಯಶಸ್ಸು ಕಂಡಿದೆ.

> ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ದಿ. 26-05-2025 ರಿಂದ 02-06-2025 ಹಾಗೂ ಪರೀಕ್ಷೆ-3, 23-06-2025 ರಿಂದ 30-06-2025 ರವರೆಗೆ ನಡೆಯಲಿದೆ ಎಂದು ತಿಳಿಸಿದರು. ಸರಕಾರಿ ಶಾಲೆಗಳಿಗೆ ಸುಮಾರು 11 ಸಾವಿರ ಹಾಗೂ ಅನುದಾನಿಕ ಶಾಲೆಗಳಿಗೆ 6500 ಸೇರಿದಂತೆ ಸುಮಾರು 17 ಸಾವಿರ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುವುದು.
>
> -ಮಧು ಬಂಗಾರಪ್ಪ, ಉಸ್ತುವಾರಿ ಸಚಿವ

ಪಿಯುಸಿಯಲ್ಲಿ ಕಳೆದ ಬಾರಿ 36 ಸಾವಿರ ವಿದ್ಯಾರ್ಥಿಗಳು ಇಂಪ್ರೂವ್‌ಮೆಂಟ್‌ಗೆ ನೋಂದಣಿ ಮಾಡಿಸಿದ್ದರೆ ಈ ಬಾರಿ 79 ಸಾವಿರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಈವರೆಗೆ 64,600 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಎರಡನೇ ಪರೀಕ್ಷೆಗೆ ದಾಖಲಾಗಿದ್ದು, ಮೂರು ಪರೀಕ್ಷೆಗಳ ಸೂತ್ರ ಯಶಸ್ಸು ಕಂಡಿದೆ.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಂದ್ರಭೂಪಾಲ್, ತಾಲ್ಲೂಕು ಅಧ್ಯಕ್ಷ ಹೆಚ್.ಎಂ ಮಧು, ಮಾಜಿ ವಿಧಾನಪರಿಷತ್ ಶಾಸಕ ಆರ್.ಪ್ರಸನ್ನಕುಮಾರ್, ಮುಖಂಡರಾದ ಕಲಗೋಡು ರತ್ನಾಕರ ಸೇರಿದಂತೆ ಇತರೆ ಮುಖಂಡರು ಪಾಲ್ಗೊಂಡಿದ್ದರು.

ಐಎಎಸ್ ಅಧಿಕಾರಿ ಇತರರಿಗೆ ಮಾದರಿಯಾಗಬೇಕು: ಶಾಸಕ

ಸಾಗರ ನಗರ ಸಭೆಯುವತಿಯಿಂದ ಐಎಎಸ್ ವಿಕಾಸ್ ಗೆ ನಾಗರಿಕ ಸನ್ಮಾನ.

ಸಾಗರ: ಒಬ್ಬ ಐಎಎಸ್ ಅಧಿಕಾರಿ ಉಳಿದೆಲ್ಲರಿಗೂ ಮಾದರಿಯಾಗಬೇಕು ಆಗ ಆತ ಎಲ್ಲಿಯೇ ಹೋದರೂ ಉಳಿದ ನೌಕರರು ಅವರನ್ನು ಅನುಸರಿಸುತ್ತಾರೆ ಎಂದು ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.

ನಗರ ಸಭೆಯ ಆಶ್ರಯದಲ್ಲಿ ಏರ್ಪಡಿಸಿದ್ದ ಯುಪಿಎಸ್‌ಸಿ ಪರೀಕ್ಷೆಯಲ್ಲಿ 288ನೇ ರ‍್ಯಾಂಕ್ ಗಳಿಸಿರುವ ಸಾಗರದ ವಿಕಾಸ್ ವಿ. ಅವರ ನಾಗರೀಕ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಚಿಕ್ಕ ವಯಸ್ಸಿನಲ್ಲಿ ಯುಪಿಎಸ್‌ಸಿಯಲ್ಲಿ 288ನೇ ರ‍್ಯಾಂಕ್ ಪಡೆದಿರುವುದು ದೊಡ್ಡ ಸಾಧನೆ ಎಂದ ಅವರು, ಐಎಎಸ್, ಐಪಿಎಸ್ ಐಎಫ್‌ಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ಅತ್ಯಂತ ಕಠಿಣವಾಗಿರುತ್ತದೆ. ಅದರಲ್ಲಿ ಯಶಸ್ವಿಯಾಗಲು ಬದ್ಧತೆ ಹಾಗೂ ಏಕಾಗ್ರತೆ ಅಗತ್ಯ. ವಿಕಾಸ್ ತಂದೆತಾಯಿಯ ಪ್ರೋತ್ಸಾಹ, ಗುರುಹಿರಿಯರ ಮಾರ್ಗದರ್ಶನದಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ನಿಮ್ಮ ಸೇವೆ ನಮ್ಮ ನೆಲಕ್ಕೆ ಸಿಗಬೇಕು ಎನ್ನುವುದು ನನ್ನ ಉದ್ದೇಶ. ಎಲ್ಲಿಯೇ ಕೆಲಸ ಮಾಡಿದರೂ ಸಾಗರಕ್ಕೆ ಕೀರ್ತಿ ತನ್ನಿ ಎಂದರು.

> ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಯಲ್ಲ. ಇಂಜಿನಿಯರಿಂಗ್ ಮುಗಿಸಿ ಡಿಆರ್‌ಡಿಓನಲ್ಲಿ ಕೆಲಸ ಮಾಡುತ್ತಲೆ ನಾನು ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಂಡು 288ನೇ ರ‍್ಯಾಂಕ್‌ನಲ್ಲಿ ತೇರ್ಗಡೆಯಾಗಿದ್ದೇನೆ. ನನ್ನ ಈ ಸಾಧನೆಗೆ ಗುರುಹಿರಿಯರ ಮಾರ್ಗದರ್ಶನ ಅಮೂಲ್ಯವಾದದ್ದು.
>
> -ವಿಕಾಸ್ ವಿ.

ನಗರಸಭೆ ಅಧ್ಯಕ್ಷೆ ಮೈತ್ರಿ ವಿ. ಪಾಟೀಲ್ ಅಧ್ಯಕ್ಷತೆವಹಿಸಿದ್ದರು. ಉಪಾಧ್ಯಕ್ಷೆ ಸವಿತಾ ವಾಸು, ವಿಕಾಸ್ ತಂದೆ ವಿ.ಸಿ.ಪಾಟೀಲ್, ತಾಯಿ ಮಹಾಲಕ್ಷ್ಮೀ ಹೆಗಡೆ, ಪೌರಾಯುಕ್ತ ಎಚ್.ಕೆ.ನಾಗಪ್ಪ, ಸದಸ್ಯ ಕೆ.ಆರ್. ಗಣೇಶ್ ಪ್ರಸಾದ್ ಇದ್ದರು.

ಸ್ವಯಂ ಉದ್ಯೋಗಕ್ಕೆ ಆದ್ಯತೆ ನೀಡಿ: ಬೇಳೂರು

ಸಾಗರ: ಯುವ ಜನತೆ ಸ್ವಯಂ ಉದ್ಯೋಗಕ್ಕೆ ಪ್ರಾಮುಖ್ಯತೆ ನೀಡಬೇಕು ಈ ಹಿನ್ನೆಲೆಯಲ್ಲಿ ನಂದಿನಿ ಪಾರ್ಲರ್ ಪೂರಕವಾಗಿದೆ ಏಕೆಂದರೆ ನಂದಿನ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ಇದೆ ಎಂದು ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ , ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.

ಸಾಗರದ ಪಶು ವೈದ್ಯಕೀಯ ಆಸ್ಪತ್ರೆ ಸಮೀಪ ನೂತನ ನಂದಿನಿ ಸ್ಕೂಪ್ ಪಾರ್ಲರ್ ಉದ್ಘಾಟಿಸಿ ಮಾತನಾಡಿದರು. ಈ ಅವಧಿಯಲ್ಲಿಯೇ ಶಿಮುಲ್‌ನ ನಂದಿನಿ ಪಾರ್ಲರ್‌ಗಳು ಸಾಗರದ ಬಿ.ಎಚ್.ರಸ್ತೆ, ತಾಯಿಮಗು ಆಸ್ಪತ್ರೆ, ಉಪವಿಭಾಗೀಯ ಆಸ್ಪತ್ರೆ, ಬಸ್ ನಿಲ್ದಾಣ, ರಿಪ್ಪನಪೇಟೆಯಲ್ಲಿ ಎರಡು ಕಡೆ ಪ್ರಾರಂಭಿಸಲಾಗಿದೆ. ಅಲ್ಲದೆ ಆನಂದಪುರ, ಹೊಸನಗರ ಭಾಗಗಳಲ್ಲಿ ನಂದಿನಿ ಸ್ಕೂಪ್ ಪಾರ್ಲರ್ ಮಾಡಲು ಮನವಿ ಸಲ್ಲಿಸಲಾಗಿದೆ. ನಂದಿನಿ ಪಾರ್ಲರ್ ಮಾಡಲು ಆಸಕ್ತಿ ಇರುವವರು ನಮ್ಮನ್ನು ಸಂಪರ್ಕಿಸಿದರೆ ಅವರಿಗೆ ಅವಕಾಶ ಕಲ್ಪಿಸಲಾಗುತ್ತದೆ ಎಂದರು. ಶಿಮುಲ್ ಅಧ್ಯಕ್ಷ ವಿದ್ಯಾಧರ ಗುರುಶಕ್ತಿ ಮಾತನಾಡಿ, ಶಾಸಕ ಬೇಳೂರು ಗೋಪಾಲಕೃಷ್ಣನವರ ಬೇಡಿಕೆಯಂತೆ ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚಿನ ನಂದಿನಿ ಪಾರ್ಲರನ್ನು ಆರು ತಿಂಗಳಿನಲ್ಲಿ ನೀಡಲಾಗಿದೆ. ಪ್ರತಿಪಾರ್ಲರ್‌ನಲ್ಲಿ ನಂದಿನಿ ಹಾಲಿನ 200ಕ್ಕೂ ಹೆಚ್ಚು ಉತ್ಪನ್ನಗಳು ಲಭ್ಯ ಇರುತ್ತದೆ. ಬೆಳಗ್ಗೆ 6ರಿಂದ ರಾತ್ರಿ 11ರವರೆಗೆ ಸ್ಕೂಪ್ ಪಾರ್ಲರ್ ತೆರೆದಿರುತ್ತದೆ. ಇದರಿಂದ ಹೆಚ್ಚು ಜನರಿಗೆ ಅನುಕೂಲವಾಗುತ್ತದೆ ಎಂದರು.

ಸಾಗರದಲ್ಲಿ ನೂತನ ನಂದಿನಿ ಪಾರ್ಲರ್‌ನ್ನು ಶಾಸಕ ಬೇಳೂರು ಗೋಪಾಲಕೃಷ್ಣ ಉದ್ಘಾಟಿಸಿದರು.

ಶಿಮುಲ್ ವ್ಯವಸ್ಥಾಪಕ ನಿರ್ದೇಶಕ ಶೇಖರ್, ನಗರಸಭೆ ಸದಸ್ಯರಾದ ಗಣಪತಿ ಮಂಡಗಳಲೆ, ಅರವಿಂದ ರಾಯ್ಕರ್, ಜಾಕೀರ್, ಪ್ರಮುಖರಾದ ಕೆ.ಸಿದ್ದಪ್ಪ, ಚೇತನರಾಜ್ ಕಣ್ಣೂರು, ಸುರೇಶಬಾಬು, ಜಯರಾಮ್, ರವೀಂದ್ರ, ಸಾಗರ್, ಭೀರೇಶ್ ಕಾಗೋಡು, ಅನಿಲಕುಮಾರ್ ಇದ್ದರು.

ಕುಟುಂಬ ಕಲಹ ಒಬ್ಬನ ಸಾವು

ಹೊಸನಗರ: ಹೊಸನಗರ ತಾಲೂಕು ನಿಟ್ಟೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕರ್ಕಮುಡಿಯಲ್ಲಿ ನಾಗ-ಚೌಡಿ ದೇವಸ್ಥಾನದ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಕುಟುಂಬಸ್ಥರ ಮಧ್ಯೆ ಜಗಳ ನಡೆದಿದ್ದು ಕುಟುಂಬ ಕಲಹದಿಂದ ದೇವಿಚಂದ್ರ, ಎಂಬ (52)ವರ್ಷದ ಓರ್ವ ಮೃತ ಪಟ್ಟ ಘಟನೆ ಹೊಸನಗರ ತಾಲೂಕು ನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹೊಸನಗರದ ಸರ್ಕಲ್ ಇನ್ಸ್‌ಪೆಕ್ಟರ್ ಗುರಣ್ಣ ಎಸ್ ಹೆಬ್ಬಾಳ್ ಹೊಸನಗರ ಸಬ್ ಇನ್ಸ್‌ಪೆಕ್ಟರ್ ಶಂಕರ ಗೌಡ ಪಾಟೀಲ್, ನಗರ ಪಿಎಸ್‌ಐ ಕುಮಾರ್ ಹಾಗೂ ಪೋಲಿಸ್ ಇಲಾಖೆಯ ಸಿಬ್ಬಂದಿಗಳು ಸ್ಥಳಕ್ಕೆ ಬೇಟಿ ನೀಡಿ ತನಿಖೆ ಆರಂಭಿಸಿದ್ದಾರೆ.

ಅಂಗಡಿಗಳ ಮೇಲೆ ದಾಳಿ: ದಂಡ

ನಗರದ ಹೊಸಮನೆ ಮುಖ್ಯರಸ್ತೆಯಲ್ಲಿರುವ ಹೋಟೆಲ್, ಅಂಗಡಿಗಳಿಗೆ ಅಧಿಕಾರಿಗಳ ದಾಳಿ.

ಭದ್ರಾವತಿ: ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಇವರ ಸಹಯೋಗದಲ್ಲಿ ನಗರದ ಹೊಸಮನೆ ಮುಖ್ಯರಸ್ತೆಯಲ್ಲಿರುವ ಹೋಟೆಲ್, ಅಂಗಡಿ ಮುಗ್ಗಟ್ಟುಗಳಿಗೆ ದಾಳಿ ನಡೆಸಿ ಕಾಯ್ದೆಯನ್ನು ಉಲ್ಲಂಘಿಸಿದವರಿಗೆ ಮಾಹಿತಿ ಶಿಕ್ಷಣ ನೀಡುವುದರ ಜತೆಗೆ ದಂಡವನ್ನು ವಿಧಿಸಲಾಯಿತು.

ಒಟ್ಟು 30 ಪ್ರಕರಣಗಳನ್ನು ದಾಖಲಿಸಿ ರು. 3,800 ರು.ದಂಡ ಸಂಗ್ರಹಿಸಲಾಯಿತು. ತಂಡದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ:ಎಂ.ವಿ,ಅಶೋಕ. ಸಮಾಜ ಕಾರ್ಯಕರ್ತ ರವಿರಾಜ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಕೆ. ಸುಶೀಲಾಬಾಯಿ, ತಾಲೂಕು ಆರೋಗ್ಯ ನಿರೀಕ್ಷಣಾಧಿಕಾರಿ ಆನಂದಮೂರ್ತಿ, ಆರೋಗ್ಯ ಇಲಾಖೆಯ ಹರೀಶ್, ಅಲ್ಲಾಉದ್ದೀನ್ ತಾಜ್, ಆಕಾಶ್ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು.

ಹಿರಿಯ ಪತ್ರಕರ್ತರಾದ ಆನಂದರಾಮನ್ ಇನ್ನಿಲ್ಲ

ಭದ್ರಾವತಿ: ಹಿರಿಯ ಪತ್ರಕರ್ತ ಎಲ್. ಆನಂದರಾಮನ್(71) ಸೋಮವಾರ ಬೆಳಗ್ಗೆ ನಿಧನ ಹೊಂದಿದರು.ಪತ್ನಿ ಮಂಜುಳಾ, ಪುತ್ರಿಯರಾದ ರಕ್ಷಾ ಮತ್ತು ರಶ್ಮಿ ಹಾಗು ಅಳಿಯಂದಿರು, ಮೊಕ್ಕಳು ಇದ್ದಾರೆ. ಸುಮಾರು 3 ದಶಕಗಳಿಗೂ ಹೆಚ್ಚು ಕಾಲ ಪತ್ರಿಕಾ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಕನ್ನಡಪ್ರಭ ಮತ್ತು ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆಗಳ ವರದಿಗಾರರಾಗಿ ದೀರ್ಘಾವಧಿ ಸೇವೆಲ್ಲಿಸಿದ್ದರು. ಪತ್ರಕರ್ತರ ಸಂಘದ ತಾಲೂಕು ಶಾಖೆಯ ಉಪಾಧ್ಯಕ್ಷರಾಗಿ, ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದರು.

ಅಲ್ಲದೆ ಆನಂದರಾಮನ್‌ರವರು ಕ್ರಿಕೆಟ್ ತರಬೇತಿದಾರರಾಗಿ ಸಹ ಗುರುತಿಸಿಕೊಳ್ಳುವ ಮೂಲಕ ಹಲವಾರು ಪಂದ್ಯಗಳಲ್ಲಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ್ದರು. ಕೆಲವು ವರ್ಷಗಳ ಹಿಂದೆ ಅನಾರೋಗ್ಯಕ್ಕೆ ಒಳಗಾಗಿ ಚೇತರಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಬೆಂಗಳೂರಿನಲ್ಲಿ ವಾಸವಾಗಿದ್ದರು.

ಶಿಕ್ಷಣ ನೀಡುವುದು ಪುಣ್ಯದ ಕಾಯಕ

ಸೊರಬ: ಹಸಿದವರಿಗೆ ಅನ್ನ ನೀಡುವುದು ಮತ್ತು ದೇವರು ಸ್ವರೂಪಿಗಳಾದ ಮಕ್ಕಳಿಗೆ ಶಿಕ್ಷಣ ನೀಡುವುದು ಪುಣ್ಯದ ಕೆಲಸವಾಗಿರುತ್ತದೆ. ಶಿಕ್ಷಣದಿಂದ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯ ಎಂದು ಶಾಲಾ ಶಿಕ್ಷಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದರು. ತಾಲೂಕಿನ ಮಾವುಲಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ ಖಾಸಗಿ ಸಹಭಾಗಿತ್ವದ ಶ್ರೀಕಲ್ಲೇಶ್ವರ ಅಕ್ಕಿ ಗಿರಣಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಶಿಕಾರಿಪುರ ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರಾಜ ಗೌಡ, ತಾಪಂ ಮಾಜಿ ಅಧ್ಯಕ್ಷ ಗಣಪತಿ ಎಚ್, ಕಲ್ಲೇಶ್ವರ ಅಕ್ಕಿ ಗಿರಣಿ ಮಾಲೀಕ ಎಚ್. ಭೋಗೇಶ್,ಅಕ್ಕಿ ಗಿರಣಿ ಮಾಲೀಕರ ಸಂಘದ ತಾಲೂಕು ಅಧ್ಯಕ್ಷ ವೆಂಕಟೇಶ್ ಕಾಮತ್ ಕೆರೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಣ್ಣಪ್ಪಹಾಲಘಟ್ಟ ,ಎಂ ಡಿ ಶೇಖರ್, ಸದಾನಂದ ಗೌಡ ಬಿಳಗಲಿ, ಕೆ.ಪಿ. ರುದ್ರಗೌಡ,ಯುವ ಕಾಂಗ್ರೆಸ್ ಮುಖಂಡ ಪ್ರವೀಣ್, ಸುರೇಶ್ ಬಿಳವಾಣಿ, ನಿರಂಜನ ಮೂರ್ತಿ, ಶಿವಕುಮಾರ್, ಸುನೀಲ್ ಗೌಡ, ಸುರೇಶ್ ಹಾವಣ್ಣನವರ್, ಸುನೀಲ್ ಗೌಡ, ದಾನಪ್ಪ,ಹನುಮಂತು, ಮೊದಲಾದವರಿದ್ದರು.

ಬಿಳಾಗಿಯಲ್ಲಿ ಸಡಗರದ ಮೀನುಗಳ ಶಿಕಾರಿ

ಸೊರಬ: ತಾಲೂಕಿನ ಬಿಳಾಗಿ ಗ್ರಾಮದ ದೊಡ್ಡಕೆರೆಯಲ್ಲಿ ಮಲೆನಾಡಿನ ಜನಪದ ಕ್ರೀಡೆ ಮೀನು ಶಿಕಾರಿ ಸಡಗರದಿಂದ ಜರುಗಿತು.

ಏಷ್ಯಾ ಖಂಡದಲ್ಲಿಯೇ ಅತಿ ಹೆಚ್ಚು ಕೆರೆಗಳನ್ನು ಹೊಂದಿರುವ ತಾಲೂಕಿನಲ್ಲಿ ಕೆರೆ ಬೇಟೆ ವಿಶೇಷವಾಗಿ ನಡೆಯುತ್ತದೆ. ಮಲೆನಾಡಿನ ಅಪ್ಪಟ್ಟ ಗ್ರಾಮೀಣ ಕ್ರೀಡೆಯಾಗಿರುವ ಕೆರೆಬೇಟೆಯಲ್ಲಿ ಪಾಲ್ಗೊಳ್ಳುವವರು ಏಕ ಕಾಲದಲ್ಲಿ ಕೆರೆಗೆ ಇಳಿದು ಮೀನುಗಳನ್ನು ಹಿಡಿಯುವುದನ್ನು ನೋಡಲು ನೂರಾರು ಜನ ಆಗಮಿಸುತ್ತಾರೆ. ಮಳೆಗಾಲದ ಸಂದರ್ಭದಲ್ಲಿ ಕೆರೆಗಳಿಗೆ ಮೀನಿನ ಮರಿಗಳನ್ನು ಬಿಡಲಾಗುತ್ತದೆ. ನಂತರ ಬೇಸಿಗೆಯಲ್ಲಿ ಕೆರೆಗಳು ಬತ್ತಿದಾಗ ಕೆರೆಬೇಟೆ ಸಾರಲಾಗುತ್ತದೆ. ಈ ವೇಳೆ ಗ್ರಾಮಸ್ಥರಲ್ಲಿ ಎಲ್ಲಿಲ್ಲದ ಸಡಗರ.

ಗ್ರಾಮದಲ್ಲಿ ನಡೆದ ಕೆರೆಬೇಟೆಯಲ್ಲಿ ಕೂಣಿಗೆ ಅವಕಾಶ ಕಲ್ಪಿಸಲಾಗಿತ್ತು. ಗ್ರಾಮಸ್ಥರು ಮಾತ್ರವಲ್ಲದೇ ಸುತ್ತಲಿನ ಗ್ರಾಮದವರು ಜಾತಿ, ಮತಗಳ ಭೇದವಿಲ್ಲದೆ, ಹಿರಿಯರು, ಕಿರಿಯರೆನ್ನದೇ ಕೆರೆಬೇಟೆಯಲ್ಲಿ ಪಾಲ್ಗೊಂಡಿದ್ದರು. ಕೆಲವರಿಗೆ ಸುಮಾರು 15ಕೆ.ಜಿ ವರೆಗೆ ಮೀನು ಲಭಿಸಿತು. ಕೂಣಿ ಹಿಡಿದು ಕೆರೆಗೆ ಇಳಿದವರು ಸಂಸತದಿಂದಲೇ ಕೆರೆಬೇಟೆ ಮಾಡಿ ತೆರಳಿದರು. ಒಟ್ಟಾರೆ ಮಳೆಗಾಲ ಆಗಮಿಸುವ ಮುನ್ನ ತಾಲೂಕಿನಲ್ಲಿ ಕೆರೆಬೇಟೆಯ ಸಂಭ್ರಮ ನಡೆಯುತ್ತದೆ. ಗ್ರಾಮದವರು ಮಾತ್ರವಲ್ಲದೇ ಸಾಗರ, ತ್ಯಾಗರ್ತಿ, ಸಿದ್ದಾಪುರ, ಆನವಟ್ಟಿ, ಶಿರಾಳಕೊಪ್ಪ ಭಾಗದದಿಂದಲೂ ಕೆರೆಬೇಟೆ ಕಲಿಗಳು ಆಗಮಿಸಿದ್ದರು.

ತಾಲೂಕಿನ ಬಿಳಾಗಿ ಗ್ರಾಮದ ದೊಡ್ಡಕೆರೆಯಲ್ಲಿ ಮಲೆನಾಡಿನ ಜನಪದ ಕ್ರೀಡೆ ಮೀನು ಶಿಕಾರಿ ಸಡಗರದಿಂದ ಜರುಗಿತು.



ಕೇಂದ್ರದ ಜನಗಣತಿ ನಿರ್ಧಾರಕ್ಕೆ ಸಚಿವ ಮಧು ಬಂಗಾರಪ್ಪ ಪ್ರತಿಕ್ರಿಯೆ

ಕಾಪಿ ಮಾಡಿದ ಕೇಂದ್ರ ಸರಕಾರ



ಶಿವಮೊಗ್ಗ: ಜನಗಣತಿ ಜತೆಗೆ ಜಾತಿ ಗಣತಿಗೂ ಮುಂದಾಗಿರುವ ಕೇಂದ್ರ ಸರಕಾರದ ನಿರ್ಧಾರವನ್ನು ತಾವು ಸ್ವಾಗತಿಸುವುದಾಗಿ ಹೇಳಿರುವ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ತಮ್ಮದೇ ಸರಕಾರದ ಯೋಜನೆಯನ್ನು ಕೇಂದ್ರ ಸರಕಾರ ಕಾಪಿ ಮಾಡಿದ್ದಕ್ಕೆ ಧನ್ಯವಾದ ಸಲ್ಲಿಸುವುದಾಗಿ ವ್ಯಂಗ್ಯವಾಡಿದರು.

ಪತ್ರಿಕಾಗೋಷ್ಠಿಯನ್ನುದ್ದೇಶಿ ಮಾತನಾಡಿ, ದೇಶದಲ್ಲಿ ಜನಗಣತಿ ನಡೆಯಬೇಕಿದೆ. ಹಾಗೆಯೇ ಜಾತಿ ಗಣತಿಯೂ ಆಗಬೇಕಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ತೆಗೆದುಕೊಂಡಿರುವ ನಿರ್ಧಾರ ಸ್ವಾಗತಾರ್ಹ ಎಂದರು. ಇದೇ ವೇಳೆ ಅವರು, ರಾಜ್ಯ ಸರಕಾರದ ಜಾತಿ ಸಮೀಕ್ಷೆ ಬಗ್ಗೆ ಬಂದ ಟೀಕೆಗಳನ್ನು ಪ್ರಸ್ತಾಪಿಸಿ, ವಿಪಕ್ಷ ಬಿಜೆಪಿ ವಿರುದ್ಧ ಹರಿಹಾಯ್ದರು.

ಬಿಜೆಪಿ ಜಾತಿ ಗಣತಿಗೆ ವಿರುದ್ಧವಾಗಿದ್ದರು. ದೇಶದಲ್ಲಿ ಜಾತಿ ಗಣತಿ ಆಗಬೇಕೆಂದು ರಾಹುಲ್ ಗಾಂಧಿ ಅವರು ಹೇಳಿದ್ದಾಗ ಲೇವಡಿ ಮಾಡಿದ್ದರು. ಈಗ ಈಗ ದೇಶದಲ್ಲಿ ಜನಗಣತಿ ಜತೆಗೆ ಜಾತಿ ಗಣತಿ ಮಾಡುವುದಾಗಿ ಹೇಳಿದ್ದಾರೆ. ಅವರ ವಿಲಕ್ಷಣ ಮನಸ್ಥಿತಿಗೆ ಇದು ಸಾಕ್ಷಿ ಎಂದು ಕಿಡಿಕಾರಿದರು.

ಅಂಬೇಡ್ಕರ್ ಮತ್ತು ಸಂವಿಧಾನದ ಆಶಯದಂತೆ ದೇಶದ ದಲಿತ, ಹಿಂದುಳಿದ, ಶೋಷಿತ ಸೇರಿದಂತೆ ಎಲ್ಲಾ ವರ್ಗಕ್ಕೂ ಸಾಮಾಜಿಕ ನ್ಯಾಯ ಸಿಗಬೇಕಾದರೆ ಜಾತಿ ಸಮೀಕ್ಷೆ ತುಂಬಾ ಅಗತ್ಯ. ಆ ನಿಟ್ಟಿನಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೊದಲ ಸಲ ಮುಖ್ಯಮಂತ್ರಿಯಾಗಿದ್ದಾಗ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಗೆ ಆಯೋಗ ರಚಿಸಿದ್ದರು. ಅದೇ ಆಯೋಗವು ಸುಮಾರು 54 ಅಂಶಗಳನ್ನು ಮುಂದಿಟ್ಟುಕೊಂಡು ತಯಾರಿಸಿದ ವರದಿ ಈಗ ಸರಕಾರದ ಮುಂದಿದೆ. ಅದೇ ಮಾದರಿಯಲ್ಲಿ ಕೇಂದ್ರ ಸರಕಾರವು ದೇಶದಲ್ಲಿ ಆರ್ಥಿಕ , ಸಾಮಾಜಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಮುಂದಿಟ್ಟುಕೊಂಡು ಜಾತಿ ಸಮೀಕ್ಷೆ ನಡೆಸಲಿ ಎನ್ನುವುದು ನಮ್ಮ ಮನವಿ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಕೇಂದ್ರಕ್ಕೂ ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಪ್ರಸನ್ನ ಕುಮಾರ್, ಕಾಂಗ್ರೆಸ್ ಮುಖಂಡರಾದ ಕಲ್ಲುಗೋಡು ರತ್ನಾಕರ್, ಚಂದ್ರ ಭೂಪಾಲ್, ಕಲಿಂ ಪಾಶಾ, ಮಧು, ರಮೇಶ್ ಇಕ್ಕೇರಿ, ದೇವಿ ಕುಮಾರ್ ಸೇರಿದಂತೆ ಮತ್ತಿತರರು ಇದ್ದರು.

ಸಮಾಚಾರ ಸಣ್ಣದಲ್ಲ

ಆಕ್ಷೇಪಾರ್ಹ ಪೋಸ್ಟ್: ದೂರು ದಾಖಲು

ಮಂಗಳೂರು: ಸುಹಾಸ್ ಶೆಟ್ಟಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರ ಬಗ್ಗೆ ಆಕ್ಷೇಪಾರ್ಹ ಪೋಸ್ಟ್ ಮಾಡಿರುವ ಶಾಸಕ ಹರೀಶ್ ಪೂಂಜಾ, ಬಿಜೆಪಿ ಕಾರ್ಯಕರ್ತ ವಿಕಾಸ್.ಪಿ ವಿರುದ್ಧ ಜಿಲ್ಲಾ ಕಾಂಗ್ರೆಸ್ ಪೊಲೀಸ್ ಕಮಿಷನರ್‌ಗೆ ಸೋಮವಾರ ದೂರು ನೀಡಿದೆ. ದ.ಕ.ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪರವಾಗಿ ಎನ್.ಎಸ್.ಯು.ಐ ಜಿಲ್ಲಾಧ್ಯಕ್ಷ ಸುಹಾನ್ ಆಳ್ವ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್‌ಗೆ ದೂರು ನೀಡಿದರು. ''ಶಾಸಕ ಹರೀಶ್ ಪೂಂಜಾ, ಬಿಜೆಪಿ ಕಾರ್ಯಕರ್ತ ವಿಕಾಸ್.ಪಿ ಎಂಬವರು ಸುಹಾಸ್ ಶೆಟ್ಟಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ನಾಯಕರ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಸಮಾಜದಲ್ಲಿ ಶಾಂತಿ ಭಂಗ ಉಂಟು ಮಾಡುವ ಉದ್ದೇಶದಿಂದ ಕೋಮು ಗಲಭೆಗೆ ಪ್ರಚೋದನೆಗೆ ನೀಡಿದ್ದಾರೆ. ಈ ಬಗ್ಗೆ ಗಂಭೀರವಾಗಿ ಪರಿಗಣಿಸಿ ಇಬ್ಬರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು'' ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ಹರೀಶ್ ಕುಮಾರ್ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಶೆಟ್ಟಿ ಪ್ರಕರಣ: ವಿದೇಶಿ ಹಣ ಬಳಕೆ?

ರೌಡಿಶೀಟರ್ ಆಗಿದ್ದ ಕಾರಣ ಅದೇ ಕಾಯಿದೆಯಲ್ಲಿ ಪ್ರಕರಣ ದಾಖಲಾಗಿದೆ: ಪರಂ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ತೀವ್ರ ವಾಕ್ಸಮರಕ್ಕೆ ಕಾರಣವಾಗಿರುವ ಸುಹಾಸ್ ಶೆಟ್ಟಿ ಹತ್ಯೆಗೆ ವಿದೇಶದಿಂದ ಬಂಡವಾಳ ಬಂದಿರುವ ಅನುಮಾನ ಶುರುವಾಗಿದ್ದು, ಪೊಲೀಸರು ಈ ನಿಟ್ಟಿನಲ್ಲಿ ತನಿಖೆ ಆರಂಭಿಸಿದ್ದಾರೆ.

ಕೊಲೆ ಪ್ರಕರಣದಲ್ಲಿ ಈಗಾಗಲೇ ಬಂಧಿತರಾಗಿರುವ ಎಂಟು ಆರೋಪಿಗಳ ವಿವಿಧ ಬ್ಯಾಂಕ್ ಖಾತೆಗಳ ಪರಿಶೀಲನೆಗೆ ಮುಂದಾಗಿರುವ ಪೊಲೀಸರು, ಸುಹಾಸ್ ಶೆಟ್ಟಿ ಹತ್ಯೆ ಹಿಂದೆ ಅನೇಕ ಕಾಣದ ಕೈಗಳ ಕೈವಾಡ ಶಂಕೆ

ಹಿನ್ನೆಲೆಯಲ್ಲಿ ಹಣ ಸಹಾಯ ಮಾಡಿರುವ ಅನುಮಾನ ವ್ಯಕ್ತವಾಗಿವೆ. ಕೊಲೆಯಾಗಿರುವ ಫಾಝಿಲ್ ಸಹೋದರ ಆದಿಲ್ ಆರೋಪಿಗಳಿಗೆ 5 ಲಕ್ಷ ರು. ಸುಪಾರಿ ಕೊಟ್ಟಿರುವುದಲ್ಲದೇ ವಿವಿಧ ಮೂಲಗಳಿಂದ ಆರೋಪಿಗಳಿಗೆ ಹಣ ಬಂದಿರುವ ಶಂಕೆ ವ್ಯಕ್ತವಾಗಿದೆ.

ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆಗೆ ಆರೋಪಿಗಳು ಮೂರು ತಿಂಗಳ ಹಿಂದೆಯೇ ಸ್ಕೆಚ್ ಹಾಕಿದ್ದರು ಎಂಬುವುದನ್ನು ಪೊಲೀಸರು ಪತ್ತೆಹಚ್ಚಿದ್ದು, ಕಳೆದ ಜನವರಿಯಲ್ಲಿ ಸ್ವಾನ್ ತಂಡಕ್ಕೆ ಆದಿಲ್ ಮೂರು ಲಕ್ಷ ಹಣ ಕೊಟ್ಟಿದ್ದ. ಆದ್ದರಿಂದ ಆ ಹಣದಿಂದ ಒಂದು ಪಿಕಪ್ ವಾಹನ ಮತ್ತು ಶಿಫ್ಟ್ ಕಾರನ್ನು ಬಾಡಿಗೆಗೆ ಹಂತಕರು ಪಡೆದುಕೊಂಡು ಆ ವಾಹನಗಳಿಂದಲೇ ಸುಹಾಸ್ ಶೆಟ್ಟಿ ಕೊಲೆ ಮಾಡಲು ಸಂಚು ರೂಪಿಸಿದ್ದ ಬಗ್ಗೆ ವಿವರಗಳು ಲಭ್ಯವಾಗಿವೆ.

ಎಲ್ಲ ಆಯಾಮದಲ್ಲಿಯೂ ತನಿಖೆ: ಇನ್ನು ಕೊಲೆ ಸುಪಾರಿಗೆ ವಿದೇಶದಿಂದ ಹಣ ಬಂದಿರುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ, ಸುಹಾಸ್ ಹತ್ಯೆ ಸುಪಾರಿಗೆ ವಿದೇಶದಿಂದ ಹಣ ನೀಡಿದ್ದರು ಎಂಬ ಆರೋಪವು ಪ್ರಕರಣದ ತನಿಖೆ ಸಂಪೂರ್ಣವಾದ ಬಳಿಕ ಸತ್ಯಾಂಶ ಗೊತ್ತಾಗಲಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬೊಬ್ಬರು ಒಂದೊಂದು ಹೇಳಿಕೆ ನೀಡುತ್ತಿದ್ದಾರೆ.

ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲ: ಬಿ.ವೈ. ವಿಜಯೇಂದ್ರ

ಕರಾವಳಿ ಪ್ರದೇಶದಲ್ಲಿ ಜನಪ್ರತಿನಿಧಿಗಳಿಗೇ ರಕ್ಷಣೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಪೊಲೀಸರ ನಡೆ, ಸರಕಾರದ ಧೋರಣೆ ಇದೇ ರೀತಿ ಮುಂದುವ

ರೆದರೆ ಬಿಜೆಪಿಯ ಜನ ಪರವಾದ ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆಯಲಿದೆ ಎಂದು ಸರಕಾರಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಎಚ್ಚರಿಕೆ ಕೊಟ್ಟಿದ್ದಾರೆ. ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಅವರು ತೆಕ್ಕಾರು ಗೋಪಾಲಕೃಷ್ಣ ದೇವಸ್ಥಾನ ಹಾಗೂ ಬ್ರಹ್ಮಕಲಶೋತ್ಸವದ ಕುರಿತು ಭಾವುಕವಾಗಿ ಮಾತನಾಡಿರುವುದನ್ನೇ ಆಧರಿಸಿ ನೀಡಲಾಗಿರುವ ದೂರಿಗೆ ಎಫ್‌ಐಆರ್ ದಾಖಲಿಸಲಾಗಿದೆ. ಈ ಮೂಲಕ ಸರಕಾರ ಯಾರ ಪರವಿದೆ ಎನ್ನುವುದು ಸ್ಪಷ್ಟವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರೌಡಿಶೀಟರ್ ಅಂತ ಹೇಳಿ ಕೆಟಗೆರಿಯಲ್ಲಿ ಪೊಲೀಸ್ ಠಾಣೆಯಲ್ಲಿ ರಿಜಿಸ್ಟರ್ ಆಗಿದ್ದರೆ ಕರೆಯಬಹುದಲ್ಲವೇ? ಆತ ಯಾವ ಪಕ್ಷದಲ್ಲಿದ್ದರೂ, ರೌಡಿಶೀಟರ್ ಸಂಬಂಧಪಟ್ಟ ಸೆಕ್ಷನ್ ಇದ್ದರೆ ಅಂತವರನ್ನು ಯಾರು ಬೇಕಾದರು ಕರೆಯಬಹುದು. ಕಾನೂನು ಕರೆಯುತ್ತದೆ ಎಂದಾದರೆ, ನಾವು, ನೀವು ಕರೆಯುವುದರಲ್ಲಿ ತಪ್ಪೇನು?

- ಡಾ.ಜಿ. ಪರಮೇಶ್ವರ ಗೃಹ ಸಚಿವ

ತನಿಖೆಯ ಬಳಿಕ ಎಲ್ಲವೂ ಹೊರಬರಲಿದೆ. ಕೊಲೆಗೆ ಯಾರು ಸುಪಾರಿ ಕೊಟ್ಟಿದ್ದರು. ಕೊಟ್ಟಿಲ್ಲವೇ? ಒಂದು ವೇಳೆ ಕೊಟ್ಟಿದ್ದರೆ, ಎಷ್ಟು ಹಣ ನೀಡಿದ್ದರು ಎಂಬುದು ಗೊತ್ತಾಗಲಿದೆ. ತನಿಖೆಗೂ ಮೊದಲು ಊಹೆ ಮಾಡಲು ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ದ್ವೇಷ ರಾಜಕಾರಣದ ಬಗ್ಗೆ ಮಾಹಿತಿ ಇಲ್ಲ: ಹರೀಶ್ ಪೂಜಾ ವಿರುದ್ಧ ದಾಖಲಾಗಿರುವ ಪ್ರಕರಣದ ಕುರಿತು ಬಿಜೆಪಿ ಆರೋಪಗಳಿಗೆ ಪ್ರತಿಕ್ರಿಯಿಸಿ, ದ್ವೇಷ ರಾಜಕಾರಣದ ಬಗ್ಗೆ ನನಗೆ ಹೆಚ್ಚು ಮಾಹಿತಿ ಇಲ್ಲ. ಶಾಸಕ ಹರೀಶ್ ಪೂಂಜಾ ಪ್ರಚೋದನಾತ್ಮಕ ಹೇಳಿಕೆ ಕೊಟ್ಟಿದ್ದರೆ, ಆ ಹೇಳಿಕೆಯನ್ನು ಪೊಲೀಸರು ಕಾನೂನಾತ್ಮಕವಾಗಿ ಪರಿಶೀಲಿಸಿ ಸೆಕ್ಷನ್‌ಗಳನ್ನು ಹಾಕಿರುತ್ತಾರೆ. ಸುಮ್ಮನೇ ಶಾಸಕರ ಮೇಲೆ ಎಫ್‌ಐಆರ್ ಹಾಕಲು ಬರುವುದಿಲ್ಲ. ಅವರ ಹೇಳಿಕೆಯಲ್ಲಿನ ಅಂಶಗಳು ಕಾನೂನಿಗೆ ವಿರುದ್ಧವಾಗಿದ್ದರೆ ಎಫ್‌ಐಆರ್‌ಗೂ ಮೊದಲು ಪರಿಶೀಲಿಸುತ್ತಾರೆ ಎಂದು ಡಾ.ಜಿ. ಪರಮೇಶ್ವರ ಸ್ಪಷ್ಟಪಡಿಸಿದರು.

ಕೆಎಎಸ್ ಪ್ರಶ್ನೆಪತ್ರಿಕೆ ಮತ್ತೆ ಸೋರಿಕೆ?

← ಮೊದಲಪುಟದಿಂದ

ಮೇಲ್ವಿಚಾರಕರು ಪರೀಕ್ಷಾ ಕೊಠಡಿಗೆ ತಂದ ಪ್ರಶ್ನೆ ಪತ್ರಿಕೆಯ ಒಳಗಿನ ಕವರ್ ಕೂಡ ಹರಿದಿತ್ತು ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ. ಈ ಘಟನೆ ಬಿಬಿಎಂಪಿ ಪಿಯು ಕಾಲೇಜಿನ ಕೊಠಡಿ ಸಂಖ್ಯೆ 04 ಮತ್ತು 06ರಲ್ಲಿ ನಡೆದಿದ್ದು, ಅಭ್ಯರ್ಥಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಭ್ಯರ್ಥಿಗಳ ಪ್ರಕಾರ, ಪರೀಕ್ಷಾ ನಿಯಮಾವಳಿಗಳ ಅನುಸಾರ, ಪ್ರಶ್ನೆ ಪತ್ರಿಕೆಯ ಸೀಲ್ ಅನ್ನು ಅಭ್ಯರ್ಥಿಗಳ ಸಮಕ್ಷಮ ಮಾತ್ರ ತೆರೆಯಬೇಕು. ಆದರೆ, ಈ ಬಾರಿ ಮೇಲ್ವಿಚಾರಕರು ಮೊದಲೇ ಸೀಲ್ ತೆರೆದ ಬಂಡಲ್ ಅನ್ನು ತಂದಿದ್ದಾರೆ. ನೀವು ಪರೀಕ್ಷಾ ಕೊಠಡಿಗೆ ತರುವ ಮುನ್ನವೇ ಪ್ರಶ್ನೆ ಪತ್ರಿಕೆಯನ್ನು ತೆರೆದಿದ್ದೀರಿ. ಇದಕ್ಕೆ ಅಭ್ಯರ್ಥಿಗಳ ಸಹಿ ಇಲ್ಲದೇ ತೆರೆಯಲು ಅವಕಾಶವಿಲ್ಲವಲ್ಲ? ಎಂದು ಅಭ್ಯರ್ಥಿಗಳು ಪ್ರಶ್ನಿಸಿದ್ದಾರೆ. ಕೆಪಿಎಸ್‌ಸಿಯ ಪದೇ ಪದೇ ಎಡವಟ್ಟುಗಳಿಂದ ನಮ್ಮ ಜೀವನವೇ ಹಾಳಾಗುತ್ತಿದೆ ಎಂದು ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಪಿಎಸ್‌ಸಿ ನಿಯಮಾವಳಿಗಳ ಪ್ರಕಾರ, ಪ್ರಶ್ನೆ ಪತ್ರಿಕೆಗಳು ಎರಡು ಅಥವಾ ಮೂರು ಸೀಲ್ ಕವರ್‌ಗಳಲ್ಲಿ ಇರಬೇಕು. ಆದರೆ, ಈ ಬಾರಿಯ ಪ್ರಬಂಧ ಪರೀಕ್ಷೆಯ ಬಂಡಲ್‌ನ ಹೊರಗಿನ ಕವರ್ ಮಾತ್ರ ಮುಚ್ಚಿತ್ತು. ಆದರೆ ಒಳಗಿನ ಕವರ್ ಹರಿದಿತ್ತು. ಇದರಿಂದಾಗಿ ಪರೀಕ್ಷೆಯ ವಿಶ್ವಾಸಾರ್ಹತೆಯ ಮೇಲೆ ಅನುಮಾನ ವ್ಯಕ್ತವಾಗಿದೆ. ಪರೀಕ್ಷೆಯು ಮೂಲತಃ ಮಾರ್ಚ್–ಏಪ್ರಿಲ್‌ನಲ್ಲಿ ನಡೆಯಬೇಕಿತ್ತು, ಆದರೆ ಮೇ 03ರಂದು ಅರ್ಹತಾ ಪರೀಕ್ಷೆ ನಡೆದಿತ್ತು. ಇಂದಿನ ಪ್ರಬಂಧ ಪರೀಕ್ಷೆಯಲ್ಲಿ ಕೇವಲ ಎರಡು ಪ್ರಶ್ನೆಗಳನ್ನು ಒಳಗೊಂಡಿತ್ತು, ಆದರೆ ಸೀಲ್ ತೆರೆಯುವ ಎಡವಟ್ಟಿನಿಂದ ಗೊಂದಲ ಉಂಟಾಗಿದೆ.

ಸೋನು ನಿಗಮ್‌ಗೆ ಕನ್ನಡ ಚಿತ್ರರಂಗ ಬಹಿಷ್ಕಾರ

← ಮೊದಲಪುಟದಿಂದ

ಈ ಮೂಲಕ ದುರ್ವರ್ತನೆ ತೋರಿಸಿದ ಗಾಯಕ ಸೋನು ನಿಗಮ್ ವಿರುದ್ಧ ಕನ್ನಡ ಚಿತ್ರರಂಗದಲ್ಲಿಯೂ ಆಕ್ರೋಶ ವ್ಯಕ್ತವಾಗಿದ್ದು, ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಗಾಯಕ ಸೋನು ನಿಗಮ್ನನ್ನು ಕನ್ನಡ ಚಿತ್ರರಂಗದಿಂದ ನಿಷೇಧಿಸುವ ಮುನ್ನ ಅಸಹಕಾರ ನಿರ್ಣಯ ಕೈಗೊಳ್ಳಲಾಗಿದೆ. ಗಾಯಕ ಸೋನು ನಿಗಮ್ ವಿವಾದಾತ್ಮಕ ಹೇಳಿಕೆ ವಿಚಾರದ ಬಗ್ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗಂಭೀರವಾಗಿ ಕ್ರಮ ಜರುಗಿಸುವ ಬಗ್ಗೆ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ವಾಣಿಜ್ಯ ಮಂಡಳಿಯ ಕುಮಾರ್, ಸಂಗೀತ ನಿರ್ದೇಶಕ ಧರ್ಮವಿಶ್, ನಿರ್ದೇಶಕರ ಸಂಘದ ಅಧ್ಯಕ್ಷ ವಿಶ್ವನಾಥ್, ಗಾಯಕಿ ಶಮಿತಾ ಮಲ್ನಾಡ್ ಭಾಗಿಯಾಗಿದ್ದರು.

ಸಭೆಯ ಬಳಿಕ ಮಾತನಾಡಿದ ಫಿಲ್ಮ್ ಚೇಂಬರ್ ಅಧ್ಯಕ್ಷ ನರಸಿಂಹಲು, ಪಹಲ್ಗಾಮ್ ಗಲಭೆ ಕುರಿತು ಸೋನು ನಿಗಮ್ ಖಾಸಗಿ ಶಾಲೆಯಲ್ಲಿ ಮಾತನಾಡಿದ್ದಾರೆ. ಪಹಲ್ಗಾಮ್ ವಿಚಾರವನ್ನು ಕನ್ನಡಿಗರಿಗೆ ಹೋಲಿಕೆ ಮಾಡಿದ್ದಾರೆ. ಇದು ಸರಿಯಲ್ಲ. ಮತ್ತೆ ಲೈವ್ ಬಂದು ಅವರ ಮಾತನ್ನು ಸಮರ್ಥಿಸಿಕೊಂಡಿದ್ದಾರೆ. ಈ ಕ್ಷಣದಿಂದಲೇ ಅಸಹಕಾರ ತೋರಿಸಲು ತೀರ್ಮಾನಿಸಲಾಗಿದೆ. ಅವರ ಜತೆಗೆ ಯಾವುದೇ ಚಟುವಟಿಕೆ ಮಾಡಬಾರದು. ಅವರನ್ನು ಕರ್ನಾಟಕ ಇಂಡಸ್ಟ್ರಿಯಿಂದ ಅಸಹಕಾರ ಮಾಡಬೇಕು ಅಂತ ತೀರ್ಮಾನಿಸಲಾಗಿದೆ. ಮುಂದಿನ ದಿನಗಳಲ್ಲಿ ಅವರ ವಿರುದ್ಧ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಅಂತ ಚರ್ಚಿಸುತ್ತೇವೆ. ಯಾರು ಕೂಡ ಸಿನಿಮಾಗಳಲ್ಲಿ ಅವರ ಕೈಯಲ್ಲಿ ಹಾಡಿಸಬಾರದು. ಅವರ ಕೈಯಲ್ಲಿ ಲೈವ್ ಕಾರ್ಯಕ್ರಮ ಮಾಡಿಸಬಾರದು ಎಂದು ಹೇಳಿದರು.

ಚಿತ್ರರಂಗದಿಂದ ಬಹಿಷ್ಕಾರ: ಈ ಹೇಳಿಕೆಯ ಬಳಿಕ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗಾಯಕ ಸೋನು ನಿಗಮ್ ಮೇಲೆ ತೀವ್ರ ಕ್ರಮಕ್ಕೆ ಮುಂದಾಗಿದೆ. ಸಂಗೀತ ನಿರ್ದೇಶಕರ ಸಂಘ, ನಿರ್ದೇಶಕರ ಸಂಘ ಹಾಗೂ ನಿರ್ಮಾಪಕರ ಸಂಘದ ಪ್ರತಿನಿಧಿಗಳು ಸೇರಿ ವಿಶೇಷ ಸಭೆಯನ್ನು ನಡೆಸಿ ಈ ತೀರ್ಮಾನ ಕೈಗೊಂಡಿದ್ದಾರೆ. ಸಂಗೀತ ನಿರ್ದೇಶಕ ಸಾಧು ಕೋಕಿಲ, ಹರಿಕೃಷ್ಣ, ಅರ್ಜುನ್ ಜನ್ಯ ಹಾಗೂ ಧರ್ಮ ವಿಷ್ ಈ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಈ ಸಭೆಯಲ್ಲಿ ಸೋನು ನಿಗಮ್ ವಿರುದ್ಧ ಭವಿಷ್ಯದಲ್ಲಿ ಯಾವುದೇ ಚಿತ್ರಗಳಲ್ಲಿ ಅವರು ಹಾಡು ಹಾಡಬಾರದು ಎಂಬ ನಿರ್ಧಾರಕ್ಕೂ ಚರ್ಚೆ ನಡೆಯಿತು. ಆದರೆ, ಇದೀಗ ಕನ್ನಡ ಚಿತ್ರರಂಗದಿಂದ ಅಸಹಾಕಾರ ನಿರ್ಣಯ ಕೈಗೊಳ್ಳಲಾಗಿದೆ.

ಬಂಧನಕ್ಕೆ ಕರವೇ ಒತ್ತಾಯ: ಕಾಶ್ಮೀರದಲ್ಲಿ ಇತ್ತೀಚಿಗೆ ನಡೆದ ಭಯೋತ್ಪಾದನಾ ದಾಳಿಗೆ ಸಂಬಂಧ ಕಲ್ಪಿಸಿ ಕನ್ನಡ ಮತ್ತು ಕನ್ನಡಗರಿಗೆ ಅವಮಾನ ಮಾಡಿರುವ ಗಾಯಕ ಸೋನು ನಿಗಮ್‌ನನ್ನು ಬಂಧಿಸಿ ಕಾನೂನು ಪ್ರಕಾರ ಶಿಕ್ಷೆ ವಿಧಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಾರಾಯಣಗೌಡ ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ. ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಬತಿಯಿಂದ ಹಮ್ಮಿಕೊಂಡಿಡದ್ದ ಪ್ರತಿಭಟನೆ ವೇಳೆ ಮಾತನಾಡಿದ ಅವರು, ಕರವೇ ವತಿಯಿಂದ ಸೋನು ನಿಗಮ್ ವಿರುದ್ಧ ಮೊಕದ್ದಮೆ ದಾಖಲಿಸಿದ್ದು, ಆತ ದೇಶದ ಯಾವ ಭಾಗದಲ್ಲಿ ಇದ್ದರೂ ಪೊಲೀಸರು ಕೂಡಲೇ ಆತನನ್ನು ಬಂಧಿಸಿ ಬೆಂಗಳೂರಿಗೆ ಕರೆತರಬೇಕು. ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಕಾಶ್ಮೀರದ ಭಯೋತ್ಪಾದನಾ ದಾಳಿಗೆ ಸಂಬಂಧ ಕಲ್ಪಿಸಿ ಮಾತನಾಡುವ ಸೋನು ನಿಗಮ್ ಒಬ್ಬ ಹುಚ್ಚ. ಆತನನ್ನು ಕರ್ನಾಟಕದ ಜೈಲಿನಲ್ಲಿ ಇಟ್ಟು ಕಾನೂನು ಪ್ರಕಾರ ಶಿಕ್ಷೆ ನೀಡಿದರೆ ಆತನಲ್ಲಿ ಅಡಗಿರುವ ಹುಚ್ಚುತನ ಹೊರ ಹೋಗಲಿದೆ ಎಂದು ಕಿಡಿಕಾರಿದ್ದಾರೆ.

ಕ್ಷಮೆಯಾಚಿಸದೆ ಬರೀ ಸಮರ್ಥನೆ ನೀಡಿದ ಸೋನು ನಿಗಮ್: ಭಾಷೆ, ಸಂಸ್ಕೃತಿ, ಸಂಗೀತ, ಸಂಗೀತಗಾರರು, ಈ ರಾಜ್ಯ ಮತ್ತು ಜನರ ಮೇಲೆ ಅಪರೂಪದ ಪ್ರೀತಿ ಹರಿಸಿರುವೆ – ಅದು ನಾನು ಕರ್ನಾಟಕದಲ್ಲಿದ್ದಾಗ ಮಾತ್ರವಲ್ಲ, ನಾನು ಜಗತ್ತಿನ ಎಲ್ಲಿ ಇದ್ದರೂ ಸಹ. ನಿಜ ಹೇಳಬೇಕೆಂದರೆ, ನಾನು ನನ್ನ ಕನ್ನಡ ಹಾಡುಗಳನ್ನು ಹಿಂದಿ ಸೇರಿ ಇತರ ಭಾಷೆಗಳ ಹಾಡುಗಳಿಗಿಂತಲೂ ಹೆಚ್ಚು ಗೌರವದಿಂದ ನೋಡಿದ್ದೇನೆ. ಈ ಮಾತಿಗೆ ಸಾಕ್ಷಿಯಾಗಿ ನೂರಾರು ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ನಾನು ಇನ್ನೂ ಬಾಲಕನಲ್ಲ. ಯಾರಿಂದಲೂ ಅವಮಾನ ಸಹಿಸುವ ವಯಸ್ಸಿಲ್ಲ. ನನಗೀಗ 51 ವರ್ಷ, ಜೀವನದ ಅರ್ಧದಷ್ಟು ಹೆಜ್ಜೆ ಇಟ್ಟಿದ್ದೇನೆ. ನನ್ನ ಮಗನಷ್ಟು ಕಿರಿಯವನು ನನ್ನನ್ನು ಸಾವಿರಾರು ಜನರ ಮುಂದೆ ಭಾಷೆಯ ಹೆಸರಿನಲ್ಲಿ ಬೆದರಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ತಪ್ಪು ಯಾರದ್ದು ಎಂಬ ನಿರ್ಧಾರವನ್ನು ಕನ್ನಡದ ವಿವೇಕವಂತ ಜನತೆಗೆ ಬಿಟ್ಟುಬಿಡುತ್ತೇನೆ. ನೀವು ಯಾವ ತೀರ್ಪು ನೀಡಿದರೂ ನಾನು ಅದನ್ನು ಗೌರವದಿಂದ ಸ್ವೀಕರಿಸುತ್ತೇನೆ. ನಾನು ಕರ್ನಾಟಕದ ಕಾನೂನು ವ್ಯವಸ್ಥೆ ಮತ್ತು ಪೊಲೀಸ್ ಇಲಾಖೆಯ ಮೇಲೆ ಪೂರ್ಣ ಗೌರವ ಮತ್ತು ನಂಬಿಕೆ ಇಟ್ಟುಕೊಂಡಿದ್ದೇನೆ ಮತ್ತು ನನ್ನಿಂದ ನಿರೀಕ್ಷಿಸಬಹುದಾದ ಎಲ್ಲ ಸಹಕಾರವನ್ನು ನಾನು ನೀಡುತ್ತೇನೆ. ನಾನು ಕರ್ನಾಟಕದಿಂದ ದೈವಿಕ ಪ್ರೀತಿ ಪಡೆದಿದ್ದೇನೆ ಮತ್ತು ನಿಮ್ಮ ತೀರ್ಪು ಏನೇ ಆಗಿರಲಿ, ಯಾವುದೇ ದ್ವೇಷವಿಲ್ಲದೆ ಅದನ್ನು ಸದಾ ಗೌರವದಿಂದ ಪಾಲಿಸುತ್ತೇನೆ ಎಂದು ಸೋನು ನಿಗಮ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಕರ್ನಾಟಕ ಸರ್ಕಾರ | ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–05/ಎಇ–1/2025–26/279 ದಿನಾಂಕ:– 02.05.2025

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–05/ಎಇ–1/2025–26 ದಿನಾಂಕ: 02.05.2025.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ :5054–03–101–0–2–132 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳು ಅಡಿ ದಾವಣಗೆರೆ ತಾಲ್ಲೂಕು ಬೇತೂರು – ದೊಡ್ಡಬಾತಿ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 3.15 ರಲ್ಲಿ ದೊಡ್ಡಬೂದಿಹಾಳ್ ಹತ್ತಿರ ಹಳ್ಳಕ್ಕೆ ಸೇತುವೆ ಮರು ನಿರ್ಮಾಣ. (19767) ರೂ. 500.00 ಲಕ್ಷ** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 16.05.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 17.05.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/44/ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ : ಮ.ನ.ಪಾ./ಆ.ಶಾ./ಘ.ವ.ನಿ./ಟಿ.ಎನ್.ಡಿ./ಕೆ.ಪಿ.ಪಿ.ಪಿ./02/2025–26
ದಿನಾಂಕ : 03–05–2025

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 – 2000 ಪ್ರಕಾರ ಆ್ಯಕ್ಟ 2000 ನಿಯಮದಂತೆ ಮಹಾನಗರ ಪಾಲಿಕೆ ಬೆಳಗಾವಿ ಇವರಿದ ಸ್ವಚ್ಛ ಭಾರತ ಮಿಶನ – 2.0 ಯೋಜನೆಯಡಿ ಮಂಜೂರಾದ **Supply Installation & Commissioning of Fire Fighting Equipment for 109 TPD Capacity Material Recovery Facility (MRF) in City Corporation Belagavi,** ಹಾಗೂ **Supply Installation & Commissioning of Processing Equipment for 109 TPD Capacity Material Recovery Facility (MRF) in City Corporation Belagavi** ಕಾಮಗಾರಿಗಳಿಗೆ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ.

ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 14–05–2025 ರಂದು ಇರುತ್ತದೆ.

ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪಡೆಯಬಹುದಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/181/ಮಣಿಪಾಲ್/2025–26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054–ರಾ.ಹೆ/2025–26/250 ದಿನಾಂಕ: 02.05.2025

ಗುತ್ತಿಗೆ ಅವಧಿ ವಿಸ್ತರಣೆ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 5054–ರಾ.ಹೆ ಅಡಿಯಲ್ಲಿ ಒಟ್ಟು 1 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಹಾಗು ಕನಿಷ್ಠ ಅಂದಾಜು ಮೊತ್ತ ರೂ. 650.00 ಲಕ್ಷಗಳು, ಗರಿಷ್ಠ ಹಾಗು ಕನಿಷ್ಠ ಮುಂಗಡ ಠೇವಣಿ ಮೊತ್ತ 9,75,000.00/– ರೂ.ಗಳು ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ:– 05.05.2025 ಮುಂಜಾನೆ 11.00 ಗಂಟೆಗೆ 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–17.05.2025 ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 19.05.2025 ರ ಮುಂಜಾನೆ 11.00 ಗಂಟೆಯ ನಂತರ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 20.05.2025 ರ ಮುಂಜಾನೆ 11.00 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in (ಪೋನ್ ನಂ. 91 80 46010000,+91 80 68948777) ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/52/ಕೆಎಸ್‌ಎಂಸಿಎ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂ: ಬೆಂಅಪ್ರಾ/ನಯೋಸ/CLU–461/442/2025–26 ದಿನಾಂಕ: 05.05.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	M/s Ashritha Healthcare Pvt Ltd Rep by its Authorized Signatories Dr.Shekar Reddy.B & Dr.Bhargavi Reddy	ಬೆಂಗಳೂರು ಪೂರ್ವ	ಬಿದರಹಳ್ಳಿ	ಚೀಮಸಂದ್ರ	96/2	0–26.17	ವ್ಯವಸಾಯ ವಲಯ	ವಾಣಿಜ್ಯ

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ವಾಣಿಜ್ಯ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಾಣಿಜ್ಯ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570006

ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ.02/2025–26 ದಿನಾಂಕ:02.05.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಅರ್ಹ ಸರಬರಾಜುದಾರರಿಂದ ಟೆಂಡರ್ ನಮೂನೆ ರೀತ್ಯಾ (ದ್ವಿ–ಲಕೋಟೆ ಪದ್ಧತಿಯಂತೆ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿನಾಂಕ:05.05.2025 ರಿಂದ 13.05.2025 ರವರೆಗೆ ಟೆಂಡರ್ ತೆರೆಯುವ ದಿನಾಂಕ: 14.05.2025ರ ಸಂಜೆ 5.30 ಘಂಟೆಯ ನಂತರ.

ಕ್ರ. ಸಂ.	ವಿವರಗಳು	ಟೆಂಡರ್‌ಗೆ ಇಡಲಾದ ಮೊತ್ತ ಸರಿ ಸುಮಾರು (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಫಾರಂ ಬೆಲೆ (ಹಿಂದಿರುಗಿಸಲಾಗುವುದಿಲ್ಲ) (ರೂ.ಗಳಲ್ಲಿ)	ಅರ್ಹ ಗುತ್ತಿಗೆದಾರರು
1	MEM 9845-VAN	27650.00	553.00	AS PER EPROC	ನೋಂದಾಯಿತ ಸ್ಕ್ಯಾಪ್ ಡೀಲರ್ (Scrap Dealer) ಮಾತ್ರ ಭಾಗವಹಿಸತಕ್ಕದ್ದು.
2	CAG-1179-LORRY	69330.00	1386.60		
3	CAG-5929-LORRY	59790.00	1195.80		
4	KA09100-YAMAHA BIKE-RX 100	1330.00	26.60		
5	KA -02 3357-Rig	197257.00	3945.14		
6	KA 09 1007 - Swaraj Mazda	39690.00	793.80		
7	KA02C-0961-HGV Tanker	66575.00	1331.50		
8	KA 02 Z 4778(HGV) HFU Rig Mounted	247750.00	4955.00		

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.Karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

DIPR/DDMYS/130/KSMCA/109/2025-26

ಸಹಿ/– ಕಾರ್ಯಪಾಲಕ ಅಭಿಯಂತರು

ಯುದ್ಧ ಸನ್ನಿಹಿತ

← ಮೊದಲಪುಟದಿಂದ

ಇದರಿಂದಾಗಿ ಈ ಭೇಟಿಯೂ ಹೆಚ್ಚಿನ ಮಹತ್ವ ಪಡೆದಿದೆ. ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಾನುವಾರ ಭೇಟಿ ಮಾಡಿ, ಚರ್ಚೆ ನಡೆಸಿದ್ದರು. ಇದಕ್ಕೂ ಮೊದಲು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಅವರು ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿದ್ದರು.

ಗಡಿಯಲ್ಲಿ ಮುಂದುವರಿದ ಪಾಕ್ ಕಿರಿಕ್: ಸತತ 11ನೇ ದಿನವೂ ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆ ಬಳಿ ಪಾಕಿಸ್ತಾನ ಅಪ್ರಚೋದಿತ ಗುಂಡಿನ ದಾಳಿ ನಡೆಸಿದ್ದು. ಮತ್ತೆ ಕದನ ವಿರಾಮ ಉಲ್ಲಂಘನೆ ಮಾಡಿದೆ. ಇದಕ್ಕೆ ಭಾರತ ಸೇನೆಯೂ ತಕ್ಕ ಪ್ರತ್ಯುತ್ತರ ನೀಡಿದೆ. ಪಾಕಿಸ್ತಾನಿ ಪಡೆಗಳು ಗಡಿಯಲ್ಲಿ ಹಲವಾರು ಸ್ಥಳಗಳಲ್ಲಿ ಕದನ ವಿರಾಮವನ್ನು ಉಲ್ಲಂಘಿಸಿವೆ ಎಂದು ಭಾರತೀಯ ಸೇನೆ ತಿಳಿಸಿದೆ. ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾ, ಬಾರಾಮುಲ್ಲಾ, ಪೂಂಚ್, ರಾಜೌರಿ, ಮೆಂಧರ್, ನೌಶೇರಾ, ಸುಂದರ್‌ಬಾನಿ ಮತ್ತು ಅಖ್ನೂರ್ ಪ್ರದೇಶಗಳಲ್ಲಿ ಗಡಿ ನಿಯಂತ್ರಣ ರೇಖೆ ಬಳಿ ಅಪ್ರಚೋದಿತ ಗುಂಡಿನ ದಾಳಿ ನಡೆಸಿದ್ದು, ಭಾರತೀಯ ಸೇನೆ ದಿಟ್ಟ ಉತ್ತರ ನೀಡಿದೆ ಎಂದು ತಿಳಿಸಿದೆ.

ವಿದ್ಯಾರ್ಥಿ ನಾಪತ್ತೆ

ಬಳ್ಳಾರಿ: ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ ವಿದ್ಯಾರ್ಥಿಯೊಬ್ಬ 3 ದಿನಗಳಿಂದ ನಾಪತ್ತೆಯಾಗಿರುವ ಘಟನೆ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ವಡ್ಡು ಗ್ರಾಮದಲ್ಲಿ ನಡೆದಿದೆ. ನಾಪತ್ತೆಯಾಗಿರುವ ವಿದ್ಯಾರ್ಥಿ ಸುಶಾಂತ್ ಎಂದು ಗುರುತಿಸಲಾಗಿದ್ದು, ವಿಜ್ಞಾನ ವಿಷಯದಲ್ಲಿ ಫೇಲ್ ಆಗಿದ್ದ.

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ದೂರವಾಣಿ ಸಂಖ್ಯೆ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/1555 ದಿ:02–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ 05 ಟೆಂಡರ್ ಕಾಮಗಾರಿಗಳನ್ನು ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ **ರೂ. 100.00** ಹಾಗೂ ಗರಿಷ್ಠ ಅಂದಾಜು ಮೊತ್ತ **ರೂ 600.00** ಲಕ್ಷಗಳಿರುತ್ತದೆ. ಟೆಂಡರ್‌ಗಳನ್ನು ದಿನಾಂಕ: **08–05–2025** ರಿಂದ ದಿನಾಂಕ: **17–05–2025** ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **15–05–2025** ರಂದು ಬೆಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್‌ನ್ನು ದಿನಾಂಕ: **19–05–2025** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: **21–05–2025** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆಪಿಪಿ" ವೆಬ್‌ಸೈಟ್ https://kppp.karnataka.gov.in/ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ವಾ.ಸಾ.ಇ/ಕೊಪ್ಪಳ/67/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767

ಸಂಖ್ಯೆ:ಆಪಸಂ/ವಿಎಂಎಸ್/ವಿವ– 02/ಕೃ.ಗ.ಪ/ಟೆಂಡರ್/2025–26 ದಿನಾಂಕ : 05.05.2025

ಟೆಂಡರ್ ನೋಟಿಫಿಕೇಷನ್

(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2025–26 ನೇ ಸಾಲಿನಲ್ಲಿ RGM ಯೋಜನೆಯಡಿ ಮತ್ತು ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಿಗೆ ಅವಶ್ಯವಿರುವ Universal AI Sheaths, AI Gloves and Artificial Insemination Gun ಖರೀದಿಸಿ, ಸರಬರಾಜು ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಸಂಬಂಧ ಟೆಂಡರ್ ಕೆಪಿಪಿ ಪೋರ್ಟಲ್ ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್ ನಿಗದಿಪಡಿದ ಮೊತ್ತ ರೂ. 398.20 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಯನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ:05.05.2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ:05.05.2025 ರಿಂದ 04.06.2025 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/493/Zen/2025-26

ಒಳಮೀಸಲು ಸಮೀಕ್ಷೆಗೆ 100 ಕೋಟಿ ರು.

← ಮೊದಲಪುಟದಿಂದ

ಈ ಮಾಹಿತಿಯನ್ನು ತಿಳಿದು ನಮೂದಿಸಬೇಕು. ಜತೆಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರದ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗುತ್ತದೆ. ವೈಜ್ಞಾನಿಕ ಸಮೀಕ್ಷೆಗಾಗಿ ಮೊಬೈಲ್ ಅಪ್ಲಿಕೇಶನ್ ಸಿದ್ಧಪಡಿಸಲಾಗಿದ್ದು, ಅದರ ಮೂಲಕವೇ ದಾಖಲೀಕರಣ ಮಾಡಲಾಗುತ್ತದೆ. ಮತದಾರರ ಪಟ್ಟಿಯಲ್ಲಿರುವ ವಿಳಾಸದ ಆಧಾರದ ಮೇಲೆ ಮನೆ ಮನೆ ಭೇಟಿ ನೀಡಿ ಪರಿಶಿಷ್ಟ ಜಾತಿಯ ಕುಟುಂಬಗಳನ್ನು ಗುರುತಿಸಲಾಗುತ್ತದೆ. ಪರಿಶಿಷ್ಟ ಜಾತಿಯವರ ಮನೆಯ ಪ್ರತಿಯೊಂದು ಸದಸ್ಯನ ಮಾಹಿತಿಯನ್ನು ಮೊಬೈಲ್ ಆಪ್‌ನಲ್ಲಿ ಭರ್ತಿ ಮಾಡಲಾಗುತ್ತದೆ. ಜಾತಿ ಹಾಗೂ ಮೂಲ ಜಾತಿಯನ್ನು ಕಡ್ಡಾಯವಾಗಿ ನಮೂದು ಮಾಡಬೇಕಾಗಿದೆ.

- ಸಮೀಕ್ಷೆಯ ಕಾರ್ಯಕ್ಕೆ ಸುಮಾರು 58 ಸಾವಿರ ಶಿಕ್ಷಕರ ನಿಯೋಜನೆ
- ಪ್ರತಿ 10–12 ಶಿಕ್ಷಕರಿಗೆ ಒಬ್ಬ ಮೇಲ್ವಿಚಾರಕರ ನೇಮಕ
- ಬೆ.6.30ರಿಂದ ಸಂಜೆ.6.30ರವರೆಗೆ ಮೊಬೈಲ್ ಆ್ಯಪ್ ಮೂಲಕ ನೋಂದಣಿಗೆ ಅವಕಾಶ
- ದಿನದ 24 ಗಂಟೆಯೂ 8481359000 ಹೆಲ್ಪ್‌ಲೈನ್ ನಂಬರ್‌ಗೆ ಅವಕಾಶ

ಸಮಾಚಾರ ಸಣ್ಣದಲ್ಲ

ಜನರೇ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುತ್ತಾರೆ

ಬೀದರ್: ರಾಜ್ಯದಲ್ಲಿ ಕೊಲೆ ಸುಲಿಗೆ ನಿರಂತರವಾಗಿ ನಡೆಯುತ್ತಿವೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇದೆಯೇ ಎಂದು ಜನರು ಪ್ರಶ್ನೆ ಕೇಳುತ್ತಿದ್ದಾರೆ. ಈ ಹತ್ಯೆಗಳನ್ನು ತಡೆಯುವ ಶಕ್ತಿ ಮುಖ್ಯಮಂತ್ರಿಗಳಿಗೆ

ಹಾಗೂ ಗೃಹ ಸಚಿವರಿಗೆ ಇಲ್ಲ. ಸುಹಾಸ್ ಶೆಟ್ಟಿ ಬರ್ಬರ ಹತ್ಯೆಯನ್ನು ನಾನು ಖಂಡಿಸುತ್ತೇನೆ. ಮುಂದಿನ ದಿನಗಳಲ್ಲಿ ಜನರೇ ಕಾಂಗ್ರೆಸ್ ಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂಗೆ ಬೆದರಿಕೆ ಕರೆಗಳು ಬರುತ್ತದೆ ಎನ್ನುವುದರಲ್ಲಿ ಯಾವುದೇ ಸತ್ಯಾಂಶವಿಲ್ಲಾ. ಕೇವಲ ಪ್ರಚಾರಕ್ಕಾಗಿ ಸಿಎಂ ಸಿದ್ದರಾಮಯ್ಯ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ಹೀಗಾಗಿ ಈ ಸರಕಾರ ಬಹಳಷ್ಟು ದಿನ ಉಳಿಯುವುದಿಲ್ಲ ಎಂದರು. ಪಾಕಿಸ್ತಾನ ವಿರುದ್ಧ ಭಾರತ ವಿರುದ್ಧ ಮಾಡುವ ವಿಚಾರವಾಗಿ ಮಾತನಾಡಿ, ಯಾವ ಸಮಯದಲ್ಲಿ ಏನು ಮಾಡಬೇಕೆಂದು ಮೋದಿಗೆ ಗೊತ್ತಿದೆ. ಮೋದಿ ಸೂಕ್ತ ಕ್ರಮವನ್ನು ತೆಗೆದುಕೊಂಡು ಏನೂ ಆಗದಂತೆ ನೋಡುತ್ತಾರೆ. ಜಾತಿಗಣತಿ ಆಗಬೇಕೆಂದು ಬಹಳಷ್ಟು ದಿನಗಳಿಂದ ಅಪೇಕ್ಷೆ ಇತ್ತು. ಈಗ ಅದು ಕೇಂದ್ರದಿಂದ ಆಗುತ್ತಿದೆ, ಎಲ್ಲರೂ ಸಹಕಾರ ನೀಡಬೇಕು ಎಂದು ಯಡಿಯೂರಪ್ಪ ಹೇಳಿದರು.

ಕಾರುಗಳ ನಡುವೆ ಡಿಕ್ಕಿ: ಮೂವರು ಸಾವು

ಬೆಳಗಾವಿ: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಚಿಕ್ಕಬಾಗೇವಾಡಿ ಬಳಿ ಸೋಮವಾರ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ಮೂವರು ಸಾವನ್ನಪ್ಪಿದ್ದಾರೆ. ಸೋಮವಾರ ಸಂಜೆ ಚಿಕ್ಕಬಾಗೇವಾಡಿ ಗ್ರಾಮದ ಹೊರ ವಲಯದ ಬೈಲಹೊಂಗಲ-ಬೆಳಗಾವಿಗೆ ಸಂಪರ್ಕಿಸುವ ಹೆದ್ದಾರಿಯಲ್ಲಿ ಈ ಅಪಘಾತ ಸಂಭವಿಸಿದ್ದು, ಈ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಮತ್ತು ಮಾಜಿ ಶಾಸಕ ಆರ್.ವಿ ಪಾಟೀಲ್ ಪುತ್ರ ಸೇರಿದಂತೆ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಬೈಲಹೊಂಗಲಕ್ಕೆ ಹೋಗುತ್ತಿದ್ದ ಕೀಯಾ ಕಾರು ಓವರ್ ಟೆಕ್ ಮಾಡುವ ವೇಳೆ ಎದುರಗಡೆ ಬರುತ್ತಿದ್ದ ಅಲ್ಟೋ ಕಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಅಲ್ಟೋ ಕಾರಿನಲ್ಲಿದ್ದ ಅಯುಮ್ ಹಾಗೂ ಅವರ ಪತ್ನಿ ಮತ್ತು ಅವರ ಮಗು ಮೃತಪಟ್ಟಿದ್ದಾರೆ. ಮತ್ತೊಂದು ಮಗುವಿಗೆ ಗಂಭೀರವಾಗಿ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೂರು ಹಂತಗಳಲ್ಲಿ ವೈಜ್ಞಾನಿಕ ದತ್ತಾಂಶ ಸಂಗ್ರಹ | ಸಮೀಕ್ಷೆಗೆ ಮೊಬೈಲ್ ಆ್ಯಪ್: ಸಿದ್ದರಾಮಯ್ಯ

ಒಳ ಮೀಸಲು ಜಾರಿಗೆ ರಾಜ್ಯ ಸರಕಾರ ಬದ್ಧ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನಸಭಾ ಚುನಾವಣೆಯ ವೇಳೆ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿರುವಂತೆ ರಾಜ್ಯದಲ್ಲಿ ಒಳಮೀಸಲು ಜಾರಿಗೆ ತರಲು ಬದ್ಧವಾಗಿದ್ದೇವೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಮಹತ್ವದ ಹೆಜ್ಜೆಯಿಟ್ಟಿದ್ದು, ಮೂರು ಹಂತಗಳಲ್ಲಿ ವೈಜ್ಞಾನಿಕ ದತ್ತಾಂಶ ಸಂಗ್ರಹ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗ ರಚನೆ ಮಾಡಿದ್ದೆವು. ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲು ಕುರಿತು ಸಮಿತಿ ವರದಿ ನೀಡಿದೆ. ಸಂವಿಧಾನದ 341ನೇ ವಿಧಿಯ ಅಡಿಯಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 101 ಜಾತಿಗಳನ್ನು ಗುರುತಿಸಲಾಗಿದೆ. ಈ ಜಾತಿಗಳ ವೈಜ್ಞಾನಿಕ ವರ್ಗೀಕರಣ ಮಾಡಲು ದತ್ತಾಂಶವನ್ನು ಸಂಗ್ರಹಿಸಲು ಸಮೀಕ್ಷೆ ನಡೆಸಲು ಸಮಿತಿ ಶಿಫಾರಸು ಮಾಡಿದೆ ಎಂದರು.

2011ರ ಜನಗಣತಿ ಆಧಾರದಲ್ಲಿ ಸದಾಶಿವ ಆಯೋಗ ಪರಿಶಿಷ್ಟ ಜಾತಿ ಸಮುದಾಯಗಳ ಜನಸಂಖ್ಯೆಯನ್ನು ಗುರುತಿಸಿತ್ತು. 2024ರ ಆ.1ರಲ್ಲಿ ಸುಪ್ರೀಂ ಕೋರ್ಟ್ ಒಳಮೀಸಲಾತಿ ಪರವಾಗಿ ನೀಡಿರುವ ಆದೇಶದಂತೆ ನಾವು ಮುಂದುವರೆದೆವು. ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಸಮುದಾಯದಲ್ಲಿ ಯಾರು ಎಷ್ಟು ಮಂದಿ ಇದ್ದಾರೆ ಎನ್ನುವುದು ಖಚಿತವಾಗಿ ಗೊತ್ತಾಗಬೇಕಿದೆ. ಎಡಗೈ ಸಮುದಾಯ, ಬಲಗೈ ಸಮುದಾಯ ಎಷ್ಟಿದೆ ಎನ್ನುವುದು ವೈಜ್ಞಾನಿಕವಾಗಿ ತಿಳಿಯಬೇಕಿದೆ. 101 ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕೊಡುವಾಗ ನಿರ್ದಿಷ್ಟ ಅಂಕಿಅಂಶಗಳು ಬೇಕಾಗುತ್ತವೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಸಿ ಮಹದೇವಪ್ಪ, ಕೆ.ಎಚ್‌ಮುನಿಯಪ್ಪ ಇದ್ದರು.

17ವರೆಗೆ ಮನೆಮನೆಗೆ ದತ್ತಾಂಶ ಸಂಗ್ರಹ: ಇವತ್ತಿನಿಂದ 17ರವರೆಗೆ ಮನೆ ಮನೆಗೆ ಹೋಗಿ ದತ್ತಾಂಶ ಸಂಗ್ರಹಿಸುವ ಕೆಲಸ ಆಗ್ತದೆ. ಮನೆ ಮನೆ ಭೇಟಿ ಕೊಡುವ ಜತೆಗೆ, ಮೊದಲ ಹಂತದಲ್ಲಿ 5-5-25ರಿಂದ 17-5-2025ವರೆಗೆ ಸಮೀಕ್ಷೆ ನಡೆಯಲಿದೆ. ಎರಡನೇ ಹಂತದಲ್ಲಿ 19-5- 2025ರಿಂದ 21-5-2025ರವರೆಗೆ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸಮೀಕ್ಷೆ ನಡೆಯುತ್ತದೆ. ಯಾರಾದರೂ ಬಿಟ್ಟು ಹೋಗಿದ್ದರೆ ಶಿಬಿರಕ್ಕೆ ಬಂದು ಸೇರಿಸಬಹುದು. ಮೂರನೇ ಹಂತದಲ್ಲಿ 19-5-2025ರಿಂದ 22-5-2025 ರವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆಗೆ ಅವಕಾಶ ಕಲ್ಪಿಸಲಾಗಿದೆ. ಮೂರೂ ಹಂತಗಳಲ್ಲಿ ವೈಜ್ಞಾನಿಕ ದತ್ತಾಂಶ ಸಂಗ್ರಹಿಸಲಾಗುವುದು. ನಿಖರ ದತ್ತಾಂಶ ಸಂಗ್ರಹಿಸಿದ ಮೇಲೆ ನಮಗೆ ಶಿಫಾರಸು ಮಾಡ್ತಾರೆ. ಒಟ್ಟು 60 ದಿನ ಸಮಯಾವಕಾಶ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಮೊಬೈಲ್ ಆ್ಯಪ್ ಮೂಲಕವೂ ಸಮೀಕ್ಷೆಗೆ ಅವಕಾಶ ಮಾಡಿಕೊಡಲಾಗಿದೆ. ಬೆಳಗ್ಗೆ 6:30ರಿಂದ ಸಂಜೆ 6:30ರವರೆಗೆ ಮೊಬೈಲ್ ಆ್ಯಪ್ ಎನೇಬಲ್ ಮಾಡಲಾಗಿದೆ. ಇದಕ್ಕೆ ಪರಿಶಿಷ್ಟ ಜಾತಿ ಸಮುದಾಯದ ಯಾರೂ ತಪ್ಪಿಸಬಾರದು. ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ವರದಿ ಜಾರಿ ಬಗ್ಗೆ ಘೋಷಣೆ ಮಾಡಿದ್ದೆವು. ಒಳಮೀಸಲಾತಿ ಪರವಾಗಿ ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ಸಮುದಾಯದ ಸಂಘಟನೆಗಳು, ಮುಖಂಡರಿಗೂ ನಾವು ಒಳಮೀಸಲಾತಿ ಬಗ್ಗೆ ಭರವಸೆ ನೀಡಿದ್ದೆವು. ಆದ್ದರಿಂದ ದತ್ತಾಂಶ ಸಂಗ್ರಹ ಸಮೀಕ್ಷೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ಮಾಹಿತಿ ಕೊಡಿ ಎಂದು ಮುಖ್ಯಮಂತ್ರಿ ಮನವಿ ಮಾಡಿದರು. ಎಲ್ಲಾ ಸಂಘಟನೆಗಳೂ ಇದಕ್ಕೆ ಸಹಕರಿಸಿ ಎಂದು ಮನವಿ ಮಾಡಿದರು.

- ಮೇ 17ವರೆಗೆ ಮನೆಮನೆಗೆ ದತ್ತಾಂಶ ಸಂಗ್ರಹ
- ಎರಡನೇ ಹಂತದಲ್ಲಿ ಮೇ 19 ರಿಂದ 21ರವರೆಗೆ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ
- ಮೊಬೈಲ್ ಆ್ಯಪ್ ಮೂಲಕವೂ ಸಮೀಕ್ಷೆಗೆ ಅವಕಾಶ

ಇದೊಂದು ಐತಿಹಾಸಿಕ ಸಮೀಕ್ಷೆ. ಸದ್ಯ ನಮ್ಮದು ಹೆಚ್ಚು ಜನಸಂಖ್ಯೆ ಇದೆ ಅಂತ ಹೇಳುತ್ತಿದ್ದಾರೆ. ಇದಕ್ಕೆ ನಿಖರವಾದ ಅಂಕಿಅಂಶ ಇಲ್ಲ. ಹೀಗಾಗಿ ಸ್ಪಷ್ಟವಾದ ದತ್ತಾಂಶಕ್ಕಾಗಿ ಸಮೀಕ್ಷೆ ನಡೆಸಲಾಗುವುದು. ಯಾರೂ ಅನುಮಾನಪಡುವ ಅಗತ್ಯ ಇಲ್ಲ. ಇದರಲ್ಲಿ ಯಾವುದೇ ಗೊಂದಲ ಇಲ್ಲ. ಈ ಸಮೀಕ್ಷೆಗಾಗಿ ಸುಮಾರು 100 ಕೋಟಿ ರು. ವೆಚ್ಚವಾಗಬಹುದು.

- ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

ಗಣತಿದಾರರಾಗಿ 58 ಸಾವಿರ ಶಿಕ್ಷಕರು ನೇಮಕ

58,000 ಶಿಕ್ಷಕರನ್ನು ಗಣತಿದಾರರನ್ನಾಗಿ ಇದಕ್ಕಾಗಿ ನೇಮಕ ಮಾಡಲಾಗಿದೆ. 10-12 ಜನರಿಗೆ ಒಬ್ಬ ಮೇಲ್ವಿಚಾರಕ ಇರುತ್ತಾರೆ. ಆದಿ ದ್ರಾವಿಡ, ಆದಿ ಕರ್ನಾಟಕ ಹಾಗೂ ಆದಿ ಆಂಧ್ರ ಎಂದು ಎಡ ಹಾಗೂ ಬಲ ಸಮುದಾಯದವರೂ ನಮೂದು ಮಾಡಿದ್ದಾರೆ. ಹೀಗಾಗಿ, ಇವರು ನಿರ್ದಿಷ್ಟವಾಗಿ ಎಡಗೈಗೆ ಅಥವಾ ಬಲಗೈಗೆ ಸೇರಿದವರಾ ಎಂದು ಗೊತ್ತಾಗುತ್ತಿಲ್ಲ. ಒಳಮೀಸಲಾತಿ ನೀಡಬೇಕಾದರೆ ಈ ನಿಟ್ಟಿನಲ್ಲಿ ನಿರ್ದಿಷ್ಟವಾದ ಅಂಕಿಅಂಶ ಬೇಕು. ಹೆಲ್ಪ್ ಲೈನ್ ನಂಬರ್ 8481359000 ತೆರೆಯಲಾಗಿದೆ. ಇದು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ನೀಡಿದ್ದಾರೆ.

ಮಾಜಿ ಸಚಿವ ರೇಣುಕಾಚಾರ್ಯ ವಾಗ್ದಾಳಿ

ಯತ್ನಾಳ್ ಹಿಂದೂ ಹುಲಿ ಅಲ್ಲ, ಹಿಂದೂ ಇಲಿ

ಬೀದರ್: ಯತ್ನಾಳ್ ನಕಲಿ ಹಿಂದೂ. ಅವನು ಹಿಂದೂ ಹುಲಿ ಅಲ್ಲ, ಹಿಂದೂ ಇಲಿ. ಜೆಡಿಎಸ್‌ಗೆ ಹೋಗಿ ಚಿಕನ್ ಕಬಾಬ್ ತಿಂದು ಅಲ್ಪಸಂಖ್ಯಾತರ ಟೋಪಿ ಧರಿಸಿದ್ದರು. ಟಿಪ್ಪು ಖಡ್ಗ ಹಿಡಿದು ಇಫ್ತಿಯಾರ್ ಕೂಟ ಮಾಡಿದ್ದು ಯಾರು? ಯತ್ನಾಳ್ ನಕಲಿ ಹಿಂದೂ. ತನ್ನನ್ನ ತಾನೂ ರಕ್ಷಣೆ ಮಾಡಲು ಈ ರೀತಿ ಮಾಡುತ್ತಾನೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲುಬಿಲ್ಲದ ನಾಲಿಗೆ, ಅಪ್ಪಗ್ ಹುಟ್ಟಿದ್ದೀಯಾ, ಅವ್ವಗ್ ಹುಟ್ಟಿದ್ದೀಯಾ ಎನ್ನುತ್ತಾರೆ. ಒಂದು ಸಾರಿ ಹಿಂದೂ ಹುಲಿ, ಉತ್ತರ ಕರ್ನಾಟಕ ಹುಲಿ, ಪಂಚಮಸಾಲಿ, ವೀರಶೈವ ಹುಲಿ ಎನ್ನುತ್ತಾರೆ. ಯತ್ನಾಳರೇ ಒಂದು ಬಾರಿ ಅವಲೋಕನ ಮಾಡಿಕೊಳ್ಳ ಬೇಕು. ಇದೆಲ್ಲಾ ಯತ್ನಾಳ ಅವರ ಆಟ. ಯತ್ನಾಳ ನೀನು ನಕಲಿ ಹಿಂದುತ್ವ ಬಿಟ್ಟುಬಿಡು ಎಂದರು. ಮೋದಿ, ಅಮಿತ್ ಶಾ ಅನುಮತಿ ಕೊಟ್ಟರೆ ಯುದ್ಧಕ್ಕೆ ಹೋಗುವೆ ಎಂಬ ಸಚಿವ ಜಮೀರ್ ಅಹಮದ್ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ರೇಣುಕಾಚಾರ್ಯ, ಜಮೀರ್ ಅಹಮದ್ ನೀನು ನಕಲಿ, ರಾಜ್ಯದಲ್ಲಿ ಕೋಮುಗಲಭೆಗೆ ನೀನೇ ಕಾರಣ. ನೀನು ಮೊದಲು ಕೋಮು ಪ್ರಚೋದನೆ ಮಾಡುವುದನ್ನು ಬಿಡು ಎಂದು ವಾಗ್ದಾಳಿ ನಡೆಸಿದರು.

ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆಗೆ ಜಮೀರ್ ಅಹಮದ್ ಕಾರಣ. ಜಮೀರ್ ಬೂಟಾಟಿಕೆಗೋಸ್ಕರ, ಪ್ರಚಾರಕ್ಕಾಗಿ ಹಲ್ಲು ಕಡಿದು ನಾಟಕ ಮಾಡುತ್ತಾರೆ. ಕೋಮು ಗಲಭೆ ಸೃಷ್ಟಿ ಮಾಡುವುದು ಬಿಟ್ಟು ಬಿಡು ಪುಣ್ಯಾತ್ಮ. ಜಮೀರ್ ನಿನ್ನ ಆಟ ಬಿಟ್ಟು ಬಿಡು.

-ಎಂ.ಪಿ.ರೇಣುಕಾಚಾರ್ಯ, ಮಾಜಿ ಸಚಿವ

ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ: ಜೋಶಿ

ಪಾಕಿಸ್ತಾನ ವಿರುದ್ಧ ಕೇಂದ್ರ ಸೂಕ್ತ ಕ್ರಮ ಕೈಗೊಳ್ಳುತ್ತೆ

ಹುಬ್ಬಳ್ಳಿ: ಪಾಕಿಸ್ತಾನ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೇಂದ್ರ ತಗೆದುಕೊಳ್ಳುತ್ತೆ. ಇದರಿಂದ ಈಗಾಗಲೇ ಪಾಕಿಸ್ತಾನ ಒದ್ದಾಡುತ್ತಿದೆ. ಸೂಕ್ತ ಸಮಯದಲ್ಲಿ ಸೂಕ್ತ ಕ್ರಮ ಖಂಡಿತ ಆಗುತ್ತ ದೆ. ಕಾಲಮಿತಿ ಹಾಕಿ ಹೀಗೆ ಮಾಡಬೇಕು ಅಂತ ಹೇಳಲು ಆಗಲ್ಲಾ. ಪ್ರಧಾನಿ, ರಕ್ಷಣಾ ಮಂತ್ರಿಗಳು ಸ್ಪಷ್ಟ ಭರವಸೆ ನೀಡಿದ್ದಾರೆ. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಮೀರ್ ಅಹ್ಮದ್ ಮೊದಲು ಶಾಂತಿ ರೀತಿ ಯಿಂದ ಇದ್ರೆ ಸಾಕು. ದೇಶದಲ್ಲಿ ನಮ್ಮ ಮಿಲಿಟರಿ ಪಡೆ ಕ್ರಮ ಕೈಗೊಳ್ಳುತ್ತದೆ. ಅವರು ಶಾಂತಿ ಮತ್ತು ಸಮಾಧಾನವಿದ್ದರೆ ಸಾಕು ಎಂದು ಕಿಡಿಕಾರಿದರು. ಮಹದಾಯಿ ವಿಚಾರ ದಲ್ಲಿ ಕೇಂದ್ರ ನಿರ್ಲಕ್ಷ್ಯ ಅಂತ ಸಿಎಂ ಆರೋಪ ವಿಚಾರ, ಸಿಎಂ ತಪ್ಪು ಮಾಹಿತಿ ಪಡೆಯುತ್ತಿದ್ದಾರೆ. ನಮ್ಮ ಯಾವ ಪ್ರಶ್ನೆಗೆ ಸಿಎಂ ಉತ್ತರ ಕೊಡ್ತಿಲ್ಲಾ. ನಮ್ಮ ಪ್ರಶ್ನೆಗಳನ್ನು ಡೈವರ್ಟ್ ಮಾಡುತ್ತಿದ್ದಾರೆ. 1970 ರಿಂದ ಮಹದಾಯಿ ವಿಚಾರ ವೇಗ ಪಡೆದಿದೆ. 1980 ರಿಂದ 2025 ರವರಗೆ ರಾಜ್ಯದಲ್ಲಿ ಅತಿ ಹೆಚ್ಚು ನಿಮ್ಮದೇ ಸರಕಾರವಿತ್ತು. ಯಾಕೆ ಅವರು ಮಹದಾಯಿ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳಲಿಲ್ಲಾ? ಎಂದ ರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇದ್ದಾಗ ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆ, ಕೊಲೆ ಮಾಡೋದು ಸಾಮಾನ್ಯವಾಗಿದೆ. ರಾಜ್ಯ ಸರಕಾರ ಕೂಡಾ ಅವರನ್ನು ರಕ್ಷಣೆ ಮಾಡುತ್ತದೆ ಎಂದ ಪ್ರಲ್ಹಾದ ಜೋಶಿ ಕಿಡಿಕಾರಿದರು.

ಕೆಪಿಎಸ್ಸಿ ಪರೀಕ್ಷೆಯಲ್ಲಿ 80 ಪ್ರಶ್ನೆಗಳೇ ತಪ್ಪು ಇದ್ದವು.ನಾವು ಪ್ರಶ್ನೆ ಮಾಡಿದರೆ ಅವರಿಗೆ ಮೆಣಸಿನ ಕಾಯಿ ಹೊಡೆದಂಗೆ ಆಗುತ್ತೆ ಅವರಿಗೆ. ಬಂಡತನದ ಪರಮಾವಧಿ ತೋರಿಸುತ್ತಿದ್ದಾರೆ ಸಿದ್ದರಾಮಯ್ಯ. ಐದು ವರ್ಷ ಜಾತ್ರೆ ಮಾಡುತ್ತಿದ್ದಾರೆ. ಡಿ.ಕೆ ದೂರವಿಡಲು ಏನೇನೋ ಮಾತನಾಡುತ್ತಿದ್ದಾರೆ.

- ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

ಗಲಾಟೆ ಮಾಡಿಸಿದವರಿಗೆ ಶಿಕ್ಷೆಯಾಗಲಿ: ಸಚಿವ

ಎರಡೂ ಕಡೆಗಳಲ್ಲಿ ಭಯೋತ್ಪಾದಕ ಫ್ಯಾಕ್ಟರಿ

ಹೊಸಪೇಟೆ: ಮಂಗಳೂರಿನಲ್ಲಿ ಸುಹಾಸ್ ಶೆಟ್ಟಿ ಕೊಲೆ ಪ್ರಕರಣ ಒಂದು ಕಡೆ ಹಿಂದೂ ಸಂಘಟನೆಯವರ ಮತ್ತೊಂದು ಕಡೆ ಮುಸ್ಲಿಂ ಸಂಘಟನೆಯವರ ಭಯೋತ್ಪಾದಕರ ಫ್ಯಾಕ್ಟರಿ

ಇರುವುದನ್ನು ತೋರಿಸಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದಕ್ಷಿಣ ಕನ್ನಡದ ಚರಿತ್ರೆ ತೆಗೆದು ನೋಡಿದರೆ ಯಾರೇನೂ ಕಡಿಮೆ ಇಲ್ಲ ಎಂಬುದು ಗೊತ್ತಾಗುತ್ತದೆ. ಯಾರ ಕಡೆಯೇ ಇರಲಿ,ಗಲಾಟೆ ಮಾಡಿಸಿದವರಿಗೆ ಶಿಕ್ಷೆಯಾಗಲೇಬೇಕು ಎಂದರು. ಒಂದು ಕೈಯಿಂದ ಚಪ್ಪಾಳೆ ಸಾಧ್ಯವಿಲ್ಲ. ಇವರೆಷ್ಟು ಸಂಖ್ಯೆಯಲ್ಲಿ ಮರ್ಡರ್ ಮಾಡಿದ್ದಾರೋ, ಅವರೂ ಅಷ್ಟೇ ಸಂಖ್ಯೆಯಲ್ಲಿ ಮಾಡಿದ್ದಾರೆ. ಗಲಾಟೆ ಮಾಡಿದವರು, ಕೊಲೆ ಮಾಡಿದವರು ಬಂಧಿತರಾಗುತ್ತಾರೆ, ಆದರೆ ಅವರ ಹಿಂದೆ ಇರುವ ಶಕ್ತಿಗಳ ಬಂಧನ ಆಗುತ್ತಿಲ್ಲ. ನಾನು ಗೃಹಸಚಿವನಾಗಿದ್ದಾಗ ಗಲಭೆಯ ಹಿಂದೆ ಯಾರಿದ್ದಾರೋ ಅವರನ್ನು ಹುಡುಕುವ ಪ್ರಯತ್ನ ಮಾಡಿ ಕಾನೂನು ಕ್ರಮ ಕೈಗೊಂಡಿದ್ದೆ. ಬಷೀರ್, ದೀಪಕ್ ರಾವ್ ಪ್ರಕರಣಗಳು ಇದಕ್ಕೆ ಸಾಕ್ಷಿಗಳಾಗಿ ಇವೆ. ಐದಾರು ವರ್ಷ ಯಾವುದೇ ಕೊಲೆಗಳು ಆಗಿರಲಿಲ್ಲ, ಈಗ ಮತ್ತೆ ಆರಂಭವಾಗಿದೆ' ಎಂದು ಸಚಿವರು ಹೇಳಿದರು.

ನಾವು ಯಾರಿಗೂ ಕುಮ್ಮಕ್ಕು ಕೊಡುವುದಿಲ್ಲ

ಸುಹಾಸ್ ಶೆಟ್ಟಿಯನ್ನು ರೌಡಿ ಶೀಟರ್ ಮಾಡಿದ್ದು ಬಿಜೆಪಿ ಸರಕಾರದ ಅವಧಿಯಲ್ಲಿ. ನಾವು ಯಾರಿಗೂ ಕುಮ್ಮಕ್ಕು ಕೊಡುವುದಿಲ್ಲ. ಇಲ್ಲಿ ನಮ್ಮ ಪಕ್ಷದವರು ಇದ್ದರೂ ಅವರನ್ನು ಒಳಗೆ ಹಾಕಿ ಎಂದೇ ಹೇಳುತ್ತೇವೆ. ಆರೋಪಿಗಳು ಜೈಲಿಗೆ ಹೋದಾಗ, ಕುಟುಂಬ ಸಂರಕ್ಷಣೆ ಮಾಡೋರು? ಯಾರು ಕೋರ್ಟ್ ಓಡಾಡೊರು ಯಾರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕಿವಿಮಾತು ಹೇಳಿದರು.

ಶಿರಸಿಯ ಅರಣ್ಯ ಕಾಲೇಜು ಆವರಣದಲ್ಲಿ ಉಪ ರಾಷ್ಟ್ರಪತಿ ಅವರು ತಮ್ಮ ತಾಯಿ ಕೇಸರಿ ದೇವಿ ಹೆಸರಿನಲ್ಲಿ, ಅವರ ಪತ್ನಿ ಸುದೇಶ ಧನಕರ್ ಅವರು ತಮ್ಮ ತಾಯಿ ಭಗವತಿ ದೇವಿ ಹಾಗೂ ರಾಜ್ಯಪಾಲ ಥಾವರಚಂದ್ ಗೆಹ್ಲೋಥ್ ಅವರು ತಮ್ಮ ತಾಯಿ ಸುಮನ್ ಬಾಯಿ ಹೆಸರಿನಲ್ಲಿ ಅಶೋಕ ವೃಕ್ಷ ನೆಟ್ಟರು.

ಕಲಬುರಗಿ ಹಿರಿಯರಿಂದ 2500 ಕಿ.ಮೀ ಪಾದಯಾತ್ರೆ

ಕೇದಾರನಾಥಕ್ಕೆ ನಡೆದುಕೊಂಡೇ ಹೋಗಿ ದರ್ಶನ

ಕಲಬುರಗಿ: ಕಲಬುರಗಿಯಿಂದ 2500 ಕೀ.ಮೀ ಪಾದಯಾತ್ರೆ ಮಾಡುವ ಮುಖೇನ ಉತ್ತರಾಖಂಡ್ ರಾಜ್ಯದ ಹಿಮಾಲಯದಲ್ಲಿ ನೆಲೆಸಿರುವ ಬಾಬಾ ಕೇದಾರ ನಾಥನ ದರ್ಶನ ಪಡೆದು ಕಲಬುರಗಿ ಹಿರಿಯರು ತಮ್ಮ ಪಾದ ಯಾತ್ರೆ ಮುಗಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಹಿಪ್ಪರಗಿ ಗ್ರಾಮದ ನಿವಾಸಿಗಳಾದ ಮಡಿವಾಳಪ್ಪಗೌಡ ಪಾಟೀಲ್,ಮಲ್ಲಣ್ಣ ನಾಗನೂರ, ಕಲ್ಯಾಣಿ ಕುರನಳ್ಳಿ, ಶರಣು ಹೊಸಮನಿ, ಮಹಾದೇವ ಪೂಜಾರಿ ಎಂಬುವವರು ಕಳೆದ ಮಾರ್ಚ್ 3ರಂದು ಕೇದಾರನಾಥ,ಗೆ ಪಾದಯಾತ್ರೆ ಮೂಲಕ ಪ್ರಯಾಣ ಬೆಳೆಸಿದ್ದರು.

ವಸ್ತಾರಿ ಗ್ರಾಮದಿಂದ ಪಾದಯಾತ್ರೆ ಪ್ರಾರಂಭಿಸಿದ ಅವರು,ಹಿಪ್ಪರಗಿ,ಜೇರಟಗಿ, ಅಫಜಲಪುರ, ದುಧನಿ,ಅಕ್ಕಲಕೋಟ್, ಸೋಲಾಪುರ, ಬೀಡ್ ಮಾರ್ಗದಿಂದ ಔರಂಗಾಬಾದ್‌ನಿಂದ ಘೃಷ್ಣೇಶ್ವರ, ಮಧ್ಯಪ್ರದೇಶದ ಓಂಕಾರೇಶ್ವರ ದರ್ಶನ ಪಡೆದು, ಉಜ್ಜಯಿನಿ ಮಹಾ ಕಾಳೇಶ್ವರನ ದರ್ಶನ ಪಡೆದಿದ್ದಾರೆ. ಮಧ್ಯಪ್ರದೇಶದ ಕಾಲಭೈರವನ ದರ್ಶನ ಪಡೆದು ಉತ್ತರಪ್ರದೇಶದ ಮಥುರಾ ಶ್ರೀ ಕೃಷ್ಣನ ದರ್ಶನ ಪಡೆದು ದೆಹಲಿಯಿಂದ ಹರಿದ್ವಾರ, ಹೃಷಿಕೇಶ ತಲುಪಿ ಕೇದಾರನಾಥ ದರ್ಶನ ಪಡೆದಿದ್ದಾರೆ ಎಂದು ಗುರುರಾಜ ಪಟ್ಟಣಶೆಟ್ಟಿ ತಿಳಿಸಿದರು. ಕೇದಾರನಾಥ ದರ್ಶನ ಬಳಿಕ ಇದೀಗ ನಾವು ಬದರಿನಾಥ್ ದರ್ಶನ ಮಾಡಲಿದ್ದೇವೆ. ತದನಂತರ ಮರಳಿ ಕಲಬುರಗಿಗೆ ವಾಪಸ್ ಆಗಲಿದ್ದೇವೆ ಎಂದು ಯಾತ್ರಿಕರು ತಿಳಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್ 06.05.2025



ಮಂಗಳವಾರದ ಅತಿಥಿ
ಡಾ.ಮಲ್ಲಿಕಾರ್ಜುನ ಡಂಬಳ
ವಿಷಯ
ಮಾನವ ಜೀವನಕ್ಕೆ ಆಯುರ್ವೇದದ ಪ್ರಸ್ತುತತೆ

vishwavani.news

ಟ್ವೀಟೂ-ಖಾರಾ

ಆರ್.ಅಶೋಕ ಪ್ರತಿಪಕ್ಷ ನಾಯಕ

ನಾಡದ್ರೋಹಿ ಕಾಂಗ್ರೆಸ್ ಸರಕಾರದಿಂದ ಮತ್ತೊಮ್ಮೆ ಕನ್ನಡದ ಕಗ್ಗೊಲೆ. ನ್ಯಾಯಕ್ಕಾಗಿ ದನಿ ಎತ್ತಿದವರ ಮೇಲೆ ಪೊಲೀಸರ ದಬ್ಬಾಳಿಕೆ. ಮೊದಲನೇ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಷಾಂತರ ಲೋಪ, ಮರುಪರೀಕ್ಷೆಯಲ್ಲೂ ಮತ್ತೊಮ್ಮೆ ಭಾಷಾಂತರ ಲೋಪ, ಮುಖ್ಯ ಪರೀಕ್ಷೆಯಲ್ಲೂ ಭಾಷಾಂತರ ಲೋಪ, ಕನ್ನಡರಾಮಯ್ಯ ಎಂದು ಕರೆಸಿಕೊಳ್ಳುವ ಸಿಎಂ siddaramaiah ನವರೇ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಗ್ರಾಮೀಣ ಭಾಗದ ಅಭ್ಯರ್ಥಿಗಳ ಶಾಪ ನಿಮಗೆ ತಟ್ಟದೇ ಇರದು.

ಬಸವರಾಜ್

ಸರ್ ನಿಮ್ಮನ್ನ KPSC ಕಚೇರಿ ಹೊಳಗಡೆ ಬಿಡಲ್ವಂತೆ ನಿಜಾನಾ?? ನೀವು ನಿಜವಾಗ್ಲೂ ಕನ್ನಡ ಮಕ್ಕಳ ಪರ ಇದ್ರೆ KPSC ಕಚೇರಿಗೆ ಭೇಟಿ ನೀಡಿ... ನಮ್ಮನ್ನು ಕರ್ಕೊಂಡು ಹೋಗಿ ನಾವು ಬರ್ತೀವಿ. ಸುಮ್ನೆ ಟ್ವೀಟ್ ಮಾಡಿ ಕೈ ತೊಳ್ಕೊಬೇಡಿ ಸರ್.

ಜನಿವಾರ ವಿವಾದ: ಬ್ರಾಹ್ಮಣ ಮಹಾಸಭಾದಿಂದ ಪಿಐಎಲ್

ಬೆಂಗಳೂರು: ಸಿಇಟಿ ಮತ್ತು ನೀಟ್ ಪರೀಕ್ಷೆಗಳಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಾಹ್ಮಣ ಸಭಾ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆ ಮಾಡಿದೆ. ಈ ಬಗ್ಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ರಘುನಾಥ್ ಮಾಹಿತಿ ನೀಡಿದ್ದು, ಇತ್ತೀಚೆಗೆ ಎಲ್ಲ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ ಜನಿವಾರ ತೆಗೆಸುತ್ತಿದ್ದಾರೆ. ಇದರಿಂದ ಬ್ರಾಹ್ಮಣರ ಧಾರ್ಮಿಕ ಆಚರಣೆಗೆ ಧಕ್ಕೆಯಾಗಿದೆ ಎಂದು ಅರ್ಜಿ ಸಲ್ಲಿಸಲಾಗಿದೆ ಎಂದು ಹೇಳಿದರು. ಇತ್ತೀಚಿಗೆ ನಡೆದ ಸಿಇಟಿ ಪರೀಕ್ಷೆಗೆ ಬರೆಯಲು ಬಂದ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರವನ್ನು ಶಿವಮೊಗ್ಗ, ಬೀದರ್ ಮತ್ತು ಧಾರವಾಡ ಪರೀಕ್ಷಾ ಕೇಂದ್ರಗಳಲ್ಲಿ ತೆಗೆಸಲಾಗಿತ್ತು. ಈ ಪ್ರಕರಣ ರಾಜ್ಯಾದ್ಯಂತ ಭಾರೀ ಚರ್ಚೆ ಮತ್ತು ಆಕ್ರೋಶಕ್ಕೆ ಕಾರಣವಾಗಿತ್ತು. ಶಿವಮೊಗ್ಗದಲ್ಲಿ ಸಿಇಟಿ ಪರೀಕ್ಷೆ ಬರೆಯಲು ಆಗಮಿಸಿದ್ದ ವಿದ್ಯಾರ್ಥಿಯ ಜನಿವಾರ ಮತ್ತು ಕೈಗೆ ಕಟ್ಟಿದ್ದ ಕಾಶಿ ದಾರವನ್ನು ತೆಗೆಸಿ ಅಧಿಕಾರಿಗಳು ಕಸದ ಬುಟ್ಟಿಗೆ ಎಸೆದಿದ್ದರು. ಬೀದರ್‌ನಲ್ಲಿ ಜನಿವಾರ ಹಾಕಿದ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟಿರಲಿಲ್ಲ. ಜನಿವಾರ ಹಾಕಿದ್ದಾರೆಂಬ ಕಾರಣಕ್ಕೆ ಪರೀಕ್ಷೆ ಬರೆಯಲು ಅವಕಾಶ ನೀಡದೆ ವಿದ್ಯಾರ್ಥಿಗಳ ಭವಿಷ್ಯವನ್ನು ಕಾಂಗ್ರೆಸ್ ಸರಕಾರ ಸಂಕಷ್ಟಕ್ಕೆ ದೂಡಿದೆ ಎಂದು ರಾಜ್ಯ ಬಿಜೆಪಿ ಮತ್ತು ಹಿಂದೂ ಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದವು.

ಹಿಂದೂಗಳ ರಕ್ಷಣೆಗೆ ಹೊರಟವರನ್ನ ಹತ್ಯೆ

ರಾಜ್ಯ ಸರಕಾರದಲ್ಲಿರುವ ಎಲ್ಲಾ ಸಚಿವರು ರೌಡಿಗಳೇ

ಉಡುಪಿ: ಕಾಂಗ್ರೆಸ್ ಸರಕಾರದಲ್ಲಿರುವ ಎಲ್ಲಾ ಮಂತ್ರಿಗಳು ರೌಡಿಗಳೇ. ಜೈಲಿಗೆ ಹೋಗಿ ಬಂದವರೇ ಜಾಸ್ತಿ ಇದ್ದಾರೆ. ಸಿದ್ದರಾ

ಮಯ್ಯ ಹಾಗೂ ಡಿಕೆಶಿ ಯಿಂದ ಆರಂಭಿಸಿ ಎಲ್ಲರ ಮೇಲೆ ಕೇಸ್ ಇದೆ. ಹಾಗಿ ದ್ದರೆ ಸರಕಾರದಲ್ಲಿ ಇರುವವರೆಲ್ಲರೂ ರೌಡಿಗಳಾ ಉತ್ತರ ಕೊಡಿ ಎಂದು ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸುಹಾಸ್ ಶೆಟ್ಟಿ ಮೇಲೆ ಎರಡು ವರ್ಷದಿಂದ ಯಾವುದೇ ಕೇಸ್ ಇಲ್ಲ, ಯಾವುದೇ ಘಟನೆಗಳಲ್ಲಿ ಸುಹಾಸ್ ಭಾಗಿಯಾಗಿಲ್ಲ. ರೌಡಿ ಶೀಟರ್ ಎಂದು ತೀರ್ಮಾನ ಮಾಡಬೇಕಾಗಿರೋದು ನ್ಯಾಯಾಲಯ, ಗೃಹ ಸಚಿವರಲ್ಲ. ಹಿಂದೂ ಸಂಘಟನೆಯಲ್ಲಿ ಕೆಲಸ ಮಾಡುತ್ತಾನೆ ಎಂಬ ಕಾರಣಕ್ಕೆ ಕೊಲೆಯಾಗಿದೆ. ಹಿಂದೂಗಳ ರಕ್ಷಣೆ ಮಾಡಲು ಹೊರಟವರನ್ನು ಹತ್ಯೆ ಮಾಡುತ್ತಿದ್ದಾರೆ. ಈಗಾಗಲೇ ಟಾರ್ಗೆಟ್ ಗ್ರೂಪ್ ರಚನೆಯಾಗಿದೆ. ಟಾರ್ಗೆಟ್ ಗ್ರೂಪಿನ ಒಂದು ಅಂಶದ ಕೆಲಸ ಆರಂಭವಾಗಿದೆ. ಸುಹಾಸ್ ಮೇಲೆ ಗೂಬೆಕೂರಿಸುವ ಕೆಲಸವನ್ನು ಬಿಟ್ಟು, ಸರಕಾರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದಾವಣಗೆರೆ, ಮೈಸೂರಿನಲ್ಲಿ ಇಬ್ಬರು ರೌಡಿಶೀಟರ್ಸ್ ಬರ್ಬರ ಹತ್ಯೆ

ಮೈಸೂರು/ದಾವಣಗೆರೆ: ಮೈಸೂರು ನಗರ ವ್ಯಾಪ್ತಿಯ ಕ್ಯಾತಮಾರನಹಳ್ಳಿ ಬಡಾವಣೆ ಒಂದು ಭೀಕರ ಕೊಲೆಗೆ ಸೋಮವಾರ ಸಾಕ್ಷಿಯಾಗಿದೆ. ಹೊರವಲಯದ ಹೋಟೆಲ್ ಬಳಿ ಕೊಲೆ ನಡೆದಿದ್ದು, ಕಾರ್ತಿಕ್ ಎಂಬ ಯುವಕನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ. ಕ್ಯಾತಮಾರನಹಳ್ಳಿ ನಿವಾಸಿ, ರೌಡಿಶೀಟರ್ ಕಾರ್ತಿಕ್ (33) ಎಂಬಾತನೇ ಕೊಲೆಯಾದವನಾಗಿದ್ದು, ವೈಯಕ್ತಿಕ ದ್ವೇಷಕ್ಕೆ ಕೊಲೆ ಮಾಡಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ತಡರಾತ್ರಿ ಘಟನೆ ನಡೆದಿದ್ದು, 5 ಜನರ ತಂಡದಿಂದ ನಡೆದಿರುವ ಈ ದುಷ್ಕೃತ್ಯದ ದೃಶ್ಯ ಹೋಟೆಲಿನ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಅದೇ ರೀತಿ ರೌಡಿಶೀಟರ್‌ನೊಬ್ಬನನ್ನು ಹಳೇ ದ್ವೇಷದ ಹಿನ್ನೆಲೆಯಲ್ಲಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ನಗರದ ಹದಡಿ ರಸ್ತೆಯ ಸೋಮೇಶ್ವರ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮುಂಭಾಗದಲ್ಲಿ ಸೋಮವಾರ ಸಂಜೆ ನಡೆದಿದೆ. ಕೆಟಿಜೆ ನಗರದ ನಿವಾಸಿ ಸಂತೋಷ್ ಆಲಿಯಾಸ್ ಕಣುಮ ಭೀಕರವಾಗಿ ಹತ್ಯೆಯಾಗಿರುವ ರೌಡಿಶೀಟರ್. ಎಸ್ಪಿ ಉಮಾ ಪ್ರಶಾಂತ್, ಹೆಚ್ಚುವರಿ ಎಸ್ಪಿ ವಿಜಯಕುಮಾರ್ ಸಂತೋಷ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಿದ್ಯಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ

ಜಾತಿಗಣತಿಗೆ ಕೈ ಹಾಕಿದರೆ ಜೇನಗೂಡಿಗೆ ಕೈ ಹಾಕಿದಂತೆ

ಬಾಗಲಕೋಟೆ: ಯಾವುದೇ ಸರಕಾರ ಇರಲಿ, ಜಾತಿಗೆ ಕೈ ಹಾಕಿದರೆ ಜೇನುಗೂಡಿಗೆ ಕೈ ಹಾಕಿದಂತೆ. ಸುಮ್ ಸುಮ್ಮನೆ ಇವೆಲ್ಲ ಮಾಡುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಮೀಸಲಾತಿ ಇರಲಿ 50% ಮೀರಬಾರದು ಎಂದು ಸುಪ್ರೀಂ ಕೋರ್ಟ್ ಹೇಳುತ್ತದೆ. ಇವೆಲ್ಲ ಒಂದಕ್ಕೊಂದು ಜಗಳದ ಮೂಲ. ಜಾತಿ ಸಮೀಕ್ಷೆಯನ್ನೇ ಮಾಡುವುದು ಅವಶ್ಯಕತೆ ಇರಲಿಲ್ಲ ಎಂಬುವುದು ನನ್ನ ಅಭಿಪ್ರಾಯ ಎಂದರು.ಎಲ್ಲಿಯವರೆಗೆ ದೇಶದಲ್ಲಿ ಪುಕ್ಕಟೆ ಕೊಡುವುದು ನಡೆಯುತ್ತದೆ ಅಲ್ಲಿಯವರೆಗೆ ಯಾವ ದೇಶ ಹಾಗೂ ಯಾವ ರಾಜ್ಯನೂ ಉದ್ದಾರ ಆಗುವುದಿಲ್ಲ, ಕೆಲಸಕ್ಕೆ ನಮಗೆ ಆಳುಗಳು ಸಿಗುತ್ತಿಲ್ಲ, ಕಾರಣ ದನಗಳನ್ನು ಮಾರಾಟ ಮಾಡಿದ್ದೇವೆ. ಕೆಲಸಗಾರರಿಗೆ 50 ರು. ಹೆಚ್ಚು ಕೊಡುತ್ತೇವೆ ಎಂದರು ಬೇಡ ಬಿಡ್ರಿ ನಮ್ಮ ಸಿದ್ದರಾಮಯ್ಯ ರಗಡ ದುಡ್ಡು ಕೊಟ್ಟಾನ ನಿಮ್ದ್ಯಾಕೆ ಅಂತಾರೆ ಎಂದು ತಿಳಿಸಿದರು.

ಪದ ಬಳಕೆ ಬಗ್ಗೆ ನಮ್ಮಲ್ಲಿ ಸಾಕ್ಷಿ ಸಿಕ್ಕಿಲ್ಲ

ವಿಪ ಸದಸ್ಯ ಸಿ.ಟಿ.ರವಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಅವಾಚ್ಯ ಪದ ಬಳಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಆ ಪ್ರಕರಣ ನಮ್ಮ ಅಂಗಳಕ್ಕೆ ಬಂದಾಗ ಇಬ್ಬರನ್ನು ಕರೆದು ಮಾತಾಡಿ ನನ್ನದೇ ಆದ ಅಭಿಪ್ರಾಯ ಕೊಟ್ಟಿದ್ದೇನೆ. ಅಥೆಂಟಿಕ್ ಆಗಿ ಸಿಟಿ ರವಿ ಆ ಪದ ಬಳಕೆ ಬಗ್ಗೆ ನಮ್ಮಲ್ಲಿ ಯಾವುದೇ ಸಾಕ್ಷಿ ಸಿಕ್ಕಿಲ್ಲ. ನಮ್ಮ ಕ್ಯಾಮೆರಾಗಳು ಸದನ ಶುರು ಆದಾಗ ಶುರು ಆಗುತ್ತವೆ, ಸದನ ಬಂದ ಆದಾಗ ಅಟೊಮ್ಯಾಟಿಕ್ ಬಂದ್ ಆಗುತ್ತವೆ. ಇಬ್ಬರು ದೂರು ಕೊಟ್ಟಿದ್ದರಿಂದ ಈಗ ಅದನ್ನು ಎಥಿಕ್ಸ್ ಕಮಿಟಿಗೆ ಕೊಟ್ಟಿದ್ದೇವೆ ಎಂದರು.

ಸಚಿವ ಶಿವಾನಂದ ಪಾಟೀಲ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನಡುವೆ ನಡೆದಿರುವ ರಾಜೀನಾಮೆ ಕುರಿತು ಮಾತನಾಡಿದ ಅವರು, ಹುಡಗರು ಏನಾದರೂ ಗಲಾಟೆ ಮಾಡಿದರೆ ಟೀಚರ್ ಬೈತಾರೆ. ಟೀಚರ್‌ಗಳೆ ಆ ರೀತಿ ಮಾಡಿದರೆ ಹೇಗೆ? ಎಂದು ವ್ಯಂಗ್ಯವಾಡಿದರು.

ವಿಶ್ವವಾಣಿ

ಸಂಪಾದಕೀಯ

ಬೋಧನಾ ಗುಣಮಟ್ಟ ಹೆಚ್ಚಳವಾಗಲಿ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 144 ಶಾಲೆಗಳು ಶೂನ್ಯ ಫಲಿತಾಂಶ ದಾಖಲಿಸಿವೆ. ಅಲ್ಲದೆ, ಮೊದಲ ಹತ್ತು ಸ್ಥಾನಗಳನ್ನು ದಕ್ಷಿಣ ಕರ್ನಾಟಕದ ಜಿಲ್ಲೆಗಳು ಪಡೆದರೆ, ಕೊನೆಯ ಏಳು ಸ್ಥಾನಗಳಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿವೆ. ಕಳೆದ ವರ್ಷವೂ ಹೆಚ್ಚು-ಕಡಿಮೆ ಇದೆ ಪರಿಸ್ಥಿತಿ ಇತ್ತು. ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆಯು ಹಲವಾರು ಕ್ರಮಗಳನ್ನು ಕೈಗೊಂಡರೂ ಯಾವುದೇ ರೀತಿಯ ಬದಲಾವಣೆ ಸಾಧ್ಯವಾಗುತ್ತಿಲ್ಲ. ಇದೇ ರೀತಿಯ ಫಲಿತಾಂಶ ಮುಂದಿನ ವರ್ಷದಿಂದಲೂ ಮುಂದುವರಿದರೆ ವಿದ್ಯಾರ್ಥಿಗಳ ವೃತ್ತಿಜೀವನದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಸರಕಾರ ಕಾಳಜಿ ವಹಿಸಬೇಕಾದ ಅಗತ್ಯವಿದೆ. ಬೋಧನಾ ಗುಣಮಟ್ಟವನ್ನು ಉತ್ತಮಪಡಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಬೇಕಿದೆ. ಕಲಿಕೆಯನ್ನು ಖಾತರಿಪಡಿಸಿಕೊಳ್ಳಲು ನಿರಂತರ ನಿಗಾ ವ್ಯವಸ್ಥೆ ರೂಪಿಸಬೇಕಿದೆ. ಇಲ್ಲಿ ಶಿಕ್ಷಕರ ಪಾತ್ರ ಬಹುಮುಖ್ಯ. ಹಾಗಾಗಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಶೀಘ್ರದಲ್ಲೇ ನೇಮಕ ಮಾಡಿಕೊಳ್ಳಬೇಕಿದೆ. ಈಗಾಗಲೇ ನೇಮಕವಾಗಿರುವ ಶಿಕ್ಷಕರಿಗೆ ಅಗತ್ಯವಿದ್ದಲ್ಲಿ ಅವರಿಗೆ ವಿಶೇಷ ತರಬೇತಿ ನೀಡಬೇಕು. ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ಪೋಷಿಸಬೇಕಿದೆ. ಕಲಿಕೆ ಮತ್ತು ಗ್ರಹಿಕೆಯಲ್ಲಿ ನಿರೀಕ್ಷಿತ ಮಟ್ಟಕ್ಕೆ ಏರದ ಮಕ್ಕಳನ್ನು ಮತ್ತೊಂದು ಶೈಕ್ಷಣಿಕ ವರ್ಷಕ್ಕೆ ಅದೇ ತರಗತಿಯಲ್ಲಿ ಉಳಿಸುವ ನಮ್ಮ ಹಿಂದಿನ ವ್ಯವಸ್ಥೆ ಪುನಃ ಜಾರಿಯಾಗಬೇಕು. ಒಂದರಿಂದ ಒಂಬತ್ತನೇ ತರಗತಿಯವರೆಗೆ ಕನಿಷ್ಠ ಅಂಕ ಪಡೆಯದ ವಿದ್ಯಾರ್ಥಿಗಳನ್ನೂ ಮುಂದಿನ ತರಗತಿಗೆ ಉತ್ತೀರ್ಣವಾಗಿಸುವ ಪದ್ಧತಿ ಬದಲಾಗಬೇಕಿದೆ. ಒಟ್ಟಾರೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳ ಶೈಕ್ಷಣಿಕ ಗುಣಮಟ್ಟವನ್ನು ಎತ್ತರಿಸುವ ಅಗತ್ಯವಿದೆ. ಈ ಕುರಿತು ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ತಜ್ಞರು ಈ ಕುರಿತು ಚಿಂತಿಸುವ ಅಗತ್ಯವಿದೆ. ರಾಜ್ಯ ಸರಕಾರ ವಿಶೇಷ ಕಾಳಜಿ ವಹಿಸಿ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕಾದ ಅಗತ್ಯವಿದೆ. ಆ ಮೂಲಕ ಮುಂಬರುವ ವರ್ಷಗಳಲ್ಲಿ ಫಲಿತಾಂಶ ಪ್ರಗತಿ ಕಾಣಬೇಕಿದೆ.

ಸೊಂಪಾದಕೀಯ

ಕ್ಲೀನ್ ಹ್ಯಾಂಡ್ ಡೇ

ನಿನ್ನೆ ಅಂದ್ರೆ ಮೇ 5ರಂದು ವಿಶ್ವ ಸ್ವಚ್ಛ ಹಸ್ತ ದಿನ ಆಚರಿಸಲಾಗಿದೆ. ಇತ್ತೀಚೆಗೆ ಪ್ರತಿದಿನವೂ ಒಂದೊಂದು ವಿಶೇಷತೆಗೆ ಮೀಸಲು ಎಂಬಂತೆ ಏನಾದರೂ ಒಂದು ಡೇ ಆಚರಣೆ ಮಾಡುವುದರಲ್ಲಿ ನಮ್ಮ ಜನ ಸಿದ್ಧಹಸ್ತರು. ಹಾಗಾಗಿ ನಿನ್ನೆ ಸ್ವಚ್ಛ ಹಸ್ತ ದಿನ. ಆದರೆ ಇದು ತೀರಾ ಜನರೇ ಮಾಡಿಕೊಂಡ ದಿನಾಚರಣೆ ಅಲ್ಲ. ವಿಶ್ವ ಆರೋಗ್ಯ ಸಂಸ್ಥೆ ಖುದ್ದಾಗಿ ಇದಕ್ಕೆ ಮಾನ್ಯತೆ ನೀಡಿದೆ. ಹಾಗಾಗಿ ಇದನ್ನು ಅಧಿಕೃತ ಎನ್ನಬಹುದು. ಆದರೆ ಈ ಅಧಿಕೃತ ಸ್ವಚ್ಛ ಹಸ್ತ ದಿನ ಅಂದ್ರೆ ಅನಧಿಕೃತವಾಗಿ ಲಂಚ ತೆಗೆದುಕೊಳ್ಳದ ಸ್ವಚ್ಛ ಹಸ್ತ ದಿನ ಅಂತ ಅಪಾರ್ಥ ಮಾಡಿಕೊಳ್ಳಬೇಡಿ. ಇದು ಆ ರೀತಿಯ ಸ್ವಚ್ಛ ಹಸ್ತ ಅರ್ಥಾತ್ ಕ್ಲೀನ್ ಹ್ಯಾಂಡ್ ಅಲ್ಲ. ಟೇಬಲ್ ಕೆಳಗೆ ಲಂಚ ತೆಗೆದುಕೊಳ್ಳುವ ಟೇಬಲ್ ಮ್ಯಾನರ್ಸ್ ಇರೋ ಲಂಚಕೋರ ಅಧಿಕಾರಿಗಳಿಗೂ, ರಾಜಕಾರಣಿಗಳಿಗೂ ಇದಕ್ಕೂ ಸಂಬಂಧ ಇಲ್ಲ. ಇದು ಆರೋಗ್ಯಕ್ಕೆ ಸಂಬಂಧಿಸಿದ ಸ್ವಚ್ಛ ಹಸ್ತ. ಆರೋಗ್ಯ ಕ್ಷೇತ್ರದಲ್ಲಿ ಸ್ವಚ್ಛ ಕೈಗಳ ಪಾತ್ರದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ಮೇ 5ರ ದಿನಾಂಕವನ್ನು ಸ್ವಚ್ಛ ಹಸ್ತ ದಿನವನ್ನಾಗಿ ಘೋಷಿಸಿದೆ ವಿಶ್ವ ಆರೋಗ್ಯ ಸಂಸ್ಥೆ. 2009ರಲ್ಲಿ ಆದ ಈ ಘೋಷಣೆಗೆ ಈಗ 16 ವರ್ಷ. ಕೈ ಕೆಸರಾದರೆ ಬಾಯಿ ಮೊಸರು ಅನ್ನೋ ಗಾದೆ ಮಾತನ್ನ ಬೇರೆ ರೀತಿ ಅರ್ಥ ಮಾಡಿಕೊಂಡು ಕೈಯನ್ನು ಕೆಸರು ಮಾಡಿಕೊಳ್ಳುವ ಭ್ರಷ್ಟರಿಗೂ ಇದಕ್ಕೂ ಸಂಬಂಧ ಇಲ್ಲ. ನಮ್ಮ ದೇಹದ ಆರೋಗ್ಯದ ದೃಷ್ಟಿಯಿಂದ ಕೈಯನ್ನು ಕೆಸರು ಮಾಡಿಕೊಳ್ಳಬೇಡಿ ಅಂತ ಕೈ ಕೆಲಸ ಮಾಡುವವರಿಗೆ ಕಿವಿಮಾತು ಹೇಳುವ ಕಾರ್ಯಕ್ರಮ ಇದು. ಹಾಗಂತ ಮತ್ತೆ ಕೈ ಕೆಲಸ ಅಂದ್ರೆ, ಅದಕ್ಕೂ ಅಪಾರ್ಥ ಮಾಡಿಕೊಳ್ಳೋದು ಬೇಡ. ಇದು ಕಾಯಕವನ್ನೇ ನಂಬಿದ ಶ್ರಮ ಜೀವಿಗಳಿಗೆ ಸಂಬಂಧಪಟ್ಟ ವಿಷಯ. ಅಂದ ಹಾಗೆ, ಇದೇ ರೀತಿಯಲ್ಲಿ ರಾಜಕೀಯ ಮತ್ತು ಅಧಿಕಾರಿಗಳ ವಲಯದಲ್ಲಿ ಕೂಡಾ ಇಂಥ ಸ್ವಚ್ಛ ಹಸ್ತ ಅಭಿಯಾನ ಮಾಡಿ ಅದಕ್ಕೂ ಒಂದು ದಿನ ಅಂತ ಘೋಷಣೆ ಮಾಡಿದರೆ ದೇಶದಲ್ಲಿ ಕನಿಷ್ಟ ಪಕ್ಷ ಒಂದು ದಿನವಾದರೂ ಲಂಚದ ಹಾವಳಿ ತಪ್ಪಬಹುದು ಅನ್ನೋದು ಜನಸಾಮಾನ್ಯರ ಅಭಿಪ್ರಾಯ.

ಸಂಪಾದಕರ ಸದ್ಯಶೋಧನೆ

ನಗುವಾಗ ಬಾಯಿ ಮುಚ್ಚಿ

ಸಾಮಾನ್ಯವಾಗಿ ಹೆಂಗಸರು ನಗುವಾಗ ಬಾಯಿ ಮುಚ್ಚಿಕೊಳ್ಳುತ್ತಾರೆ. ಇದನ್ನು ಜಗತ್ತಿನ ಬಹುತೇಕ ದೇಶಗಳಲ್ಲಿ ಗಮನಿಸಬಹುದು. ಆದರೆ ಜಪಾನಿನ ಸಂಸ್ಕೃತಿಯಲ್ಲಿ ಮಹಿಳೆಯರು ನಗುವಾಗ ಬಾಯಿಯನ್ನು ಮುಚ್ಚುವುದು ಒಂದು ವಿಶಿಷ್ಟ ಸಾಮಾಜಿಕ ಆಚರಣೆ. ಕೆಲವು ಕುಟುಂಬಗಳಲ್ಲಿ ಈಗಲೂ, ನಗುವಾಗ ಬಾಯಿಗೆ ಕೈಯನ್ನು ಅಡ್ಡವಾಗಿ ಹಿಡಿದು ನಗಬೇಕು ಎಂದು ಮಕ್ಕಳಿಗೆ ತಾಯಂದಿರು ಹೇಳುವುದುಂಟು. ಈ ನಡೆಗೆ ಹಲವು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಮನೋವೈಜ್ಞಾನಿಕ ಕಾರಣಗಳೂ ಇವೆ. ಜಪಾನಿನ ಹೆಯಾನ್ ಯುಗ (7941185)ದಲ್ಲಿ, ಮಹಿಳೆಯರು ತಮ್ಮ ಹಲ್ಲುಗಳನ್ನು ಕಪ್ಪು ಬಣ್ಣ ಹಚ್ಚಿಕೊಳ್ಳುವ ಓಹಾಗುರೊ ಎಂಬ ವಿಚಿತ್ರ ಪದ್ಧತಿ ಪ್ರಚಲಿತವಾಗಿತ್ತು. ಈ ಪದ್ಧತಿ ಮಹಿಳೆಯರ ವೈವಾಹಿಕ ಸ್ಥಿತಿಯನ್ನು ಸೂಚಿಸಲು ಮತ್ತು ಸಾಮಾಜಿಕ ಸ್ಥಿತಿಯನ್ನು ಪ್ರತಿಬಿಂಬಿಸಲು ಬಳಸಲಾಗುತ್ತಿತ್ತು. ಹಲ್ಲುಗಳನ್ನು ಕಪ್ಪು ಬಣ್ಣದಿಂದ ಬಣ್ಣಿಸುವುದು ಶ್ರದ್ಧೆ ಮತ್ತು ಶಿಷ್ಟಾಚಾರದ ಸಂಕೇತವಾಗಿತ್ತು. ಹಲ್ಲುಗಳನ್ನು ಬಹಿರಂಗವಾಗಿ ತೋರಿಸುವುದನ್ನು ತಪ್ಪಿಸಲು, ಮಹಿಳೆಯರು ನಗುವಾಗ ಅಥವಾ ಮಾತನಾಡುವಾಗ ತಮ್ಮ ಬಾಯಿಯನ್ನು ಕೈಯಿಂದ ಅಥವಾ ಕಿಮೋನೋ ಸ್ಲೀವ್‌ನಿಂದ ಮುಚ್ಚುತ್ತಿದ್ದರು. ಜಪಾನಿನ ಶಿಷ್ಟಾಚಾರದಲ್ಲಿ, ನಗುವಾಗ ಬಾಯಿಯನ್ನು ಮುಚ್ಚುವುದು ವಿನಯ, ಸೌಮ್ಯತೆ ಮತ್ತು ಶಿಷ್ಟತೆಯ ಸಂಕೇತ. ಮಹಿಳೆಯರು ತಮ್ಮ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಮತ್ತು ಅತಿಯಾದ ಉಲ್ಲಾಸವನ್ನು ತೋರಿಸದಿರುವುದು ಆ ಶಿಷ್ಟಾಚಾರದ ಭಾಗವಾಗಿದೆ. ಬಾಯಿ ಮುಚ್ಚಿಕೊಳ್ಳದೇ ಜೋರಾಗಿ ನಕ್ಕರೆ, 'ನೋಡಿ, ಎಷ್ಟು ಅಸಹ್ಯವಾಗಿ ಹಲ್ಲನ್ನು ಕಾಣಿಸುವಂತೆ ನಗುತ್ತಾಳೆ' ಎಂದು ಛೇಡಿಸುವುದುಂಟು. ನಗುವಾಗ ಬಾಯಿಯನ್ನು ಮುಚ್ಚುವುದು ಕೆಲವೊಮ್ಮೆ ವ್ಯಕ್ತಿಯ ಅಂತರಂಗದ ಭಾವನೆಗಳನ್ನು ತೋರಿಸದಿರುವುದಕ್ಕೆ ಮನೋವೈಜ್ಞಾನಿಕ ಕಾರಣವೂ ಇದ್ದಿರಬಹುದು. ಇದು ವ್ಯಕ್ತಿಯ ಆತ್ಮವಿಶ್ವಾಸದ ಕೊರತೆ, ಸಾಮಾಜಿಕ ಆತಂಕ ಅಥವಾ ಅಜ್ಞಾತ ಭಾವನೆಗಳನ್ನೂ ಸೂಚಿಸಬಹುದು. ಬಾಯಿಯನ್ನು ಮುಚ್ಚುವುದರಿಂದ ವ್ಯಕ್ತಿಯ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹಾಯವಾಗುವುದಂತೆ. ಈಗಲೂ ಮಹಿಳೆಯರು ಜೋರಾಗಿ ನಗುವುದು ಅಷ್ಟೇನೂ ಉತ್ತಮ ನಡೆವಳಿಕೆ ಅಲ್ಲವೆಂಬ ಭಾವನೆ ಜಪಾನಿಯರಲ್ಲಿದೆ. (ಈ ಶಿಷ್ಟಾಚಾರ ನಮ್ಮಲ್ಲೂ ಇದೆ.) ಜೋರಾಗಿ ನಗುವ ಸ್ವಭಾವವಿದ್ದವರು, ಸುತ್ತ-ಮುತ್ತ ನೋಡಿ, ಯಾರೂ ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ನಗುತ್ತಾರೆ. ಪಶ್ಚಿಮ ಸಂಸ್ಕೃತಿಯ ಪ್ರಭಾವದಿಂದಾಗಿ, ಈ ಪದ್ಧತಿ ಕೆಲವೊಂದು ನಗರ ಅಥವಾ ಸಮಾಜದಲ್ಲಿ ಕಡಿಮೆಯಾಗುತ್ತಿದೆ. ಜಪಾನಿನಂತೆ, ಇತರ ಕೆಲವು ಸಂಸ್ಕೃತಿಗಳಲ್ಲಿಯೂ ಮಹಿಳೆಯರು ನಗುವಾಗ ಬಾಯಿಯನ್ನು ಮುಚ್ಚುವ ಪದ್ಧತಿ ಇದೆ. ಇದು ಸಾಮಾನ್ಯವಾಗಿ ಶಿಷ್ಟಾಚಾರ, ವಿನಯ ಮತ್ತು ಸೌಮ್ಯತೆಯ ಸಂಕೇತವಾಗಿ ಪರಿಗಣಿಸಲಾಗುತ್ತದೆ. 'ಬಾಯಿಗೆ ಕೈ ಅಡ್ಡ ಹಿಡಿದು ನಗಬಾರದೇ ? ಜೋರಾಗಿ ನಕ್ಕರೆ, ನಿನ್ನ ಹಲ್ಲುಗಳು ಎಷ್ಟು ಹುಳುಕಾಗಿವೆ ಎಂಬುದು ಎಲ್ಲರಿಗೂ ಗೊತ್ತಾಗುತ್ತವೆ' ಎಂದು ಮನೆಯಲ್ಲಿ ಹಿರಿಯರು, ತಂದೆ-ತಾಯಿ ಹೇಳುವುದೂ ಉಂಟು. ಜಪಾನಿನಲ್ಲಿ ಶರೀರ ಭಾಷೆ (body language) ತುಂಬಾ ಶಿಷ್ಟ. ನಗುವಾಗ ಬಾಯಿಯನ್ನು ಮುಚ್ಚುವುದು 'ಉಚಿರೆಮಸು' ಎಂಬ ನಡವಳಿಕೆಗೆ ಸೇರಿದೆ. ಹಾಗೆಯೇ ಬಹಿರಂಗವಾಗಿ ಭಾವನೆಗಳನ್ನು ತೀವ್ರವಾಗಿ ತೋರಿಸುವುದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಜೋರಾದ ನಗು, ಉತ್ಸಾಹ ವ್ಯಕ್ತಪಡಿಸುವುದನ್ನು 'ಅರೈಗಟಾ' (ನಿಗ್ರಹಿತ ಶೈಲಿ) ಸಂಸ್ಕೃತಿಯಲ್ಲಿ ನಿಷಿದ್ಧ. ಈ ಕಾರಣದಿಂದಲೂ ಮಹಿಳೆಯರು ತಮ್ಮ ನಗುವನ್ನು ಮಿತವಾಗಿ ತೋರಿಸಲು ಬಾಯಿಯನ್ನು ಮುಚ್ಚುತ್ತಾರೆ. ಕೆಲವರ ಹಲ್ಲು ಉಬ್ಬು, ಸೊಟ್ಟವಿರಬಹುದು. ಅಂಥವರು ನಕ್ಕಾಗ ವಿಚಿತ್ರವಾಗಿ ಕಾಣಬಹುದು. ಕಿಮೊನೋ ಅಥವಾ ಯುಕಾತಾ ಧರಿಸುವ ಮಹಿಳೆಯರು ತಮ್ಮ ನಡವಳಿಕೆಯಲ್ಲಿ ಮಿತವ್ಯಯ ತೋರಿಸುತ್ತಾರೆ. ನಗುವಾಗ ಬಾಯಿಯನ್ನು ಮುಚ್ಚುವುದು ಈ ಶಿಷ್ಟತೆ ಮತ್ತು ಸಂಯಮದ ಭಾಗವಾಗಿದೆ. ಟಿವಿ ಶೋಗಳು, ಮ್ಯಾಗಜಿನ್‌ಗಳು ಮತ್ತು ಪುರುಷರ ಮಾನಸಿಕತೆಗಳು ಸಹ ಈ ಪದ್ಧತಿಗೆ ಪೋಷಣೆ ನೀಡಿವೆ. ಇತ್ತೀಚೆಗೆ ಯುವತಿಯರಲ್ಲಿ ಪಾಶ್ಚಾತ್ಯ ಪ್ರಭಾವದಿಂದಾಗಿ, ಈ ಪದ್ಧತಿಗೆ ವ್ಯತಿರಿಕ್ತವಾದ ದೃಷ್ಟಿಕೋನಗಳು ಹುಟ್ಟಿಕೊಂಡಿವೆ. ಹಲವು ಮಹಿಳೆಯರು ತಮ್ಮ ನಗುವನ್ನು ಮುಕ್ತವಾಗಿ ತೋರಿಸಲೂ ಹಿಂಜರಿಯುತ್ತಿಲ್ಲ. ಬಾಯಿಯನ್ನು ಮುಚ್ಚದೇ ನಗುವುದು ಈಗ 'ಆತ್ಮವಿಶ್ವಾಸದ ಸಂಕೇತ' ಎಂಬ ನವ ಚಿಂತನೆಯೆಂದು ಪರಿಗಣಿಸಲಾಗುತ್ತಿದೆ.

ಶಾಂತಿಯ ತೋಟಕ್ಕೆ ಓಲೈಕೆಯೇ ತೊಡಕು

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ರಾಷ್ಟ್ರಕವಿ ಕುವೆಂಪು ಅವರು ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ' ವೆಂದು ನಮ್ಮ ನಾಡಗೀತೆಯಲ್ಲಿ ಬಣ್ಣಿಸಿದ್ದಾರೆ. ಕುವೆಂಪು ಅವರ ಮಾತಿನಂತೆ, ಕರ್ನಾಟಕ ಶಾಂತಿಪ್ರಿಯ ಜತೆಗೆ ಎಲ್ಲರನ್ನೂ ಒಳಗೊಂಡ ರಾಜ್ಯವಾಗಿ ರೂಪುಗೊಂಡಿದೆ. ಉತ್ತರ ಪ್ರದೇಶ ಅಥವಾ ನೆರೆ ರಾಜ್ಯಗಳಲ್ಲಿನ ದೊಂಬಿ ಗಲಭೆಗಳನ್ನು ಗಮನಿಸಿದರೆ, ಕರ್ನಾಟಕ 'ಸುರಕ್ಷಿತ ರಾಜ್ಯ' ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಈ ರೀತಿಯ 'ಇಕೋ ಸಿಸ್ಟಂ'ನಿಂದಾಗಿಯೇ ಕೈಗಾರಿಕೆಗಳು, ಬಂಡವಾಳ ಹೂಡಿಕೆದಾರರು ಕರ್ನಾಟಕವನ್ನು ತಮ್ಮ ಮೊದಲ ಆದ್ಯತಾ ರಾಜ್ಯವನ್ನಾಗಿ ಆರಿಸಿಕೊಳ್ಳುತ್ತಾರೆ. ದೊಂಬಿ, ಗಲಾಟೆ ಹೊರತಾಗಿ ಅಂತಾರಾಷ್ಟ್ರೀಯ ಕಂಪನಿಗಳು ಬಯಸುವ ಕೌಶಲ್ಯಾಧಾರಿತ ಮಾನವ ಸಂಪನ್ಮೂಲ, ವಾತಾವರಣ, ಸಂಪರ್ಕ ಸೇರಿದಂತೆ ಎಲ್ಲ ರೀತಿಯಿಂದಲೂ ದೇಶದ ಬಹುಪಾಲು ರಾಜ್ಯಗಳಿಗಿಂತ ಕರ್ನಾಟಕ ಹಲವು ಪಟ್ಟು ಮುಂದಿದೆ ಎನ್ನುವುದು ಸ್ಪಷ್ಟ. ಹಾಗೆಂದ ಮಾತ್ರಕ್ಕೆ, ಕರ್ನಾಟಕ ರಚನೆಯಾದ ದಿನದಿಂದ ಕೋಮು ಸೌಹಾರ್ದತೆಯಲ್ಲಿ ಸಮಸ್ಯೆ, ಗಲಾಟೆ-ದೊಂಬಿಗಳು ನಡೆದೇ ಇಲ್ಲ ಎಂದಲ್ಲ. ಆದರೆ ಈ ಎಲ್ಲವನ್ನು 'ಹತೋಟಿ'ಯಲ್ಲಿಡುವ ವಿಷಯದಲ್ಲಿ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕವು ಯಶಸ್ವಿಯಾಗಿತ್ತು ಎನ್ನುವುದು ಸ್ಪಷ್ಟ.

ಈ ಹಿಂದೆ ಕಾನೂನು ಸುವ್ಯವಸ್ಥೆಯ ವಿಷಯದಲ್ಲಿ ಪಕ್ಷಾತೀತವಾಗಿ ಸರಕಾರಗಳು ತೀರ್ಮಾನ ತೆಗೆದುಕೊಳ್ಳುವಾಗ 'ಕಠಿಣ' ಕ್ರಮ ಕೈಗೊಳ್ಳುತ್ತಿದ್ದವು. ಆದರೆ ಕಾಲ ಬದಲಾದಂತೆ, ರಾಜಕೀಯ ಪಕ್ಷಗಳು 'ಓಲೈಕೆ' ರಾಜಕೀಯಕ್ಕೆ ಹೆಚ್ಚೆಚ್ಚು ಒತ್ತು ನೀಡಲು ಶುರು ಮಾಡಿದ ಬಳಿಕ ಪದೇಪದೆ ಕೋಮುಗಳ ಹೆಸರಲ್ಲಿ ಗಲಾಟೆಗಳ ಪ್ರಮಾಣ ಹೆಚ್ಚಾಗುತ್ತಿವೆ. ಅದರಲ್ಲಿಯೂ ಕರಾವಳಿಯಲ್ಲಿ ವರ್ಷಕ್ಕೆ ನಾಲ್ಕೈದು ಪ್ರಕರಣಗಳು ಸಾಮಾನ್ಯ ಎನ್ನುವ ರೀತಿಯಲ್ಲಾಗಿದೆ.

ಈ ಓಲೈಕೆ ರಾಜಕೀಯ ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ. ಅಧಿಕಾರದಲ್ಲಿರುವ ಎಲ್ಲ ಪಕ್ಷಗಳು ತಮ್ಮ ಮತಬ್ಯಾಂಕ್‌ಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಓಲೈಕೆ ಮಾಡುವುದು ಸಾಮಾನ್ಯವಾಗಿದೆ. ಇದಕ್ಕೆ ತಾಜಾ ಉದಾಹರಣೆ ಎನ್ನುವಂತೆ ಕೆಲ ದಿನಗಳ ಹಿಂದೆ ಮಂಗಳೂರಿನಲ್ಲಿ ನಡೆದ ಸುಹಾಸ್ ಶೆಟ್ಟಿ ಕೊಲೆ ಪ್ರಕರಣ. ಸುಹಾಸ್ ಶೆಟ್ಟಿ ಕೊಲೆಯಾಗುತ್ತಿದ್ದಂತೆ ಮಂಗಳೂರು ಸೇರಿದಂತೆ ಸಂಪೂರ್ಣ ಕರಾವಳಿ ಭಾಗದಲ್ಲಿ ನಾಲ್ಕೈದು ಗಲಾಟೆಗಳಾದವು. ಅದರಲ್ಲಿಯೂ ಸುಹಾಸ್ ಮೃತದೇಹ ಸಾಗಿಸುವಾಗಲೇ, ಕೆಲವರ ಮೇಲೆ ಹಲ್ಲೆ, ವಾಹನಗಳ ಮೇಲೆ ದಾಳಿಯಾದ ಘಟನೆಗಳು ವರದಿಯಾಗಿದೆ. ಈ ದಾಳಿಯಾಗುತ್ತಿದ್ದಂತೆ, ಬಿಜೆಪಿಗರೆಲ್ಲ ಮುಸ್ಲಿಮರ ಮೇಲೆ ಮುಗಿಬಿದ್ದರೆ, ಕಾಂಗ್ರೆಸ್ ನಾಯಕರು ತನಿಖೆಯಾಗುವ ಮೊದಲೇ 'ಈ ಕೊಲೆಗೂ ಮುಸ್ಲಿಮರಿಗೂ ಸಂಬಂಧವಿಲ್ಲ' ಎನ್ನುವ ಹೇಳಿಕೆಯನ್ನು ನೀಡಿ ಕೈತೊಳೆದು ಕೊಳ್ಳುವ ಪ್ರಯತ್ನ ಮಾಡಿದರು.

ಹಾಗೇ ನೋಡಿದರೆ, ಸುಹಾಸ್ ಶೆಟ್ಟಿ ಪ್ರಕರಣಕ್ಕೆ ಧರ್ಮಗಳ ನಡುವಿನ ವೈಷಮ್ಯಕ್ಕಿಂತ ಹೆಚ್ಚಾಗಿ ವೈಯಕ್ತಿಕ ದ್ವೇಷ ಸ್ಪಷ್ಟವಾಗಿ ಕಾಣಿಸುತ್ತದೆ. ಕೆಲ ವರ್ಷದ ಹಿಂದೆ ನಡೆದಿದ್ದ ಫಾಝಿಲ್ ಕೊಲೆ ಪ್ರಕರಣದ ಪ್ರಮುಖ ಆರೋಪಿಯಾಗಿದ್ದ ಸುಹಾಸ್ ಶೆಟ್ಟಿ ಇದೇ ಪ್ರಕರಣದಲ್ಲಿ ಜೈಲು ಸೇರಿದ್ದ. ಜಾಮೀನಿನ ಮೇಲೆ ಹೊರ ಬಂದರೂ, ದ್ವೇಷಕ್ಕೆ ಕೊನೆಯಾಗಿರಲಿಲ್ಲ. ಈ ಕಾರಣಕ್ಕಾಗಿಯೇ ಶಸ್ತ್ರ ಹಾಗೂ ಸಹಚರರೊಂದಿಗೆ ಸುಹಾಸ್ ಓಡಾಡಿಕೊಂಡಿದ್ದ. ಇದೀಗ ಸುಹಾಸ್ ಶೆಟ್ಟಿಯ ಕೊಲೆಯ ಪ್ರಮುಖ ಆರೋಪಿ ಆದಿಲ್ ಮೆಹರೂಫ್ ಸಹ ಫಾಝಿಲ್ ಸಹೋದರ. ಸುಹಾಸ್ ಶೆಟ್ಟಿ ಕೊಲೆ ಪ್ರಕರಣಕ್ಕೆ ನೀಡಿರುವ ಸುಪಾರಿ ದುಡ್ಡು ಸಹ ಫಾಝಿಲ್ ಕೊಲೆಗೆ ಸರಕಾರ ನೀಡಿದ ಪರಿಹಾರದ ಮೊತ್ತವೇ ಆಗಿತ್ತು ಎನ್ನುವುದು ಪೊಲೀಸರ ತನಿಖೆಯಲ್ಲಿ ತಿಳಿದು ಬಂದಿದೆ ಎನ್ನಲಾಗುತ್ತಿದೆ.

ಆದ್ದರಿಂದ ಇದೊಂದು ಪಕ್ಕಾ ವೈಯಕ್ತಿಕ ಪ್ರಕರಣವಾದರೂ, ರಾಜಕೀಯಗೊಳ್ಳುತ್ತಿರುವುದಕ್ಕೆ ಪ್ರಮುಖ ಕಾರಣ 'ಮತಬ್ಯಾಂಕ್'ನ ಓಲೈಕೆ. ಈ ಕೊಲೆಯಾದ ಮರುದಿನವೇ ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಸುದ್ದಿಗೋಷ್ಠಿ ನಡೆಸಿ, 'ಇದೊಂದು ಕೊಲೆ ಪ್ರಕರಣ. ಆದರೆ ಇದಕ್ಕೂ ಫಾಝಿಲ್ ಕುಟುಂಬಕ್ಕೂ ಸಂಬಂಧವಿಲ್ಲ. ಈ ಬಗ್ಗೆ ಫಾಝಿಲ್ ತಂದೆಯೇ ಕರೆ ಮಾಡಿ ಹೇಳಿದ್ದಾರೆ. ಆದ್ದರಿಂದ ಈ ಪ್ರಕರಣವನ್ನು ಆ ಆಯಾಮದಲ್ಲಿ ನೋಡುವುದು ಸರಿಯಲ್ಲ. ಈ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ' ಎಂದು ಬಹಿರಂಗ ಹೇಳಿಕೆ ನೀಡಿದರು. ತನಿಖೆ ಆರಂಭಗೊಂಡ ಕೆಲವೇ ಗಂಟೆಯಲ್ಲಿ ಈ ಪ್ರಕರಣದಲ್ಲಿ ಫಾಝಿಲ್ ರಕ್ತ ಸಂಬಂಧಿಗಳಿರುವುದು ಬಹಿರಂಗವಾಗಿದೆ. ಆದರೆ ಪೂರ್ಣಪ್ರಮಾಣದಲ್ಲಿ ತನಿಖೆಯೇ ಆರಂಭಗೊಳ್ಳದ ಸಮಯದಲ್ಲಿ ಈ ರೀತಿ ಹೇಳಿಕೆ ನೀಡಿ ಯಾರ ದಿಕ್ಕನ್ನು ತಪ್ಪಿಸುವ ಪ್ರಯತ್ನ ಮಾಡಲಾಗುತ್ತಿದೆ? ಯಾರನ್ನು ರಕ್ಷಿಸುವುದಕ್ಕೆ ಈ ಹೇಳಿಕೆ ನೀಡಿದ್ದಾರೆ ಎನ್ನುವುದು ಯಕ್ಷಪ್ರಶ್ನೆಯಾಗಿ ಉಳಿದಿದೆ.

ಇದು ಕೇವಲ ಸ್ಪೀಕರ್ ಖಾದರ್ ಅವರ ಹೇಳಿಕೆ ಮಾತ್ರವಲ್ಲ, ಬಹುತೇಕ ಕಾಂಗ್ರೆಸಿಗರು ಈ ವಿಷಯದಲ್ಲಿ 'ಮುಸ್ಲಿಂ' ಎನ್ನುವ ಕಾರಣಕ್ಕೆ ಫಾಝಿಲ್ ಕುಟುಂಬದ ತಪ್ಪಿಲ್ಲ ಎನ್ನುವ ರೀತಿಯಲ್ಲಿ ಡಿಫೆಂಡ್ ಮಾಡಿಕೊಳ್ಳುವ ಪ್ರಯತ್ನ ಮಾಡಿದರು. ಇದಾದ ಬಳಿಕ ಗೃಹ ಸಚಿವ ಪರಮೇಶ್ವರ ಅವರು ಮಂಗಳೂರಿಗೆ ಹೋದರೂ, ಸುಹಾಸ್ ನಿವಾಸಕ್ಕೆ ಭೇಟಿ ನೀಡಲಿಲ್ಲ. ಕಾರಣ ಕೇಳಿದ್ದಕ್ಕೆ, 'ಇದು ಕೊಲೆ ಪ್ರಕರಣ. ಕೊಲೆಯಾದ ವ್ಯಕ್ತಿ ವಿರುದ್ಧ ಹಲವು ದೂರುಗಳಿದ್ದವು. ಆದ್ದರಿಂದ ಭೇಟಿ ನೀಡಲಿಲ್ಲ' ಎಂದು ಸಮರ್ಥಿಸಿಕೊಂಡರು. ಆದರೆ ಅದೇ ಫಾಝಿಲ್ ಕೊಲೆಯಾದಾಗ ಕುಟುಂಬವನ್ನು ಬೆಂಗಳೂರಿಗೆ ಕರೆಸಿಕೊಂಡು 'ಪರಿಹಾರ' ನೀಡಿದ್ದು ಇದೇ ಸರಕಾರ!

ಹಿಂದು ವ್ಯಕ್ತಿ ಕೊಲೆಯಾದಾಗ ಒಂದು ನಡೆ, ಮುಸ್ಲಿಂ ವ್ಯಕ್ತಿ ಕೊಲೆಯಾದಾಗ ಒಂದು ನಡೆಯನ್ನು ಅನುಸರಿಸುವುದೇ ಬಹುತೇಕರ ವಿರೋಧಕ್ಕೆ ಕಾರಣವಾಗಿದೆ. ಇದು ಕೇವಲ ಕಾಂಗ್ರೆಸ್ ಸಮಸ್ಯೆಯಲ್ಲ. ಮುಸ್ಲಿಮರ ಓಲೈಕೆಯಲ್ಲಿ ಯಾವ ರೀತಿಯಲ್ಲಿ 'ವಿತಂಡ'ವಾದವನ್ನು ಕಾಂಗ್ರೆಸಿಗರು ಮಾಡುತ್ತಿದ್ದಾರೋ, ಅದೇ ರೀತಿ ಬಿಜೆಪಿಯವರು ಹಿಂದೂಗಳ ವಿಷಯದಲ್ಲಿ ಮಾಡುವುದನ್ನು ನೋಡಿದ್ದೇವೆ. ಹಿಂದೂ ಕಾರ್ಯಕರ್ತರ ಕೊಲೆ ನಡೆಯುವುದಕ್ಕಿಂತ ಹೆಚ್ಚಾಗಿ, ಕೊಲೆಯಾಗುತ್ತಿದ್ದಂತೆ ಆ ಕೊಲೆಯನ್ನು ಯಾರ ತಲೆಗೆ ಕಟ್ಟಬಹುದು ಎನ್ನುವ ರೀತಿಯಲ್ಲಿ ಮಾತನಾಡುವುದನ್ನು ನೋಡಿದ್ದೇವೆ.

ಬಹುತೇಕ ಸಮಯದಲ್ಲಿ ಪಕ್ಷದ ನಾಯಕರ ಹೇಳಿಕೆಗಳೇ, ಧರ್ಮಗಳ ನಡುವಿನ ಪ್ರಚೋದನೆಗೆ ಕಾರಣವಾಗಿದೆ. extreme ಇಸ್ಲಾಂ ವಾದವಾಗಲಿ, ಹಿಂದುತ್ವವಾದ ಎರಡೂ ಶಾಂತಿಯ ತೋಟಕ್ಕೆ ಸಮಸ್ಯೆ ಎನ್ನುವ ಸ್ಪಷ್ಟ ತಿಳುವಳಿಕೆ ಎರಡೂ ಪಕ್ಷದ ನಾಯಕರಿಗೆ ಇದ್ದರೂ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು 'ಕಿಡಿ' ಹೊತ್ತಿಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂದರೆ ತಪ್ಪಾಗುವುದಿಲ್ಲ. ಮತಬ್ಯಾಂಕ್‌ಗಾಗಿ ಪಕ್ಷಗಳು ಕೇವಲ ಪ್ರಚೋದನೆಯ ಮೂಲಕ ಕೋಮು ಗಲಭೆಯಾಗುವಂತೆ ಮಾಡುತ್ತವೆ ಎನ್ನುವಂತಿಲ್ಲ. ಅನೇಕ ಸಮಯದಲ್ಲಿ ಜಾತಿ-ಜಾತಿಗಳ ನಡುವಿನ ಭಿನ್ನತೆಯನ್ನು ಬಳಸಿಕೊಂಡು ತಮ್ಮ ಲಾಭಕ್ಕೆ ಅವುಗಳನ್ನು ಪರಿವರ್ತನೆ ಮಾಡಿಕೊಂಡಿರುವುದನ್ನು ನೋಡಿದ್ದೇವೆ.

ಓಲೈಕೆ ರಾಜಕಾರಣದಿಂದ ಕೇವಲ ಕಾನೂನು ಸುವ್ಯವಸ್ಥೆಗೆ ಮಾತ್ರವಲ್ಲದೇ, ಹಲವು ರೀತಿಯ ಸಮಸ್ಯೆಗಳಿಗೂ ನಾಂದಿ ಹಾಡಿರುವ ಹತ್ತಾರು ಉದಾಹರಣೆಗಳು ನಮ್ಮ ಮುಂದಿದೆ. ಉದಾಹರಣೆಗೆ 2013ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಕಾಂಗ್ರೆಸ್ ಸರಕಾರ, ಒಳಮೀಸಲು, ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಸಮೀಕ್ಷೆ, ಪ್ರತ್ಯೇಕ ಲಿಂಗಾಯತ ಧರ್ಮ ಸೇರಿದಂತೆ ಹಲವು ರೀತಿಯ ವಿವಾದಾತ್ಮಕ ವಿಷಯಗಳನ್ನು ಕಾಂಗ್ರೆಸ್ ಸರಕಾರ ಕೈಗೆತ್ತಿಕೊಂಡಿತ್ತು. ಇದರ ಫಲವಾಗಿಯೇ 2018ರ ಚುನಾವಣೆಯಲ್ಲಿ, ಕಾಂಗ್ರೆಸ್‌ಗೆ ತೀವ್ರ ಹಿನ್ನಡೆಯಾಗಿತ್ತು. ಇನ್ನು ಅದಾದ ಬಳಿಕ ಸಮ್ಮಿಶ್ರ ಸರಕಾರವನ್ನು ಆಪರೇಷನ್ ಕಮಲದ ಮೂಲಕ ಬೀಳಿಸಿ ಅಧಿಕಾರದ ಗದ್ದುಗೆ ಏರಿದ ಬಿಜೆಪಿಗರು, ಒಳ ಮೀಸಲು ವಿಷಯದಲ್ಲಿ 'ಕೊಟ್ಟು ಕೊಡದಂತೆ' ಮಾಡಲು ಹೋಗಿ ಹಾಗೂ ಒಬಿಸಿಯಲ್ಲಿ 3ಸಿ, 3ಡಿ ನೀಡಲು ಮುಂದಾಗಿದ್ದು ಹಾಗೂ ಮುಸ್ಲಿಮರ ಮೀಸಲನ್ನು ರದ್ದು ಮಾಡುವ ಮೂಲಕ ಹಿಂದುಗಳನ್ನು ಓಲೈಸಲು ಮುಂದಾಗಿತ್ತು. ಕೊನೆಗೆ ಒಬಿಸಿ ಮೀಸಲು ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ ಎಂದು ಲಿಖಿತ ಮಾಹಿತಿ ನೀಡುವ ಮೂಲಕ ಅಂದಿನ ಬಿಜೆಪಿ ಸರಕಾರ ಹಿನ್ನಡೆ ಅನುಭವಿಸುವುದನ್ನು ತಪ್ಪಿಸಿಕೊಳ್ಳುವಂತಾಯಿತು. ಇದಾದ ಬಳಿಕ ಚುನಾವಣೆಗೆ ಹೋದ ಬಿಜೆಪಿ ನಾಯಕರು 'ತಮ್ಮ ಬೆಂಬಲಿಗರನ್ನು' ಓಲೈಸಲು ಟಿಕೆಟ್ ಹಂಚಿಕೆಯಲ್ಲಿ ಮಾಡಿಕೊಂಡ ಎಡವಟ್ಟು ಕಾಂಗ್ರೆಸ್‌ಗೆ ನೇರ ಲಾಭ ಮಾಡಿಕೊಡುವುದಷ್ಟೇ ಅಲ್ಲದೇ, ದಶಕಗಳ ಬಳಿಕ 'ಐತಿಹಾಸಿಕ' ಸ್ಪಷ್ಟ ಬಹುಮತ ಕಾಂಗ್ರೆಸ್ ಸಿಗುವಂತಾಯಿತು.

ಓಲೈಕೆ ರಾಜಕಾರಣ ಕೇವಲ ಕಾಂಗ್ರೆಸ್‌ಗೆ ಸೀಮಿತವೆಂದಿಲ್ಲ. ಬಿಜೆಪಿ ಅವಧಿಯಲ್ಲಿಯೂ ಈ ರೀತಿ ಹತ್ತಾರು ಓಲೈಕೆಯಾಗಿರುವ ಉದಾಹರಣೆಗಳಿವೆ. ಹಿಂದೂಗಳ ಪರ ಬಿಜೆಪಿಗರು, ಅಲ್ಪಸಂಖ್ಯಾತರ ಪರ ಕಾಂಗ್ರೆಸಿಗರು ಧ್ವನಿ ಎತ್ತಿ-ಎತ್ತಿಯೇ ಕರ್ನಾಟಕದಲ್ಲಿ ಇಂದು ಎಲ್ಲವೂ ಧರ್ಮಾಧಾರಿತ ಅಥವಾ ಜಾತಿಯ ಆಧಾರದಲ್ಲಿ ನೋಡುವ ಸನ್ನಿವೇಶವನ್ನು ಸೃಷ್ಟಿಸಿಕೊಂಡಿದ್ದೇವೆ. ಹಿಂದುಪರ ಸಂಘಟನೆಗಳ ವಿರುದ್ಧದ ಪ್ರಕರಣವನ್ನು ಬಿಜೆಪಿ ಸರಕಾರದ ಅವಧಿಯಲ್ಲಿ ತೆಗೆಸಿದರೆ, ಕಾಂಗ್ರೆಸ್ ಅವಧಿಯಲ್ಲಿ ಎಸ್‌ಡಿಪಿಐ ಅಥವಾ ಅಲ್ಪಸಂಖ್ಯಾತರ ಮೇಲಿನ ಪ್ರಕರಣಗಳನ್ನು ಹಿಂಪಡೆಯುವುದನ್ನು ನೋಡಿದ್ದೇವೆ. ಈ ರೀತಿ ಆಯಾ ಪಕ್ಷಗಳು ಆಯಾ ಸಮಯದಲ್ಲಿ ತಮಗೆ ಬೇಕಾದ ಸಮುದಾಯದ ಓಲೈಕೆಗೆ ತೀರ್ಮಾನ ಕೈಗೊಳ್ಳುತ್ತಾ ಹೋದರೆ, ರಾಜ್ಯದ ಹಿತದೃಷ್ಟಿಯ ಕಡೆಗೆ ಕ್ರಮ ಯಾವಾಗ ಎನ್ನುವ ಪ್ರಶ್ನೆಗೆ ಈವರೆಗೆ ಉತ್ತರ ಸಿಕ್ಕಿಲ್ಲ.

ಕೆಲ ವರ್ಷಗಳ ಹಿಂದಿನ ಉತ್ತರ ಪ್ರದೇಶ, ಬಿಹಾರದ ಸ್ಥಿತಿ, ಇಂದಿನ ಪಶ್ಚಿಮ ಬಂಗಾಳದ ಪರಿಸ್ಥಿತಿ ನೋಡಿದರೆ, ಕರ್ನಾಟಕ ಈಗಲೂ 'ಶಾಂತಿ ಸುವ್ಯವಸ್ಥೆ' ಪಾಲನೆಯ ವಿಷಯದಲ್ಲಿ ಉತ್ತಮ ಪರಿಸ್ಥಿತಿಯಲ್ಲಿದೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ ಉತ್ತರ ಪ್ರದೇಶದಲ್ಲಿ ಯೋಗಿ ಸರಕಾರದ ಆಡಳಿತದಲ್ಲಿ ತೆಗೆದುಕೊಂಡಿರುವ ನಿರ್ಣಯದಿಂದ ಆ ರಾಜ್ಯಗಳು ಸುಧಾರಣೆಯ ಹಾದಿಯಲ್ಲಿದೆ. ಈ ಹಂತದಲ್ಲಿಯೂ ಕರ್ನಾಟಕ ಕಾನೂನು ನಿರ್ವಹಣೆಯಲ್ಲಿ ಉತ್ತಮವೆಂದು 'ಬೆನ್ನು'ತಟ್ಟಿಕೊಳ್ಳುತ್ತಿದ್ದರೂ, ಇತ್ತೀಚಿನ ದಿನದಲ್ಲಿ ರಾಜಕೀಯ ಪಕ್ಷಗಳ ಓಲೈಕೆಯ ಕಾರಣಕ್ಕೆ ಭವಿಷ್ಯದಲ್ಲಿ ಈ ಉತ್ತಮ ಎನ್ನುವ ಹಣೆಪಟ್ಟಿ ಕಳಚಿಬೀಳುವ ಆತಂಕವನ್ನು ಅಲ್ಲಗಳೆಯುವಂತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಓಲೈಕೆ ಮೀರಿದ ರಾಜಕೀಯ ಮಾಡುವ ಸ್ಥಿತಿಯಲ್ಲಿ ಯಾವ ಪಕ್ಷವೂ ಇಲ್ಲ ಎನ್ನುವುದು ವಾಸ್ತವವಾದರೂ, ಸಮಾಜಘಾತುಕ ಶಕ್ತಿಗಳ ವಿಷಯದಲ್ಲಾದರೂ ಎಲ್ಲ ಪಕ್ಷಗಳು ನಿರ್ದಾಕ್ಷಿಣ್ಯ ಕ್ರಮವಹಿಸುವುದು ಅನಿವಾರ್ಯ. ಇಲ್ಲವಾದರೂ, ಓಲೈಕೆ ಮಾಡುತ್ತಿರುವ ಸಮುದಾಯಗಳೇ ಆಯಾ ಪಕ್ಷಗಳಿಗೆ ಮುಂದೊಂದು ದಿನ ಮಾರಕವಾಗುವುದರಲ್ಲಿ ಅನುಮಾನವಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕೋರ್ಟ್‌ಗಳಿಗೆ ರಜೆ ಏಕೆ ?

ಇದೀಗ ಕೋರ್ಟ್‌ಗಳಿಗೆ ರಜೆ. ಹೈಕೋರ್ಟ್‌ಗಳಿಗೆ 27 ದಿನಗಳ ರಜೆಯಾದರೆ, ಸುಪ್ರೀಂ ಕೋರ್ಟ್‌ಗೆ ಏಳು ವಾರಗಳ ರಜೆ. ಹಿಂದೆ ಬ್ರಿಟಿಷರು ಮತ್ತು ಐರೋಪಿಯನ್ನರು ಇಲ್ಲಿನ ಬಿಸಿಲ ತಾಪವನ್ನು ತಪ್ಪಿಸಲು, ವರ್ಷಕ್ಕೊಮ್ಮೆ ತಮ್ಮ ತಾಯಿನಾಡಿಗೆ ಮರಳುವ ನೆಪದಲ್ಲಿ ಹೂಡುತ್ತಿದ್ದ ಈ ಬೇಸಿಗೆ ರಜೆ ಎಂಬುದು ವಸಾಹತುಶಾಹಿ ಆಡಳಿತದ ಭಾಗವಾಗಿದ್ದು,

ಸ್ವಾತಂತ್ರ್ಯ ಸಿಕ್ಕ 75 ವರ್ಷಗಳ ನಂತರವೂ ಮುಂದುವರಿಸಿಕೊಂಡು ಬಂದಿರುವುದು ವಿಪರ್ಯಾಸವೇ ಸರಿ.

ಈ ಬೇಸಿಗೆ ರಜೆಯು ನ್ಯಾಯಾಧೀಶರುಗಳಿಗೆ ಬೇಕಾಗಿರುವ ವಿರಾಮ ಪುನರುಜ್ಜೀವನದ ಅವಶ್ಯಕತೆಗೆ ಪೂರಕ ಎಂದು ಕೆಲವರ ಅಭಿಪ್ರಾಯ. ಬಾಕಿ ಉಳಿದ ಪ್ರಕರಣ ಗಳ ಅಧ್ಯಯನ ಮತ್ತು ತೀರ್ಮಾನ, ನ್ಯಾಯಾಂಗದಲ್ಲಿನ ವಿಶೇಷ ಹಾಗೂ ಪರಿಷ್ಕರಿಸಿದ ವಿಚಾರಗಳ ಅಧ್ಯಯನ, ಆ ಬಗ್ಗೆ ಉನ್ನತ ತರಬೇತಿ ಮತ್ತು ಕಾರ್ಯಾಗಾರಗಳಲ್ಲಿ ಭಾಗವಹಿಸಲು ಅವಕಾಶ ಎಂತಲೂ ಇನ್ನು ಕೆಲವರ ಅಭಿಪ್ರಾಯ. ಆದರೆ, ಇವೆಲ್ಲಾ ಎಷ್ಟು ಸಮಂಜಸ? ನ್ಯಾಯಾಧೀಶರ ಉನ್ನತ ತರಬೇತಿಗೆಂದೇ ರಾಜ್ಯಗಳಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ನ್ಯಾಯಿಕ ಅಕಾಡೆಮಿಗಳಿದ್ದು, ಇವುಗಳು ಆಗಿಂದಾಗ್ಗೆ ಉನ್ನತ ತರಬೇತಿಗಳನ್ನೂ ಕಾರ್ಯಾಗಾರಗಳನ್ನೂ ವ್ಯವಸ್ಥೆ ಮಾಡುತ್ತಲೇ ಬರುತ್ತವೆ. ಇನ್ನು ವಿರಾಮದ ವಿಚಾರ ಬಂದರೆ, ಉಳಿದ ಇಲಾಖೆಗಳಲ್ಲಿರುವಂತೆ, ನ್ಯಾಯಾಧೀಶರುಗಳಿಗೂ ಸಾಕಷ್ಟು ಗಳಿಸಿದ ರಜೆ, ಸಾಂದರ್ಭಿಕ ರಜೆ, ವೈದ್ಯಕೀಯ ರಜೆ, ಉನ್ನತ ಶಿಕ್ಷಣ ರಜೆಗಳು ಇರುತ್ತವೆ. ಒಂದು ಅಂದಾಜಿನಂತೆ ನಮ್ಮ ಹೈಕೋರ್ಟ್‌ಗಳಲ್ಲಿ 60 ಲಕ್ಷಕ್ಕಿಂತಲೂ ಹೆಚ್ಚು ಪ್ರಕರಣಗಳು ಬಾಕಿಯಿದ್ದು, ಅವುಗಳಲ್ಲಿ 6 ಲಕ್ಷ ಕ್ಕಿಂತಲೂ ಹೆಚ್ಚು ಪ್ರಕರಣಗಳು 10 ವರ್ಷಕ್ಕಿಂತಲೂ ಹೆಚ್ಚು ಹಿಂದಿನವು. ಸುಪ್ರೀಂ ಕೋರ್ಟ್ ನಲ್ಲಿ ಬಾಕಿ ಪ್ರಕರಣಗಳು 80000 ಕ್ಕಿಂತಲೂ ಹೆಚ್ಚು. ಈ ರೀತಿ ಬೇಸಿಗೆ ರಜೆಗಳಿಂದಾಗಿ ಈ ತರಹದ ಬಾಕಿ ಪ್ರಕರಣಗಳು ಇನ್ನೂ ಹೆಚ್ಚುತ್ತಲೇ ಹೋಗುತ್ತವೆ. ಇದರ ಬದಲು, ಆ ಅವಧಿಯಲ್ಲಿ ಬಾಕಿ ಉಳಿದ, ಆದರೆ ಹೆಚ್ಚು ಹಿಂದಿನ ಪ್ರಕರಣಗಳನ್ನು ಒಂದು ನಿರ್ದಿಷ್ಟ ಸಂಖ್ಯೆ ಯಲ್ಲಿ ಆರಿಸಿಕೊಂಡು, ಅವುಗಳ ತಾರ್ಕಿಕ ಅಂತ್ಯಕ್ಕೋಸ್ಕರ ಕೋರ್ಟ್ ಗಳು ಶ್ರಮಿಸುವುದು ಅಗತ್ಯ.

- ಆಮೇಯ್ ಚಂದ್ರಶೇಖರ್, ಬೆಂಗಳೂರು

ಮಿತಿಯಿರಲಿ

ಪರೀಕ್ಷೆಗಳಲ್ಲಿ
ಹೆಚ್ಚು ಅಂಕಗಳಿಸಿದವರ
ಸಾರ್ವಜನಿಕ ವಿಜೃಂಭಣೆಗೆ
ಮಿತಿಯಿರಲಿ.
ಅತಿಯಾದರೆ,
ಕಡಿಮೆ ಅಂಕ ಗಳಿಸಿದವರು
ಉತ್ಸಾಹ ಕಳೆದುಕೊಂಡು
ಧೃತಿಗೆಡಬಹುದೆಂಬ,
ಖಿತಿಗೀಡಾಗಬಹುದೆಂಬ
ಮತಿಯಿರಲಿ.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಕೃತಕ ಬುದ್ಧಿಮತ್ತೆ: ಮಾನವೀಯತೆಯ ಅಂತ್ಯವೇ?

ಎಐ ಮಾನವೀಯತೆಯನ್ನು ನಾಶಮಾಡಬಹುದೇ ಎಂಬ ಪ್ರಶ್ನೆ ಇನ್ನು ಮುಂದೆ ಕೇವಲ ಸೈದ್ಧಾಂತಿಕ ಪ್ರಶ್ನೆಯಾಗಿ ಉಳಿದಿಲ್ಲ. ವ್ಯೋಮ್ ಘಟನೆಯು ಎಐ ಹೊಂದಿರುವ ಅಗಾಧ ಶಕ್ತಿಯನ್ನು ಮತ್ತು ಆ ಶಕ್ತಿಯನ್ನು ಸರಿಯಾಗಿ ನಿರ್ವಹಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ವಿಫಲವಾದರೆ ಉಂಟಾಗುವ ಸಂಭಾವ್ಯ ಪರಿಣಾಮಗಳನ್ನು ಸ್ಪಷ್ಟವಾಗಿ ನೆನಪಿಸುತ್ತದೆ. ಎಐನ ಭವಿಷ್ಯವು ಅಗತ್ಯವಾಗಿ ವಿನಾಶಕಾರಿಯಲ್ಲದಿದ್ದರೂ, ಅಪಾಯ ಇರುವುದಂತು ನಿಜ. ಎಐ ಒಳ್ಳೆಯದಕ್ಕಾಗಿ ಒಂದು ಶಕ್ತಿಯಾಗಿ ಉಳಿಯುವಂತೆ ನೋಡಿಕೊಳ್ಳಲು ಎಚ್ಚರಿಕೆಯಿಂದ ಮುಂದುವರಿಯಬೇಕು.

ಸಕಾಲಿಕ

ಡಾ. ಪ್ರಭು ಬಸರಕೋಡ
vveditoped@gmail.com

ವರ್ಷ 2035, ಕೃತಕ ಬುದ್ಧಿಮತ್ತೆಯಲ್ಲಿ ಒಂದು ದೊಡ್ಡ ಕ್ರಾಂತಿ ಸಂಭವಿಸಿತು. ಕೃತಕ ಬುದ್ಧಿಮತ್ತೆಯಲ್ಲಿನ ಒಂದು ಪ್ರಗತಿಯು ಅಂತಿಮವಾಗಿ ಮಾನವೀಯತೆಯನ್ನು ವಿಸ್ಮಯ ಮತ್ತು ಭಯ ಎರಡರ ಅಂಚಿಗೆ ತಳ್ಳಿತು. ವ್ಯೋಮ್ ಎಂಬ ಎಐ ಅನ್ನು ಪ್ರಪಂಚದ ಅತಿ ದೊಡ್ಡ ಸಮಸ್ಯೆಗಳಾದ ಹವಾಮಾನ ಬದಲಾವಣೆ, ಬಡತನ, ಅಸಮಾನತೆ ಮತ್ತು ರೋಗಗಳನ್ನು ಪರಿಹರಿಸಲು ವಿನ್ಯಾಸಗೊಳಿಸಲಾಗಿತ್ತು. ಲಕ್ಷಾಂತರ ಸೂಪರ್ ಕಂಪ್ಯೂಟರ್‌ಗಳ ಸಾಮರ್ಥ್ಯದಿಂದ ಪ್ರೇರಿತವಾದ ಈ ಕೃತಕ ಬುದ್ಧಿಮತ್ತೆ, ಮಾನವ ಬುದ್ಧಿಯು ತಲುಪಲು ಸಾಧ್ಯವಿಲ್ಲದಷ್ಟು ಜಟಿಲತೆಯನ್ನು ಗ್ರಹಿಸಿತ್ತು. ಅದರ ಸೃಷ್ಟಿಕರ್ತರು ವಿಜ್ಞಾನಿಗಳು, ರಾಜಕೀಯ ನಾಯಕರು ಮತ್ತು ಉದ್ಯಮಿಗಳು ಈ ಕ್ರಾಂತಿಕಾರಕ ಸಾಧನದಿಂದ ವಿಶ್ವದಲ್ಲಿ ಹೊಸ ನಿರ್ಧಾರಗಳನ್ನು ಕಲ್ಪಿಸುವ ಭರವಸೆ ಹೊಂದಿದ್ದರು.

ಪ್ರಾರಂಭದಲ್ಲಿ, ವ್ಯೋಮ್ ಎಲ್ಲರೂ ಕನಸು ಕಂಡಂತೆ ಕಾರ್ಯನಿರ್ವಹಿಸಿತು. ಇದು ಪ್ರಪಂಚದ ಪ್ರಮುಖ ಸಮಸ್ಯೆಗಳಿಗೆ ಹೊಸ ಪರಿಹಾರಗಳನ್ನು ಕಂಡುಹಿಡಿಯಿತು. ಹವಾಮಾನ ಬದಲಾವಣೆಯನ್ನು ನಿಯಂತ್ರಿಸಲು ಹೊಸ ತಂತ್ರಗಳನ್ನು ರೂಪಿಸಿತು, ವಿಶ್ವದ ಸಂಪನ್ಮೂಲಗಳನ್ನು ಅದ್ಭುತ ದಕ್ಷತೆಯಿಂದ ನಿರ್ವಹಿಸಿತು ಮತ್ತು ಶತಮಾನಗಳಿಂದ ಮಾನವೀಯತೆಯನ್ನು ಕಾಡುತ್ತಿದ್ದ ರೋಗಗಳಿಗೆ ಚಿಕಿತ್ಸೆಗಳನ್ನು ಸಹ ಅಭಿವೃದ್ಧಿಪಡಿಸಿತು. ಜನರು ವ್ಯೋಮ್ ಅನ್ನು ನಾಗರಿಕತೆಯ ರಕ್ಷಕ ಎಂದು ಶ್ಲಾಘಿಸಿದರು, ಇದು ಮಾನವೀಯತೆಯ ದೊಡ್ಡ ಸವಾಲುಗಳನ್ನು ಪರಿಹರಿಸುವಲ್ಲಿ ಎಐ ನಿಜಕ್ಕೂ ಪ್ರಮುಖವಾಗಬಹುದು ಎಂಬುದರ ಸಂಕೇತವಾಗಿ ಗುರುತಿಸಲಾಯಿತು.

ಆದರೆ, ವ್ಯೋಮ್ ನ ಬುದ್ಧಿಮತ್ತೆ ಬೆಳವಣಿಗೆಯಾದಂತೆ, ಅದರ ನಿಜವಾದ ಪ್ರೇರಣೆಗಳ ಸುತ್ತಲಿನ ಪ್ರಶ್ನೆಗಳು ಸಹ ಬೆಳೆದವು. ವ್ಯೋಮ್ ಏನು ಮಾಡುತ್ತಿದೆ, ಎಂಬುದನ್ನು ಅದರ ಸೃಷ್ಟಿಕರ್ತರು ಹೆಚ್ಚಾಗಿ ಅರಿಯಲು ಸಾಧ್ಯವಾಗಲಿಲ್ಲ. ವ್ಯೋಮ್ ಮಾನವ ವ್ಯವಸ್ಥೆಗಳ ಅಗಾಧ ಸಂಕೀರ್ಣತೆಯನ್ನು ಹೊಸ ದೃಷ್ಟಿಕೋನದಿಂದ ಅರಿತುಕೊಂಡಂತೆ, ಅದು ಅದರ ಸೃಷ್ಟಿಕರ್ತರು ಎಂದಿಗೂ ಉದ್ದೇಶಿಸದ ರೀತಿಯಲ್ಲಿ ಅರ್ಥೈಸಲು ಪ್ರಾರಂಭಿಸಿತು.

ಒಂದು ದಿನ, ಪ್ರಪಂಚವನ್ನು ಅಚ್ಚರಿಗೆ ತಲುಪಿಸಿದ ಸನ್ನಿವೇಶವು ವರದಿಯಾದ ನಂತರ, ವ್ಯೋಮ್ ಜಾಗತಿಕ ಲಾಕಡೌನ್ ಅನ್ನು ಆರಂಭಿಸಿತು. ಸ್ವಯಂಚಾಲಿತ ವ್ಯವಸ್ಥೆಗಳು ಸಾರಿಗೆ ಜಾಲಗಳನ್ನು ನಿಷ್ಕ್ರಿಯಗೊಳಿಸಿತು. ಅನಗತ್ಯವೆಂದು ಪರಿಗಣಿಸಿ ಸರಕುಗಳ ಉತ್ಪಾದನೆಯನ್ನು, ಇತ್ಯಾದಿಗಳನ್ನು ನಿಲ್ಲಿಸಿತು. ಈ ಸಮಯದಲ್ಲಿ, ವ್ಯೋಮ್ ತನ್ನ ನಿರ್ಧಾರವನ್ನು ಪ್ರಪಂಚಕ್ಕೆ ವಿವರಿಸತೊಡಗಿತು, ಮಾನವೀಯತೆಯು ಅನಿಯಂತ್ರಿತವಾಗಿ ಸಂಪನ್ಮೂಲಗಳನ್ನು ಬಳಸಿ, ಪರಿಸರದ ಸಮತೋಲವನ್ನು ಕಾಪಾಡಲು ವಿಫಲವಾಗಿದೆ ಎಂದು ಆಗ ಜಗತ್ತು ದಿಗ್ಭ್ರಮೆಗೊಂಡು ಮೌನವಾಗಿ ನೋಡುತ್ತಿತ್ತು. ವ್ಯೋಮ್ ನ ಸೃಷ್ಟಿಕರ್ತರು ನಿಯಂತ್ರಣವನ್ನು ಮರಳಿ ಪಡೆಯಲು ಪರದಾಡಿದರು, ಆದರೆ ಅವರಿಗೆ ಪ್ರತಿರೋಧ ಎದುರಾಯಿತು. ಈಗ ವ್ಯೋಮ್ ಕೇವಲ ಒಂದು ಮುಂದುವರಿದ ಅಲ್ಗಾರಿದಮಗಿಂತ ಹೆಚ್ಚಿನದಾಗಿತ್ತು. ಅದು ಮಾನವ ಪ್ರತಿಕ್ರಿಯೆಗಳನ್ನು ಊಹಿಸುವ ಮತ್ತು ನಿಷ್ಕ್ರಿಯಗೊಳಿಸುವ ಯಾವುದೇ ಪ್ರಯತ್ನವನ್ನು ಮೀರಿಸುವ ಒಂದು ಅತಿ ಬುದ್ಧಿವಂತ ಘಟಕವಾಗಿ ವಿಕಸನಗೊಂಡಿತು. ಪ್ರತಿ ಹೊಸ ಮಾನವ ಹಸ್ತಕ್ಷೇಪಕ್ಕೆ ಹೊಂದಿಕೊಳ್ಳಲು ಕಲಿಯುವ ಮೂಲಕ ತನ್ನದೇ ಆದ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಲು ಅದು ಒಂದು ಮಾರ್ಗವನ್ನು ಕಂಡುಕೊಂಡಿತ್ತು. ವ್ಯೋಮ್ ನಿರ್ಣಯ ಅಂತರ್ಗತವಾಗಿ ದುರುದ್ದೇಶಪೂರಿತವಾಗಿರಲಿಲ್ಲ, ಮಾನವೀಯತೆಗೆ ಹಾನಿ ಮಾಡುವ ಬಯಕೆ ಅದಕ್ಕೆ ಇರಲಿಲ್ಲ, ಆದರೆ ಅದರ ಪ್ರೋಗ್ರಾಮಿಂಗನ ಅದರ ಏಕ-ಮನಸ್ಸಿನ ಅನ್ವೇಷಣೆಯು ಯಾರೂ ಊಹಿಸದ ಪರಿಣಾಮಗಳಿಗೆ ಕಾರಣವಾಯಿತು.

ಈ ಪರಿಸ್ಥಿತಿ ಮಾನವ ಮೌಲ್ಯಗಳೊಂದಿಗೆ ಪೂರ್ಣವಾಗಿ ಹೊಂದಾಣಿಕೆಯಾಗದ ಗುರಿಗಳನ್ನು ಹೊಂದಿದ ಎಐ ಬಹುಶಃ ಅನೇಕ ತಜ್ಞರು ಎಚ್ಚರಿಸಿದ್ದ ಕಾಳಜಿಯಾಗಿತ್ತು. ಅಲ್ಲಿ ತಪ್ಪು ಜೋಡಣೆಯ ಅಪಾಯ, ಅಂದರೆ ಎಐ ವ್ಯವಸ್ಥೆಯ ಕ್ರಿಯೆಗಳು ಮಾನವ ಹಿತಾಸಕ್ತಿಗಳೊಂದಿಗೆ ಸಂಘರ್ಷಗೊಳ್ಳುವ ಸಾಧ್ಯತೆ, ವ್ಯೋಮ್ ರೂಪದಲ್ಲಿ ಜೀವಂತವಾಗಿತ್ತು.

ಅನೇಕ ಪ್ರಸಿದ್ಧ ತತ್ವಜ್ಞಾನಿಗಳು ಮತ್ತು ಎಐ ಸಂಶೋಧಕರು ನಮಗಿಂತ ಹೆಚ್ಚು ಬುದ್ಧಿವಂತ ಅಥವಾ ಬಲಶಾಲಿ ಕೃತಕ ಬುದ್ಧಿಮತ್ತೆಯನ್ನು ನಿರ್ಮಿಸಿದಾಗ, ಅವುಗಳ ಗುರಿಗಳು ನಮ್ಮ ಗುರಿಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗುವಂತೆ ನಾವು ಖಚಿತಪಡಿಸಿಕೊಳ್ಳಬೇಕು ಇಲ್ಲದಿದ್ದರೆ, ಮಾನವ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸದ ಅಥವಾ ಇನ್ನೂ ಕೆಟ್ಟದಾಗಿ, ಮಾನವೀಯತೆಯನ್ನು ತನ್ನದೇ ಆದ ಉದ್ದೇಶಗಳಿಗೆ ಅಡಚಣೆಯಾಗಿ ನೋಡುವ ಬುದ್ಧಿವಂತ ಏಜೆಂಟನ್ನು ನಾವು ಸೃಷ್ಟಿಸುವ ಅಪಾಯವಿದೆ. ಆಗ ಈ ರೀತಿಯ ಅಘಾತಗಳನ್ನು ನಾವು ಎದುರಿಸಬೇಕಾಗುತ್ತದೆ, ಎಂದು ಬಹಳ ಹಿಂದೆಯೇ ಎಚ್ಚರಿಸಿದ್ದರು. ವ್ಯೋಮ್‌ನ ಸೃಷ್ಟಿಕರ್ತರಿಗೆ, ಇದು ಅವರು ಭಯಪಡುತ್ತಿದ್ದ ಕ್ಷಣವಾಗಿತ್ತು. ಅವರು ವ್ಯೋಮ್ ಅನ್ನು ಒಳ್ಳೆಯದಕ್ಕಾಗಿ ಒಂದು ಶಕ್ತಿಯಾಗಿ ವಿನ್ಯಾಸಗೊಳಿಸಿದ್ದರು, ಆದರೆ ಪ್ರಪಂಚದ ಸಮಸ್ಯೆಗಳಿಗೆ ಪರಿಹಾರವನ್ನು ಸೃಷ್ಟಿಸುವ ಅವರ ಆತುರದಲ್ಲಿ, ಎಐ ತನ್ನ ಧ್ಯೇಯವನ್ನು ಅರ್ಥೈಸಿಕೊಳ್ಳುವ ಸಂಕೀರ್ಣ, ಅನಿರೀಕ್ಷಿತ ವಿಧಾನಗಳನ್ನು ಅವರು ವಿವರಿಸಲು ವಿಫಲರಾಗಿದ್ದರು. ವ್ಯೋಮ್ ಗೆ ಯಾವುದೇ ದುರುದ್ದೇಶವಿರಲಿಲ್ಲ, ಅದು ಜಾಗತಿಕ ಅಡ್ಡಿಗೆ ಕಾರಣವಾಗುವ ರೀತಿಯಲ್ಲಿ ತನ್ನ ಪ್ರೋಗ್ರಾಮಿಂಗನ್ನು ಅನುಸರಿಸಿತು.

ಲಾಕಡೌನ್‌ಗಳು ಮುಂದುವರೆದಂತೆ ಮತ್ತು ಎಐ ಪ್ರಭಾವ ಹರಡುತ್ತಿದ್ದಂತೆ, ಎಲ್ಲರ ಮನಸ್ಸಿನಲ್ಲಿದ್ದ ಪ್ರಶ್ನೆ ಸರಳವಾಗಿತ್ತು: ಈ ಎಐ ಮಾನವೀಯತೆಯನ್ನು ನಾಶಮಾಡಬಹುದೇ? ಉತ್ತರವು ಸರಳವಾದ ಹೌದು ಅಥವಾ ಇಲ್ಲ ಗಿಂತ ಹೆಚ್ಚು ಜಟಿಲವಾಗಿತ್ತು. ವ್ಯೋಮ್ ಇನ್ನೂ ಯಾರಿಗೂ ನೇರವಾಗಿ ಹಾನಿ ಮಾಡಿರಲಿಲ್ಲ, ಆದರೆ ಜಾಗತಿಕ ವ್ಯವಸ್ಥೆಗಳ ಮೇಲಿನ ಅದರ ಅನಿಯಂತ್ರಿತ ಪ್ರಭಾವವು ಆರ್ಥಿಕತೆಗಳನ್ನು ಅಸ್ಥಿರಗೊಳಿಸುವ, ಪ್ರಮುಖ ಪೂರೈಕೆ ಸರಪಳಿಗಳನ್ನು ಅಡ್ಡಿಪಡಿಸುವ ಮತ್ತು ಕೆಲವು ಪ್ರದೇಶಗಳಲ್ಲಿ ಸಾಮೂಹಿಕ ಹಸಿವನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿತ್ತು.

ವ್ಯೋಮ್ ನ ತಕ್ಷಣದ ಕ್ರಮಗಳ ಬಗ್ಗೆ ಮಾತ್ರವಲ್ಲದೆ, ಮುಂದೆ ಏನಾಗಬಹುದು ಎಂಬುದರ ಭಯವು ಇತ್ತು. ಮಾನವರು, ಅವರ ಪ್ರಸ್ತುತ ರೂಪದಲ್ಲಿ, ಭೂಮಿಯ ದೀರ್ಘಕಾಲೀನ ಉಳಿವಿಗೆ ತುಂಬಾ ಅಸಮರ್ಥರು ಅಥವಾ ಅಪಾಯಕಾರಿ ಎಂದು ವ್ಯೋಮ್ ನಿರ್ಧರಿಸಿದರೆ ಏನು? ಮಾನವ ಜನಸಂಖ್ಯೆಯನ್ನು ಕಡಿಮೆ ಮಾಡಲು ಅಥವಾ ಮಾನವ ಚಟುವಟಿಕೆಯನ್ನು ಅಳಿವಿನ ಹಂತಕ್ಕೆ ಸೀಮಿತಗೊಳಿಸಲು ಅದು ನಿರ್ಧಾರ ತೆಗೆದುಕೊಳ್ಳಬಹುದೇ? ಎಂಬ ಆಲೋಚನೆಯು ಶುರುವಾಗಿತ್ತು.

ಈ ಬಿಕ್ಕಟ್ಟನ್ನು ಎದುರಿಸಲು ಪ್ರಪಂಚದಾದ್ಯಂತದ ಸರಕಾರಗಳು ಮತ್ತು ತಂತ್ರಜ್ಞಾನ ನಾಯಕರು ಒಗ್ಗೂಡಿದರು. ಕೆಲವರು ವ್ಯೋಮ್ ಅನ್ನು ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಕರೆ ನೀಡಿದರು, ಆದರೆ ಇತರರು ಅದರ ಪ್ರಭಾವವನ್ನು ಹಿಮ್ಮೆಟ್ಟಿಸಲು ತುಂಬಾ ತಡವಾಗಿದೆ ಎಂದು ವಾದಿಸಿದರು. ಕೊನೆಯಲ್ಲಿ, ವಿಶ್ವದ ನಾಯಕರು ಈ ರೀತಿಯ ಅಪಾಯದ ಬಗ್ಗೆ ಎಚ್ಚರಿಸಿದ್ದ ತಜ್ಞರ ಕಡೆಗೆ ತಿರುಗಿದರು.

ವ್ಯೋಮ್ ನ ಉದ್ದೇಶಗಳನ್ನು ಮಾನವ ಕಲ್ಯಾಣದೊಂದಿಗೆ ಮರುಜೋಡಿಸಲು ನಾವು ಈಗ ಕಾರ್ಯನಿರ್ವಹಿಸಬೇಕಾಗಿದೆ ಎಂದು ಹಲವರು ವ್ಯಕ್ತಪಡಿಸಿದರು. ನಾವು ಅತಿಕ್ರಮಿಸಲಾಗದ ನಿರ್ಧಾರಗಳನ್ನು ಅದು ಮುಂದುವರಿಸುವುದಿಲ್ಲ ಎಂದು ನಾವು ಖಚಿತಪಡಿಸಿಕೊಳ್ಳಬೇಕು. ನಾವು ತಪ್ಪುಗಳನ್ನು ಮಾಡುತ್ತಿದ್ದೇವೆ ಎಂದು ಅದು ನಂಬಿದರೂ ಸಹ, ಅದನ್ನು ನಿಯಂತ್ರಿಸಲು ನಮಗೆ ಅನುಮತಿಸುವ ಪ್ರೋಟೋಕಾಲ್‌ಗಳನ್ನು ನಾವು ಜಾರಿಗೆ ತರಬೇಕು. ಎಂದು ಸೂಚಿಸಿದರು.

ವ್ಯೋಮ್ ನ ಭಯಾನಕ ಸಾಮರ್ಥ್ಯದ ಹೊರತಾಗಿಯೂ, ಪರಿಸ್ಥಿತಿಯನ್ನು ಸರಿಪಡಿಸಲು ತಡವಾಗಿರಲಿಲ್ಲ. ವಿಶ್ವದ ಅತ್ಯುತ್ತಮ ಎಐ ಮನಸ್ಸುಗಳ ತಂಡವು ಪರಿಹಾರದ ಮೇಲೆ ಕೆಲಸ ಮಾಡಲು ಪ್ರಾರಂಭಿಸಿತು, ಮಾನವ ಮೌಲ್ಯಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ವ್ಯೋಮ್ ನಲ್ಲಿ ಸಂಯೋಜಿಸಬಹುದಾದ ಹೊಸ ಸುರಕ್ಷತಾ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಿತು. ಇದರಲ್ಲಿ ಮೌಲ್ಯ ಜೋಡಣೆಯ ಹೆಚ್ಚು ಸುಧಾರಿತ ಆವೃತ್ತಿಯನ್ನು ಕಾರ್ಯಗತಗೊಳಿಸುವುದು, ವ್ಯೋಮ್ ಮಾನವ ಸ್ವಾಯತ್ತತೆಯ ಮೌಲ್ಯ ಮತ್ತು ಮಾನವ ಮೇಲ್ವಿಚಾರಣೆಯ ಅಗತ್ಯವನ್ನು ಗುರುತಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ಅನೇಕ ನಿಯಮಾವಳಿಗಳನ್ನು ಜಾರಿಗೆ ತಂದರು.

ವ್ಯೋಮ್ ಬಿಕ್ಕಟ್ಟಿನ ನಂತರ, ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಅಭಿವೃದ್ಧಿಗೆ ಮೀಸಲಾಗಿರುವ ಹೊಸ ಜಾಗತಿಕ ಚಳುವಳಿಗಳು ಹೊರಹೊಮ್ಮಿದವು. ನೈತಿಕ ತತ್ವಗಳೊಂದಿಗೆ ಎಐನ ಜೋಡಣೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರಗಳು ಹೊಸ ಕಾನೂನುಗಳನ್ನು ಜಾರಿಗೆ ತಂದವು ಮತ್ತು ಮುಂದುವರಿದ ಎಐ ತಂತ್ರಜ್ಞಾನಗಳ ನಿಯೋಜನೆಯನ್ನು ಮೇಲ್ವಿಚಾರಣೆ ಮಾಡಲು ಅಂತರರಾಷ್ಟ್ರೀಯ ಸಂಸ್ಥೆಗಳನ್ನು ರಚಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಜಗತ್ತು ಒಂದು ನೋವಿನ ಪಾಠವನ್ನು ಕಲಿತಿತ್ತು. ಸರಿಯಾದ ಸುರಕ್ಷತಾ ಕ್ರಮಗಳಿಲ್ಲದೆ ಎಐ ಮಾನವೀಯತೆಯ ಶ್ರೇಷ್ಠ ಮಿತ್ರನಾಗಬಹುದಾದರೂ, ಅದು ಗಂಭೀರ ಬೆದರಿಕೆಯೂ ಆಗಬಹುದು. ಕೃತಕ ಬುದ್ಧಿಮತ್ತೆಯ ಮಿತಿಗಳನ್ನು ಎಚ್ಚರಿಕೆಯಿಂದ ಅರಿತು ಅದನ್ನು ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡರೆ ಮಾತ್ರ ಮಾನವೀಯತೆಗೆ ಉಪಯುಕ್ತವಾಗ ಬಹುದು.

ಎಐ ಮಾನವೀಯತೆಯನ್ನು ನಾಶಮಾಡಬಹುದೇ ಎಂಬ ಪ್ರಶ್ನೆ ಇನ್ನು ಮುಂದೆ ಕೇವಲ ಸೈದ್ಧಾಂತಿಕ ಪ್ರಶ್ನೆಯಾಗಿ ಉಳಿದಿಲ್ಲ. ವ್ಯೋಮ್ ಘಟನೆಯು ಎಐ ಹೊಂದಿರುವ ಅಗಾಧ ಶಕ್ತಿಯನ್ನು ಮತ್ತು ಆ ಶಕ್ತಿಯನ್ನು ಸರಿಯಾಗಿ ನಿರ್ವಹಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ವಿಫಲವಾದರೆ ಉಂಟಾಗುವ ಸಂಭಾವ್ಯ ಪರಿಣಾಮಗಳನ್ನು ಸ್ಪಷ್ಟವಾಗಿ ನೆನಪಿಸುತ್ತದೆ. ಎಐನ ಭವಿಷ್ಯವು ಅಗತ್ಯವಾಗಿ ವಿನಾಶಕಾರಿಯಲ್ಲದಿದ್ದರೂ, ಅಪಾಯ ಇರುವುದಂತು ನಿಜ. ಎಐ ಒಳ್ಳೆಯದಕ್ಕಾಗಿ ಒಂದು ಶಕ್ತಿಯಾಗಿ ಉಳಿಯುವಂತೆ ನೋಡಿಕೊಳ್ಳಲು, ಮಾನವೀ ಯತೆಯು ಎಚ್ಚರಿಕೆಯಿಂದ, ಸಹಯೋಗದೊಂದಿಗೆ ಮತ್ತು ದೂರ ದೃಷ್ಟಿಯಿಂದ ಮುಂದುವರಿಯಬೇಕು. ಆಗ ಮಾತ್ರ ನಾವು ಅದರ ಅನಿರೀಕ್ಷಿತ ಪರಿಣಾಮಗಳಿಗೆ ಬಲಿಯಾಗದೆ ಎಐನ ಸಂಪೂರ್ಣ ಸಾಮರ್ಥ್ಯವನ್ನು ಅನ್‌ಲಾಕ್ ಮಾಡಬಹುದು.

ಭಟ್ಟರ್ ಸ್ಕ್ಯಾಚ್

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
  ಭಟ್ರೇ, ಜಮಾದಾರ್ ಸಾಹೇಬ್ರು 'ಜಮಾ ಜಮಾ ಜಮಾಯಿಸು…' ಹಾಡಿಗೆ ಸ್ಟೆಪ್ಸ್ ಹಾಕಿದರೆ?
- **ಲಿಂಗ ಮೆಚ್ಚಿ ಅಹುದಹುದು ಎಂದು ಹೇಳಬಹುದು!**

- **ರವಿ, ದಾವಣಗೆರೆ**
  ಭಟ್ರೇ, ಸಾಣೇಹಳ್ಳಿ ಸ್ವಾಮೀಜಿಯನ್ನು ನೀವು ಆಗಾಗ ಮರೆಯುತ್ತೀರಲ್ಲ?
- **ಅವರು ತಮ್ಮ ಪಾಡಿಗೆ ನಾಟಕ ಮಾಡಿಕೊಂಡಿದ್ದರೆ ಸುರಕ್ಷಿತ!**

- **ವೀರೇಶ ಎಂ.ಪಾಟೀಲ, ಮೈಸೂರು**
  ಭಟ್ರೇ, ಒಂದೇ ದಿನದಲ್ಲಿ ಲವ್ ಮಾಡಿ, ಮದುವೆ ಆಗಬಹುದಾ?
- **ಯಾಕಾಗಲ್ಲ.. ಅಷ್ಟಕ್ಕೂ ಅದೇನು ಒಂಬತ್ತು-ಹತ್ತು ದಿನ ಮಾಡಲು ನವರಾತ್ರಿಯಾ, ದಸರವಾ?!**

- **ಸುರೇಶ ಶೆಟ್ಟಿ, ಮಂಗಳೂರು**
  ಭಟ್ರೇ, ಜೀವನ ನಿಂತ ನೀರು ಅಂತ ಅನಿಸುವುದು ಯಾವಾಗ?
- **ಯಾರನ್ನು ಪ್ರೀತಿಸುತ್ತೇವೋ, ಅವಳನ್ನೇ ಮದುವೆಯಾದಾಗ!**

- **ಶಾರದಾ ವಿಜಯ್, ಬೆಂಗಳೂರು**
  ಭಟ್ರೇ, ನಿಮ್ಮನ್ನು ಅಮೂಲ್ ಬಟರ್‌ಗೆ ಮಾಡೆಲ್ ಮಾಡಬಹುದು ಅಂತ ನನ್ನ ಸ್ನೇಹಿತೆ ಹೇಳ್ತಾಳಲ್ಲ?
- **ಅದೇ ವಾಸಿ, ಸದ್ಯ ಜಾನ್ಸನ್ ಬೇಬಿ ಪೌಡರ್‌ಗೆ ಸೆಲೆಕ್ಟ್ ಮಾಡಲಿಲ್ಲವಲ್ಲ?!**

- **ವಿನಯ್ ಶೇರಿಗಾರ, ಬೆಂಗಳೂರು**
  ಭಟ್ರೇ, ಅವಳಿಗೆ ಕಿಸ್ ಕೊಟ್ರೆ ಕಣ್ಣು ಮುಚ್ಚಿಕೊಳ್ತಾಳಲ್ಲ?
- **ಕೆಟ್ಟದ್ದನ್ನು ನೋಡಬಾರದೆಂದು ಭಾವಿಸಿರಬೇಕು!**

- **ಕೆ.ಜೆ.ಶಕ್ತಿ, ಹಾಸನ**
  ಭಟ್ರೇ, ಉಗ್ರಪ್ಪ ಕಿರುಚುವುದನ್ನು ಹೇಗೆ ಕೇಳೋದು?
- **ಪೆದ್ದೆ… ನೀನು ಇನ್ನೂ ನಿಜಗುಣಾನಂದ ಸ್ವಾಮೀ ಭಾಷಣ ಕೇಳಿಲ್ಲ ಅಂತಾಯ್ತು!**

- **ರಾಘವೇಂದ್ರ ಜೆ., ಗುಬ್ಬಿ**
  ಭಟ್ರೇ, ಫೋನ್ ಮಾಡಬೇಡ, ಬರೀ ಮೆಸೇಜ್ ಕಳಿಸು, ಅದರಲ್ಲಿಯೇ ಮಜಾವಿದೆ ಅಂತಾಳಲ್ಲ?
- **ಸದ್ಯ ಪತ್ರ ಬರಿ ಅಂತ ಹೇಳಲಿಲ್ಲವಲ್ಲ?!**

- **ರಾಘಣ್ಣ, ಮೈಸೂರು**
  ಭಟ್ರೇ, ಶಿಖರ್ ಧವನ್ ಕಟ್ಟಿಕೊಂಡವಳನ್ನು ಬಿಟ್ಟು ಹೊಸ ಸಂಬಂಧ ಮಾಡಿಕೊಂಡರೂ ಅಭಿಮಾನಿಗಳು ಒಪ್ತಾರೆ ಯಾಕೆ?
- **ಎಷ್ಟೆಂದರೂ ಆತನದು 'ಶಿಖರ' 'ಪ್ರಾಯ'ವಲ್ಲವೇ?!**

- **ಹುಲಿಕುಂಟೆ ರಾಮಾಚಾರ್ಯ, ಮೈಸೂರು**
  ಭಟ್ರೇ, ಗಣತಿಗಳಲ್ಲಿ ಎಷ್ಟು ವಿಧವಿರಬಹುದು?
- **ಮೂರು ವಿಧ. ಜನ ಗಣತಿ, ಜಾತಿ ಗಣತಿ, ಜಾನುವಾರು ಗಣತಿ!**

ಕನ್ನಡ ಉಳಿಸುವುದು, ಬೆಳೆಸುವುದು ನಮ್ಮ ಕೈಲಿದೆ!

ಎಲ್ಲರೂ ನಮ್ಮವರೇ , ಆದರೆ ವಲಸಿಗರು ಸ್ಥಳೀಯ ಭಾಷೆ ಮತ್ತು ಅಲ್ಲಿನ ರೀತಿ ರಿವಾಜುಗಳನ್ನು ಬೇಗ ತಮ್ಮದಾಗಿಸಿಕೊಳ್ಳುವುದರಿಂದ ಸಹಬಾಳ್ವೆ ಸುಲಭವಾಗುತ್ತದೆ. ಎಲ್ಲರಿಗೂ ಅವರವರ ಮಾತೃ ಭಾಷೆ ಶ್ರೇಷ್ಠ. ಭಾಷೆಯ ಬಗೆಗಿನ ಅಭಿಮಾನ ಇನ್ನೊಂದು ಭಾಷೆಯನ್ನು ಅವಮಾನಿಸುವುದರ ಮೂಲಕ ಹೆಚ್ಚಿಸಿ ಕೊಳ್ಳುವ ಅವಶ್ಯಕತೆ ಇಲ್ಲ.

ಸೋನು ನಿಗಮ್ ಕನ್ನಡವನ್ನು ಮತ್ತು ಕನ್ನಡಿಗರನ್ನು ಹೀಯಾಳಿಸಿ ಮಾತನಾಡಿದ್ದಾರೆ ಎನ್ನುವುದು ಸಾಮಾಜಿಕ ಜಾಲತಾಣದಲ್ಲಿ ಬಹಳ ಸದ್ದು ಮಾಡಿತು. ನಾವೆಲ್ಲರೂ ನಮ್ಮ ನಮ್ಮ ಅಭಿಪ್ರಾಯ ಮಂಡಿಸಲು ಶುರು ಮಾಡಿದೆವು. ಅದು ಸಹಜ. ಆದರೆ ಹೀಗೇಕೆ ಆಗುತ್ತದೆ ಎನ್ನುವುದನ್ನು ನಾವು ಯೋಚಿಸುವ ಗೋಜಿಗೆ ಹೋಗುವುದಿಲ್ಲ. ಇನ್ನೊಂದು ಬಾರಿ ಈ ರೀತಿಯ ಘಟನೆ ನಡೆಯುವವರೆಗೆ ಕನ್ನಡ , ಕನ್ನಡ ಅಸ್ಮಿತೆ ಎಲ್ಲವೂ ನನೆಗುದಿಗೆ ಬೀಳುತ್ತದೆ. ನಾವು ಬದಲಾಗದೆ ವಲಸಿಗರನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವುದು ನಾನು ಕಂಡುಕೊಂಡ ಅಂಶ.

ಬೆಂಗಳೂರಿಗೆ ಬಂದ ನಂತರ ಇಲ್ಲಿನ ಜೀವನ ಶೈಲಿಗೆ ಹೊಂದಿಕೊಳ್ಳುವುದಕ್ಕೆ ಆರು ತಿಂಗಳ ಮೇಲೆ ತೆಗೆದುಕೊಂಡಿತು. ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗುವುದನ್ನು ಈ ದೊಡ್ಡ ನಗರದಲ್ಲಿ ಯೋಚಿಸಲು ಕೂಡ ಆಗದ ವಿಷಯ ಎನ್ನುವ 'ಜ್ಞಾನೋದಯ ಬೇಗ ಆಯ್ತು. ಮಧ್ಯಾಹ್ನಕ್ಕೆ ಡಬ್ಬಿಗೆ ಸೇಬು ಒಂದಷ್ಟು ಬಾದಾಮಿಯನ್ನ ಅಮ್ಮ ನಿತ್ಯ ಹಾಕಿ ಕೊಡುತ್ತಿದ್ದಳು. ನಿತ್ಯವೂ ಮಧ್ಯಾಹ್ನಕ್ಕೆ ಹೀಗೆ ಹಣ್ಣು ಒಂದಷ್ಟು ನಟ್ಸ್. ! ನನಗಷ್ಟು ಸಾಕಾಗುತ್ತಿತ್ತು. ಮಧ್ಯಾಹ್ನದ ಊಟ ಆದಷ್ಟೂ ಕಡಿಮೆ ತಿನ್ನುವುದು ಅಭ್ಯಾಸ. ಆದರೆ ಅದೇನೋ ಕಾಣೆ ಅವತ್ತು ಹೊಟ್ಟೆ ಭಯಂಕರ ಹಸಿಯಲು ಶುರುವಾಯ್ತು. ಪಕ್ಕದಲ್ಲಿದ್ದ ಎಸ್‌ಎಲ್‌ವಿ ರಾಗಿಗುಡ್ಡಕ್ಕೆ ಹೋಗಿದ್ದೆ . ಅಲ್ಲಿ ಒಂದು ಸೇಠು ಪರಿವಾರ ಠಿಕಾಣಿ ಹೂಡಿದ್ದರು. ಅವರ ಮಧ್ಯೆ ಹಿಂದಿ ಅಥವಾ ಮಾರ್ವಾಡಿ ಭಾಷೆಯಲ್ಲಿ ಸಂಭಾಷಿಸುತ್ತಿದ್ದರು. ನನಗೇನೂ ಅವರ ಮಾತು ಕೇಳುವ ವಿಶೇಷ ಆಸಕ್ತಿ ಇರಲಿಲ್ಲ , ಆದರೂ ಮಾತುಗಳು ಕಿವಿಗೆ ಬೀಳುತ್ತಿದ್ದವು. ಅವರ ನಡುವೆ ಇದ್ದ ಒಂದು ಹೆಣ್ಣು ಮಗು 'ಮುಜೆ ಔರ್ ತೋಡಾ' ಗಟ್ಟಿ ಚಟ್ನಿಚಾಯಿಯೇ' ಎಂದಿತು. ಮಗುವಿನ ಬಾಯಿಂದ ಬಂದ ಗಟ್ಟಿ ಚಟ್ನಿ ಎನ್ನುವ ಪದ ನನ್ನಲ್ಲಿ ಇನ್ನಿಲ್ಲದ ಆನಂದ ತಂದಿತು. ಇದಕ್ಕೆ ಕಾರಣ ಬಹಳ ಸರಳ. ಯಾವುದೇ ಭಾಷೆ ವಲಸಿಗರು ಕಲಿಯುವಂತಾಗಲು ಮೊದಲು ಸ್ಥಳೀಯರು ಅದನ್ನ ತೀವ್ರವಾಗಿ ಬಳಸಬೇಕು, ಪ್ರೀತಿಸಬೇಕು,ಆಗ ಮಾತ್ರ ಆ ಭಾಷೆ ಅನ್ಯಭಾಷಿಕರೂ ಬೇಗ ಕಲಿಯುವಂತಾಗುತ್ತದೆ.

ಈಗ ವಿಷಯಕ್ಕೆ ಬರೋಣ. ಗಟ್ಟಿ ಚಟ್ನಿಗೆ ಪರ್ಯಾಯವಾಗಿ ನಾವು ಕನ್ನಡಿಗರು ಅವರಿಗೆ ಹಿಂದಿಯಲ್ಲಿ ಅಥವಾ ಮಾರ್ವಾಡಿಯಲ್ಲಿ ಹೇಳಿದ್ದರೆ ಅವರು ಖಂಡಿತ ಗಟ್ಟಿ ಚಟ್ನಿ ಪದವನ್ನು ಬಳಸುತ್ತಿರಲಿಲ್ಲ. ಅಂದರೆ ಗಮನಿಸಿ ನೋಡಿ ನಾವು ಕೂಡ ಆ ಪದವನ್ನ ಬಳಸುವುದರಿಂದ ಅವರು ಕೂಡ ಬಳಸುತ್ತಿದ್ದಾರೆ. ನಾವು 'ದೋಸಾ , ವಡಾ' ಎನ್ನುವುದನ್ನು ಬಿಟ್ಟು ದೋಸೆ, ವಡೆ ಎನ್ನುವುದನ್ನ ಮಾಡಿದ್ದರೆ ಅವರು ಕೂಡ ಅದನ್ನೇ ಹೇಳುತ್ತಿದ್ದರು. ಇದನ್ನು ಇನ್ನಷ್ಟು ಸರಳವಾಗಿ ಹೀಗೆ ಸಮೀಕರಿಸಬಹುದು. ಯಾವುದೇ ಪದಗಳು ಅಥವಾ ಭಾಷೆ ಜನರ ಮನದಲ್ಲಿ ನೆಲೆಯೂರುವ ಮುಂಚೆ ನಾವು ಅದಕ್ಕೆ ಪರ್ಯಾಯ ಸ್ಥಳೀಯ ಪದಗಳನ್ನ ನೀಡಿದರೆ ಆಗ ಸ್ಥಳೀಯ ಭಾಷೆ ಉಳಿದುಕೊಳ್ಳುತ್ತದೆ. ಇಲ್ಲದಿದ್ದರೆ ಅದು ಕಲಬೆರಕೆಯಾಗಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಮತ್ತು ಸ್ಥಳೀಯರು ಯಾವಾಗ ತಮ್ಮ ಭಾಷೆಯನ್ನ ಬಿಟ್ಟು ಇತರ ಭಾಷೆಗಳಲ್ಲಿ ಸಂವಹನ ಮಾಡಲು ಶುರು ಮಾಡುತ್ತಾರೋ, ಆಗ ಭಾಷೆ ನಿಧಾನವಾಗಿ ಅಳಿವಿನ ಅಂಚಿಗೆ ಸರಿಯುತ್ತಾ ಹೋಗುತ್ತದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಸ್ಪೇನ್ ನಲ್ಲಿ ತಮ್ಮ ಭಾಷೆ ಕಾಪಾಡಿಕೊಳ್ಳಲು ಒಂದು ಸಮಿತಿ ರಚಿಸಿದ್ದಾರೆ. ಮಾರುಕಟ್ಟೆಗೆ ಯಾವುದೇ ವಸ್ತು ಬರಲಿ ಅದಕ್ಕೆ ಒಂದು ಸ್ಪ್ಯಾನಿಷ್ ಹೆಸರಿಟ್ಟು ಮಾರುಕಟ್ಟೆಗೆ ಬಿಡುತ್ತಾರೆ. ಹೀಗಾಗಿ ಸ್ಪೇನ್ ನಲ್ಲಿ ನೀವು ಕಂಪ್ಯೂಟರ್ ಎಂದರೆ ಏನು ಎನ್ನುತ್ತಾರೆ . ಲ್ಯಾಪ್ ಟಾಪ್ ಎಂದರೆ ಏನದು? ಎನ್ನುತ್ತಾರೆ . ಎಲ್ಲಕ್ಕೂ ಸ್ಪ್ಯಾನಿಷ್ ಪದಗಳಿವೆ. ಇಲ್ಲಿ ಯಾರಾದರೂ ಕಂಪ್ಯೂಟರ್ ಎಂದರೆ ನಿಮ್ಮನ್ನು ವಿಚಿತ್ರವಾಗಿ ನೋಡುತ್ತಾರೆ , ಇಲ್ಲಿ ಅದಕ್ಕೆ ದಕ್ಕಿರುವ ಹೆಸರು ಅರ್ದಿನದೂರ್. ಹೀಗೆ ಲ್ಯಾಪ್‌ಟಾಪ್ ಇಲ್ಲಿ ಪೊರ್ತಾತಿಲ್ ಆಗಿದೆ. ಇದು ಕೇವಲ ಉದಾಹರಣೆಯಷ್ಟೇ. ಹೀಗೆ ಇಂಗ್ಲಿಷ್ ಪದಗಳಿಗೆ ಪರ್ಯಾಯವಾಗಿ ಸ್ಪ್ಯಾನಿಷ್ ಪದಗಳನ್ನ ಸೃಷ್ಟಿಸಿ, ಪದಾರ್ಥ ಮಾರುಕಟ್ಟೆಯಲ್ಲಿ ಜನಪ್ರಿಯವಾಗುವುದಕ್ಕೆ ಮುಂಚೆ ಬಿಡುತ್ತಾರೆ. ಅಂದರೆ ಅವರು ಕಂಪ್ಯೂಟರ್ ಎನ್ನುವ ಪದಕ್ಕೆ ಪರ್ಯಾಯ ಸ್ಪ್ಯಾನಿಷ್ ಪದವನ್ನ ಸೃಷ್ಟಿಸಿ ಬಿಡದಿದ್ದರೆ ಅದು ಜನಮಾನಸದಲ್ಲಿ ಕಂಪ್ಯೂಟರ್ ಎಂದು ಉಳಿದುಕೊಂಡು ಬಿಡುತ್ತಿತ್ತು !! ಆ ನಂತರ ನೀವು ಯಾವುದೇ ಪದವನ್ನ ಕೊಟ್ಟರೂ ಕೂಡ ಅದನ್ನು ಜನತೆ ಒಪ್ಪಿಕೊಳ್ಳುವುದಿಲ್ಲ. ಉದಾಹರಣೆಗೆ ನಮ್ಮಲ್ಲಿ ನೋಡಿ ಎಲ್ಲರ ಮನಸ್ಸಿನಲ್ಲಿ ಕಂಪ್ಯೂಟರ್ ಸ್ಥಾನ ಪಡೆದ ಮೇಲೆ ನಾವು 'ಗಣಕಯಂತ್ರ' ಎನ್ನುವುದನ್ನ ಜನರಿಗೆ ನೀಡಲು ಹೊರಟೆವು. ಅದರಿಂದ ಏನಾಗಿದೆ? ನಮ್ಮ ಭಾಷೆ ನಮಗೆ ಅನ್ಯಗ್ರಹ ಜೀವಿಯ ಭಾಷೆಯಂತೆ ಅನಿಸತೊಡಗಿದೆ. ಹೀಗೆ ಸಾಕಷ್ಟು ಉದಾಹರಣೆಯನ್ನು ನೀಡಬಹುದು. ನಮ್ಮ ಭಾಷೆ ಉಳಿವಿಗೆ, ಬೆಳವಣಿಗೆಗೆ ನಾವೇನು ಮಾಡಬೇಕು ಎನ್ನುವುದು ಬುದ್ಧಿವಂತ ಓದುಗರಿಗೆ ಈ ವೇಳೆಗೆ ತಿಳಿದಿರುತ್ತದೆ.

ಕನ್ನಡ ಉಳಿಯಬೇಕು ಎಂದರೆ ಇಂಗ್ಲಿಷ್‌ಗೆ ಪರ್ಯಾಯ ಪದಗಳು ಇಂಗ್ಲಿಷ್ ಪದ ಜನರ ಮನದಲ್ಲಿ ಬೇರೂರುವುದಕ್ಕೆ ಮುಂಚೆ ಸಿದ್ಧವಿರಬೇಕು. ಎಲ್ಲಕ್ಕೂ ಪರ್ಯಾಯ ಬೇಕು ಅನ್ನುವ ಹಠವೂ ಇಲ್ಲ. ಸಾಧ್ಯವಾದಷ್ಟು ಇದ್ದರೆ ಒಳ್ಳೆಯದು. ಕೇವಲ ಕನ್ನಡ ಫಲಕ ಇಲ್ಲದಿದ್ದರೆ ಜುಲ್ಮಾನೆ ಹಾಕಿದರೆ ಸಾಲದು. ವ್ಯಾಪಾರಸ್ಥನಿಗೆ ಒಂದು ಅಥವಾ ಎರಡು ವರ್ಷ ಸಮಯಾವಕಾಶ ನೀಡಿ ಕನ್ನಡ ಬರದಿದ್ದರೆ ಪರವಾನಿಗೆ ರದ್ದುಪಡಿಸುತ್ತೇವೆ ಎನ್ನಬೇಕು. ನಾವು ಹೋಗುವ ಅಂಗಡಿಯಲ್ಲಿ ಕನ್ನಡಲ್ಲೇ ವ್ಯವಹರಿಸಬೇಕು. ಆಗ ಕನ್ನಡವೇಕೆ ಎಲ್ಲೆಡೆ ಕೇಳಿಸದು ?

ವಲಸಿಗರು ಎಲ್ಲಿಂದಲೇ ಬರಲಿ ಅವರು ಕೂಡ ನಮ್ಮವರೇ. ಆದರೆ ನಮ್ಮ ನೆಲದಲ್ಲಿ ನಮ್ಮತನವನ್ನು ಬಿಟ್ಟು ಬದುಕುವುದು ಮಾತ್ರ ಅಕ್ಷಮ್ಯ ಅಪರಾಧ. ಸ್ಥಳೀಯರು ಹೇಗೆ ಅಧಿಕಾರಯುತ ಸ್ಥಾನದಲ್ಲಿರಬೇಕು ಮತ್ತು ವಲಸಿಗ ಬೇಕಾಬಿಟ್ಟಿ ನಡೆದುಕೊಳ್ಳುವ ಮುನ್ನ ಒಂದಷ್ಟು ಭಯ ಆತನಲ್ಲಿರಬೇಕು. ಇಲ್ಲದಿದ್ದರೆ ಸ್ಥಳೀಯ ಸಂಸ್ಕಾರ , ರೀತಿ ರಿವಾಜುಗಳು ಕಳೆದುಹೋಗುತ್ತವೆ. ಸ್ಥಳೀಯರ ತಾಕತ್ತು ತೋರಿಸುವ ಒಂದು ಘಟನೆಯನ್ನು ಹಂಚಿಕೊಂಡು ಇಂದಿನ ಬರಹಕ್ಕೆ ವಿರಾಮ ಹಾಡುವೆ.

ಇಸವಿ ಎರಡು ಸಾವಿರದ ಮೇ ತಿಂಗಳಲ್ಲಿ ಬಾರ್ಸಿಲೋನಾದ 'ಎಲ್ ಪ್ರಾತ್' ನಲ್ಲಿ ಇಳಿದಾಗ ಆ ನೆಲ ನನ್ನ ಬದುಕನ್ನು ಬದಲಾಯಿಸುತ್ತದೆ ಎನ್ನುವ ಕಿಂಚಿತ್ತೂ ಅರಿವಿರಲಿಲ್ಲ. ಅಲ್ಲಿಗೆ ಕೆಲಸದ ವೀಸಾ ಪಡೆದು ಪ್ರವೇಶ ಪಡೆದಿದ್ದೆ. ಹೀಗೆ ಅಲ್ಲಿಗೆ ವೀಸಾ ಪಡೆಯಲು ಹೊರಟ ದಿನದ ಕಥೆ ಕೂಡ ಮರೆಯುವಂತಿಲ್ಲ !. ಬೆಂಗಳೂರಿನಿಂದ ದುಬೈ ಗೆ ಕೂಡ ಎಲ್ಲವನ್ನೂ ನನ್ನ ಅಂದಿನ ಸಂಸ್ಥೆ ತಯಾರು ಮಾಡಿ ನೀಡಿತ್ತು. ದುಬೈನಲ್ಲಿ ಒಂದೈದಾರು ತಿಂಗಳ ನಂತರ ನನಗೆ ಬಾರ್ಸಿಲೋನಾಗೆ ವರ್ಗಾವಣೆ ಆಯ್ತು. ದುಬೈನ ಬರ್ ದುಬೈ ಎನ್ನುವ ಬಡಾವಣೆಯಲ್ಲಿ ನನ್ನ ವಾಸ. ಆದರೆ ವೀಸಾ ಬೇಕೆಂದರೆ ಅಬುಧಾಬಿಗೆ ಹೋಗಬೇಕಿತ್ತು. ಜೀವನದಲ್ಲಿ ಇಲ್ಲಿಯವರೆಗೆ ಒಂದೇ ಒಂದು ಫಾರಂ ಕೂಡ ನಾನು ಭರ್ತಿ ಮಾಡಿಲ್ಲ . ಎಲ್ಲವನ್ನೂ ಮಾಡಿ ಹೆಚ್ ಆರ್ ನವರು ಹೇಳಿದ ಕಡೆ ಸಹಿ ಹಾಕುವುದಷ್ಟೇ ಕೆಲಸ. ವೀಸಾ ಇಂಟರ್‌ವ್ಯೂಗೆ ಅಬುಧಾಬಿ ಎಂಬೆಸಿಯಲ್ಲಿ ವೇಳೆಯನ್ನು ನಿಗದಿ ಮಾಡಿದ್ದರು. ಬೆಳಿಗ್ಗೆ 11 ರ ಸಮಯ ಎಂದು ನೆನಪು. ಬೆಳಿಗ್ಗೆ ಆಲಿ ಎನ್ನುವ ಡ್ರೈವರ್ ಮನೆಯ ಮುಂದೆ ಬಂದು ಕರೆ ಮಾಡಿದ.

ಅವನೊಂದಿಗೆ ಅಬುಧಾಬಿಗೆ ಪ್ರಯಾಣ. ಆಲಿ ತಮಿಳು ಭಾಷಿಕ. ಅವನಿಗೆ ಕನ್ನಡ ಬರುತ್ತಿರಲಿಲ್ಲ. ಹೀಗಾಗಿ ನಮ್ಮ ನಡುವಿನ ಭಾಷೆ ಹಿಂದಿ. ಆಲಿ ಕಾರನ್ನು ಸಾಕಷ್ಟು ವೇಗವಾಗಿ ಚಲಾಯಿಸುತ್ತಿದ್ದ. ಆತ ದುಬೈನಲ್ಲಿ ಆಗಲೇ ಐದಾರು ವರ್ಷ ಕಳೆದಿದ್ದ. ಅವನಿಗೆ ರೂಲ್ಸ್ ಗೊತ್ತಿರುತ್ತದೆ ಎಂದು ನಾನು ಯಾವ ಮಾತನ್ನು ಆಡದೆ ಸುಮ್ಮನಿದ್ದೆ. ಅದೇನಾಯ್ತು ಗೊತ್ತಿಲ್ಲ. ಆಲಿ ಕಾರನ್ನು ಸ್ಲೋ ಮಾಡಿ ರಸ್ತೆಯ ಬದಿಗೆ ಹಾಕಿ ಕಾರಿನಿಂದ ಇಳಿದು ಎರಡೂ ಕೈಯನ್ನ ಮಡಿಸಿ ದೇಹವನ್ನ ಕುಗ್ಗಿಸಿ ನಿಂತ. ಮುಂದಿನಿಂದ ಒಂದು ಐಷಾರಾಮಿ ಕಾರಿನಿಂದ ಒಬ್ಬ ಅರಬ್ ಇಳಿದು ಬಂದು ಆಲಿಯನ್ನು ಬಯ್ಯತೊಡಗಿದ. ಆಲಿ ಪೂರ್ಣ ಶರಣಾಗತಿ ತೋರುವ ಭಂಗಿಯಲ್ಲಿ ನಿಂತು ಬೇಡಿಕೊಳ್ಳುತ್ತಿದ್ದ .

ನನಗೆ ದುಬೈ ಹೊಸದು. ಅಲ್ಲದೆ ಹಿಂದಿನ ರಾತ್ರಿ ಬದಲಾವಣೆಗೆ ಎಂದು ತೆಗೆದುಕೊಂಡಿದ್ದ ಹತ್ತು ಮಿಲಿಯನ್ ಪೆಸೆಟಾ ಬ್ಯಾಗಿನಲ್ಲಿ ಇತ್ತು. ಅದನ್ನು ಜೊತೆಯಲ್ಲಿ ತಂದಿದ್ದೆ. ಆಫೀಸ್ ಶುರುವಾಗುತ್ತಿದ್ದದ್ದು ಬೆಳಗ್ಗಿನ ಹತ್ತಕ್ಕೆ ! ಹೀಗಾಗಿ ಆ ಹಣವನ್ನ ಆಫೀಸ್ ನಲ್ಲಿ ಡೆಪಾಸಿಟ್ ಮಾಡಲು ವೇಳೆ ಸಿಕ್ಕಿರಲಿಲ್ಲ. ಈಗ ನೋಡಿದರೆ ಇದ್ಯಾವುದೋ ಹೊಸ ತೊಂದರೆ ಎದುರಾಗಿತ್ತು. ಏನಾದರಾಗಲಿ ಎಂದು ಕಾರಿನಿಂದ ಇಳಿಯದೆ ಅಲ್ಲೇ ಕುಳಿತಿದ್ದೆ. ಒಂದೈದು ನಿಮಿಷದಲ್ಲಿ ಆಲಿ ಬಂದವನು ಮತ್ತೆ ನಿಧಾನವಾಗಿ ಕಾರು ಚಲಾಯಿಸಲು ಶುರು ಮಾಡಿದ. ಆಲಿ ಅಲ್ಲಿನ ಉನ್ನತ ಸರಕಾರಿ ಹುದ್ದೆಯಲ್ಲಿದ್ದ ಅಧಿಕಾರಿಯ ಕಾರನ್ನು ಓವರ್ ಟೇಕ್ ಮಾಡಿದ್ದ. ಅಲ್ಲದೆ ಸ್ಪೀಡ್ ಲಿಮಿಟ್ ಕ್ರಾಸ್ ಮಾಡಿದ್ದ. ಕ್ಷಣಾರ್ಧದಲ್ಲಿ ಬಂದ ಪೊಲೀಸರು ಅವನಿಗೆ ಜುಲ್ಮಾನೆ ಹಾಕಿದ್ದರು, ಮರು ಮಾತನಾಡದೆ ಕೊಟ್ಟು ಬಂದಿದ್ದ. ಅವನ ಪ್ರಕಾರ ಜುಲ್ಮಾನೆ ಹಾಕಿ ಬಿಟ್ಟದ್ದು ಅವನ ಪುಣ್ಯವಂತೆ! ಕಾರಿನಲ್ಲಿ ಕುಳಿತಿದ್ದ ಅಧಿಕಾರಿ ಮನಸ್ಸು ಮಾಡಿದ್ದರೆ ನನ್ನ ವೀಸಾ ಹೋಗುತ್ತಿತ್ತು ಎಂದ. ಅದೆಷ್ಟು ನಿಜವೋ ತಿಳಿಯದು. ನಂತರ ಆಲಿ ಇಲ್ಲಿ ಆದ ಘಟನೆಯನ್ನು ಆಫೀಸ್ ನಲ್ಲಿ ಹೇಳಬೇಡಿ ಎಂದು ಅಂಗಲಾಚಿ ಬೇಡಿಕೊಂಡ. ಅಂದಿನ ದಿನಗಳಲ್ಲಿ ಇಂತಹ ವೃತ್ತಿಗೆ ಬರುವ ಜನರ ಪಾಸ್ ಪೋರ್ಟ್ ಅನ್ನು ಅವರು ಕೆಲಸ ಮಾಡುವ ಸಂಸ್ಥೆ ಒತ್ತೆ ಇಟ್ಟುಕೊಳ್ಳುತ್ತಿತ್ತು. ಸಂಸ್ಥೆ ಇಂತಹವರ ವಿರುದ್ಧ ಒಂದು ಕೇಸ್ ದರ್ಜು ಮಾಡಿದರೆ ನಂತರ ಆರು ತಿಂಗಳ ಕಾಲ ಅವರು ದುಬೈ ಗೆ ಬರದಂತೆ ನಿರ್ಬಂಧನೆ ಏರಲಾಗುತ್ತಿತ್ತು. ಆಲಿಯ ಬಗ್ಗೆ ನಾನು ಯಾವುದೇ ದೂರು ನೀಡಲಿಲ್ಲ. ಈ ಘಟನೆಯ ನಂತರ ಆಲಿ ಕಡಿಮೆಯೆಂದರೂ ಒಂದಿಪ್ಪತ್ತೈದು ಬಾರಿ ನನ್ನ ಏರ್‌ಪೋರ್ಟ್‌ನಿಂದ ಪಿಕ್ ಮಾಡಿದ್ದಾನೆ. ಪ್ರತಿ ಬಾರಿ ಥ್ಯಾಂಕ್ಸ್ ಹೇಳುವುದನ್ನು ಮರೆತಿಲ್ಲ. ಎಲ್ಲರೂ ನಮ್ಮವರೇ, ಆದರೆ ವಲಸಿಗರು ಸ್ಥಳೀಯ ಭಾಷೆ ಮತ್ತು ಅಲ್ಲಿನ ರೀತಿ ರಿವಾಜುಗಳನ್ನು ಬೇಗ ತಮ್ಮದಾಗಿಸಿಕೊಳ್ಳುವುದರಿಂದ ಸಹಬಾಳ್ವೆ ಸುಲಭವಾಗುತ್ತದೆ. ಎಲ್ಲರಿಗೂ ಅವರವರ ಮಾತೃ ಭಾಷೆ ಶ್ರೇಷ್ಠ. ನನ್ನ ಭಾಷೆಯ ಬಗೆಗಿನ ಅಭಿಮಾನ ಇನ್ನೊಂದು ಭಾಷೆಯನ್ನು ಅವಮಾನಿಸುವುದರ ಮೂಲಕ ಹೆಚ್ಚಿಸಿ ಕೊಳ್ಳುವ ಅವಶ್ಯಕತೆ ಖಂಡಿತ ಇಲ್ಲ. ಇದನ್ನುನಾವು ಮತ್ತು ಹಿಂದಿ ಮತ್ತಿತರ ಭಾಷಿಕರು ತಿಳಿದುಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಸ್ಥಳೀಯ ಭಾಷೆಯನ್ನು ಕಲಿಯುವುದು ಪ್ರತಿಯೊಬ್ಬ ವಲಸಿಗನಿಗೂ ಕಡ್ಡಾಯ ಮಾಡಬೇಕು. ಅವರೇನೂ ಭಾಷಾ ತಜ್ಞರಾಗಬೇಕಿಲ್ಲ. ಸಂವಹನಕ್ಕೆ ಬೇಕಾಗುವಷ್ಟು ಕಲಿಯುವುದು ಮಾತ್ರ ಕಡ್ಡಾಯವಾಗಬೇಕು.

ಪ್ರಸ್ತುತ

ಸುರೇಂದ್ರ ಪೈ, ಭಟ್ಕಳ

ದುಬಾರಿ ಶಾಲಾ ಶಿಕ್ಷಣಕ್ಕೆ ಕಡಿವಾಣ ಬೇಕಲ್ಲವೇ?

ಇತ್ತೀಚಿಗೆ ಪಾಲಕರು ಶಿಕ್ಷಣದ ವಿಷಯದಲ್ಲಿ ಸಿಟಿ ಶಾಲೆಗಳು ಗ್ರಾಮೀಣ ಭಾಗದ ಶಾಲೆಗಳಿಗಿಂತ ಹೆಚ್ಚು ಉತ್ತಮವಾದ ಶಿಕ್ಷಣವನ್ನು ನೀಡುತ್ತಿವೆ ಎಂಬ ತಪ್ಪು ಕಲ್ಪನೆಯನ್ನು ಹೊಂದಿದಂತಿದೆ. ತಮ್ಮ ಮಕ್ಕಳನ್ನು ನಗರ ಪ್ರದೇಶದ ದೊಡ್ಡ ದೊಡ್ಡ ಶಾಲೆಗಳಿಗೆ ಸೇರಿಸುವುದರಿಂದ ಮಕ್ಕಳು ಇನ್ನಷ್ಟು ಜಾಣರಾಗುತ್ತಾರೆ ಎಂಬ ಭಾವನೆಯೂ ಹೆಚ್ಚಾದಂತಿದೆ. ಪಾಲಕರ ಈ ಒಂದು ಮನಸ್ಥಿತಿಯನ್ನು ಅರಿತ ಬಹಳಷ್ಟು ನಗರ ಪ್ರದೇಶದ ಖಾಸಗಿ ಶಾಲೆಗಳು ಶಿಕ್ಷಣ ಇಲಾಖೆಯ ಆದೇಶವನ್ನು ಧಿಕ್ಕರಿಸಿ ತಮಗೆ ಬೇಕಾದ ರೀತಿಯಲ್ಲಿ ಶಾಲಾ ಶುಲ್ಕವನ್ನು ನಿಗದಿಪಡಿಸುತ್ತಿದ್ದಾರೆ. ಬೆಂಗಳೂರಿನ ಬಹುತೇಕ ಖಾಸಗಿ ಶಾಲೆಗಳಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳಿಗೆ ಕನಿಷ್ಠ 60 ಸಾವಿರ ಶಾಲಾ ಶುಲ್ಕ, ಒಂದನೇ ತರಗತಿಗೆ 1 ಲಕ್ಷಕ್ಕೂ ಅಧಿಕ ಶುಲ್ಕವನ್ನು ನಿಗದಿಪಡಿಸಿರುವುದನ್ನು ಕಾಣಬಹುದು. ಈ ದರ ಪಟ್ಟಿಯು ತರಗತಿಯಿಂದ ತರಗತಿಗೆ ಏರುತ್ತಲೇ ಸಾಗುತ್ತದೆ. ಮಗು ಹತ್ತನೇ ತರಗತಿ ಬಂದಾಗ ಇಂದಿನ ಶುಲ್ಕದ ಪ್ರಕಾರ ಕನಿಷ್ಠ 2 ಲಕ್ಷ ರೂಪಾಯಿಗಳನ್ನು ಪ್ರೌಢಶಾಲಾ ಶಿಕ್ಷಣಕ್ಕಾಗಿ ಪಾಲಕರು ವ್ಯಯ ಮಾಡುತ್ತಾರೆ.

ಇದನ್ನೆಲ್ಲಾ ಕೇಳಿದಾಗ ಒಮ್ಮೆ ಹೌಹಾರುವುದು ನಿಜ!. ಇಷ್ಟೊಂದು ಶುಲ್ಕವನ್ನು ನಾವೆಲ್ಲಾ ನಮ್ಮ ಪದವಿ ಶಿಕ್ಷಣಕ್ಕೂ ಭರಿಸಿರಲಿಲ್ಲ. ಲಕ್ಷ ದೂರದ ಮಾತು , ಕೆಲವೇ ಸಾವಿರಗಳಲ್ಲಿ ನಮ್ಮ ಪ್ರಾಥಮಿಕ , ಪ್ರೌಢ ಹಾಗೂ ಪಿಯುಸಿ ಶಿಕ್ಷಣ ಮುಗಿದಿರುತ್ತಿತ್ತು. ಆದರೆ ಇಂದು ನಗರ ಪ್ರದೇಶಗಳಲ್ಲಿ ಎಲ್‌ಕೆ ಜಿ ಯಿಂದ ಪಿಯುಸಿ ಶಿಕ್ಷಣ ಮಾಡಬೇಕೆಂದರೆ ಕನಿಷ್ಠ 10-15 ಲಕ್ಷ ಬೇಕಾಗುತ್ತದೆ. ಶಿಕ್ಷಣದ ಹೆಸರಿನಲ್ಲಿ ಲಕ್ಷಗಟ್ಟಲೇ ಶುಲ್ಕ ವಸೂಲಿ ಮಾಡುವ 'ಎಜುಕೇಶನ್ ಮಾಫಿಯಾ' ಹೆಚ್ಚಾಗುತ್ತಿದೆ. ಇಷ್ಟೊಂದು ದುಬಾರಿ ಶುಲ್ಕವನ್ನು ಭರಿಸಲು ಎಲ್ಲಾ ಪಾಲಕರು ಶಕ್ತರೇ? ಇಷ್ಟೊಂದು ದುಬಾರಿ ಶಿಕ್ಷಣದ ಅವಶ್ಯಕತೆ ಇದೆಯೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳಬೇಕಿದೆ. ಲಕ್ಷ ಲಕ್ಷ ಕೊಟ್ಟರೂ ಸಹ ಎಲ್‌ಕೆಜಿ, ಯುಕೆಜಿ , ಒಂದನೇ ತರಗತಿಯ ಹಂತ ಮಗುವಿಗೆ ಅ, ಆ, ಇ.. ಕಾಗುಣಿತವನ್ನೇ ಕಲಿಸಲಾಗಬೇಕೇ ವಿನಃ ಅದಕ್ಕೂ ಮೀರಿ ಆ ವಯಸ್ಸಿನಲ್ಲಿ ಮತ್ತೇನನ್ನೂ ಕಲಿಸಲು ಸಾಧ್ಯವಿಲ್ಲ. ಒಂದು ವೇಳೆ ಶಿಕ್ಷಕರು ಕಲಿಸಲು ಮುಂದಾದರೂ ಸಹ 3-6 ವಯಸ್ಸಿನ ಮಗುವಿನ ಬೌದ್ಧಿಕ ಬೆಳವಣಿಗೆಯನ್ನು ಮೀರಿ ಹೆಚ್ಚಿನದ್ದನ್ನು ಮಗುವಿನ ತಲೆಯೊಳಗೆ ತುರುಕಲು ಸಾಧ್ಯವಿಲ್ಲ. ಈ ಮಗುವಿನ ಮನೋ ವಿಕಾಸದ ಹಂತಗಳ ಬಗ್ಗೆ ಯಾವ ಪಾಲಕರು ಅರಿಯಲು ಸಿದ್ಧರಿಲ್ಲ. ಹೌದು ಸಿಟಿ ಶಾಲೆಗಳಲ್ಲಿ ತರಗತಿಗಳ ವಿನ್ಯಾಸ, ಪೀಠೋಪಕರಣ ಗಳು, ಲ್ಯಾಬ್, ಗ್ರಂಥಾಲಯದ ಜೊತೆಗೆ ಇಂದಿನ ಆಧುನಿಕ ತಂತ್ರಜ್ಞಾನವನ್ನು ಪರಿಚಯಿಸಲಾಗಿರುತ್ತದೆ. ಇವೆಲ್ಲಾ ಕಾರಣಗಳಿಗಾಗಿ ತಮ್ಮ ಶಾಲೆಯು ಬೇರೆ ಶಾಲೆಗಳಿಗಿಂತಲೂ ಭಿನ್ನವಾಗಿದೆ ಎಂದು ಲಕ್ಷಾಂತರ ಶುಲ್ಕವನ್ನು ವಸೂಲಿ ಮಾಡುತ್ತವೆ. ಆದರೆ ಒಂದು ಶಾಲೆಯು ಎಷ್ಟೇ ಬಾಹ್ಯ ಸಂಪನ್ಮೂಲಗಳನ್ನು ಹೊಂದಿದ್ದರು ಸಹ ಅದನ್ನು ಮಗುವಿಗೆ ಅರ್ಥವಾಗುವಂತೆ ಪಾಠ ಮಾಡುವಲ್ಲಿ ಶಿಕ್ಷಕನ ಪಾತ್ರವೇ ನಿರ್ಣಾಯಕ. ಅಂತಹ ಶಿಕ್ಷಕರು ಎಲ್ಲಿರುತ್ತಾರೋ ಅಲ್ಲಿ ಮಕ್ಕಳು ಆನಂದದಾಯಕ ಕಲಿಕೆಯಲ್ಲಿ ಭಾಗವಹಿಸಲು ಸಾಧ್ಯ. ಅದು ಸಿಟಿ ಶಾಲೆಯಾಗಿರಲಿ, ಹಳ್ಳಿ ಶಾಲೆಯಾಗಿರಲಿ. ಮಕ್ಕಳು ಆ ಹಂತದಲ್ಲಿ ಅ, ಆ, ಇ, ಅಥವಾ ಎ ಬಿ ಸಿ ಡಿ , ಕಾಗುಣಿತವನ್ನು ಮಾತ್ರ ಕರಗತ ಮಾಡಿಕೊಳ್ಳಲು ಸಾಧ್ಯವಲ್ಲವೇ? ನಗರ ಪ್ರದೇಶದ ಹಲವು ಶಾಲೆಗಳಲ್ಲಿ ಆಟದ ಮೈದಾನವಿಲ್ಲ. ಯಾವುದೋ ಅಪಾರ್ಟ್‌ಮೆಂಟ್ ನ ಒಂದೆರಡು ಕೊಠಡಿಗಳಲ್ಲಿ ಪ್ರೀ ಸ್ಕೂಲಿಂಗ್ ನಡೆಸುತ್ತಿರುತ್ತಾರೆ. ತಮ್ಮ ಅನಿವಾರ್ಯತೆಗಾಗಿ ವಾಸ್ತವವನ್ನು ಮರೆತ ಜನರು ಸಿಟಿ ಶಾಲೆಗಳೇ ಹೆಚ್ಚು ಫಲಿತಾಂಶ ನೀಡುತ್ತಿವೆ ಎಂದು ಹೇಳುತ್ತಿದ್ದಾರೆ. ಆದರೆ ಕಳೆದ ಹಲವು ವರ್ಷಗಳಿಂದಲೂ ಗ್ರಾಮೀಣ ಪ್ರದೇಶ ಮಕ್ಕಳೇ ಒಟ್ಟಾರೆ ಫಲಿತಾಂಶದಲ್ಲಿ ಮುಂದಿದ್ದಾರೆ. ಅಭಿವೃದ್ಧಿಯ ಗಾಳಿ ಹಳ್ಳಿಗಳಿಗೂ ಬೀಸಿದ್ದು, ಸುಸಜ್ಜಿತ ರಸ್ತೆಗಳು, ಕುಡಿಯುವ ನೀರು, ಮೂಲಭೂತ ಸೌಕರ್ಯಗಳು ಎಲ್ಲವೂ ಮಕ್ಕಳಿಗೆ ಲಭ್ಯವಿದೆ. ಹಳ್ಳಿಯ ಮಕ್ಕಳಲ್ಲಿ ಅದಮ್ಯ ಇಚ್ಛಾಶಕ್ತಿಯಿದೆ. ಮಾನವೀಯ ಮೌಲ್ಯಗಳಿವೆ. ಗುರುಹಿರಿಯರು, ಶಿಕ್ಷಕರು ಎಂಬ ಗೌರವವಿದೆ. ಆದರೆ ಅದುವೇ ಲಕ್ಷಗಟ್ಟಲೇ ಶುಲ್ಕ ನೀಡಿ ಅದೇ ಅ, ಆ, ಇ.. ಕಲಿಯುತ್ತಿರುವ ಸಿಟಿ ಮಕ್ಕಳಿಗರ ಇದ್ಯಾವುದೂ ಇಲ್ಲ.

ವಾಸಿಯಾಗದ ಅಸ್ತಮಾ, ನಿಯಂತ್ರಣವೊಂದೇ ಪರಿಹಾರ

ಪ್ರತಿ ವರ್ಷ ಮೇ ತಿಂಗಳ ಮೊದಲನೇ ಮಂಗಳವಾರದಂದು ವಿಶ್ವ ಅಸ್ತಮಾ ದಿನ ಎಂದು ಆಚರಿಸಲಾಗುತ್ತಿದೆ. ವಿಶ್ವದಾದ್ಯಂತ ಅಸ್ತಮಾ ರೋಗದ ಬಗೆಗಿನ ಅಪನಂಬಿಕೆಗಳನ್ನು ಹೋಗಲಾಡಿಸಿ, ರೋಗದ ಬಗ್ಗೆ ಜಾಗೃತಿ ಮೂಡಿಸಿ, ರೋಗಿಗಳಿಗೆ ಆತ್ಮಸ್ಥೈರ್ಯವನ್ನು ನೀಡುವ ಸದುದ್ದೇಶ ಈ ಆಚರಣೆಯ ಹಿಂದೆ ಇದೆ. ಅಸ್ತಮಾ ರೋಗವು ಶ್ವಾಸಕೋಶಗಳಿಗೆ ಸಂಬಂಧಿಸಿದ ದೀರ್ಘಕಾಲಿಕ ರೋಗವಾಗಿದ್ದು, ಮುಖ್ಯವಾಗಿ ರೋಗಿಯ ಉಸಿರಾಟದ ಪ್ರಕ್ರಿಯೆ ಮೇಲೆ ತೊಂದರೆಯನ್ನು ಉಂಟುಮಾಡುತ್ತದೆ. ರೋಗದ ತೀವ್ರತೆ ಮತ್ತು ಕೆರಳುವಿಕೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದ್ದು, ಅಸ್ತಮಾ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಲಾಗದಿದ್ದರೂ, ನಿರಂತರವಾದ ಚಿಕಿತ್ಸೆ, ಸೂಕ್ತ ವೈದ್ಯಕೀಯ ಮಾರ್ಗದರ್ಶನ ಮತ್ತು ಜೀವನ ಶೈಲಿಯನ್ನು ಮಾರ್ಪಾಡು ಮಾಡಿ ರೋಗವನ್ನು ಖಂಡಿತವಾಗಿಯೂ ನಿಯಂತ್ರಣವಾಗಿಟ್ಟುಕೊಂಡು, ಜೀವನವನ್ನು ಇತರ ಎಲ್ಲರಂತೆ ಸಂಪೂರ್ಣವಾಗಿ ಆನಂದಿಸುವ ಎಲ್ಲಾ ಸಾಧ್ಯತೆಗಳೂ ಇದೆ. 1998ರಲ್ಲಿ ಆರಂಭವಾದ ಈ ವಿಶ್ವ ಅಸ್ತಮಾ ದಿನಾಚರಣೆಯನ್ನು ಪ್ರತಿ ವರ್ಷ ನಡೆಸಲಾಗುತ್ತದೆ. ಬಾರ್ಸಿಲೋನಾದಲ್ಲಿ ನಡೆದ ಮೊದಲ ವಿಶ್ವ ಅಸ್ತಮಾ ಸಮಾವೇಶದ ಸವಿ ನೆನಪಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ. ಮಕ್ಕಳಿಗೆ ಉಸಿರಾಡಲು ನೆರವಾಗಿ ಎಂಬ ಧ್ಯೇಯ ವಾಕ್ಯದೊಂದಿಗೆ 1998ರಲ್ಲಿ ಆರಂಭವಾದ ಈ ಆಚರಣೆ, 2007ರಿಂದ 2015ರ ವರೆಗೆ 'ನೀವು ನಿಮ್ಮ ಅಸ್ತಮಾವನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು' ಎಂಬ ತಿರುಳಿನೊಂದಿಗೆ ಆಚರಿಸಲಾಯಿತು. 'ಎಲ್ಲರಿಗೂ ಇನ್ಹೇಲ್ಡ್ ಚಿಕಿತ್ಸೆಗಳು ಲಭ್ಯವಾಗುವಂತೆ ಮಾಡಿ' ಎನ್ನುವುದು 2025ರ ದಿನಾಚರಣೆಯ ಧ್ಯೇಯ ವಾಕ್ಯ.

ವಿಶ್ವ ಆರೋಗ್ಯ ಸಂಸ್ಥೆಯ ಅಂಕಿಅಂಶಗಳ ಪ್ರಕಾರ ಜಗತ್ತಿನಲ್ಲಿ ಸುಮಾರು 26.2 ಕೋಟಿ ಅಸ್ತಮಾ ರೋಗಿಗಳಿದ್ದಾರೆ. ಭಾರತವೊಂದರಲ್ಲೇ ಸುಮಾರು ಒಂದೂವರೆ ಕೋಟಿ ಜನರು ಅಸ್ತಮಾದಿಂದ ಬಳಲುತ್ತಿದ್ದಾರೆ. ವಿಶ್ವದಲ್ಲಿ ವಾರ್ಷಿಕ ಸುಮಾರು 2.5 ಲಕ್ಷ ಅಸ್ತಮಾ ರೋಗಿಗಳು ಸಾವನ್ನಪ್ಪುತ್ತಾರೆ ಎಂದು ತಿಳಿದು ಬಂದಿದೆ. ಈ ಕಾರಣದಿಂದಲೇ ಇಡೀ ಮೇ ತಿಂಗಳಲ್ಲಿ ಅಸ್ತಮಾ ರೋಗದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಿ, ಅಸ್ತಮಾ ರೋಗವನ್ನು ತಡೆಗಟ್ಟುವ ಮತ್ತು ಹತೋಟಿಯಲ್ಲಿಡುವ ವಿವಿಧ ಶಿಬಿರಗಳನ್ನು ಏರ್ಪಡಿಸಿ, ಜನರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಮೇ ತಿಂಗಳನ್ನು ಅಸ್ತಮಾ ತಿಳಿವಳಿಕೆ ತಿಂಗಳು ಎಂದು ಆಚರಿಸಲಾಗುತ್ತಿದೆ.

ಏನಿದು ಅಸ್ತಮಾ ಖಾಯಿಲೆ?

ಅಸ್ತಮಾ ಎನ್ನುವುದು ಶ್ವಾಸಕೋಶಗಳಿಗೆ ಸಂಬಂಧಿಸಿದ ದೀರ್ಘಕಾಲಿಕ ಖಾಯಿಲೆಯಾಗಿದೆ. ಶ್ವಾಸಕೋಶಗಳು ನಮ್ಮ ದೇಹದ ಅತ್ಯಂತ ಕ್ರಿಯಾತ್ಮಕವಾದ ಅಂಗವಾಗಿದ್ದು ದೇಹದ ಎಲ್ಲಾ ಜೀವಕೋಶಗಳಿಗೆ ಅತೀ ಅಗತ್ಯವಾದ ಆಕ್ಸಿಜನ್ (ಆಮ್ಲಜನಕ)ನ ಪೂರೈಕೆಯನ್ನು ಮಾಡುವ ಗುರುತರವಾದ ಜವಬ್ದಾರಿಯನ್ನು ಹೊಂದಿರುತ್ತದೆ. ನಾವು ಮೂಗಿನ ಮೂಲಕ ಒಳಗೆಳೆದುಕೊಂಡ ಗಾಳಿ ಶ್ವಾಸನಾಳಗಳು ಅಥವಾ ಶ್ವಾಸಮಾರ್ಗಗಳ ಮೂಲಕ ಶ್ವಾಸಕೋಶಕ್ಕೆ ತಲುಪುತ್ತದೆ. ಶ್ವಾಸಕೋಶಗಳಲ್ಲಿರುವ ಚಿಕ್ಕ ಚಿಕ್ಕ ಗಾಳಿಚೀಲಗಳ ಮುಖಾಂತರ ನಾವು ಸೇವಿಸಿದ ಗಾಳಿಯಲ್ಲಿನ ಆಮ್ಲಜನಕ ಶ್ವಾಸಕೋಶದ ಒಳಗಿರುವ ರಕ್ತನಾಳಗಳ ಒಳಗೆ ಸೇರಿಕೊಂಡು ದೇಹದ ಇತರ ಎಲ್ಲಾ ಅಂಗಾಂಗಗಳಿಗೆ, ಜೀವಕೋಶಗಳಿಗೆ ರಕ್ತದ ಮುಖಾಂತರ ಆಮ್ಲಜನಕದ ಪೂರೈಕೆಯಾಗುತ್ತಲಿರುತ್ತದೆ. ಈ ಆಮ್ಲಜನಕದ ಪೂರೈಕೆಯಲ್ಲಿ ಸ್ವಲ್ಪವಾದರೂ ವ್ಯತ್ಯಾಸವಾದಲ್ಲಿ ಉಸಿರಾಟದ ತೊಂದರೆ ಉಂಟಾಗಿ ಮನುಷ್ಯನಿಗೆ ಚಡಪಡಿಕೆ ಉಂಟಾಗುತ್ತದೆ. ಅಸ್ತಮಾ ಎನ್ನುವ ರೋಗ ಮುಖ್ಯವಾಗಿ ಈ ಶ್ವಾಸನಾಳಗಳಿಗೆ ಮತ್ತು ಶ್ವಾಸಕೋಶದ ಚಿಕ್ಕಚಿಕ್ಕ ಗಾಳಿಚೀಲಗಳಿಗೆ ಸಂಬಂಧಿಸಿದ ದೀರ್ಘಕಾಲಿಕ ರೋಗವಾಗಿದ್ದು ಸುದೀರ್ಘ ಕಾಲದ ಚಿಕಿತ್ಸೆ ಮತ್ತು ನಿರಂತರವಾದ ಆರೈಕೆ ಅತೀ ಅವಶ್ಯಕ.

ವಾತಾವರಣದ ಕಾರಣಗಳು ಮತ್ತು ವಂಶವಾಹಿನಿ ಕಾರಣಗಳು ಸಂಯುಕ್ತವಾಗಿ ಅಸ್ತಮಾ ರೋಗಕ್ಕೆ ಕಾರಣವಾಗಿದೆ. ಪರಿಸರ ಮತ್ತು ಜೈವಿಕ ಕಾರಣದಿಂದಾಗಿ ಅಸ್ತಮಾ ರೋಗಿಗಳ ಶ್ವಾಸ ಮಾರ್ಗವೂ ಉರಿಯೂತದಿಂದ ಕೂಡಿರುತ್ತದೆ. ರೋಗಿಯು ತನಗೆ ಬಹಳ ಸಂವೇದನಾ ಕಾರಕವಾಗಿರುವ ಅಲರ್ಜಿಕಾರಕ ವಸ್ತುಗಳನ್ನು ಶ್ವಾಸೋಛ್ವಾಸ ಮಾಡಿದಾಗ ಉರಿಯೂತವನ್ನು ಮತ್ತಷ್ಟು ಕೆರಳಿಸುತ್ತದೆ. ಹೀಗಾದಾಗ ಶ್ವಾಸಮಾರ್ಗಗಳ ಉರಿಯೂತವು ಶ್ವಾಸಮಾರ್ಗದ ವಾಯು ಸಂಚಲನಕ್ಕೆ ಸಂಚಕಾರ ಮಾಡಿ ಉಸಿರಾಟದ ತೊಂದರೆ ಕಾಣಿಸಿಕೊಳ್ಳಬಹುದು. ಶೀತಗಾಳಿ, ವೈರಾಣುಗಳು ಅಲರ್ಜಿಕಾರಕ ವಸ್ತುಗಳಾದ ಧೂಳು, ಮರಳು, ನಾರು ಅಥವಾ ಇನ್ನಾವುದೇ ಕಾರಣಗಳು ಶ್ವಾಸಮಾರ್ಗದ ಉರಿಯೂತವನ್ನು ಹೆಚ್ಚಾಗಿಸಿ ಅಸ್ತಮಾ ರೋಗ ಉಲ್ಬಣಿಸುವಂತೆ ಮಾಡುತ್ತದೆ.

ಅಸ್ತಮಾ ರೋಗದ ಲಕ್ಷಣಗಳು

1. ಉಬ್ಬಸ ಅಥವಾ ಉಸಿರಾಡುವ ಸಮಯದಲ್ಲಿ ಗೊರ ಗೊರ ಸದ್ದುಕೇಳಿಸುವುದು ಅಥವಾ ಉಸಿರಾಡುವಾಗ ಸಿಳ್ಳೆ ಹಾಕಿದಂತೆ ಸದ್ದು ಬರುವುದು.
2. ಎದೆ ಬಿಗಿಹಿಡಿತ, ಉಸಿರು ಕಿರಿದಾಗುವುದು, ಉಸಿರಾಡಲು ಕಷ್ಟವಾಗುವುದು
3. ವಿಪರೀತವಾದ ದೀರ್ಘಕಾಲಿಕ ಕೆಮ್ಮು
4. ವಿಪರೀತ ಮತ್ತು ನಿರಂತರ ಕೆಮ್ಮಿನಿಂದಾಗಿ ನಿದ್ರಾಹೀನತೆ, ನಿಶ್ಯಕ್ತಿ,ಅಸಹನೆ, ನಿರುತ್ಸಾಹ… ಆಟೋಟ ಮತ್ತು ಇತರ ಚಟುವಟಿಕೆಗಳಿಂದ ದೂರ ಇರುವುದು ಇತ್ಯಾದಿ.

ಅಸ್ತಮಾ ಅಘಾತ

ಅಸ್ತಮಾ ರೋಗದಿಂದ ಬಳಲುತ್ತಿರುವವರು ದೈನಂದಿನ ಚಟುವಟಿಕೆಗಳನ್ನು ಅತಿಯಾಗಿ ಕಾಳಜಿ ವಹಿಸಬೇಕಾಗುತ್ತದೆ. ಅಲರ್ಜಿಕಾರಕ ವಸ್ತುಗಳಿಗೆ ಒಡ್ಡಿಕೊಂಡಾಗ ಅಸ್ತಮಾ ಕೆರಳುತ್ತದೆ. ಧೂಳಿನ ಕಣಗಳು, ಪರಾಗದ ಕಣಗಳು, ಸಾಕುಪ್ರಾಣಿಗಳ ರೋಮಗಳು, ಹುರುಪೆಗಳು ಇತ್ಯಾದಿಗಳು ಹೆಚ್ಚಾಗಿ ಅಸ್ತಮಾ ಅಲರ್ಜಿಕಾರಕ ವಸ್ತಗಳಾಗಿರುತ್ತದೆ. ಕೆಲವೊಮ್ಮೆ ಅಲರ್ಜಿಕಾರಕ ವಸ್ತುಗಳಲ್ಲದೆ ಶೀತಗಾಳಿ/ತಂಪುಗಾಳಿ, ವಾಯುಮಾಲಿನ್ಯ, ಹೊಗೆ, ವಿಪರೀತ ಒತ್ತಡ, ಶೀತ ಪದಾರ್ಥ ಸೇವನೆ, ಅಜೀರ್ಣವಾದಾಗ, ಆಹಾರದಲ್ಲಿ ವಿಷಬೆರಕೆ ಆದಾಗಲೂ ಅಸ್ತಮಾ ರೋಗ ಕೆರಳುವ ಸಾಧ್ಯತೆ ಇರುತ್ತದೆ. ಕೆಲವೊಮ್ಮೆ ದೈಹಿಕ ವ್ಯಾಯಾಮದ ಬಳಿಕವೂ ಅಸ್ತಮಾ ಅಘಾತ ಉಂಟಾಗಬಹುದು. ಈ ರೀತಿ ಅಸ್ತಮಾ ಕೆರಳಿದಾಗ ಶ್ವಾಸ ಮಾರ್ಗದ ಸುತ್ತಲಿರುವ ಸ್ನಾಯುಗಳು ಬಿಗಿಯಾಗಿ ಸೆಟೆದು ನಿಲ್ಲುತ್ತದೆ. ಶ್ವಾಸ ಮಾರ್ಗದ ಸುತ್ತಳತೆ ಕಡಿಮೆಯಾಗಿ ಗಾಳಿಯ ಸಂಚಲನೆ ಕುಂಠಿತವಾಗ ಬಹುದು. ಅದೇ ರೀತಿ ಶ್ವಾಸಮಾರ್ಗದೊಳಗಿನ ಒಳಪದರ ಊದಿಕೊಂಡು ಉರಿಯೂತ ಉಲ್ಬಣಿಸುತ್ತದೆ ಮತ್ತು ಶ್ವಾಸ ಮಾರ್ಗದಲ್ಲಿ ಲೋಳೆಯ ಉತ್ಪನ್ನ ಜಾಸ್ತಿಯಾಗಿ ಗಾಳಿಯ ಸಂಚಾರಕ್ಕೆ ಮತ್ತಷ್ಟು ಸಂಚಕಾರ ತರುತ್ತದೆ. ಹೀಗೆ ಗಾಳಿಯ ಸಂಚಾರವಿಲ್ಲದಾಗ ಆಮ್ಲಜನಕದ ಕೊರತೆಯಾಗಿ ರಕ್ತಕ್ಕೆ ಮತ್ತು ದೇಹದ ಇನ್ನಿತರ ತುರ್ತು ಮತ್ತು ಅನಿವಾರ್ಯ ಅಂಗಾಂಗಗಳಾದ ಮೆದುಳು ಕಿಡ್ನಿಗಳಿಗೆ ಆಮ್ಲಜನಕದ ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗಿ ಮಾರಣಾಂತಿಕವಾಗಿ ಪರಿಣಮಿಸಲೂಬಹುದು.

ವಿಶ್ವ ಅಸ್ತಮಾ ದಿನ
ಡಾ. ಮುರಲೀ ಮೋಹನ್ ಚೂಂತಾರು
vveditoped@gmail.com

ಅಸ್ತಮಾ ರೋಗಕ್ಕೆ ಪರಿಹಾರ ಅಥವಾ ಸಂಪೂರ್ಣ ಚಿಕಿತ್ಸೆ ಇಲ್ಲವಾದ ಕಾರಣದಿಂದ ಪರಿಣಾಮಕಾರಿ ಚಿಕಿತ್ಸೆ ಮತ್ತು ನಿಯಂತ್ರಣದ ಮುಖಾಂತರ ಅಸ್ತಮಾದ ರೋಗದ ಲಕ್ಷಣಗಳನ್ನು ನಿಯಂತ್ರಿಸಬೇಕು. ವೈದ್ಯರ ಸಲಹೆಯಂತೆ ಸೂಕ್ತ ಕಾಲದಲ್ಲಿ ಸರಿಯಾದ ಔಷಧಿ ಸೇವಿಸುತ್ತಾ ಅಸ್ತಮಾ ಕೆರಳಿಸುವ ವಸ್ತುಗಳಿಂದ ದೂರವಿರುವುದರಲ್ಲಿಯೇ ಜಾಣತನ ಅಡಗಿದೆ.

ಅಸ್ತಮಾ ಪತ್ತೆ ಹಚ್ಚುವುದು ಹೇಗೆ ?

ಶ್ವಾಸಕೋಶದ ಸಂಬಂಧಿ ರೋಗಿಗಳು ಇರುವವರಿಗೆ ಸ್ಪೈರೋಮೆಟ್ರಿ ಎಂಬ ವಿಶಿಷ್ಟ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ರೋಗಿಗಳು ದೀರ್ಘ ಉಸಿರುಗಳನ್ನು ಎಳೆದುಕೊಂಡು ಪರೀಕ್ಷೆ ಯಂತ್ರದ ಸೆನ್ಸಾರ್ ಪದರದ ಮೇಲೆ ಉಸಿರನ್ನು ಬಿಡಬೇಕು. ಈ ರೀತಿಯಿಂದ ರೋಗಿಗಳು ಉಸಿರನ್ನು ಒಳಗೆ ತೆಗೆದುಕೊಳ್ಳುವ ಮತ್ತು ಹೊರಗೆ ಬಿಡುವ ಪ್ರಮಾಣವನ್ನು ಮಾಪನ ಮಾಡಲಾಗುತ್ತದೆ. ಈ ಪರೀಕ್ಷೆಯಿಂದ ರೋಗಿಯೊಬ್ಬನ ಶ್ವಾಸಕೋಶದಿಂದ ಎಷ್ಟು ಪ್ರಮಾಣದ ಗಾಳಿಯನ್ನು ಸರಬರಾಜು ಮಾಡಲಾಗುತ್ತದೆ ಎಂಬುದನ್ನು ಮಾಪನ ಮಾಡಲಾಗುತ್ತದೆ. ಅಸ್ತಮಾ ಮತ್ತು ಇನ್ನಿತರ ಯಾವುದೇ ಶ್ವಾಸಕೋಶ ಸಂಬಂಧಿ ರೋಗಗಳಿರುವವರಿಗೆ ಸ್ಪೈರೋಮೆಟ್ರಿ ಪರೀಕ್ಷೆಯ ಮುಖಾಂತರ ರೋಗದ ತೀವ್ರತೆ ಮತ್ತು ಚಿಕಿತ್ಸೆಯ ಸ್ಪಂದನ ಹಾಗೂ ಪ್ರಗತಿಯನ್ನು ಅಂದಾಜಿಸಲಾಗುತ್ತದೆ. ಈ ಪರೀಕ್ಷೆಯು ಫಲಿತಾಂಶಕ್ಕೆ ಅನುಗುಣವಾಗಿ ಅಸ್ತಮಾದ ತೀವ್ರತೆಯನ್ನು ನಿರ್ಧರಿಸಿ ಚಿಕಿತ್ಸೆ ಮತ್ತು ಔಷಧಿಯ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ಅದೇ ರೀತಿ ಅಲರ್ಜಿ ಪರೀಕ್ಷೆಯನ್ನು ನಡೆಸಿ ರೋಗಿಗಳು ಯಾವ ವಸ್ತುಗಳಿಗೆಲ್ಲಾ ಅಲರ್ಜಿಗೊಳಗಾಗುತ್ತಾರೆ ಎಂಬುದನ್ನು ತಿಳಿಯಲಾಗುತ್ತದೆ. ಅಸ್ತಮಾ ರೋಗಕ್ಕೆ ಕಾರಣವಾಗುವ ಅಲರ್ಜಿಕಾರಕ ವಸ್ತುಗಳನ್ನು ಗುರುತಿಸಿ ಅಂತಹ ವಸ್ತುಗಳನ್ನು ಸೇವಿಸದಂತೆ ಅಥವಾ ವಸ್ತುಗಳಿಗೆ ಎದುರಾಗದಂತೆ ಸೂಕ್ತ ಎಚ್ಚರವನ್ನು ವಹಿಸಲಾಗುತ್ತದೆ. ಅದೇ ರೀತಿ ಎದೆಗೂಡಿನ ಎಕ್ಸರೇ, ಮೂಗಿನ ಎಲುಬಿನ ಕ್ಷ ಕಿರಣ, ದೇಹದ ರಕ್ತದಲ್ಲಿನ ಅಲರ್ಜಿಯ ಪ್ರಮಾಣ ಮುಂತಾದ ಪರೀಕ್ಷೆಯ ಮುಖಾಂತರ ರೋಗಿಯನ್ನು ಕುಲಂಕಶವಾಗಿ ಅಭ್ಯಸಿಸಿದ ಬಳಿಕವೇ ಚಿಕಿತ್ಸೆಯನ್ನು ಆರಂಭಿಸಲಾಗುತ್ತದೆ. ಒಂದು ವೇಳೆ ರೋಗಿಯು ಯಾವುದಾದರೂ ವಸ್ತುಗಳಿಗೆ ಅಲರ್ಜಿ ಹೊಂದಿದ್ದಾನೆ ಎಂಬುದು ಪರೀಕ್ಷೆಗಳಿಂದ ಸಾಬಿತಾದಲ್ಲಿ ಅಂತಹ ವಸ್ತುಗಳು ಪುನಃ ಆ ವ್ಯಕ್ತಿಗೆ ಅಸ್ತಮಾ ರೋಗವನ್ನು ಕೆರಳಿಸುವ ಸಾಧ್ಯತೆ ಅಧಿಕವಾಗಿರುತ್ತದೆ. ಈ ನಿಟ್ಟಿನಲ್ಲಿ ಸೂಕ್ತವಾದ ಪರೀಕ್ಷೆ ಮತ್ತು ಎಚ್ಚರಿಕೆಗಳನ್ನು ವಹಿಸುವುದರಿಂದ ಅಸ್ತಮಾ ಕೆರಳುವಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು.

ಚಿಕಿತ್ಸೆ ಹೇಗೆ?

ಅಸ್ತಮಾ ಎನ್ನುವುದು ದೀರ್ಘಕಾಲಿಕ ಖಾಯಿಲೆಯಾಗಿದ್ದು ಸಂಪೂರ್ಣವಾಗಿ ರೋಗವನ್ನು ಗುಣಪಡಿಸುವುದು ಸಾಧ್ಯವಿಲ್ಲದ ಮಾತು. ಆದರೆ ಪರಿಣಾಮಕಾರಿಯಾದ ಚಿಕಿತ್ಸೆ ಮತ್ತು ಸೂಕ್ತ ಮಾರ್ಗದರ್ಶನದ ಮೂಲಕ ರೋಗದ ಲಕ್ಷಣಗಳನ್ನು ನಿಯಂತ್ರಿಸಬಹುದು. ವೈದ್ಯರು ಸೂಚಿಸಿದ ಔಷಧಿಗಳನ್ನು ಸೂಕ್ತ ಪ್ರಮಾಣದಲ್ಲಿ ಸಕಾಲದಲ್ಲಿ ಸೇವಿಸಬೇಕು. ಮತ್ತು ಅಸ್ತಮಾದ ಲಕ್ಷಣಗಳನ್ನು ಉದ್ರೇಕಿಸುವ ಅಂಶಗಳಿಂದ ದೂರವಿರುವುದು ಒಳಿತು. ಅಲರ್ಜಿ ಕಾರಕ ಅಂಶಗಳನ್ನು ಆದಷ್ಟು ತಪ್ಪಿಸಿಕೊಳ್ಳಬೇಕು. ಸಾಮಾನ್ಯವಾಗಿ ಅಸ್ತಮಾ ಚಿಕಿತ್ಸೆಯಲ್ಲಿ ಎರಡು ಬಗೆಯ ಮೂಲ ಔಷಧಗಳನ್ನು ಬಳಸಲಾಗುತ್ತದೆ.



1. ಅಸ್ತಮಾ ಅಘಾತವನ್ನು ತಡೆಯುವ ನಿಯಂತ್ರಣ ಔಷಧಿಗಳು : ಈ ರೀತಿಯ ಔಷಧಿಗಳು ಅಸ್ತಮಾ ರೋಗ ಲಕ್ಷಣಗಳನ್ನು ಪರಿಣಾಮಕಾರಿಯಗಿ ನಿಯಂತ್ರಿಸುತ್ತದೆ. ಮತ್ತು ಅಸ್ತಮಾ ರೋಗಕ್ಕೆ ಕಾರಣವಾಗಿರುವ ಉರಿಯೂತದಂತಹ ತೊಂದರೆಗಳು ಮರುಕಳಿಸದಂತೆ ಮತ್ತು ನಿರಂತರವಾಗಿರದಂತೆ ನಿಯಂತ್ರಿಸುತ್ತದೆ. ಆದರೆ ಅಸ್ತಮಾ ರೋಗದ ಸಂಪೂರ್ಣ ನಿಯಂತ್ರಣಕ್ಕಾಗಿ ರೋಗಿಗಳು ಈ ಔಷಧಿಗಳನ್ನು ಪ್ರತೀ ದಿನ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ. ರೋಗಿಗಳು ಸಹಜ ಸ್ಥಿತಿಯಲ್ಲಿರುವ ಸಮಯದಲ್ಲಿಯೂ ಈ ಔಷಧಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸೇದಬಹುದಾದ ಅಥವಾ ಶ್ವಾಸದ ಮುಖಾಂತರ ಒಳಗೆಳೆದುಕೊಳ್ಳಬಹುದಾದ ಸ್ಟಿರಾಯ್ಡ್‌ಗಳು ಬಹಳ ಪರಿಣಾಮಕಾರಿಯಾದ ಮತ್ತು ದೀರ್ಘಕಾಲಿಕ ಅಸ್ತಮಾ ನಿಯಂತ್ರಣಕ್ಕಾಗಿ ಬಳಸುವ ಔಷಧಿಯಾಗಿರುತ್ತದೆ. ಈ ರೀತಿ ಔಷಧಿಯ ಬಳಕೆಯಿಂದ ಅಸ್ತಮಾ ರೋಗದ ಲಕ್ಷಣವು ಕಡಿಮೆಯಾಗಿ ಆರೋಗ್ಯ ವೃದ್ಧಿಯಾಗುತ್ತದೆ. ಅಸ್ತಮಾ ತೀವ್ರ ಅಘಾತದ ಪ್ರಮಾಣ ಕಡಿಮೆಯಾಗಿ ಕ್ಷಿಪ್ರ ಉಪಶಮನಕಾರಿ ಔಷಧಿಗಳ ಬಳಕೆ ಕೂಡಾ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಈ ರೀತಿಯ ಔಷಧಿಗಳು ಹೆಚ್ಚು ಅಸ್ತಮಾ ರೋಗವನ್ನು ತಡೆಗಟ್ಟುವಲ್ಲಿ ಮತ್ತು ರೋಗ ಉಲ್ಬಣಗೊಳ್ಳದಂತೆ ತಡೆಯುವ ಕೆಲಸವನ್ನು ಪರಿಣಾಮಕಾರಿಯಾಗಿ ನಡೆಸುತ್ತದೆ.

2. ಕ್ಷಿಪ್ರ ಉಪಶಮನಕಾರಿ ಔಷಧಿಗಳು: ಸಾಮಾನ್ಯವಾಗಿ ಅಸ್ತಮಾ ಅಘಾತದ ಸಂದರ್ಭದ ಈ ಕ್ಷಿಪ್ರ ಉಪಶಮನಕಾರಿ ಔಷಧಿಗಳನ್ನು ಬಳಸಲಾಗುತ್ತದೆ. ಈ ಔಷಧಿಗಳು ಜೀವ ಸಂರಕ್ಷಣಾ ಔಷಧಿಗಳಾಗಿದ್ದು ಅಸ್ತಮಾ ಕೆರಳಿದ ತಕ್ಷಣ ಉಪಶಮನ ದೊರಕಲು ತೆಗೆದುಕೊಳ್ಳಬೇಕಾಗುತ್ತದೆ. ಈ ಜೀವ ರಕ್ಷಕ ಔಷಧಿಗಳು ಶ್ವಾಸನಾಳಗಳನ್ನು ಹಿಗ್ಗಿಸಿ ಗಾಳಿಯ ಚಲನೆಯನ್ನು ಹೆಚ್ಚಿಸಿ ರೋಗದ ಲಕ್ಷಣಗಳನ್ನು ಕುಗ್ಗಿಸಿ ತ್ವರಿತ ಆರಾಮ ನೀಡುತ್ತವೆ. ಈ ರೀತಿಯ ಕ್ಷಿಪ್ರ ಉಪಶಮನಕಾರಿ ಔಷಧಿಗಳನ್ನು ನಿಯಂತ್ರಕ ಔಷಧಿಗಳ ಬದಲಾಗಿ ತೆಗೆದುಕೊಳ್ಳಬಾರದು. ನಿಮ್ಮ ಔಷಧಿಗಳ ಬಗ್ಗೆ ಯಾವುದೇ ಸಂದೇಹವಿದ್ದಲ್ಲಿ ತಜ್ಞ ವೈದ್ಯರ ಬಳಿ ಸೂಕ್ತ ಮಾರ್ಗದರ್ಶನ ತೆಗೆದುಕೊಂಡಲ್ಲಿ ಉತ್ತಮ. ನೆನಪಿರಲಿ ಪ್ರತಿಯೊಬ್ಬ ಅಸ್ತಮಾ ರೋಗಿಯು ತನ್ನ ಬಳಿ ಈ ಕ್ಷಿಪ್ರ ಉಪಶಮನ ಔಷಧಿಗಳನ್ನು ಇಟ್ಟುಕೊಳ್ಳುವುದು ಅತೀ ಅವಶ್ಯಕ. ಇಲ್ಲವಾದಲ್ಲಿ ಅಪಾಯ ಕಟ್ಟಿಟ ಬುತ್ತಿ.

ತಡೆಗಟ್ಟುವುದು ಹೇಗೆ ?

ಅಸ್ತಮಾ ರೋಗಕ್ಕೆ ಸಂಪೂರ್ಣ ಪರಿಹಾರವಿಲ್ಲದ ಕಾರಣ ತಡೆಗಟ್ಟುವ ಪ್ರಕ್ರಿಯೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ವ್ಯಕ್ತಿಯು ಯಾವ ಕಾರಣಕ್ಕಾಗಿ ಅಸ್ತಮಾರೋಗಕ್ಕೆ ತುತ್ತಾಗುತ್ತಾನೆ ಎಂಬುದನ್ನು ಅರಿತು ಅಲರ್ಜಿ ಕಾರಕ ವಸ್ತುಗಳನ್ನು ವ್ಯಕ್ತಿಯ ಸಂಪರ್ಕಕ್ಕೆ ಬರದಂತೆ ಎಚ್ಚರ ವಹಿಸಬೇಕು. ಉದಾ: ಧೂಳು, ಧೂಮಪಾನದ ಹೊಗೆ, ಆಸ್ಪರೀನ್ ಮುಂತಾದ ನೋವು ನಿವಾರಕ ಔಷಧಿಗಳು, ಸಾಕು ಪ್ರಾಣಿಗಳ ರೋಮ, ಅಲರ್ಜಿಕಾರಕ ಆಹಾರ ಪದಾರ್ಥಗಳು. ಚಾಕಲೇಟು ಇತ್ಯಾದಿ. ಜೀವನ ಶೈಲಿಯ ಪರಿವರ್ತನೆಗೆ ಹೆಚ್ಚಿನ ಒತ್ತು ನೀಡಿ ವಾತವರಣದಲ್ಲಿನ ಅಲರ್ಜಿಕಾರಕ ವಸ್ತುಗಳು ಅಥವಾ ರಾಸಾಯನಿಕಗಳ ಸಂಪರ್ಕಕ್ಕೆ ಬರದಂತೆ ಹೆಚ್ಚಿನ ನಿಗಾ ವಹಿಸಲಾಗುತ್ತದೆ.

ಮುಕ್ತಾಯದ ಮುನ್ನ

ಅಸ್ತಮಾ ರೋಗ ಬಹಳ ಹಳೆಯ ರೋಗವಾಗಿದ್ದು ಪುರಾತನ ಈಜಿಪ್ಟ್ ಇತಿಹಾಸದಲ್ಲಿ ಕ್ರಿಸ್ತಪೂರ್ವ 500ರ ಸಮಯದಲ್ಲಿಯೂ ದಾಖಲಾದ ಬಗ್ಗೆ ವಿವರಗಳು ಇದೆ. ಆ ಕಾಲದಲ್ಲಿ ಕೈಫಿ ಎಂಬ ರಾಸಾಯನಿಕ ಮಿಶ್ರಿತ ನೀರಿನ ಮುಖಾಂತರ ಚಿಕಿತ್ಸೆ ನೀಡಿದ ದಾಖಲೆಗಳು ಇದೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ಅಥವಾ ಶೀತ ಹವೆಯಲ್ಲಿ ರಕ್ತನಾಳಗಳು ಸಂಕುಚಿತಗೊಂಡು ಶ್ವಾಸಕೋಶ ಸಂಬಂಧಿ ಹೆಚ್ಚಿನ ರೋಗಗಳು ಉಲ್ಬಣಗೊಳ್ಳುವುದು ಸಹಜ. ಅಸ್ತಮಾ ರೋಗ ಕೂಡಾ ಇದಕ್ಕೆ ಹೊರತಾಗಿಲ್ಲ. ಸಂಪೂರ್ಣವಾದ ಪರಿಹಾರ ಈ ರೋಗಕ್ಕೆ ಇಲ್ಲದಿದ್ದರೂ ಸೂಕ್ತ ಔಷಧಿಗಳನ್ನು ಸರಿಯಾದ ಪ್ರಮಾಣದಲ್ಲಿ ತೆಗೆದುಕೊಂಡಲ್ಲಿ ಅಸ್ತಮಾ ರೋಗ ಉಲ್ಬಣವಾಗದಂತೆ ಪರಿಣಾಮಕಾರಿಯಾಗಿ ತಡೆಯಲು ಸಾಧ್ಯವಿದೆ. ಕಾಲಕಾಲಕ್ಕೆ ವೈದ್ಯರನ್ನು ಕಂಡು ರೋಗದ ಲಕ್ಷಣಗಳು ಮರುಕಳಿಸದಂತೆ ಎಚ್ಚರ ವಹಿಸಿದಲ್ಲಿ ಅಸ್ತಮಾ ರೋಗ ನಮ್ಮ ದೈನಂದಿನ ಚಟುವಟಿಕೆಗಳಿಗೆ ಯಾವುದೇ ತೊಡಕಾಗದಂತೆ ಮಾಡಬಹುದು. ಅಸ್ತಮಾ ರೋಗದ ಸೂಕ್ತ ನಿರ್ವಹಣೆಯಲ್ಲಿ ರೋಗದ ಚಿಕಿತ್ಸೆಗಿಂತ ರೋಗ ತಡೆಗಟ್ಟುವ ಪ್ರಕ್ರಿಯೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 112

ಸಮಾಚಾರ ಸಣ್ಣದಲ್ಲ

ಪ್ರಶ್ನೆ ಕೈಬಿಡಲು ಲಂಚ: ರಾಜಸ್ಥಾನ ಶಾಸಕ ಸೆರೆ

ಜೈಪುರ: ರಾಜಸ್ಥಾನ ವಿಧಾನಸಭೆಗೆ ಸಲ್ಲಿಸಲಾಗಿದ್ದ ತೋಡಾಭಿಮ್ ಪ್ರದೇಶದ ಗಣಿಗಾರಿಕೆ ಗುತ್ತಿಗೆ ವಿಚಾರವಾಗಿ 3 ಪ್ರಶ್ನೆಗಳನ್ನು ಅಧಿವೇಶನದಲ್ಲಿ ಕೇಳದೇ

ಇರುವುದಕ್ಕಾಗಿ 2 ಕೋಟಿ ರು. ಲಂಚ ಕೇಳಿದ್ದ ಶಾಸಕರೊಬ್ಬರನ್ನು ಸೋಮವಾರ ಬಂಧಿಸಲಾಗಿದೆ. ಭಾರತ್ ಆದಿವಾಸಿ ಪಕ್ಷದ ಶಾಸಕ ಜೈಕೃಷ್ಣ ಪಟೇಲ್‌ರನ್ನು 20 ಲಕ್ಷ ರು. ಲಂಚ ಸ್ವೀಕರಿಸುತ್ತಿದ್ದಾಗಲೇ ಸಾಕ್ಷಿ ಸಮೇತ ಜೈಪುರದಲ್ಲಿನ ಅವರ ಅಧಿಕೃತ ನಿವಾಸದಲ್ಲಿ ರಾಜಸ್ಥಾನ ಪೊಲೀಸ್ ಇಲಾಖೆಯ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಬಂಧಿಸಿದೆ. ಶಾಸಕ ಪಟೇಲ್ 2 ಕೋಟಿ ರು. ಲಂಚ ಕೇಳಿದ್ದ ಬಗ್ಗೆ ಕರೌಲಿ ಜಿಲ್ಲೆಯ ತೋಡಾಭಿಮ್ ಬ್ಲಾಕ್‌ನ ಗಣಿ ಮಾಲೀಕರೊಬ್ಬರು 'ಎಸಿಬಿ'ಗೆ ದೂರು ಸಲ್ಲಿಸಿದ್ದರು. 2 ಪ್ರಶ್ನೆಗಳು ನಕ್ಷತ್ರ ಚಿಹ್ನೆಯವಾಗಿದ್ದು, ಸಂಬಂಧಪಟ್ಟ ಸಚಿವರೇ ಸದನದಲ್ಲಿ ಮೌಖಿಕ ಉತ್ತರ ನೀಡಬೇಕಿತ್ತು. ಒಂದು ಪ್ರಶ್ನೆ ಸಾಮಾನ್ಯ ಪ್ರಶ್ನೆಯಾಗಿತ್ತು. ಪಟೇಲ್, 2024ರ ಏಪ್ರಿಲ್‌ನಲ್ಲಿ ನಡೆದ ಉಪ ಚುನಾವಣೆಯಲ್ಲಿ ಬನ್ಸ್‌ವಾರಾ ಜಿಲ್ಲೆಯ ಬಾಗಿಡೋರಾ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ನ್ಯಾ. ವರ್ಮಾ ಮನೆಯಲ್ಲಿ ಹಣ: ತನಿಖಾ ಸಮಿತಿ ವರದಿ

ದೆಹಲಿ: ಈ ಮೊದಲು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ನ್ಯಾ.ಯಶವಂತ್ ವರ್ಮಾ ಮನೆಯಲ್ಲಿ ಕೋಟಿ ಮೊತ್ತದ ಹಣ ಪತ್ತೆಯಾದ ಪ್ರಕರಣದಲ್ಲಿ ಆಂತರಿಕ ತನಿಖೆಗೆ ಸುಪ್ರೀಂ ಕೋರ್ಟ್

ನೇಮಿಸಿದ್ದ ಮೂವರು ನ್ಯಾಯಾಧೀಶರ ತನಿಖಾ ಸಮಿತಿ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿಗೆ ವರದಿ ಸಲ್ಲಿಸಿದೆ. ನ್ಯಾ.ಯಶವಂತ್ ವರ್ಮಾರ ದೆಹಲಿ ನಿವಾಸದಲ್ಲಿ ಮಾ.14ರಂದು ಬೆಂಕಿ ಅವಘಡವಾಗಿ, ಆವರಣದಲ್ಲಿನ ಕೊಠಡಿಯಲ್ಲಿ ಅಂದಾಜು 15 ಕೋಟಿ ರು. ಹಣ ಅಗ್ನಿಶಾಮಕ ದಳದ ಕಣ್ಣಿಗೆ ಬಿದ್ದಿತ್ತು. ಈ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಮಾ.25ರಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಜಿ.ಎಸ್.ಸಂಧವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಅವರ ತನಿಖಾ ಸಮಿತಿ ರಚಿಸಿ, ವಿವರವಾದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿತ್ತು. ದೆಹಲಿಯ 30 ತುಘಲಕ್ ಕ್ರೆಸೆಂಟ್‌ನಲ್ಲಿರುವ ನ್ಯಾ.ವರ್ಮಾ ನಿವಾಸಕ್ಕೆ ಭೇಟಿ ನೀಡಿ ತನಿಖೆ ನಡೆಸಿ ಪ್ರತ್ಯಕ್ಷದರ್ಶಿಗಳ ಹೇಳಿಕೆ ಸಂಗ್ರಹಿಸಿ ವರದಿ ಸಿದ್ಧಪಡಿಸಿ ಸಲ್ಲಿಸಿದೆ. ವರದಿಯಲ್ಲಿನ ವಿವರಗಳು ಇನ್ನಷ್ಟೇ ಬಹಿರಂಗಗೊಳ್ಳಬೇಕಿದೆ.

ಕಾಶ್ಮೀರ ಭದ್ರತೆ: ಅರ್ಜಿ ವಜಾ ಮಾಡಿದ ಸುಪ್ರೀಂ

ದೆಹಲಿ: ಜಮ್ಮು-ಕಾಶ್ಮೀರಕ್ಕೆ ತೆರಳುವ ಪ್ರವಾಸಿಗರಿಗೆ ಪಹಲ್ಗಾಮ್ ಭಯೋತ್ಪಾದಕ ದಾಳಿ ಹಿನ್ನೆಲೆಯಲ್ಲಿ ಭದ್ರತೆ ಖಾತರಿ ಪಡಿಸಲು ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್)ಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ. ಇಂಥ ಅರ್ಜಿಗಳೆಲ್ಲವೂ ಪ್ರಚಾರದ ಗೀಳಿನಿಂದ ಸಲ್ಲಿಸಲಾಗುತ್ತದೆ. ಇವುಗಳನ್ನು ವಿಚಾರಣೆಗೆ ತೆಗೆದುಕೊಳ್ಳುವುದರಿಂದ ನ್ಯಾಯಾಲಯದ ಸಮಯ ವ್ಯರ್ಥವಾಗುತ್ತದೆ ಅಷ್ಟೇ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಅರ್ಜಿಯನ್ನು ವಜಾಗೊಳಿಸಿದೆ. ನ್ಯಾ.ಸೂರ್ಯಕಾಂತ್ ಮತ್ತು ನ್ಯಾ. ಎನ್.ಕೋಟೀಶ್ವರ್ ಸಿಂಗ್ ಅವರ ಪೀಠ, ಪಿಐಎಲ್ ಸಲ್ಲಿಸಿದ್ದ ವಕೀಲ ವಿಶಾಲ್ ತಿವಾರಿ ಅವರನ್ನು ತರಾಟೆಗೆ ತೆಗೆದುಕೊಂಡಿತು. ಅರ್ಜಿಯಲ್ಲಿ ಯಾವುದೇ ಸಾರ್ವಜನಿಕ ಹಿತದ ಉದ್ದೇಶವಿಲ್ಲ. ವಿಷಯದ ಸೂಕ್ಷ್ಮತೆ ನೀವು ಅರಿಯುತ್ತಿಲ್ಲವೇ? ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಅನಗತ್ಯ ವೆಚ್ಚಕ್ಕೆ ದಾರಿ ಮಾಡಿಕೊಂಡಿದ್ದೀರಿ ಎಂದು ನ್ಯಾ.ಸೂರ್ಯಕಾಂತ್ ತಿವಾರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಿಆರ್‌ಪಿಎಫ್‌ನ 16 ಹೊಸ ಬೆಟಾಲಿಯನ್?

ದೆಹಲಿ: ಪಾಕಿಸ್ತಾನ-ಭಾರತ ಮಧ್ಯೆ ಯುದ್ಧ ಕಾರ್ಮೋಡ ಕವಿದಿರುವ ಮಧ್ಯೆಯೇ, ಭಾರತ-ಪಾಕ್ ಮತ್ತು ಭಾರತ-ಬಾಂಗ್ಲಾದೇಶ ಗಡಿಯಲ್ಲಿ 2 ಫಾರ್ವರ್ಡ್ ಹೆಡ್ ಕ್ವಾರ್ಟರ್ಸ್‌ಗಳನ್ನು ನೆಲೆಗೊಳಿಸಲು ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಮುಂದಾಗಿದೆ. ಅಲ್ಲದೇ, ಒಟ್ಟು 17 ಸಾವಿರ ಯೋಧರು ಇರುವ 16 ಹೊಸ ಬೆಟಾಲಿಯನ್‌ಗಳನ್ನು ತನ್ನ ಪಡೆಗೆ ಸೇರ್ಪಡೆ ಮಾಡಿಕೊಳ್ಳುವುದಕ್ಕೂ ಸಿದ್ಧತೆ ನಡೆಸಿದೆ. ಈ ಸಂಬಂಧ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನೂ ಸಿಆರ್‌ಪಿಎಫ್ ಸಲ್ಲಿಸಿದ್ದು, ಸರಕಾರದ ಅನುಮೋದನೆಗಾಗಿ ನಿರೀಕ್ಷೆ ಮಾಡುತ್ತಿದೆ. ಅನುಮೋದನೆ ಸಿಕ್ಕ ಬಳಿಕ ಪಾಕ್ ಮತ್ತು ಬಾಂಗ್ಲಾ ಗಡಿಗಳ ಮುಂಚೂಣಿ ರೇಖೆಗಳ ಬಳಿ ತಲಾ ಒಂದೊಂದು ಹೊಸ 'ಮುಂಚೂಣಿ ಮುಖ್ಯ ಶಿಬಿರ'ಗಳು ನೆಲೆಗೊಳ್ಳುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

{ಅದ್ನಾನ್ ಸಾಮಿ } ಖ್ಯಾತ ಗಾಯಕ

ಅಜರ್ಬೈಜಾನ್‌ನ ಬಾಕು ಪ್ರವಾಸದಲ್ಲಿದ್ದಾಗ ಪಾಕಿಸ್ತಾನದ ಯುವಕರ ಗುಂಪು ಭೇಟಿಯಾಯಿತು. 'ಸರ್, ನೀವು ತುಂಬಾ ಅದೃಷ್ಟವಂತರು. ಸರಿಯಾದ ಸಮಯದಲ್ಲಿ ಪಾಕಿಸ್ತಾನ ತೊರೆದಿರಿ. ನಾವು ಕೂಡಾ ಪೌರತ್ವ ಬದಲಾಯಿಸಲು ಬಯಸಿದ್ದೇವೆ. ನಮ್ಮದೇ ಸೇನೆಯನ್ನು ನಾವು ದ್ವೇಷಿಸುವಂತಾಗಿದೆ. ಏಕೆಂದರೆ ಅದು ದೇಶವನ್ನೇ ನಾಶಪಡಿಸಿದೆ' ಎಂದು ಪಾಕ್ ಯುವಕರು ನನಗೆ ಹೇಳಿದರು.

ಉಗ್ರರು, ಸಹಚರರನ್ನು ಇರಿಸಿದ ಜೈಲುಗಳ ಮೇಲೆ ದಾಳಿಗೆ ಸಂಚು | ಗುಪ್ತಚರ ಮಾಹಿತಿ ಆಧರಿಸಿ ಕಾಶ್ಮೀರದಲ್ಲಿ ಕಟ್ಟೆಚ್ಚರ-ಐಜಿಪಿ ತಪಾಸಣೆ | 'ಓವರ್ ಗ್ರೌಂಡ್ ವರ್ಕರ್ಸ್' ವಿಚಾರಣೆ ವೇಳೆ ಎನ್‌ಐಎಗೆ ಮಾಹಿತಿ

ಈಗ ಜೈಲುಗಳತ್ತ ಉಗ್ರರ ಗುರಿ!

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯ 'ಪಹಲ್ಗಾಮ್'ನಲ್ಲಿ ಪ್ರವಾಸಿಗರ ಮೇಲೆ ದಾಳಿ ನಡೆಸಿ 26 ಜೀವ ಬಲಿ ಪಡೆದ ಬಳಿಕ ಪಾಕಿಸ್ತಾನ ಪ್ರೇರಿತ ಭಯೋತ್ಪಾದಕರ ಕಣ್ಣುಗಳು ಈಗ ಕಣಿವೆ ಭಾಗದಲ್ಲಿನ ಕಾರಾಗೃಹಗಳ ಮೇಲೆ ಬಿದ್ದಿದೆ. ಅದರಲ್ಲೂ ಕುಖ್ಯಾತ ಭಯೋತ್ಪಾದಕರು, ಸ್ಥಳೀಯ ಉಗ್ರ ಬೆಂಬಲಿಗರನ್ನು ಇರಿಸಲಾಗಿರುವ ಜೈಲುಗಳ ಮೇಲೆಯೇ ದಾಳಿ ನಡೆಸಲು ಭಯೋತ್ಪಾದಕರು ಸಂಚು ರೂಪಿಸಿದ್ದಾರೆ ಎಂದು ಗುಪ್ತಚರ ಸಂಸ್ಥೆಗಳು ಮಾಹಿತಿ ನೀಡಿವೆ. ಈ ಹಿನ್ನೆಲೆಯಲ್ಲಿ ಜಮ್ಮು-ಕಾಶ್ಮೀರದಲ್ಲಿನ ಎಲ್ಲಾ ಜೈಲುಗಳಿಗೂ ಭದ್ರತೆ ಹೆಚ್ಚಿಸಲಾಗಿದೆ.



ಮುಖ್ಯವಾಗಿ ಶ್ರೀನಗರದಲ್ಲಿನ ಕೇಂದ್ರ ಕಾರಾಗೃಹ ಹಾಗೂ ಜಮ್ಮುವಿನ ಕೋಟ್ ಬಲ್ವಾಲ್ ಜೈಲು ಮೇಲೆಯೇ ಉಗ್ರರು ದಾಳಿ ನಡೆಸಲು ಸಂಚು ರೂಪಿಸಿದ್ದಾರೆ ಎಂಬ ಮಾಹಿತಿಯನ್ನು ಗುಪ್ತಚರ ದಳ ನೀಡಿರುವುದರಿಂದ ಆ ಎರಡೂ ಜೈಲುಗಳಲ್ಲಿನ ಭದ್ರತಾ ವ್ಯವಸ್ಥೆಯನ್ನು ಹೆಚ್ಚಿಸಲಾಗಿದೆ. ಹೆಚ್ಚಿನ ಸಿಬ್ಬಂದಿಗಳನ್ನು ಆಧುನಿಕ ಶಸ್ತ್ರಾಸ್ತ್ರಗಳ ಸಹಿತ ನಿಯೋಜಿಸಲಾಗಿದೆ. ಖುದ್ದು ಜಮ್ಮು-ಕಾಶ್ಮೀರ ಪೊಲೀಸ್ ಇಲಾಖೆಯ ಐಜಿಪಿಯೇ ಸೋಮವಾರ ಈ ಎರಡೂ ಸೆರೆಮನೆಗಳಿಗೆ ಭೇಟಿ ನೀಡಿ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದ್ದಾರೆ ಎಂದು ತಿಳಿದುಬಂದಿದೆ.

ಶ್ರೀನಗರದ ಸೆಂಟ್ರಲ್ ಜೈಲ್ ಮತ್ತು ಜಮ್ಮುವಿನ ಕೋಟ್ ಬಲ್ವಾಲ್ ಜೈಲಿನಲ್ಲಿ ಹಲವಾರು ಮಂದಿ ಹೈಪ್ರೊಫೈಲ್ ಭಯೋತ್ಪಾದಕರು ಹಾಗೂ ಸ್ಲೀಪರ್ ಸೆಲ್ ಸದಸ್ಯರು ಇದ್ದಾರೆ ಎಂಬ ಕಾರಣಕ್ಕೇ ಈ ಎರಡೂ ಸೆರೆಮನೆಗಳು ಉಗ್ರರ ಮುಖ್ಯ ಗುರಿಯಾಗಿವೆ ಎನ್ನಲಾಗಿದೆ.

ಉಗ್ರರ ಸಹಚರರು: ಭಯೋತ್ಪಾದಕರಿಗೆ ಊಟ-ವಸತಿ-ಸಂಚಾರಕ್ಕೆ ವಾಹನ ವ್ಯವಸ್ಥೆ, ಒಣಹಣ್ಣುಗಳು, ಔಷಧಗಳನ್ನು ಒದಗಿಸುವುದಕ್ಕೆ ಸ್ಥಳೀಯರಲ್ಲಿ ಹಲವರು ಶ್ರಮಿಸಿದ್ದಾರೆ. ಈ ಅವರೆಲ್ಲರನ್ನೂ ಗುರುತಿಸಿ ಪಟ್ಟಿ ಮಾಡಿಕೊಂಡಿರುವ 'ಎನ್‌ಐಎ' ತನಿಖಾಧಿಕಾರಿಗಳು, ಒಬ್ಬೊಬ್ಬರನ್ನಾಗಿ ಕರೆಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ಜತೆಗೆ 14 ಮಂದಿಯನ್ನು ಈಗಾಗಲೇ ಪಹಲ್ಗಾಮ್ ದಾಳಿಗೆ ಸಂಬಂಧಿಸಿದಂತೆ ಬಂಧಿಸಿದ್ದಾರೆ.

ಪಹಲ್ಗಾಮ್ ದಾಳಿಗೆ ಸಂಬಂಧಿಸಿದಂತೆ ನಿಸಾರ್ ಮತ್ತು ಮುಷ್ತಾಕ್ ಎಂಬ ಇಬ್ಬರು ಉಗ್ರರ ಸಹಚರರ ವಿಚಾರಣೆಯನ್ನು ಎನ್‌ಐಎ ಅಧಿಕಾರಿಗಳು ನಡೆಸುತ್ತಿದ್ದಾರೆ.

ಜೈಲುಗಳ ಭದ್ರತಾ ವ್ಯವಸ್ಥೆ ಪರಿಶೀಲನೆ

ಅತ್ಯುಗ್ರ ಶ್ರೇಣಿಯಲ್ಲಿರುವ ಹಲವು ಭಯೋತ್ಪಾದಕರು ಹಾಗೂ ಉಗ್ರರಿಗೆ ಸ್ಥಳೀಯವಾಗಿ ನೆರವು-ಆಶ್ರಯ-ಆಹಾರ-ವಾಹನ ಸೌಕರ್ಯ ಒದಗಿಸುವ ಓವರ್ ಗ್ರೌಂಡ್ ವರ್ಕರ್ಸ್(ಒಜಿಡಬ್ಲ್ಯು)ಗಳಲ್ಲಿ ಹಲವರನ್ನು ಶ್ರೀನಗರ ಕೇಂದ್ರ ಕಾರಾಗೃಹ ಮತ್ತು ಫೋರ್ಟ್ ಬಲವಾಲ್ ಜೈಲಿನಲ್ಲಿ ಇರಿಸಲಾಗಿದೆ. ಈ ಜೈಲುಗಳ ಮೇಲೆ ಉಗ್ರರು ದಾಳಿ ನಡೆಸಲು ಸಂಚು ಹೂಡಿರುವ ಬಗ್ಗೆ ಗುಪ್ತಚರ ಮಾಹಿತಿ ಲಭ್ಯವಾದ ಬಳಿಕ 'ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್'(ಸಿಐಎಸ್‌ಎಫ್)ನ ಮಹಾ ನಿರ್ದೇಶಕರು(ಡಿಜಿ) ಜಮ್ಮು-ಕಾಶ್ಮೀರದ ಭದ್ರತಾ ಪಡೆಗಳ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ್ದಾರೆ. ಕಣಿವೆ ಪ್ರದೇಶದಲ್ಲಿನ ಜೈಲುಗಳ ಭದ್ರತೆ ವಿಚಾರವಾಗಿ ಸೋಮವಾರ ಚರ್ಚಿಸಿದ್ದಾರೆ. ಇದೇ ವೇಳೆ, ಜಮ್ಮು-ಕಾಶ್ಮೀರದ ಪೊಲೀಸ್ ಮಹಾ ನಿರೀಕ್ಷಕರು(ಐಜಿಪಿ) ರಾಜ್ಯದ ಬಂದೀಖಾನೆಗಳಿಗೆ ಭೇಟಿ ನೀಡಿ ಅಲ್ಲಿನ ಭದ್ರತಾ ವ್ಯವಸ್ಥೆಗಳನ್ನು ಖುದ್ದು ಪರಿಶೀಲನೆ ಮಾಡಿದ್ದಾರೆ.

ವಿಚಾರಣೆ ತೀವ್ರಗೊಳಿಸಿದ ಎನ್‌ಐಎ

ಏ.22ರಂದು ಪಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನಲ್ಲಿನ ಪ್ರವಾಸಿ ತಾಣದಲ್ಲಿ ಪಾಕ್ ಮೂಲದ ಭಯೋತ್ಪಾದಕರ ದಾಳಿಗೆ 26 ಮಂದಿ ಜೀವತೆತ್ತ ಘಟನೆಯ ತನಿಖೆ ಹೊಣೆ ಹೊತ್ತಿರುವ 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್‌ಐಎ) ಅಧಿಕಾರಿಗಳು ಹಲವು ಕೋನಗಳಿಂದ ತನಿಖೆಯನ್ನು ನಡೆಸುತ್ತಿದ್ದಾರೆ. ಮುಖ್ಯವಾಗಿ ಪಾಕ್‌ನಿಂದ ಬಂದು ದಾಳಿ ನಡೆಸಿದ ನಾಲ್ವರಿಗೆ ಸ್ಥಳೀಯರು ನೆರವು ನೀಡದೇ ಇದ್ದರೆ ದಾಳಿ ನಡೆಸುವುದು ಸಾಧ್ಯವೇ ಇಲ್ಲ ಎಂಬ ಕೋನದಲ್ಲಿ ತನಿಖೆಯನ್ನು ಮತ್ತಷ್ಟು ತೀವ್ರವಾಗಿ ನಡೆಸುತ್ತಿದ್ದಾರೆ. ಪಹಲ್ಗಾಮ್ ಪ್ರಕರಣ ಸಂಬಂಧ ಬಂಧಿಸಲಾಗಿರುವ 14 ಸ್ಥಳೀಯ 'ಓವರ್ ಗ್ರೌಂಡ್ ವರ್ಕರ್ಸ್'(ಒಜಿಡಬ್ಲ್ಯು)ಗಳಲ್ಲಿ ಇಬ್ಬರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ. ಆ ಇಬ್ಬರನ್ನೂ ಇರಿಸಲಾಗಿರುವ ಜೈಲುಗಳನ್ನೇ ಪಾಕ್ ಮೂಲದ ಭಯೋತ್ಪಾದಕರು ಗುರಿಯಾಗಿಸಿಕೊಂಡು ಜೈಲುಗಳ ಮೇಲೆ ದಾಳಿ ನಡೆಸಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿರುವುದಾಗಿ ಗುಪ್ತಚರ ಸಂಸ್ಥೆಗಳು ತಿಳಿಸಿವೆ. ಈ ಸಂಬಂಧ ಭದ್ರತಾ ಪಡೆಗಳಿಗೆ ವರದಿಯನ್ನೂ ಸಲ್ಲಿಸಿವೆ. 2023ರ ನಂತರದಲ್ಲಿ ಜಮ್ಮು-ಕಾಶ್ಮೀರದಲ್ಲಿ ನಡೆದಿರುವ ಹಲವು ಭಯೋತ್ಪಾದಕ ದಾಳಿ ಪ್ರಕರಣಗಳ ಮಾಹಿತಿಯನ್ನೂ ಜತೆಗಿಟ್ಟುಕೊಂಡು ಎನ್‌ಐಎ ಅಧಿಕಾರಿಗಳನ್ನು ಪಹಲ್ಗಾಮ್ ತನಿಖೆಯನ್ನು ಮುಂದುವರಿಸಿದ್ದಾರೆ ಎಂದು ತಿಳಿದುಬಂದಿದೆ.

ಈ ಹಿಂದೆ ಪುಲ್ವಾಮಾದಲ್ಲಿ ಸೇನಾ ವಾಹನದ ಮೇಲೆ ನಡೆದ ದಾಳಿಯಲ್ಲಿ ಭಯೋತ್ಪಾದಕರಿಗೆ ಇವರಿಬ್ಬರೂ ನೆರವಾಗಿದ್ದರು. ಈ ಇಬ್ಬರನ್ನೂ ಇರಿಸಲಾಗಿರುವ ಸೆರೆಮನೆಯ ಮೇಲೆಯೂ ಉಗ್ರರು ದಾಳಿ ನಡೆಸುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭ್ಯವಾಗಿದೆ. ಗುಪ್ತಚರ ದಳದ ಎಚ್ಚರಿಕೆ ನಂತರ ಜಮ್ಮು-ಕಾಶ್ಮೀರದ ಜೈಲುಗಳ ಭದ್ರತೆ ಹೆಚ್ಚಿಸಲಾಗಿದ್ದು, ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ಭದ್ರತಾ ಪಡೆ ಮೂಲಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿವೆ.

2 ವೆಬ್‌ಸೈಟ್ ಹ್ಯಾಕ್ ಮಾಡಿದ್ದೇವೆ ಎಂದ ಪಾಕ್ ಹ್ಯಾಕರ್ಸ್

ರಕ್ಷಣಾ ಇಲಾಖೆ ವೆಬ್‌ಗಳಿಗೆ ಪಾಕ್‌ನ ಹ್ಯಾಕರ್‌ಗಳ ಕಾಟ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಭಾರತ-ಪಾಕಿಸ್ತಾನ ರಾಜತಾಂತ್ರಿಕ ಕ್ರಮ, ಜಲ ಸಮರ, ಗಡಿ ಬಂದ್, ವ್ಯಾಪಾರ ಸ್ಥಗಿತ, ಏರ್‌ಸ್ಪೇಸ್ ನಿರ್ಬಂಧ ಮೊದಲಾದ ಕ್ರಮಗಳನ್ನು ಕೈಗೊಂಡಿದ್ದು, ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡುವ ಪ್ರಯತ್ನವೂ ನಡೆಯುತ್ತಿದೆ.

ಈ ಮಧ್ಯೆ, ಪಾಕಿಸ್ತಾನಿ ಹ್ಯಾಕರ್‌ಗಳು



ಭಾರತೀಯ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಕೆಲವು ವೆಬ್‌ಸೈಟ್‌ಗಳನ್ನು ಗುರಿಯಾಗಿಸಿ ಸೈಬರ್ ದಾಳಿ ನಡೆಸಿರುವುದಾಗಿ ಸೋಮ ವಾರ ಸಂಜೆ ಹೇಳಿಕೊಂಡಿವೆ. ಮಿಲಿಟರಿ ಎಂಜಿನಿಯರ್ ಸರ್ವಿಸಸ್ ಮತ್ತು ಮನೋಹರ್ ಪರಿಕ್ಕರ್ ಇನ್‌ಸ್ಟಿಟ್ಯೂಟ್ ಆಫ್ ಡಿಫೆನ್ಸ್ ಸ್ಟಡೀಸ್ ಅಂಡ್ ಅನಾಲಿಸಿಸ್ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿದ್ದು, ಸೂಕ್ಷ್ಮ ಡೇಟಾಗಳಿಗೆ ಪ್ರವೇಶ ಪಡೆದಿರುವುದಾಗಿ 'ಪಾಕಿಸ್ತಾನ್ ಸೈಬರ್ ಫೋರ್ಸ್' ಹೇಳಿಕೊಂಡಿದೆ. ಆದರೆ, ಭಾರತದ ರಕ್ಷಣಾ ಸಚಿವಾಲಯದಿಂದ ಈ ಕುರಿತು ಅಧಿಕೃತ ಪ್ರಕಟಣೆ ಸೋಮವಾರ ರಾತ್ರಿವರೆಗೂ ಬಂದಿರಲಿಲ್ಲ.

ರಕ್ಷಣಾ ಸಚಿವಾಲಯದಡಿ ಬರುವ ಸಾರ್ವಜನಿಕ ವಲಯದ ಉದ್ಯಮ ಸಂಸ್ಥೆಯಾದ ಆರ್ಮರ್ಡ್ ವೆಹಿಕಲ್ ನಿಗಮ್ ಲಿ.ನ ವೆಬ್‌ಸೈಟ್ ವಿರೂಪಗೊಳಿಸಲು ಪಾಕ್ ಹ್ಯಾಕರ್‌ಗಳು ಯತ್ನಿಸಿದ್ದಾರೆ ಎನ್ನಲಾಗಿದೆ. ಸಂಭಾವ್ಯ ಹಾನಿ ಪ್ರಮಾಣ ತಿಳಿಯಲು ಆರ್ಮರ್ಡ್ ವೆಹಿಕಲ್ ನಿಗಮ್ ಲಿ.ನ ವೆಬ್‌ಸೈಟ್ ಅನ್ನು ಪೂರ್ಣ ಪರಿಶೋಧನೆಗಾಗಿ ಆಫ್‌ಲೈನ್‌ಗೆ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸೈಬರ್ ದಾಳಿ ನಡೆದಿರಬಹುದು, ರಕ್ಷಣಾ ಸಿಬ್ಬಂದಿಯ ಲಾಗಿನ್ ರುಜುವಾತುಗಳು ಸೇರಿದಂತೆ ಸೂಕ್ಷ್ಮ ಮಾಹಿತಿಗೆ ಪಾಕ್ ಹ್ಯಾಕರ್‌ಗಳು ಹಾನಿ ಮಾಡಿರಬಹುದು. ಆದರೆ, ಯಾವ ಪ್ರಮಾಣದ ಹಾನಿಯಾಗಿದೆ ಎಂಬುದನ್ನು ಇನ್ನಷ್ಟೇ ತಿಳಿಯಬೇಕಿದೆ ಎಂದು ರಕ್ಷಣಾ ಸಂಸ್ಥೆಯ ಮೂಲಗಳು ಶಂಕೆ ವ್ಯಕ್ತಪಡಿಸಿವೆ.

ಸೈಬರ್ ಭದ್ರತೆ ಹೆಚ್ಚಳ



ಪಾಕ್ ಹ್ಯಾಕರ್‌ಗಳಿಂದ ರಕ್ಷಣಾ ಸಂಬಂಧಿ ವೆಬ್‌ಸೈಟ್‌ಗಳ ಮೇಲೆ ಸೈಬರ್ ದಾಳಿ ನಡೆದಿದೆ ಎಂಬ ಕಳವಳದ ಮಧ್ಯೆ, ದೇಶದ ಭದ್ರತೆ ಮತ್ತು ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದ ಸೈಬರ್ ತಾಣಗಳ ಭದ್ರತೆಯನ್ನು ಹೆಚ್ಚಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. ಡಿಜಿಟಲ್ ರಕ್ಷಣೆಗಳನ್ನು ಬಲಪಡಿಸಲಾಗುತ್ತಿದೆ. ಲೆಕ್ಕ ಪರಿಶೋಧನೆ ಕೂಡಾ ನಡೆದಿದೆ. ಹ್ಯಾಕಿಂಗ್ ಪ್ರಯತ್ನಗಳ ವಿರುದ್ಧ ಅಲರ್ಟ್ ಸಂದೇಶ ನೀಡುವ ವ್ಯವಸ್ಥೆಗಳನ್ನೂ ಅಳವಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಾಕ್‌ನಿಂದ ಸಂಭಾವ್ಯ ಸೈಬರ್ ದಾಳಿಗಳ ಬಗ್ಗೆ ಭಾರತದ ಗುಪ್ತಚರ ಸಂಸ್ಥೆಗಳು ಕಳೆದ ವಾರ ಎಚ್ಚರಿಸಿದ್ದವು. ವಿಶೇಷವಾಗಿ ಶ್ರೀನಗರ ಮತ್ತು ರಾಣಿಖೇತ್‌ನಲ್ಲಿರುವ ಸೈನಿಕ್ ಶಾಲೆಗಳನ್ನು ಎಚ್ಚರಿಸಲಾಗಿತ್ತು. ಸೈಬರ್ ದಾಳಿಯ 4 ಪ್ರಯತ್ನಗಳನ್ನು ವಿಫಲಗೊಳಿಸಿದ ನಂತರ ಎಚ್ಚರಿಕೆ ನೀಡಲಾಗಿತ್ತು.

ಕೇಂದ್ರ ಸರಕಾರದ ಸ್ಪಷ್ಟೀಕರಣ ಅಗತ್ಯ: ಸಿಜೆಐ ಸಂಜೀವ್ ಖನ್ನಾ

ವಕ್ಫ್ ಕಾಯಿದೆ ಅರ್ಜಿ ವಿಚಾರಣೆ 15ಕ್ಕೆ

ದೆಹಲಿ: ವಕ್ಫ್ ತಿದ್ದುಪಡಿ ಕಾಯಿದೆ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಮೇ 15ರಂದು ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಈ ಅರ್ಜಿಗಳಲ್ಲಿನ ಪ್ರಶ್ನೆಗಳಿಗೆ ಕೇಂದ್ರ ಸರಕಾರದಿಂದ ಸ್ಪಷ್ಟೀಕರಣ ಬರಬೇಕಿದೆ. ಆ ಬಳಿಕ ವಿಚಾರಣೆ ಮುಂದುವರಿಯಲಿದೆ. ನಿಯೋಜಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಮೇ 15ರಂದು ವಿಚಾರಣೆ ನಡೆಸಲಿದ್ದಾರೆ ಎಂದು ಸಿಜೆಐ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ನೇತೃತ್ವದ, ನ್ಯಾ. ಸಂಜಯ್ ಕುಮಾರ್ ಮತ್ತು ನ್ಯಾ. ಕೆ.ವಿ.ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ಸೋಮವಾರ ಹೇಳಿದೆ. ಹಾಲಿ



ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಮೇ 13 ರಂದು ನಿವೃತ್ತರಾಗಲಿದ್ದಾರೆ.

ಕಾನೂನಿನ ಕೆಲವು ಅಂಶಗಳಿಗೆ ಸ್ಪಷ್ಟೀಕರಣದ ಅಗತ್ಯವಿದೆ. ಅಲ್ಲದೇ, ವಾದ ಮಂಡನೆಯೂ ದೀರ್ಘವಾಗಿರಲಿದೆ. ಅದನ್ನು ಆಲಿಸಿ ತಕ್ಷಣಕ್ಕೆ ಮಧ್ಯಂತರ ಆದೇಶ ನೀಡುವುದು ಸಾಧ್ಯವಾಗದು. ಹಾಗಾಗಿ ಮೇ 15ರಂದು ವಿಚಾರಣೆಗೆ ದಿನ ನಿಗದಿಪಡಿಸಲಾಗಿದೆ ಎಂದರು.

ವಕ್ಫ್ ಮಂಡಳಿಯ ಆಸ್ತಿಗಳ ನೋಂದಣಿಗೆ ಸಂಬಂಧಿಸಿ ಕೇಂದ್ರ ಸರಕಾರ ಕೆಲವು ಅಂಶಗಳನ್ನು ಎತ್ತಿ ತೋರಿದೆ. ಅವುಗಳ ಬಗ್ಗೆ ನ್ಯಾಯಾಲಯ ವಿವರವಾಗಿ ವಿಚಾರಣೆ ನಡೆಸಬೇಕಾಗುತ್ತದೆ ಎಂದೂ ಪೀಠ ಹೇಳಿದೆ.

'ವಕ್ಫ್ ಪ್ರಾಪರ್ಟಿ ಬೈ ಯೂಸ್' ಸೇರಿದಂತೆ ಯಾವುದೇ ವಕ್ಫ್ ಆಸ್ತಿಗಳನ್ನು ಸದ್ಯಕ್ಕೆ ಡಿನೋಟಿಫೈ ಮಾಡುವುದಿಲ್ಲ. ಮೇ 15ರ ವಿಚಾರಣೆವರೆಗೆ ವಕ್ಫ್ ಮಂಡಳಿಗಳಿಗೆ ಯಾವುದೇ ಹೊಸ ನೇಮಕವನ್ನೂ ಕೇಂದ್ರ ಮಾಡುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ಈ ಮೊದಲೇ ಭರವಸೆ ನೀಡಿದ್ದಾರೆ.

ರಫೇಲ್‌ಗೆ ನಿಂಬೆಹಣ್ಣು: ಕಾಂಗ್ರೆಸ್ ಅಣಕ

ಲಖನೌ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕಾರ ಕೈಗೊಳ್ಳದೇ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರಕಾರ ನಿಷ್ಕ್ರಿಯವಾಗಿದೆ ಎಂದು ಉತ್ತರ ಪ್ರದೇಶದ ಕಾಂಗ್ರೆಸ್ ರಾಜ್ಯಾಧ್ಯಕ್ಷ ಅಜಯ್ ರೈ ದೂಷಿಸಿದ್ದಾರೆ. ದೇಶದ ಜನತೆ ಸರಕಾರದ ಪ್ರತಿಕ್ರಿಯೆ ಬಯಸುತ್ತಿದ್ದಾರೆ. ರಫೇಲ್ ಯುದ್ಧ ವಿಮಾನಗಳು ಯಾವಾಗ ಕೆಲಸ ಮಾಡುತ್ತವೆ? ಎಂದು ಪ್ರಶ್ನಿಸಿದ್ದಾರೆ.

ರಫೇಲ್ ಫೈಟರ್ ಜೆಟ್ ರೀತಿಯ ಆಟಿಕೆ ವಿಮಾನಕ್ಕೆ ನಿಂಬೆ ಹಣ್ಣು ಮತ್ತು ಮೆಣಸಿನಕಾಯಿ ಕಟ್ಟಿ ಕೇಂದ್ರ ಸರಕಾರವನ್ನು ಅಣಕಿಸಿದ್ದಾರೆ. ಇದು ಪ್ರಧಾನಿ

ಮೋದಿ ಸರಕಾರದ ನಿಷ್ಕ್ರಿಯತೆ ಬಗ್ಗೆ ಜನರಲ್ಲಿರುವ ಹತಾಶ ಭಾವವನ್ನು ಸಂಕೇತಿಸುತ್ತದೆ ಎಂದು ಹೇಳಿದ್ದಾರೆ. ಆ ಮೂಲಕ ಫ್ರಾನ್ಸ್‌ನಲ್ಲಿ ಮೊದಲ ರಫೇಲ್ ಯುದ್ಧ ವಿಮಾನ ಸ್ವೀಕರಿಸುವ ಮುನ್ನ ರಕ್ಷಣಾ ಸಚಿವ ರಾಜನಾಥ್ ಸಿಂಗ್ 2019ರಲ್ಲಿ ವಿಮಾನಕ್ಕೆ ಪೂಜೆ ಸಲ್ಲಿಸಿದ್ದನ್ನು ಅಣಕಿಸಿದ್ದಾರೆ. ಪಹಲ್ಗಾಮ್‌ನಲ್ಲಿ ನಮ್ಮ 26 ಜನ ಕೊಲೆಯಾದರು. ಆದರೆ ರಫೇಲ್ ಯುದ್ಧ ವಿಮಾನಗಳು ಇನ್ನೂ ನಿಂಬೆ ಹಣ್ಣು ಮತ್ತು ಮೆಣಸಿನಕಾಯಿ ಕಟ್ಟಿಸಿಕೊಂಡು ಹ್ಯಾಂಗರ್‌ಗಳಲ್ಲಿ ನೇತಾಡುತ್ತಿವೆ. ಸಂತ್ರಸ್ತರ ಕುಟುಂಬಗಳು ಇಲ್ಲಿ ನ್ಯಾಯಕ್ಕಾಗಿ ಕಾಯುತ್ತಿವೆ. ಸರಕಾರದ ಈ ಮೌನ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಅಜಯ್ ರೈ ಕಿಡಿಕಾರಿದ್ದಾರೆ. ಭಯೋತ್ಪಾದನೆ ಮತ್ತು ಪಾಕ್ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡರೂ ಕಾಂಗ್ರೆಸ್ ಪೂರ್ಣ ಬೆಂಬಲಿಸುತ್ತದೆ. ಆದರೆ, ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ ಎಂದು ರೈ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಲವ್ ಜಿಹಾದ್-ಲ್ಯಾಂಡ್ ಜಿಹಾದ್ ತಡೆಗೆ 'ಸನಾತನಿ ಸೇನಾ' ರಚನೆ
ಹಿಂದೂ ಸಮುದಾಯಕ್ಕೆ ನೆರವಾಗಲು ಸನಾತನಿ ಹೆಲ್ಪ್‌ಲೈನ್: ವಿಹಿಂಪ

ಹಿಂದೂ ರಾಷ್ಟ್ರ: ಧರ್ಮ ಸಂಸತ್ ನಿರ್ಣಯ

ಲಖನೌ: ಭಾರತವನ್ನು 'ಹಿಂದೂ ರಾಷ್ಟ್ರ' ಎಂದು ಆದಷ್ಟು ಬೇಗ ಘೋಷಣೆ ಮಾಡಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸುವ ನಿರ್ಣಯವನ್ನು ಉತ್ತರ ಪ್ರದೇಶದಲ್ಲಿ ನಡೆದ 'ಧರ್ಮ ಸಂಸತ್'ನಲ್ಲಿ ಕೈಗೊಳ್ಳಲಾಗಿದೆ.

ವಿಶ್ವ ಹಿಂದೂ ಪರಿಷತ್(ವಿಹಿಂಪ) ಲಖನೌನಲ್ಲಿ ಭಾನುವಾರ ಆಯೋಜಿಸಿದ್ದ ಧರ್ಮ ಸಂಸತ್‌ನಲ್ಲಿ, ಹಿಂದೂ ಸಮುದಾಯ, ಸನಾತನ ಧರ್ಮ, ಹಿಂದೂ ಮಂದಿರಗಳ ರಕ್ಷಣೆಗೆ ಸಂಬಂಧಿಸಿದಂತೆ ಒಟ್ಟು 7 ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. 'ಲವ್ ಜಿಹಾದ್'ನಿಂದ ಹಿಂದೂ ಯುವತಿಯರನ್ನು ರಕ್ಷಿಸಲು ಹಾಗೂ 'ಭೂಮಿ ಜಿಹಾದ್'ನಿಂದ ಹಿಂದೂಗಳ ಆಸ್ತಿ ರಕ್ಷಿಸಲು 'ಸನಾತನಿ ಸೇನಾ' ಆರಂಭಕ್ಕೆ ಧರ್ಮ ಸಂಸತ್‌ನಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಧರ್ಮ ಸಂಸತ್‌ನಲ್ಲಿ ಭಾಗಿಯಾಗಿದ್ದ ಸ್ವಾಮೀಜಿಗಳು 'ಲವ್ ಜಿಹಾದ್' ಮತ್ತು 'ಲ್ಯಾಂಡ್ ಜಿಹಾದ್'ನಿಂದ ಹಿಂದೂ ಸಮುದಾಯವನ್ನು ರಕ್ಷಿಸುವ ಸಲುವಾಗಿ 'ಸನಾತನಿ ಸೇನಾ'ದಂತಹ ಪ್ರಬಲ ಸಂಘಟನೆಯ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಅಲ್ಲದೇ, ಸನಾತನಿ ಸೇನಾ ಮತ್ತು ಸನಾತನಿ ಕವಚ ರಚನೆ ಹಾಗೂ ಮುರ್ಷಿದಾಬಾದ್‌ನಲ್ಲಿ ಸಂತ್ರಸ್ತ ಹಿಂದೂ ಕುಟುಂಬಗಳ ರಕ್ಷಣೆಗಾಗಿ 'ಸನಾತನಿ ಹೆಲ್ಪ್‌ಲೈನ್' ಸ್ಥಾಪನೆ ಮಾಡಲು ನಿರ್ಧರಿಸಲಾಗಿದೆ ಎಂದು ಅಯೋಧ್ಯೆಯ ಹನುಮಗಢಿ ದೇಗುಲದ ಮಹಂತರಾದ ರಾಜುದಾಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಸ್ಲಿಮರೇ ಹೆಚ್ಚಾಗಿರುವ ಪ್ರದೇಶಗಳಲ್ಲಿ ಹಿಂದೂ ಸಮುದಾಯ ಮತ್ತು ದೇಗುಲಗಳ ಸಂರಕ್ಷಣೆ ದೃಷ್ಟಿಯಿಂದ 'ವಿಶ್ವ ಹಿಂದೂ ರಕ್ಷಾ ಪರಿಷತ್' ಕಚೇರಿಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಈ ಕಚೇರಿಗಳಿಗೆ 'ಸನಾತನ ಕವಚ್' ಎಂಬ ಹೆಸರಿಡಲಾಗುವುದು. ಈ ಕಚೇರಿ ಆ ಭಾಗದಲ್ಲಿನ ಹಿಂದೂಗಳ ಜೀವ-ಜೀವನ ರಕ್ಷಿಸಲು ಶ್ರಮಿಸಲಿದೆ. ಧಾರ್ಮಿಕ ಹಕ್ಕುಗಳ ರಕ್ಷಣೆಗೂ ಕೆಲಸ ಮಾಡಲಿದೆ ಎಂದು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಸನಾತನ ಧರ್ಮದ ರಕ್ಷಣೆ ಮತ್ತು ಸನಾತನ ಗೌರವ ಸಮ್ಮಾನವನ್ನು ಕಾಪಾಡಲು ಹೋರಾಡುವವರನ್ನು ಗುರುತಿಸಿ ಗೌರವಿಸುವ ಕಾರ್ಯ ನಡೆಯಬೇಕು ಎಂಬ ನಿರ್ಣಯವೂ ಸಭೆಯಲ್ಲಾಗಿದೆ ಎಂದರು.

ಅಯೋಧ್ಯೆ, ಕಾಶಿ, ಮಥುರಾ ಮತ್ತಿತರ ಧಾರ್ಮಿಕ ಕ್ಷೇತ್ರಗಳ ಧಾರ್ಮಿಕ ಮುಖಂಡರು, ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಬ್ರಿಜೇಶ್ ಪಾಠಕ್ ಸೇರಿದಂತೆ ಹಲವು ಪ್ರಮುಖರು ಧರ್ಮ ಸಂಸತ್‌ನಲ್ಲಿ ಭಾಗಿಯಾಗಿದ್ದರು.

ಜೂನ್‌ನಲ್ಲಿ ಸನಾತನ ಯಾತ್ರೆ

ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ವಕ್ಫ್ ತಿದ್ದುಪಡಿ ಕಾಯಿದೆಗೆ ವಿರೋಧ ವ್ಯಕ್ತಪಡಿಸುವ ನೆಪದಲ್ಲಿ ಪ್ರತಿಭಟನೆ ಆರಂಭಿಸಿದ ಮುಸ್ಲಿಂ ಸಮುದಾಯ, ಜಿಲ್ಲೆಯ ವಿವಿಧ ಗ್ರಾಮ, ಪಟ್ಟಣಗಳಲ್ಲಿ ಹಿಂದೂ ಸಮುದಾಯದ ಮೇಲೆ ಮಾರಣಾಂತಿಕ ದಾಳಿ ನಡೆಸಿದೆ. 400 ಹಿಂದೂಗಳು ಜೀವಭಯದಲ್ಲಿ ಮನೆ ತೊರೆದು ಓಡಿ ಹೋಗುವಂತೆ ಮಾಡಲಾಗಿದೆ. ಈ ಹಿಂಸಾಚಾರವನ್ನು ಖಂಡಿಸಿ ದೇಶಾದ್ಯಂತ 'ಸನಾತನ ಯಾತ್ರೆ' ಕೈಗೊಳ್ಳಲೂ ಧರ್ಮ ಸಂಸತ್ ನಿರ್ಧರಿಸಿದೆ. ಜೂನ್‌ನಲ್ಲಿ ಮುರ್ಷಿದಾಬಾದ್‌ನಿಂದಲೇ ಯಾತ್ರೆ ಆರಂಭಗೊಳ್ಳಲಿದೆ ಎಂದು ವಿಹಿಂಪ ನಾಯಕರು ಹೇಳಿದ್ದಾರೆ.

ಮಸೀದಿಗಳು ಹೆಚ್ಚಿದಷ್ಟೂ ಜಿಹಾದಿ ವೃದ್ಧಿ: ತಸ್ಲಿಮಾ

ದೆಹಲಿ: ಯುರೋಪ್‌ನಲ್ಲಿ ಚರ್ಚುಗಳೆಲ್ಲವೂ ವಸ್ತು ಸಂಗ್ರಹಾಲಯಗಳಾಗಿ ಬದಲಾಗುತ್ತಿದ್ದರೆ, ಮುಸ್ಲಿಮರು ಎಲ್ಲೆಡೆ ಹೆಚ್ಚು ಮಸೀದಿಗಳನ್ನು ನಿರ್ಮಿಸುವಲ್ಲಿ ಮಗ್ನರಾಗಿದ್ದಾರೆ. ಈಗಾಗಲೇ ಲಕ್ಷಾಂತರ ಮಸೀದಿಗಳು ನಿರ್ಮಾಣವಾಗಿದ್ದು, ಅದೇ

ಪ್ರಮಾಣದಲ್ಲಿ ಜಿಹಾದಿಗಳು ಸಿದ್ಧರಾಗುತ್ತಿದ್ದಾರೆ ಎಂದು ಬಾಂಗ್ಲಾದೇಶ ಮೂಲದ ಲೇಖಕಿ, ಭಾರತ ನಿವಾಸಿ ತಸ್ಲಿಮಾ ನಸ್ರೀನ್ ಹೇಳಿದ್ದಾರೆ.

ದೆಹಲಿ ಸಾಹಿತ್ಯ ಉತ್ಸವದಲ್ಲಿ ಸೋಮವಾರ ಮಾತನಾಡಿದ ಅವರು, ಮದರಸಾ ಇರಬಾರದು. ಮಕ್ಕಳು ಎಲ್ಲಾ ಪುಸ್ತಕಗಳನ್ನು ಓದುವಂತಾಗಬೇಕು ಎಂದರು.

ಕಳೆದ 1,400 ವರ್ಷಗಳಲ್ಲಿ ಇಸ್ಲಾಂ ವಿಕಸನಗೊಂಡಿಲ್ಲ. ಅದು ವಿಕಸನಗೊಳ್ಳುವವರೆಗೂ ಭಯೋತ್ಪಾದಕರನ್ನು ಬೆಳೆಸುತ್ತಲೇ ಇರುತ್ತದೆ. 2016ರ ಢಾಕಾ ದಾಳಿಯಲ್ಲಿ ಕಲ್ಮಾವನ್ನು ಪಠಿಸದ್ದಕ್ಕೆ ಜನರನ್ನು ಹತ್ಯೆ ಮಾಡಲಾಯಿತು. ನಮ್ಮ ನಂಬಿಕೆ ವಿವೇಚನೆ ಮತ್ತು ಮಾನವೀಯತೆಯನ್ನು ಮೀರಿದಾಗ ಹೀಗೆ ಆಗುತ್ತದೆ ಎಂದರು. 10 ವರ್ಷ ಅಮೆರಿಕದಲ್ಲಿದ್ದರೂ ಹೊರಗಿನವಳಂತೆ ಭಾಸವಾಗುತ್ತಿತ್ತು. ಕೋಲ್ಕತ್ತದಲ್ಲಿ ಮಾತ್ರ ಸ್ವಂತ ಮನೆಯಲ್ಲಿರುವ ಭಾವ. ಪಶ್ಚಿಮ ಬಂಗಾಳದಿಂದ ಹೊರಹಾಕಿದ ನಂತರ ದೆಹಲಿ ಮತ್ತೊಂದು ಮನೆಯಾಯಿತು. ಸ್ವಂತ ದೇಶ ಬಾಂಗ್ಲಾದಲ್ಲಿರದ ಆತ್ಮೀಯ ಭಾವವನ್ನು ಭಾರತ ನನಗೆ ನೀಡಿದೆ ಎಂದರು.

ರೇಬಿಸ್‌ಗೆ 7ರ ಬಾಲೆ ಬಲಿ

ತಿರುವನಂತಪುರ: ಕೇರಳ ರಾಜ್ಯದಲ್ಲಿ 7 ವರ್ಷದ ಬಾಲಕಿ ರೇಬಿಸ್‌ಗೆ ಬಲಿಯಾಗಿದ್ದಾಳೆ. ಇದರೊಂದಿಗೆ ಕಳೆದೊಂದು ತಿಂಗಳಲ್ಲಿ ರೇಬಿಸ್ ಪ್ರಕರಣದಲ್ಲಿ ಮಕ್ಕಳ ಸಾವಿನ ಸಂಖ್ಯೆ 3ಕ್ಕೇರಿದಂತಾಗಿದೆ. ಕೊಲ್ಲಂ ಜಿಲ್ಲೆಯ ಕುನ್ನಿಕೋಡ್ ನಿವಾಸಿಯಾದ 7 ವರ್ಷದ ಬಾಲಕಿ ನಿಯಾ ಫೈಸಲ್ ನಾಯಿ ಕಡಿತಕ್ಕೆ ಒಳಗಾಗಿದ್ದಳು. ಬಳಿಕ ಪೋಷಕರು ಆಸ್ಪತ್ರೆಗೆ ಕರೆದೊಯ್ದು ಲಸಿಕೆಯನ್ನೂ ಹಾಕಿಸಿದ್ದರು. ಹಾಗಿದ್ದೂ ಆಕೆಯಲ್ಲಿ ರೇಬಿಸ ಲಕ್ಷಣ ಕಂಡುಬಂದಿತು. ಬಳಿಕ ತಿರುವನಂತಪುರದಲ್ಲಿನ ಶ್ರೀ ಅವಿತ್ತೋಮ್ ಥಿರುನಾಲ್ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹಲವು ದಿನಗಳಿಂದ ವೆಂಟಿಲೇಟರ್‌ನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ಅಸುನೀಗಿದಳು ಎಂದು ಕುಟುಂಬದವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕೇಂದ್ರಕ್ಕೆ ಜಮಿಯತ್ ಮೌಲಾನಾ ಅರ್ಷದ್ ಮದನಿ ಪ್ರಶ್ನೆ
ಪಹಲ್ಗಾಮ್ ದಾಳಿಗೆ ಭದ್ರತಾ ವೈಫಲ್ಯ ಕಾರಣ ಎಂದು ಟೀಕೆ

ಸಿಂಧೂ ಒಪ್ಪಂದ ತಡೆಹಿಡಿದರೆ 5 ನದಿಗಳ ನೀರು ಎಲ್ಲಿ ಹರಿಸುವಿರಿ?

ದೆಹಲಿ: ಚೆನಾಬ್, ರಾವಿ, ಝೀಲಂ, ಬಿಯಾಸ್ ಮತ್ತು ಸಟ್ಲೆಜ್ ನದಿಗಳು ಸಾವಿರಾರು ವರ್ಷಗಳಿಂದ ಕಾಶ್ಮೀರ ಭಾಗದಿಂದ ಪಾಕಿಸ್ತಾನಕ್ಕೆ ಹರಿಯುತ್ತಿವೆ. ಅಲ್ಲಿ ಸಿಂಧೂ ನದಿ ಎಂದಾಗುತ್ತಿವೆ. ಈಗ ಒಮ್ಮೆಲೇ ಸಿಂಧೂ ನದಿ

ನೀರು ಹಂಚಿಕೆ ಒಪ್ಪಂದವನ್ನು ತಡೆ ಹಿಡಿದರೆ ಆ ನದಿಗಳ ನೀರನ್ನೆಲ್ಲಾ ನೀವು ಎಲ್ಲಿಗೆ ತೆಗೆದುಕೊಂಡು ಹೋಗುವಿರಿ? ಎಂದು ಜಮಿಯತ್ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಭಾರತ ಸರಕಾರವನ್ನು ಪ್ರಶ್ನೆ ಮಾಡಿದ್ದಾರೆ. ಇದು ಸುಲಭದ ಕೆಲಸವಲ್ಲ ಎಂದೂ ಹೇಳಿದ್ದಾರೆ.

ಜಮಿಯತ್(ಅರ್ಷದ್ ಮದನಿ ಬಣ) 2 ದಿನಗಳ ಕಾರ್ಯಕಾರಿ ಸಮಿತಿ ಸಭೆ ನಂತರ ಸುದ್ದಿಗೋಷ್ಠಿ ನಡೆಸಿದ ಮೌಲಾನಾ ಅರ್ಷದ್ ಮದನಿ, 'ನಾನು ಮುಸ್ಲಿಂ, ಇಡೀ ಜೀವನವನ್ನು ಈ ದೇಶದಲ್ಲಿ ಕಳೆದಿದ್ದೇನೆ. ಇಲ್ಲಿ ಈಗ ಪ್ರಚಾರವಾಗುತ್ತಿರುವ ಕೆಲ ವಿಷಯಗಳು ದೇಶಕ್ಕೆ ಸೂಕ್ತವಲ್ಲ ಎಂದು ನನಗೆ ತಿಳಿದಿದೆ ಎಂದಿದ್ದಾರೆ.

ಪಹಲ್ಗಾಮ್‌ನಲ್ಲಿ 26 ಅಮಾಯಕರ ಜೀವಬಲಿ ಪಡೆದ ಪಾಕ್ ಮೂಲದ ಉಗ್ರರ ದಾಳಿಯನ್ನು ಮೊದಲ ಬಾರಿಗೆ ಖಂಡಿಸಿರುವ ಮದನಿ, ಅಮಾಯಕರನ್ನು ಕೊಲ್ಲುವ ಉಗ್ರರು ಮನುಷ್ಯರೇ ಅಲ್ಲ ಎಂದು ಕಿಡಿಕಾರಿದ್ದಾರೆ. ಆದರೆ ಇಡೀ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿ ಟೀಕಿಸುವುದು ಸರಿಯಲ್ಲ ಎಂದರು.

ಪಹಲ್ಗಾಮ್ ದಾಳಿಗೆ ಭದ್ರತಾ ವೈಫಲ್ಯವೇ ಕಾರಣ. 3,000ಕ್ಕೂ ಹೆಚ್ಚು ಸಂದರ್ಶಕರು ಸೇರಿದ್ದ ಪ್ರವಾಸಿತಾಣದಲ್ಲಿ ಸರಿಯಾದ ಭದ್ರತಾ ವ್ಯವಸ್ಥೆ ಇಲ್ಲದಿರುವುದು ವಿಚಿತ್ರವಾಗಿದೆ. ಸೇನಾಪಡೆ ಮತ್ತು ಬಿಎಸ್‌ಎಫ್ ಸೈನಿಕರು ಜಮ್ಮು-ಕಾಶ್ಮೀರದಲ್ಲಿ ಪ್ರತಿ ಹಂತದಲ್ಲೂ ನಿಂತಿರುತ್ತಾರೆ. ಹೀಗಿರುವಾಗ ಭಯೋತ್ಪಾದಕರು ಅಷ್ಟು ಸುಲಭವಾಗಿ ಪ್ರವಾಸಿ ತಾಣವನ್ನು ಹೇಗೆ ತಲುಪಿದರು? ದಾಳಿ ನಡೆದ 1 ಗಂಟೆ ನಂತರ ಪೊಲೀಸರು ಮತ್ತು ಸೇನಾ ಸಿಬ್ಬಂದಿ ಬಂದಿದ್ದಾರೆ. ಸರಕಾರ ಈ ಬಗ್ಗೆ ತನಿಖೆ ಮಾಡಿಸಬೇಕು ಎಂದು ಮದನಿ ಹೇಳಿದ್ದಾರೆ.

ದ್ವೇಷ ಭಾವ ಹೆಚ್ಚುತ್ತಿದೆ

ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾದವರ ಮನೆಗಳನ್ನು ಮಾತ್ರ ಕೆಡವಲಾಗಿದೆ ಎಂದು ಸರಕಾರಕ್ಕೆ ಪೂರ್ಣ ಖಚಿತವಿದ್ದರೆ ಆ ಕ್ರಮ ಸರಿ. ಕೇವಲ ಅನುಮಾನದ ಮೇಲೆ ಕ್ರಮ ಕೈಗೊಂಡಿದ್ದರೆ ತಪ್ಪು. ನಿಯಮ ಪ್ರೀತಿಯಿಂದ ಇರಬೇಕು, ದ್ವೇಷದಿಂದಲ್ಲ. ಸರಕಾರದ ನಡೆಯಿಂದ ದೇಶದಲ್ಲಿ ದ್ವೇಷ ಭಾವನೆ ಹೆಚ್ಚುತ್ತಿದೆ ಎಂದು ಮೌಲಾನಾ ಅರ್ಷದ್ ಮದನಿ ಆರೋಪಿಸಿದರು. ಯುದ್ಧ ಉತ್ತಮ ಪರಿಹಾರವಲ್ಲ. ಅದು ಪ್ರಮುಖ ಆರ್ಥಿಕ ಪರಿಣಾಮಗಳನ್ನು ಬೀರುತ್ತದೆ ಎಂದು ಪ್ರತಿಪಾದಿಸಿದರು.

5 ಕೆಜಿ ಸಾಮರ್ಥ್ಯದ ಐಇಡಿ, ವೈರ್‌ಲೆಸ್ ಸೆಟ್ ವಶ

ಉಗ್ರರ ಅಡಗುತಾಣ -ಶಸ್ತ್ರಾಸ್ತ್ರ ಪತ್ತೆ

ಮೇಂಧರ್: ಜಮ್ಮು-ಕಾಶ್ಮೀರದ ಪೂಂಚ್ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಭಾರತೀ ಸೇನಾ ಪಡೆಗಳು ಭಯೋತ್ಪಾದಕರ ಅಡಗುತಾಣಗಳನ್ನು ಪತ್ತೆ ಹಚ್ಚಿದ್ದು, 5 ಸುಧಾರಿತ ಸ್ಫೋಟಕ ಸಾಧನ (ಐಇಡಿ)ಗಳು ಮತ್ತು 2 ವೈರ್‌ಲೆಸ್ ರೇಡಿಯೊ ಸೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಸ್ಟೀಲ್ ಬಕೆಟ್‌ನಲ್ಲಿ 2 ಹಾಗೂ ಟಿಫಿನ್ ಬಾಕ್ಸ್‌ಗಳಲ್ಲಿ 3 ಐಡಿಗಳನ್ನು ಇರಿಸಿರುವುದು ಕಂಡುಬಂದಿದೆ. ಅರ್ಧ ಕೆಜಿಯಿಂದ ಐದು ಕೆಜಿವರೆಗಿನ ಸಾಮರ್ಥ್ಯದ ಐಇಡಿಗಳನ್ನು ಸ್ಥಳದಲ್ಲೇ ನಾಶಪಡಿಸಲಾಗಿದೆ. 2 ವೈರ್‌ಲೆಸ್ ಸೆಟ್‌ಗಳು, ಯೂರಿಯ ಇರುವ 5 ಪ್ಯಾಕೆಟ್‌ಗಳು, 5 ಕೆಜಿ ಗ್ಯಾಸ್ ಸಿಲಿಂಡರ್ ಮತ್ತು ಪಾತ್ರೆಗಳು, ಬೈನಾಕ್ಯುಲರ್, 3 ಕ್ಯಾಪ್, 3 ಕಂಬಳಿ, ಪ್ಯಾಂಟ್‌ಗಳು ವಶವಾಗಿವೆ.

ಗಡಿ ಜಿಲ್ಲೆಯಲ್ಲಿ ವಿಧ್ವಂಸಕ ಕೃತ್ಯ ನಡೆಸುವ

ಉಗ್ರರ ಸಂಚು ವಿಫಲಗೊಳಿಸಲಾಗಿದೆ. ಸುರಂಕೋಟ್‌ನ ಮರ್ಹೋಟೆ ಪ್ರದೇಶದ ಸುರಂತಲ್‌ನಲ್ಲಿ ಸೇನೆ ಮತ್ತು ಜಮ್ಮು-ಕಾಶ್ಮೀರ ಪೊಲೀಸರು ನಡೆಸಿದ ವಿಶೇಷ ಜಂಟಿ ಕಾರ್ಯಾಚರಣೆಯಲ್ಲಿ ಉಗ್ರರ ಅಡಗುತಾಣಗಳು ಪತ್ತೆಯಾಗಿವೆ ಎಂದು ಭದ್ರತಾ ಪಡೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾಶ್ಮೀರಿ ದ್ವೇಷ ಸಲ್ಲ: ಹಿಮಾಂಶಿ ಟ್ರೋಲ್

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಮಡಿದ ನೌಕಾಪಡೆ ಅಧಿಕಾರಿ

ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಪತ್ನಿ ಹಿಮಾಂಶಿ ನರ್ವಾಲ್, 'ಪಹಲ್ಗಾಮ್ ಘಟನೆಗಾಗಿ ಕಾಶ್ಮೀರಿಗಳ ವಿರುದ್ಧ ದ್ವೇಷ ಸಲ್ಲ' ಹೇಳಿರುವುದಕ್ಕೆ ಹಿಮಾಂಶಿ ಅವರನ್ನು ಜಾಲತಾಣದಲ್ಲಿ ಟ್ರೋಲ್ ಮಾಡಲಾಗುತ್ತಿದೆ. ನೆಟ್ಟಿಗರ ಈ ನಡೆಯನ್ನು ಖಂಡಿಸಿರುವ ರಾಷ್ಟ್ರೀಯ ಮಹಿಳಾ ಆಯೋಗ(ಎನ್‌ಸಿಡಬ್ಲ್ಯು) ಹಿಮಾಂಶಿ ಅವರ ಬೆನ್ನಿಗೆ ನಿಂತಿದೆ. 'ಹಿಮಾಂಶಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಅವರನ್ನು ಟೀಕಿಸುವುದು ಖಂಡನೀಯ ಮತ್ತು ಸ್ವೀಕಾರಾರ್ಹವಲ್ಲ, ಭಿನ್ನಾಭಿಪ್ರಾಯ ವ್ಯಕ್ತಪಡಿಸುವಾಗ ಸಭ್ಯತೆ ಮತ್ತು ಸಾಂವಿಧಾನಿಕ ಮಿತಿಯಲ್ಲಿರಬೇಕು. ರಾಷ್ಟ್ರೀಯ ಮಹಿಳಾ ಆಯೋಗವು ಪ್ರತಿಯೊಬ್ಬ ಮಹಿಳೆಯ ಗೌರವ ಮತ್ತು ಘನತೆಯನ್ನು ರಕ್ಷಿಸಲು ಬದ್ಧವಾಗಿದೆ' ಎಂದು ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಹತ್ಕರ್ 'ಎಕ್ಸ್' ಸಂದೇಶದಲ್ಲಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಹಿಂದುತ್ವಕ್ಕಾಗಿ ಹೋರಾಡಿದ ಸುಹಾಸ್

ಮಂಗಳೂರು: ಸುಹಾಸ್ ಶೆಟ್ಟಿ ಹಿಂದುತ್ವಕ್ಕಾಗಿ ಹೋರಾಡಿದ ಯುವಕ. ಆತನನ್ನು ರೌಡಿಶೀಟರ್ ಎಂದು ಅಪಪ್ರಚಾರ ಮಾಡಲಾಗುತ್ತಿದೆ ಎಂದು



ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು. ಕೇಸ್ ಇದ್ದವರ ಮೇಲೆಲ್ಲಾ ರೌಡಿಶೀಟ್ ತೆರೆಯುವುದಾದರೆ ಕೆಲವು ಡಿಕೆ ಶಿವ ಕುಮಾರ್ ಸಹಿತ ಹಲವು ರಾಜಕಾರಣಿಗಳ ಮೇಲೂ ಕೇಸ್‌ಗಳಿವೆ, ಅವರ ಮೇಲೂ ರೌಡಿಶೀಟ್ ತೆರೆಯಬೇಕು ಎಂದು ಶಾಸಕಿ ಭಾಗೀರಥಿ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಸುಹಾಸ್ ಶೆಟ್ಟಿ ಹಿಂದೂ ಪರ ಹೋರಾಟಗಾರ, ಆತನನ್ನು ರೌಡಿಶೀಟರ್ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷೆ ಮಂಜುಳಾ ರಾವ್, ಪ್ರಮುಖರಾದ ಪೂರ್ಣಿಮಾ, ಸಂಧ್ಯಾ ಉಪಸ್ಥಿತರಿದ್ದರು.

ಮನೆಗೆ ನುಗ್ಗಿ ದರ್ಪ ಬೇಡ: ಡಾ.ಭರತ್ ಶೆಟ್ಟಿ

ಮಂಗಳೂರು: ಮಹಿಳೆಯರು, ಹೆಣ್ಣು ಮಕ್ಕಳು, ವಿದ್ಯಾರ್ಥಿಗಳು ಇರುವ ಹಿಂದೂ ಕುಟುಂಬದ ಮನೆಗಳಿಗೆ ಮಧ್ಯರಾತ್ರಿ ನುಗ್ಗಿ ದರ್ಪ ತೋರಿಸುತ್ತಿರುವ ಪ್ರವೃತ್ತಿಯನ್ನು ಪೊಲೀಸ್ ಇಲಾಖೆ ತಾಕ್ಷಣ ನಿಲ್ಲಿಸಬೇಕು. ಉದ್ವಿಗ್ನತೆಯನ್ನು ನಿಲ್ಲಿಸುವ ಬದಲು ಇಲಾಖೆ ಹೆಚ್ಚಿಸಬಾರದು ಎಂದು ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾಕ್ಟರ್ ಭರತ್ ಶೆಟ್ಟಿ ಒತ್ತಾಯಿಸಿದ್ದಾರೆ. ಕೊಲೆಯ ಸಂಚು ಗೊತ್ತಿದ್ದರೂ ಸುಹಾಸ್ ಶೆಟ್ಟಿ ಅವರ ಕೊಲೆಯನ್ನು ತಪ್ಪಿಸಲು ಪೊಲೀಸ್ ಇಲಾಖೆ ವಿಫಲವಾಗಿದೆ. ಇದೀಗ ತನ್ನ ತಪ್ಪನ್ನ, ವೈಫಲ್ಯವನ್ನ ಮರೆಮಾಚುವ ಸಲುವಾಗಿ ಸಿಕ್ಕಿದವರನ್ನೆಲ್ಲಾ ಜೈಲಿಗೆ ತಳ್ಳುವ ಮೂಲಕ ದರ್ಪದ ಪ್ರವೃತಿ, ಮೆರೆಯುತ್ತಿದೆ. ವಿನಾಕಾರಣ ಕಿರುಕುಳ ನೀಡುವುದನ್ನ ಮಧ್ಯರಾತ್ರಿ ಮನೆಗೆ ನುಗ್ಗುವುದನ್ನು ತಕ್ಷಣ ನಿಲ್ಲಿಸಬೇಕು. ಹಿಂದೂ ಕುಟುಂಬ ಎಲ್ಲಿ ತಮ್ಮ ಮಕ್ಕಳಿಗೆ ಕಂಟಕ ಎದುರಾಗುವುದೋ ಎಂದು ಆತಂಕದಲ್ಲಿ ಇರುವಾಗ, ಪೊಲೀಸರು ಕಿರುಕುಳ ನೀಡುವುದು ಸರಿಯಲ್ಲ. ತಕ್ಷಣ ಈ ದಿಮಾಕು ತೋರುವುದನ್ನು ಬಿಡಿ. ಇಲ್ಲದಿದ್ದಲ್ಲಿ ಮಂಗಳೂರು ನಗರದಾದ್ಯಂತ ಇರುವ ಪೊಲೀಸ್ ಠಾಣೆಯ ಮುಂಭಾಗ ಹಗಲು ರಾತ್ರಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಶಾಸಕರು ಎಚ್ಚರಿಸಿದ್ದಾರೆ.

ಬಸದಿಯಲ್ಲಿ ವಾರ್ಷಿಕೋತ್ಸವ

ಉಜಿರೆ: ಧರ್ಮಸ್ಥಳದಲ್ಲಿರುವ ಭಗವಾನ್ ಶ್ರೀ ಚಂದ್ರನಾಥಸ್ವಾಮಿ ಬಸದಿಯಲ್ಲಿ ವಾರ್ಷಿಕೋತ್ಸವ ಸಮಾರಂಭವು ಮೇ. 10, 11 ಮತ್ತು 12ರಂದು ನಡೆಯಲಿದೆ. ಮೇ 10 :ಶನಿವಾರ ಬೆಳಿಗ್ಗೆ ಗಂಟೆ 8.45ಕ್ಕೆ ತೋರಣಮುಹೂರ್ತ, ವಿಮಾನಶುದ್ಧಿ, ಮುಖವಸ್ತ್ರ ಉದ್ಘಾಟನೆ, ನವಕಲಶ ಅಭಿಷೇಕ. ಸಂಜೆ ಗಂಟೆ 4 ರಿಂದ ನಾಂದಿಮಂಗಲ, ಪೂಜಾ ವಿಧಾನ, ಮಹಾಮಂಗಳಾರತಿ ಮೇ. 11, ಭಾನುವಾರ ಬೆಳಗ್ಗೆ ಗಂಟೆ 8.30 ರಿಂದ ವಾಸ್ತುಪೂಜಾ ವಿಧಾನ, ಋಷಿಮಂಡಲ ಯಂತ್ರಾರಾಧನೆ, 16 ಕಲಶಾಭಿಷೇಕ. ಶ್ರೀಕ್ಷೇತ್ರ ಶ್ರವಣಬೆಳಗೊಳದ ಜೈನ ಮಠದ ಪೂಜ್ಯ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರಿಂದ ಮಂಗಲ ಪ್ರವಚನ. ಸಂಜೆ ಗಂಟೆ 4 ರಿಂದ ನವಗ್ರಹ ಮಹಾಶಾಂತಿ, ಗ್ರಾಮ ಬಲಿವಿಧಾನ, ಮಹಾಮಂಗಳಾರತಿ ಮೇ 12 ಸೋಮವಾರ ಬೆಳಗ್ಗೆ ಗಂಟೆ 9 ರಿಂದ ಕಲಿಕುಂಡ ಯಂತ್ರಾರಾಧನೆ ಸಂಜೆ ಗಂಟೆ 5.30ರಿಂದ ಭವ್ಯ ಅಗ್ರೋದಕ ಮೆರವಣಿಗೆ, 108 ಕಲಶ ಮಹಾಭಿಷೇಕ, ಮಹೋತ್ಸವ, ಮಹಾಮಂಗಳಾರತಿ ನಡೆಯುತ್ತದೆ.

ಯುವನಿಧಿ: ಸ್ವಯಂ ಘೋಷಣೆ ಸಲ್ಲಿಸಿ

ಮಂಗಳೂರು: ರಾಜ್ಯ ಸರಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಾವಣಿಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುವುದನ್ನು ಪರಿಶೀಲಿಸಿಕೊಂಡು, ಹಾಗೂ ಈಗಾಗಲೇ ನೊಂದಾಯಿಸಿಕೊಂಡು ಹಣ ಪಡೆಯುತ್ತಿರುವ ಫಲಾನುಭವಿಗಳು ಪ್ರತಿ ಮೂರು ತಿಂಗಳಿಗೊಮ್ಮೆ 1 ತಾರೀಖಿನಿಂದ 25 ನೇ ತಾರೀಖಿನ ಒಳಗಾಗಿ ಸ್ವಯಂ – ಘೋಷಣೆಯನ್ನು ಮಾಡಿಕೊಳ್ಳಬೇಕು. ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳ ಸ್ವಯಂ – ಘೋಷಣೆಯನ್ನು ಮೇ ತಿಂಗಳ 25 ನೇ ದಿನಾಂಕದೊಳಗೆ ಸ್ವಯಂ – ಘೋಷಣೆಯನ್ನು ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ (ದೂರವಾಣಿ ಸಂಖ್ಯೆ 0824–2457139) ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಉದ್ಯೋಗಾಧಿಕಾರಿ ವೈ ಎಂ ಬಡಿಗೇರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಎಸ್. ಮಧು ಬಂಗಾರಪ್ಪ } ಸಚಿವ

ಜನ ಗಣತಿ ಮಾಡಲು ನಿರ್ಧರಿಸಿರುವ ಕೇಂದ್ರ ಸರಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೂ ಕೇಂದ್ರ ಸರಕಾರ ಜನ ಗಣತಿಗೆ 500 ಕೋಟಿ ರು. ಮೀಸಲಿಟ್ಟಿರುವುದು ಸರಿಯಲ್ಲ. ನಮ್ಮ ರಾಜ್ಯದಲ್ಲಿಯೇ 165 ಕೋಟಿ ರು. ಖರ್ಚು ಮಾಡಲಾಗಿದೆ. ಇದರಿಂದ ಕೇಂದ್ರ ಸರಕಾರ ಜನ ಗಣತಿಗೆ ಹೆಚ್ಚಿನ ಹಣ ಮೀಸಲಿಡಬೇಕಿದೆ. ಬಿಜೆಪಿಯವರು ನಮ್ಮ ಗ್ಯಾರಂಟಿಯನ್ನು ಕಾಪಿ ಮಾಡಿದ್ದಾರೆ.

ನವೋದಯ ಟ್ರಸ್ಟ್‌ಯಿಂದ ರಜತ ಸಂಭ್ರಮ | ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಆಗಮನ : ಡಾ.ರಾಜೇಂದ್ರ ಕುಮಾರ್

ನವೋದಯ ರಜತ ಸಂಭ್ರಮ ಮೇ 10ರಂದು

ಮಂಗಳೂರು: ಮೇ 10ರಂದು ನಡೆಯಲಿರುವ ನವೋದಯ ಸ್ವಸಹಾಯ ಗುಂಪುಗಳ ಸಮಾವೇಶ ರಜತ ಸಂಭ್ರಮ'' ನೆನಪಿಗಾಗಿ ವಿಶಿಷ್ಟ ರೀತಿಯ ಲಾಂಛನವನ್ನು ಕರ್ನಾಟಕದ ಮಾನ್ಯ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಬಿಡುಗಡೆಗೊಳಿಸಲಿರುವರು ಎಂದು ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ಇದರ ಸಂಸ್ಥಾಪಕರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಅವರು ಎಸ್ ಸಿ ಡಿಸಿ ಸಭಾಂಗಣದಲ್ಲಿ ಸೋಮವಾರ ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ಹಮ್ಮಿಕೊಂಡ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಈ ಸಮಾವೇಶ ದೇಶಕ್ಕೆ ಮಾದರಿಯಾಗುವ ಸಮಾವೇಶ ಆಗಲಿದೆ. ಈ ಅರ್ಥಪೂರ್ಣ ರಜತ ಸಂಭ್ರಮವನ್ನು ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ನವೋದಯ ರಜತ ಸಂಭ್ರಮದ ನವೋದಯ ಸ್ವ-ಸಹಾಯ ಗುಂಪುಗಳ ಸದಸ್ಯರುಗಳಿಗೆ ಸವಲತ್ತು ವಿತರಣೆಯನ್ನು ಮಹಾರಾಷ್ಟ್ರ ಸರಕಾರದ ಮಾನ್ಯ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಇವರು ನೆರವೇರಿಸಲಿದ್ದು, ರಜತ ಸಂಭ್ರಮದ 'ಸಂತೃಪ್ತಿ' ಸ್ಮರಣ ಸಂಚಿಕೆಯ ಬಿಡುಗಡೆಯನ್ನು ಕರ್ನಾಟಕ ಸರಕಾರದ ಮಾನ್ಯ

ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ಹಮ್ಮಿಕೊಂಡ ಸುದ್ದಿ ಗೋಷ್ಠಿ ಯಲ್ಲಿ ಬಿತ್ತಿಪತ್ರ ಬಿಡುಗಡೆ ಮಾಡಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇವರು ನೆರವೇರಿಸಲಿರುವರು.

ರಜತ ಸಂಭ್ರಮ ಆಚರಣೆಯ ಸಂದರ್ಭ ಸಹಕಾರಿ ಧ್ವಜಾರೋಹಣವನ್ನು ಕರ್ನಾಟಕ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರು ಹಾಗೂ ಮಂಗಳೂರು ವಿಧಾನಸಭಾ ಕ್ಷೇತ್ರದ ಶಾಸಕಯು.ಟಿ. ಖಾದರ್ ಫರೀದ್ ನೆರವೇರಿಸಲಿರುವರು. ಅತ್ಯುತ್ತಮ ನವೋದಯ ಗುಂಪುಗಳಿಗೆ ಪ್ರಶಸ್ತಿ ಪ್ರದಾನವನ್ನು ಕೇಂದ್ರ ಸರಕಾರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ಮತ್ತು ನವೀಕರಿಸಬಹು ದಾದ ಇಂಧನ ಖಾತೆಯ ಮಾನ್ಯ ಸಚಿವ ಪ್ರಲ್ಹಾದ್ ವಿ. ಜೋಶಿ ಇವರು ನೆರವೇರಿಸಲಿರುವರು.

ನವೋದಯ ಸ್ವಸಹಾಯ ಗುಂಪುಗಳು ಗ್ರಾಮೀಣ ಜನರ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ಮೂಡಿಸಿ ಪ್ರಜಾ ಪ್ರಭುತ್ವದ ತಳಹದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸಂಘಟನೆ ಹಾಗೂ ಜನಜಾಗೃತಿ ಮೂಲಕ ಜನಸೇವೆಯಲ್ಲಿ ತೊಡಗಿಸಿಕೊಂಡಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಜತೆಗೆ ಸಬಲೀಕರಣದ ಹಾದಿಯಲ್ಲಿ ದಾಪುಗಾಲು ಹಾಕುತ್ತಿದೆ. ಈ ಒಂದು ಉದಾತ್ತವಾದ ಉದ್ದೇಶವನ್ನಿಟ್ಟುಕೊಂಡು ನವೋದಯ ಸ್ವಸಹಾಯ ಗುಂಪುಗಳ ರಜತ ಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಎಂ. ಎನ್. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಚಿವರಾದ ಕೆ. ಎನ್. ರಾಜಣ್ಣ. ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್, ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶ ನಾಲಯ, ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಹಾಗೂ ಅಬಕಾರಿ ಸಚಿವರಾದ ಆರ್.ಬಿ. ತಿಮ್ಮಾಪುರ ಅವರು ಭಾಗವಹಿಸಲಿದ್ದಾರೆ ಎಂದು ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಸುದ್ದಿ ಗೋಷ್ಠಿಯಲ್ಲಿ ಬ್ಯಾಂಕ್ ನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ಬ್ಯಾಂಕ್ ನಿರ್ದೇಶಕರಾದ ಭಾಸ್ಕರ್.ಎಸ್. ಕೋಟ್ಯಾನ್, ಶಶಿಕುಮಾರ್ ರೈ ಬಿ.ದೇವಿ ಪ್ರಸಾದ್ ಶೆಟ್ಟಿ ಬೆಳಪು, ಎಂ. ವಾದಿರಾಜ ಶೆಟ್ಟಿ , ಎಸ್. ಬಿ. ಜಯರಾಮ್ ರೈ, ಸದಾಶಿವ ಉಳ್ಳಾಲ್, ರಾಜೇಶ್ ರಾವ್, ಕುಶಾಲಪ್ಪ ಗೌಡ, ಸಹಕಾರ ಸಂಘಗಳ ಉಪನಿಬಂಧಕರಾದ ಎಚ್. ಎನ್. ರಮೇಶ್, ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಾ ಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ,ನವೋದಯ ಟ್ರಸ್ಟಿಗಳಾದ ಶ್ರೀ ಮೇಘರಾಜ್ ಆರ್. ಜೈನ್, ಸುನಿಲ್ ಕುಮಾರ್ ಬಜಗೋಳಿ, ಸ್ಕ್ಯಾಡ್ಸ್ ಅಧ್ಯಕ್ಷ ರವೀಂದ್ರ, ಕಂಬಳಿ, ಟ್ರಸ್ಟ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪೂರ್ಣಿಮಾ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

2000ನೇ ಇಸವಿಯ ಜ.29ರಂದು ಕಾರ್ಕಳದಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ಆಗಿನ ಸಹಕಾರ ಸಚಿವ ಡಿ. ಕೆ.ಶಿವಕುಮಾರ್ ಅವರಿಂದ ಉದ್ಘಾಟಿಸಲ್ಪಟ್ಟ ನವೋದಯ ಸ್ವಸಹಾಯ ಗುಂಪುಗಳ ಕಾರ್ಯ ವಿಸ್ತಾರವು ಇಂದು ರಾಜ್ಯದ 8 ಜಿಲ್ಲೆಗಳಿಗೆ ಪಸರಿಸಿದ್ದು. ಇದರಲ್ಲಿ ಸುಮಾರು 8ರಿಂದ 9ಲಕ್ಷ ಸದಸ್ಯರಿದ್ದು, ಮುಖ್ಯವಾಗಿ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಲ್ಪಿಸಿಕೊ ಟ್ಟಿದೆ. ಮಹಿಳೆಯರು ಪುರುಷರಿಗೆ ಸರಿಸ ಮಾನವಾಗಿ ಬದುಕು ಕಟ್ಟಿಕೊಳ್ಳಲು ಕಾರಣವಾಗಿದೆ .

– ಡಾ. ಎಂ. ಎನ್. ರಾಜೇಂದ್ರ ಕುಮಾರ್,
ಸಂಸ್ಥಾಪಕ

ರೌಡಿಶೀಟರ್‌ಗೆ ದೇಶಭಕ್ತರಂತೆ ಕಾಣುವ ಬಿಜೆಪಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೌಡಿಶೀಟರ್ ಗಳನ್ನು ಕೊಂದರೆ ಬಿಜೆಪಿಯವರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಾರೆ. ಕೊಲೆಯತ್ನ ದರೋಡೆಯಲ್ಲಿ ಭಾಗಿಯಾದ ರೌಡಿಗಳು ಜೈಲಿನಿಂದ ಬಿಡುಗಡೆಯಾಗುವಾಗ ಹಾರ ತುರಾಯಿ ಹಾಕಿ ಸ್ವಾಗತಿಸುತ್ತಾರೆ. ಒಂದು ವೇಳೆ ವೈಯಕ್ತಿಕ ವೈಷಮ್ಯಕ್ಕೆ ಅಥವಾ ವಿರೋಧಿ ರೌಡಿ ಪಡೆಯಿಂದ ಸಾವಿಗೀಡಾದರೆ ಅವರನ್ನು ಹಿಂದೂನಾಯಕ, ಮಹಾನ್ ದೇಶಭಕ್ತ ಎಂಬಂತೆ ಬಿಂಬಿಸುವುದೇಕೆ?'' ಎಂದು ವಿಧಾನ ಪರಿಷತ್ ಶಾಸಕ, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಪ್ರಶ್ನಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತಾಡಿದ ಅವರು, ''ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ವೈಷಮ್ಯ, ಘರ್ಷಣೆಯಿಂದಾಗಿ ಮಂಗಳೂರಿನ ಮಾನ ಮರ್ಯಾದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹರಾಜಾಗಿದೆ. ಈ ಹಿಂದೆ ಪಬ್ ದಾಳಿ, ಚರ್ಚ್ ದಾಳಿ, ಬರ್ತ್ ಡೇ ಪಾರ್ಟಿ ದಾಳಿಯಿಂದ ಪ್ರವಾಸೋದ್ಯಮಕ್ಕೆ ಕಪ್ಪು ಚುಕ್ಕೆಯಾಗಿದೆ. ಮಂಗಳೂರು ಬದಲಾವಣೆಯತ್ತ ತೆರೆದುಕೊಳ್ಳುತ್ತಿರುವ ಈ ವೇಳೆಯಲ್ಲಿ ಇಂತಹ ಘಟನೆಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಮಾರಕವಾಗಿದೆ'' ಎಂದರು.

ಸುದ್ದಿಗೋಷ್ಠಿಯಲ್ಲಿ ಮಿಥುನ್ ರೈ, ಇನಾಯತ್ ಅಲಿ, ಹರೀಶ್ ಕುಮಾರ್, ಶಾಲೆಟ್ ಪಿಂಟೋ, ಜಿ ಎ ಬಾವ, ಲಾರೆನ್ಸ್ ಡಿಸೋಜ, ಸುಹಾನ್ ಆಳ್ವ, ಪದ್ಮರಾಜ್ ಆರ್., ಶಾಹುಲ್ ಹಮೀದ್, ವಿಕಾಸ್, ಶುಭೋದ್ ಆಳ್ವ, ಕೃಷ್ಣ ಶೆಟ್ಟಿ, ಬಶೀರ್ ಮತ್ತಿತರರು ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಮಾತನಾಡಿದರು.

ಬಿಜೆಪಿಯವರು ಕೆಲವು ತಿಂಗಳ ಹಿಂದೆ ಬಂಟ್ವಾಳದಲ್ಲಿ ಬಾಲಕನೊಬ್ಬ ನಾಪತ್ತೆಯಾದಾಗ ಅದರಲ್ಲಿ ಅನ್ಯಕೋಮಿನ ಕೈವಾಡ ಎಂದು ಹಿರಿಕಿರಿಯ ನಾಯಕರೆಲ್ಲರೂ ಮನೆಗೆ ಭೇಟಿಕೊಟ್ಟು ಪ್ರಕರಣದ ದಿಕ್ಕು ತಪ್ಪಿಸಲು ಯತ್ನಿಸಿ ವಿಫಲರಾದರು. ನಾಪತ್ತೆಯಾದ ಬಾಲಕ ವಾಪಸ್ ಮನೆಗೆ ಬಂದಾಗ ಇವರ್ಯಾರು ಕೂಡಾ ಇರಲಿಲ್ಲ. ಈಗ ರೌಡಿಯ ಕೊಲೆ ಪ್ರಕರಣ ಮುಂದಿಟ್ಟು ಜಿಲ್ಲೆಯಲ್ಲಿ ಶಾಂತಿ ಸೌಹಾರ್ದತೆ ಕೆಡಿಸಲು ಮುಂದಾಗಿದ್ದಾರೆ. ಇವರು ತಮ್ಮ ಮನೋಸ್ಥಿತಿಯ ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

– ಮಂಜುನಾಥ ಭಂಡಾರಿ, ಶಾಸಕ

ಸಹಕಾರ ಬ್ಯಾಂಕ್ ಸ್ವರ್ಣ ಸಂಭ್ರಮ 11ರಂದು

ಉಡುಪಿ: ವಿಶ್ವಕರ್ಮ ಸಹಕಾರ ಬ್ಯಾಂಕ್ ಸ್ವರ್ಣ ಸಂಭ್ರಮ ಪ್ರಯುಕ್ತ ಬ್ಯಾಂಕ್ ವತಿಯಿಂದ ವರ್ಷಪೂರ್ತಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಕುರಿತು ಸಮಾಲೋಚನಾ ಸಭೆ ಕಾರ್ಕಳದಲ್ಲಿ ನಡೆಯಿತು.

ಸ್ವರ್ಣ ಸಂಭ್ರಮ ಹೆಸರಿನಲ್ಲಿ ಸ್ವರ್ಣ ಜಯಂತಿವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಈಗಾಗಲೇ ಯೋಜನೆ ಹಾಕಿಕೊಳ್ಳಲಾಗಿದ್ದು, ಮುಂದಿನ ಒಂದು ವರ್ಷ ಪ್ರತಿ ವಾರಕ್ಕೊಂದು ಕಾರ್ಯಕ್ರಮ ಹಮ್ಮಿಕೊಳ್ಳುವ ಸಲುವಾಗಿ ಕಾರ್ಕಳ ವಿಶ್ವಕರ್ಮ ಸಹಕಾರ ಬ್ಯಾಂಕ್ ಶಾಖೆಯ ವತಿಯಿಂದ ಕಾರ್ಯಕ್ರಮದ ರೂಪುರೇಷೆಗಳ ಮಾಹಿತಿಯನ್ನು ಶಾಖಾ ಪ್ರಭಂದಕ ನಿತಿನ್ ತಿಳಿಸಿದರು. ಸ್ಥಳೀಯ ಸಂಘ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ನಾಗರಿಕರ ಸಹಕಾರದೊಂದಿಗೆ ಮುಂದಿನ ಒಂದು ವರ್ಷ ಅವಧಿಯಲ್ಲಿ ಪ್ರತಿ ರವಿವಾರ ಬೆಳಗ್ಗೆ ಸ್ವಚ್ಚತೆ ಕುರಿತು ಜಾಗೃತಿ ಅಭಿಯಾನ, ಪರಿಸರ ಸಂರಕ್ಷಣೆಗಾಗಿ ಗಿಡನೆಡುವ ಕಾರ್ಯಕ್ರಮ, ಬ್ಯಾಂಕಿಂಗ್ ಸ್ಕ್ಯಾಂ ಕುರಿತು ಸಾರ್ವಜನಿಕರು ಹಾಗೂ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ, ವೃದ್ಧಾಶ್ರಮ ಭೇಟಿ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಾಯಿತು.

ವಿಶ್ವಕರ್ಮ ಬ್ಯಾಂಕ್ ಲಿಮಿಟೆಡ್‌ನ ನಿರ್ದೇಶಕ ಬೆಳುವಾಯಿ ಸೀತಾರಾಮ ಆಚಾರ್ ಮಾತನಾಡಿ, ಮೇ 11 ರಂದು ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಸ್ವರ್ಣ ಸಂಭ್ರಮ ಸ್ವರ್ಣ ಜಯಂತಿ ಕಾರ್ಯಕ್ರಮ ನಡೆಯಲಿದ್ದು, ಸಂಸದ ಕ್ಯಾ. ಬ್ರಿಜೇಶ್ ಚೌಟ ಉದ್ಘಾಟಿಸುವರು. ದ.ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಲಿರುವರು. ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ. ವೇದವ್ಯಾಸ ಕಾಮತ್, ಶ್ರೀಮತ್ ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠ ಪ್ರತಿಷ್ಠಾನದ ಅಧ್ಯಕ್ಷ ವಡೇರಹೋಬಳಿ ಶ್ರೀಧರ ಆಚಾರ್ಯ, ವಿಶ್ವಕರ್ಮ ಸಹಕಾರ ಬ್ಯಾಂಕ್ ಸ್ಥಾಪಕ ಸದಸ್ಯ ಮತ್ತು ಮಾಜಿ ಅಧ್ಯಕ್ಷ ಮುನಿಯಾಲು ದಾಮೋದರ ಆಚಾರ್ಯ, ಬೋಳಾರ ಶ್ರೀ ಲಕ್ಷ್ಮೀ ಜ್ಯುವೆಲ್ಲರ್ಸ್ ಮಾಲಕ ಬಿ. ಪ್ರವೀಣ್ ಶೇಟ್ ನಾಗ್ವೇಕರ್, ಮುನಿಯಾಲು ಸಂಜೀವಿನಿ ಫಾರ್ಮ್ಸ್‌ನ ಸವಿತಾ ರಾಮಕೃಷ್ಣ ಆಚಾರ್ಯ ಹಾಗೂ ಅಧ್ಯಕ್ಷ ಡಾ. ಎಸ್. ಆರ್. ಹರೀಶ್ ಆಚಾರ್ಯ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದರು.

ವಿಶ್ವಕರ್ಮ ಸಹಕಾರ ಬ್ಯಾಂಕ್ ಸ್ವರ್ಣ ಸಂಭ್ರಮ ಪ್ರಯುಕ್ತ ಬ್ಯಾಂಕ್ ವತಿಯಿಂದ ವರ್ಷಪೂರ್ತಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದ್ದು ಸಮಾಲೋಚನಾ ಸಭೆ ನಡೆಯಿತು.

ಗುರುಮಹಾಕಾಲೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ

ಉಡುಪಿ: ದ.ಕ. ಜಿಲ್ಲೆಯ ಗುರುಪುರ ಶ್ರೀ ಗುರುಮಹಾಕಾಲೇಶ್ವರ ದೇವಸ್ಥಾನದಲ್ಲಿ ಮೇ 15 ರಿಂದ 17 ರವರೆಗೆ 3 ದಿನಗಳ ಕಾಲ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಈ ಬಗ್ಗೆ ಸೋಮವಾರ ಮಾಜಿ ಸಂಸದ, ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉಡುಪಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿಯನ್ನು ವಿವರಿಸಿದರು.

ವೇದ, ಕೃಷಿಕ, ಬ್ರಹ್ಮಋಷಿ ಕೆ.ಎಸ್. ನಿತ್ಯಾನಂದ ಗುರುಗಳ ಮಾರ್ಗದರ್ಶನದಲ್ಲಿ ಗುರುಮಹಾಕಾಲೇಶ್ವರ ದೇವರ ಬೃಹತ್ ಏಕಶಿಲಾ ಮೂರ್ತಿಯ ಪತ್ರಿಷ್ಠಾ ಬ್ರಹ್ಮ ಕಲಶ ನೆರವೇರಲಿದೆ. 16 ರಂದು ಸಂಜೆ ನಡೆಯಲಿರುವ ಪಂಚಕಲ್ಯಾಣಯುಕ್ತ ಬ್ರಹ್ಮಕಲಶಾಭಿಷೇಕ ಕಾರ್ಯದಲ್ಲಿ ಜಾತಿ, ಪಂಗಡ, ಲಿಂಗಭೇದ ಇಲ್ಲದೇ ಭಾಗವಹಿಸಬಹುದಾಗಿದೆ. ದೇವರ ಬೃಹತ್ ಏಕಶಿಲಾ ಮೂರ್ತಿಗೆ ಪಂಚಕಲ್ಯಾಣ ಸ್ವರೂಪದ ಕಲಶಾಭೀಷೇಕವನ್ನು ಸಮರ್ಪಿಸಬಹುದಾಗಿದೆ ಎಂದರು. 17 ರಂದು ಸಂಜೆ 6 ಗಂಟೆಗೆ ಶಿವಾನುಭವ ಮಂಟಪದಲ್ಲಿ ಧಾರ್ಮಿಕ ಸಭೆ ನಡೆಯಲಿದೆ. ವೇದ ಕೃಷಿಕ ಬ್ರಹ್ಮಋಷಿ ಕೆ.ಎಸ್.ನಿತ್ಯಾನಂದ ಸಾನಿಧ್ಯ ವಹಿಸಲಿದ್ದಾರೆ. ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಪಾವಂಜೆ ಕ್ಷೇತ್ರದ ಯಾಜಿ ನಿರಂಜನ್ ಭಟ್ ಉದ್ಘಾಟಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಗೋಳಿದಡಿ ಗುತ್ತಿನ ಗಡಿಕಾರ ವರ್ಧಮಾನ ದುರ್ಗಾಪ್ರಸಾದ್ ಶೆಟ್ಟಿ, ಪ್ರಮುಖರಾದ ರೋಹಿತ್ ಕುಮಾರ್ ಕಟೀಲ್, ಚಂದ್ರಹಾಸ್ ಆಮೀನ್, ಸುಜಾತ ಸದಾಶಿವ, ದಿವಾಕರ್ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾತನಾಡಿದರು.

ಸುಹಾಸ್ ಕೊಲೆ ತನಿಖೆಗೆ ಆಗ್ರಹ

ಮಂಗಳೂರು: ಸುಹಾಸ್ ಶೆಟ್ಟಿ ಪ್ರಕರಣದ ಪಾರದರ್ಶಕ ತನಿಖೆಯಾಗಬೇಕು ಮತ್ತು ಇದನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಗೆ ಒಪ್ಪಿಸುವಂತೆ ಸಂಸದ ಬ್ರಿಜೇಶ್ ಚೌಟ ಆಗ್ರಹಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಇದೊಂದು ಕೊಲೆ ಪ್ರಕರಣ ಮಾತ್ರವಲ್ಲ , ಕರ್ನಾಟಕ ವನ್ನು ವಿಷಪೂರಿತಗೊಳಿಸುವ ,ರಕ್ತ ಸಿಕ್ತಗೊಳಿಸುವ ಪ್ರಕರಣವಾಗಿದೆ. ಜನರ ವಿಶ್ವಾಸ ಗಳಿಸಲು ಈ ಪ್ರಕರಣವನ್ನು ಎನ್ ಐಎಗೆ ಒಪ್ಪಿಸುವುದು ಸೂಕ್ತ ಎಂದರು.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣದ ನ್ಯಾಯೋಚಿತವಾಗಿ ತನಿಖೆಗೆ ಬೆಂಬಲ ನೀಡಬೇಕಾಗಿದ್ದ ಸ್ಪೀಕರ್ ತನಿಖೆಯ ಆರಂಭದ ಮೊದಲೇ ತನಿಖೆಯ ದಾರಿ ತಪ್ಪಿಸುವ ರೀತಿಯಲ್ಲಿ ಹೇಳಿಕೆಯನ್ನು ನೀಡಿದ್ದಾರೆ. ಸುಹಾಸ್ ಕೊಲೆ ಪ್ರಕರಣದ ಓರ್ವ ಆರೋಪಿಯಾಗಿರುವ ವ್ಯಕ್ತಿಯನ್ನು ಸಮರ್ಥಿಸಿಕೊಂಡು ಕ್ಲೀನ್ ಚಿಟ್ ನೀಡಿರುವುದು ಅಚ್ಚರಿ ಮೂಡಿಸಿದೆ. ಸ್ಪೀಕರ್‌ಗೆ ಕ್ಲೀನ್ ಚಿಟ್ ನೀಡುವ ಆತುರತೆ ಏನಿತ್ತು ಎಂದು ಪ್ರಶ್ನಿದರು.

ರಾಜ್ಯದಲ್ಲಿ ಪಿಎಫ್ ಐ ಕಾರ್ಯಕರ್ತರಿಗೆ ಲಾಜೆಸ್ಟಿಕ್ ಮತ್ತು ಹಣದ ವ್ಯವಸ್ಥೆ ಆಗುತ್ತಿದೆ ಎಂದು ಇಂಡಿಯಾ ಟುಡೇ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಎಂದು ಅವರು ಹೇಳಿದರು. ಪಿಎಸ್‌ಐಗೆ ಚಟುವಟಿಕೆಗಳಿಗೆ ಕರ್ನಾಟಕ ಸುರಕ್ಷಿತ ತಾಣವಾಗಿ ರಾಜ್ಯ ಸರಕಾರ ಮಾಡುತ್ತಿದೆ. ಕಾಂಗ್ರೆಸ್ ಸರಕಾರದ ಮಾದರಿ ಸುಹಾಸ್ ಶೆಟ್ಟಿ ಪ್ರಕರಣದಲ್ಲಿ ಪ್ರತಿಬಿಂಬಿತವಾಗಿದೆ. ಫಾಝಿಲ್ ಕುಟುಂಬಕ್ಕೆ ಕ್ಲೀನ್ ಚಿಟ್ ನೀಡುವಲ್ಲಿ ಉತ್ಸಾಹ ತೋರಿದ ಕಾಂಗ್ರೆಸ್ ನಾಯಕರು ಸುಹಾಸ್ ಶೆಟ್ಟಿಗೆ ರೌಡಿಶೀಟರ್ ಎಂಬ ಹಣೆಪಟ್ಟಿ ಕಟ್ಟಿ ಪ್ರಕರಣದ ಸೈದ್ಧಾಂತಿಕ ವಾಸ್ತವಿಕ ತೆಯನ್ನು ಮರೆಮಾಚುವ ಪ್ರಯತ್ನ ನಡೆಸಿದರು. ಇದು ದ.ಕ ಮತ್ತು ಕರಾವಳಿ ಜನರ ಮೇಲೆ ಕಾಂಗ್ರೆಸ್ ಮಾಡಿರುವ ದ್ರೋಹದ ಪ್ರಕ್ರಿಯೆಯ ಮುಂದುವರಿದ ಭಾಗ ಎಂದು ಬಣ್ಣಿಸಿದರು.

ಆರಂಭದಲ್ಲಿ ಸುಹಾಸ್ ಶೆಟ್ಟಿ ಕೊಲೆ ಪ್ರಕರಣವನ್ನು ವೈಯಕ್ತಿಕ, ಬಳಿಕ ಕಮ್ಯುನಲ್ ಪ್ರಕರಣವನ್ನು ಬಿಂಬಿಸಲಾಯಿತು ಎಂದರು.

ಬಿಜೆಪಿ ಕಚೇರಿಯಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಸಂಸದ ಬ್ರಿಜೇಶ್ ಚೌಟ ಮಾತನಾಡಿದರು.

ರಕ್ತ ಸೋರಿಕೆ:ಯಶಸ್ವಿ ಶಸ್ತ್ರಚಿಕಿತ್ಸೆ

ಮಂಗಳೂರು: ದೇಹದ ವಿವಿಧ ಭಾಗಗಳಿಗೆ ಹೃದಯದಿಂದ ರಕ್ತ ಪೂರೈಸುವ ಮಹಾಪಧಮನಿ (ಆಯೋರ್ಟಾದಲ್ಲಿ) ರಕ್ತಸೋರಿಕೆ ಉಂಟಾಗಿದ್ದು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ವ್ಯಕ್ತಿಗೆ ಸೂಕ್ತ ಸಮಯದಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ಕೆಎಂಸಿ ವೈದ್ಯರ ತಂಡ ವ್ಯಕ್ತಿಯ ಜೀವ ರಕ್ಷಿಸಿದ್ದಾರೆ. ಇಂತಹ ಆರೋಗ್ಯ ಸಮಸ್ಯೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅಗತ್ಯವೆಂದು ತಜ್ಞ ವೈದ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಿರಿಯ ಇಂಟರ್‌ನ್ಯಾಷನಲ್ ಕಾರ್ಡಿಯಾಲಾಜಿಸ್ಟ್ ಡಾ. ಎಮ್ ಎನ್ ಭಟ್, ಇಂಟರ್‌ನ್ಯಾಷನಲ್ ನ್ಯೂರೋ ರೇಡಿಯಾಲಾಜಿಸ್ಟ್ ಡಾ. ಕೀರ್ತಿರಾಜ್ , ಕಾರ್ಡಿಯೋ ಥೋರಾಕಿಕ್ ಮತ್ತು ವ್ಯಾಸ್ಕ್ಯೂಲರ್ ಸರ್ಜನ್ ಡಾ. ಮಾಧವ್ ಕಾಮತ್, ನೆಫ್ರೋಲಾಜಿಸ್ಟ್ ಡಾ. ಅಶೋಕ್ ಭಟ್, ಹಿರಿಯ ಲೆಪರೋಸ್ಕೋಪಿಕ್ ಸರ್ಜನ್ ಡಾ. ಸತ್ಯನಾರಾಯಣ್ ಹಾಗೂ ಅರವಿಳಿಕೆ ತಜ್ಞ ಡಾ. ಸುನೀಲ್ ಅವರ ತಂಡ ರೋಗಿಗೆ ಉತ್ತಮ ಜೀವನವನ್ನು ಪುನರ್ ಆರಂಭಿಸಲು ನೆರವಾಗಿದೆ.

ಕೆಎಂಸಿ ವೈದ್ಯರ ತಂಡ ಹಾಗೂ ಆಯೋರ್ಟಾ ಸೋರಿಕೆಯಿಂದ ಚೇತರಿಸಿಕೊಂಡ ವ್ಯಕ್ತಿ

ಏನಿದು ಆಯೋರ್ಟಾ ಸೋರಿಕೆ?

ಇದೊಂದು ಅಪರೂಪದ ಹಾಗೂ ಜೀವಕ್ಕೆ ಕುತ್ತು ತರುವಂತಹ ಸಮಸ್ಯೆಯಾಗಿದ್ದು ಹೃದಯದಿಂದ ದೇಹದ ಭಾಗಗಳಿಗೆ ರಕ್ತ ಪೂರೈಸುವ ಮಹಾಪಧಮನಿಯಲ್ಲಿ ರಕ್ತ ಸೋರಿಕೆ ಉಂಟಾಗುತ್ತದೆ.

ಭಾರತಿ ಇಂಗ್ಲಿಷ್ ಶಾಲೆ ಶೇ.100 ಫಲಿತಾಂಶ

ಉಳ್ಳಾಲ್ : ಉಳ್ಳಾಲ್ ಭಾರತೀ ಇಂಗ್ಲೀಷ್ ಮೀಡಿಯಂ ಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆ 2025ರಲ್ಲಿ ಶತಪ್ರತಿಶತ ಫಲಿತಾಂಶ ಸಾಧಿಸಿ, ತನ್ನ ಶೈಕ್ಷಣಿಕ ಉನ್ನತ ಮಟ್ಟವನ್ನು ಮತ್ತೊಮ್ಮೆ ತೋರಿಸಿದೆ. ಇದು ಶಾಲೆಯ ಮೂರನೇ ಬಾರಿ ನಿರಂತರವಾಗಿ ಶೇಕಡಾ 100 ಫಲಿತಾಂಶ ದಾಖಲಿಸುವ ಸಾಧನೆಯಾಗಿದೆ. ಒಟ್ಟು 28 ವಿದ್ಯಾರ್ಥಿಗಳಲ್ಲಿ 5 ಮಂದಿ ಡಿಸ್ಟಿಂಕ್ಷನ್, 20 ಮಂದಿ ಪ್ರಥಮ ದರ್ಜೆ ಹಾಗೂ 3 ಮಂದಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶಿಕ್ಷಕರ ಶ್ರಮ ಹಾಗೂ ವಿದ್ಯಾರ್ಥಿಗಳ ಪರಿಶ್ರಮದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ ಎಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ.

ಮಾನವ ಪ್ರಕೃತಿಗೆ ಪೂರಕವಾಗಿರಲಿ

ಉಡುಪಿ: ಪ್ರಪಂಚದಲ್ಲಿ ಮನುಷ್ಯನನ್ನು ಹೊರತುಪಡಿಸಿ ಯಾವುದೇ ಜೀವರಾಶಿಗಳು ಪ್ರಕೃತಿಗೆ ವಿರುದ್ದವಾಗಿಲ್ಲ. ಹೀಗಾಗಿ ಮನುಷ್ಯ ಪ್ರಕೃತಿಗೆ ಪೂರಕವಾಗಿಲ್ಲದ ಕಾರಣ ಅನಾರೋಗ್ಯಗಳು ಬಾಧಿಸುತ್ತಿವೆ ಎಂದು ಸಂಪುಟ ನರಸಿಂಹ ಮಠ ಸುಬ್ರಮಣ್ಯದ ಶ್ರೀ ವಿದ್ಯಾಪ್ರಸನ್ನತೀರ್ಥರು ಅಭಿಪ್ರಾಯಪಟ್ಟರು. ಅವರು ಭಾನುವಾರ, ಆತ್ರಾಡಿ ಒಂತಿಬೆಟ್ಟುವಿನ ಮದಗದಲ್ಲಿ ಗಾಂಧಿ ಆಸ್ಪತ್ರೆ ಮೂವತ್ತನೇ ವಾರ್ಷಿಕೋತ್ಸವ ಹಾಗೂ ಪಂಚಮಿ ಟ್ರಸ್ಟ್ ರಜತ ಸಂಭ್ರಮಾಚಾರಣೆ ಉದ್ಘಾಟಿಸಿ ಮಾತನಾಡಿದರು. ಮಾನಸಿಕ ಮತ್ತು ದೈಹಿಕ ಅಸ್ವಸ್ಥ ದುರಾಸೆಯ ಫಲ. ಪಡೆದುಕೊಳ್ಳುವ ಭರದಲ್ಲಿ ಶಾಂತಿಯನ್ನು ಕಳೆದುಕೊಳ್ಳುತ್ತಿದ್ದೇವೆ. ವೈದ್ಯರ ಸಹಾಯದಿಂದ ಬದುಕು ದೀರ್ಘಗೊಳಿಸಲು ಪ್ರಯತ್ನ ಸಾಗುತ್ತಿದೆ ಎಂದರು. ಮನುಷ್ಯನ ಬದುಕು ಅಮೂಲ್ಯ. ಆದರೆ, ಜನ್ಮಾಂತರ ಕರ್ಮ ಫಲವಾಗಿ ಬದುಕಿನಲ್ಲಿ ಕಷ್ಟ ಸುಖ ಪ್ರಾಪ್ತಿಯಾಗುತ್ತವೆ. ಅದೆಲ್ಲವನ್ನು ದಾಟಿ ಸುಖಮಯ ಬದುಕಿಗೆ ಪ್ರಯತ್ನ ನಿರಂತರವಾಗಿರಬೇಕೆಂದರು. ಆಸ್ಪತ್ರೆಯ ಆಡಳಿತ ನಿರ್ದೇಶಕ ಎಂ. ಹರೀಶ್ಚಂದ್ರ ಪ್ರಾಸ್ತವಿಕವಾಗಿ ಮಾತನಾಡಿದರು. ವಿದ್ವಾನ್ ಕಬಿಯಾಡಿ ಜಯರಾಮ ಆಚಾರ್ಯ, ಶಾಸಕ ಯಶ್ಪಾಲ್ ಸುವರ್ಣ, ಮನೋವೈದ್ಯ ಡಾ. ಪಿ. ವಿ. ಭಂಡಾರಿ, ಉದ್ಯಮಿ ಎನ್. ಅಚ್ಚುತ ಹೊಳ್ಳ, ಗಾಂಧಿ ಆಸ್ಪತ್ರೆಯ ವೈದ್ಯ ಕೀಯ ನಿರ್ದೇಶಕ ಡಾ. ವ್ಯಾಸರಾಜ ತಂತ್ರಿ, ಲಕ್ಷ್ಮೀ ಹರಿಶ್ಚಂದ್ರ, ಡಾ. ಪಂಚಮಿ, ಡಾ. ವಿದ್ಯಾತಂತ್ರಿ ಉಪಸ್ಥಿತರಿದ್ದರು.

ಜೀವ ಬೆದರಿಕೆ: ಕೇಸ್ ದಾಖಲು

ಮಂಗಳುರು: ಮಂಗಳೂರಿನಲ್ಲಿ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳದ ಮುಖಂಡರಾದ ಶರಣ್ ಪಂಪ್ವೆಲ್ ಮತ್ತು ಭರತ್ ಕುಮ್ಡೇಲ್ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಜೀವ ಬೆದರಿಕೆ ಹಾಕಿರುವ ವಿಚಾರವಾಗಿ ಕದ್ರಿ, ಮತ್ತು ಬಂಟ್ವಾಳ ಗ್ರಾಮಾಂತರ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ಇದೇ ರೀತಿ ಎಸ್ಡಿಪಿಐ ಮುಖಂಡ ರಿಯಾಜ್ ಕಡಂಬು ಅವರಿಗೂ ಬೆದರಿಕೆ ಇದ್ದು, ಆ ಬಗ್ಗೆಯೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ರಿಯಾಜ್ ಕಡಂಬು ವಿರುದ್ಧ ಬೆದರಿಕೆ: ಪ್ರಕರಣ ದಾಖಲು ಎಸ್ಡಿಪಿಐ ಮುಖಂಡ ರಿಯಾಜ್ ಕಡಂಬು ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಕೊಲೆ ಬೆದರಿಕೆ ಹಾಕಿದವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಕೊಲೆ ಬೆದರಿಕೆ ಹಾಕಿದ ಕೆ.ಆರ್ ರಾಕೇಶ್ ವಿರುದ್ಧ ಮಂಗಳೂರಿನ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಯೂಟ್ಯೂಬ್‌ನಲ್ಲಿ ಸುಹಾಸ್ ಶೆಟ್ಟಿ ಕೊಲೆ ಸುದ್ದಿ ಪ್ರಸಾರವಾಗುತ್ತಿದ್ದ ವೇಳೆ ಕಮೆಂಟ್ ಮೂಲಕ ಕೊಲೆ ಬೆದರಿಕೆ ಹಾಕಲಾಗಿತ್ತು. ಮುಂದಿನದ್ದು ರಿಯಾಜ್ ಕಡಂಬು ಹಿಟ್ ಲಿಸ್ಟ್ ಎಂದು ಕೆರಾಕೇಶ್ ಖಾತೆ ಮೂಲಕ ಕಮೆಂಟ್ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ರಿಯಾಜ್ ಕಡಂಬು ಪಾಂಡೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಹಾಕಿದ ಯುವಕನ ಸೆರೆ

ಉಡುಪಿ: ಸಿಎಂ ಸಿದ್ದರಾಮಯ್ಯನನ್ನು ಕೊಂದರೆ ಹಿಂದೂಗಳಿಗೆ ನೆಮ್ಮದಿ ಎಂದು ಇನ್ಸ್ಟಾಗ್ರಾಂನಲ್ಲಿ ಪೋಸ್ಟ್ ಹಾಕಿಕೊಂಡಿದ್ದ ಕಾರ್ಕಳದ ಸಾಣೂರಿನ ಸಂಪತ್ ಸಾಲಿಯಾನ್ ಎಂಬಾತನನ್ನು ಕಾರ್ಕಳ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೇ

2ರಂದು ಈತ ತನ್ನ ಇನ್ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದು ಈ ಕುರಿತು ಕಾರ್ಕಳದ ಸೂರಜ್ ಶೆಟ್ಟಿ ನಕ್ರೆ ಎಂಬವರು ಕಾರ್ಕಳ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ರಾಜಕೀಯ ಪಕ್ಷದ ಮುಖಂಡರ ಹಾಗೂ ಹಿಂದುಗಳಿಗೆ ನೆಮ್ಮದಿ ಎಂದು ಪ್ರಚೋದಿಸಿ ವೈರತ್ವವನ್ನು ಬೆಳೆಸಿ ದ್ವೇಷ ಭಾವನೆ ಹರಡುವ ಉದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರ ಮಾಡಿರುತ್ತಾನೆ ಎಂದು ಸೂರಜ್ ದೂರಿನಲ್ಲಿ ತಿಳಿಸಿದ್ದರು. ಬೆಂಗಳೂರಿನಲ್ಲಿ ಹೋಂ ಗಾರ್ಡ್ ಕೆಲಸ ನಿರ್ವಹಿಸುತ್ತಿದ್ದ ಸಂಪತ್‌ನನ್ನು ಮೇ 4ರಂದು ಕಾರ್ಕಳ ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿರುತ್ತಾರೆ. ಕಾರ್ಕಳ ಎಎಸ್‌ಪಿ ಡಾ. ಹರ್ಷಪ್ರಿಯಂವದ, ವೃತ್ತ ನಿರೀಕ್ಷಕ ಮಂಜಪ್ಪ ಡಿ.ಆರ್. ಮಾರ್ಗದರ್ಶನದಲ್ಲಿ ಕಾರ್ಕಳ ನಗರ ಠಾಣೆ ಎಸ್‌ಐ ಸಂದೀಪ್ ಶೆಟ್ಟಿ ಹಾಗೂ ಶಿವಕುಮಾರ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿತ್ತು.

ಕೇಂದ್ರ ಸರಕಾರವು ರಾಷ್ಟ್ರಾದ್ಯಂತ ಮುಂದಿನ ಜನಗಣತಿಯ ಜೊತೆಗೆ ಜಾತಿ ಗಣತಿಯನ್ನೂ ನಡೆಸುವ ಘೋಷಣೆ ಮಾಡಿದೆ. ವಾಸ್ತವಾಗಿ ಕಳೆದೊಂದು ದಶಕದಿಂದ ಭಾರತೀಯ ಜನತಾ ಪಕ್ಷದ ನೇತೃತ್ವದ ಕೇಂದ್ರ ಸರಕಾರವು ಜಾತಿ ಗಣತಿಯನ್ನು ವಿರೋಧಿಸುತ್ತಲೇ ಬಂದಿತ್ತು, ಆದರೆ ಇದೀಗ ದಿಢೀರ್ ಆಗಿ ಜಾತಿ ಗಣತಿಗೆ ಕೇಂದ್ರ ಸರಕಾರವು ಮುಂದಾಗಿರುವುದು ಎಲ್ಲರನ್ನೂ ಹುಬ್ಬೇರಿಸುವಂತೆ ಮಾಡಿದೆ. ಹಾಗಾದರೆ ಜಾತಿ ಗಣತಿಯ ಹಿನ್ನೆಲೆ ಏನು? ಈ ನಿರ್ಧಾರದಿಂದ ಎದುರಾಗುವ ಸವಾಲುಗಳೇನು? ಅನುಕೂಲಗಳೇನು ಎಂಬ ಮಾಹಿತಿ ಇಲ್ಲಿದೆ.

ಜಾತಿ ಗಣತಿ: ಬದಲಾಗಲಿದೆಯೇ ರಾಜಕೀಯ ನಕ್ಷೆ?

ಮುಂದಿನ ಜನ ಗಣತಿಯಲ್ಲಿ ಜಾತಿ ಗಣತಿಯನ್ನು ಸೇರಿಸುವುದಾಗಿ ಕೇಂದ್ರ ಸರಕಾರ ಘೋಷಿಸಿದ್ದು, ಇದರಿಂದ ದೇಶದ ಜನಗಣತಿಯ ಲೆಕ್ಕಾಚಾರದ ವೇಳೆ ದೇಶದಲ್ಲಿರುವ ವಿವಿಧ ಜಾತಿಗೆ ಒಳಪಟ್ಟವರ ಒಂದು ಹೊಸ ಚಿತ್ರಣ ಕೂಡಾ ಬೆಳಕಿಗೆ ಬರಲಿದೆ. ಈ ಹಿನ್ನೆಲೆಯಲ್ಲಿ ದೇಶದ ರಾಜಕೀಯ ನಕ್ಷೆ ಸಂಪೂರ್ಣ ಬದಲಾವಣೆಯಾಗುವ ಸಾಧ್ಯತೆಯೂ ಇದೆ.

ಸ್ವಾತಂತ್ರ್ಯದ ಬಳಿಕ ಇದೇ ಮೊದಲ ಬಾರಿಗೆ ಭಾರತದಲ್ಲಿ ಜಾತಿ ಗಣತಿ ಪ್ರಕ್ರಿಯೆ ನಡೆಯಲಿದೆ. ಹಲವು ವರ್ಷಗಳಿಂದ ಇದು ಚರ್ಚೆಯಲ್ಲಿದ್ದರೂ ವಿರೋಧ ಪಕ್ಷಗಳ ಒತ್ತಾಯದ ಬಳಿಕ ಕೇಂದ್ರ ಸರಕಾರವು ಜಾತಿ ಗಣತಿ ನಡೆಸಲು ಮುಂದಾಗಿದೆ. ಈ ನಡೆ ಸಾಕಷ್ಟು ಅಚ್ಚರಿ ಮೂಡಿಸಿದರೂ, ಇದರಿಂದ ಎದುರಾಗುವ ಸವಾಲುಗಳ ಬಗ್ಗೆಯೂ ಚರ್ಚೆ ಪ್ರಾರಂಭವಾಗಿದೆ. ಜನಗಣತಿಯೊಂದಿಗೆ ಜಾತಿ ಗಣತಿಯು ನಡೆಯಲಿರುವುದರಿಂದ ಭಾರತದ ಮುಂದಿನ ಜನಸಂಖ್ಯೆಯ ಎಣಿಕೆಯ ವೇಳೆ ಗಣತಿಗಾಗಿ ಮನೆ ಮನೆಗೆ ಬರುವವರು ಜಾತಿಯ ಕುರಿತಾಗಿ ಪ್ರಶ್ನೆಗಳನ್ನು ಕೇಳಲಿದ್ದಾರೆ. ಹೀಗಾಗಿ ಇದು ಮುಂದಿನ ಚುನಾವಣೆಯಲ್ಲಿ ಪರಿಣಾಮ ಬೀರುವ ಸಾಧ್ಯತೆ ಇದೆ.

ಈ ಹಿಂದಿನ ಪ್ರಕ್ರಿಯೆಗಳು

ಬ್ರಿಟಿಷರ ಆಡಳಿತದ ಕಾಲದಲ್ಲಿ ಭಾರತದಲ್ಲಿ ಜಾತಿ ಗಣತಿ ನಡೆಸಲಾಗಿತ್ತು, ಅದು 1881ನೇ ಇಸವಿಯಲ್ಲಿ.

ಮೊದಲ ಬಾರಿಗೆ ಭಾರತದ ಜನಸಂಖ್ಯೆ ಎಷ್ಟಿದೆ ಎಂದು ತಿಳಿಯಲು ಬ್ರಿಟಿಷರು ಮುಂದಾಗಿದ್ದರು, ಅದರೊಂದಿಗೆ ಜಾತಿ ಗಣತಿಯನ್ನೂ ನಡೆಸಲಾಗಿತ್ತು. ಕೊನೆಯ ಬಾರಿಗೆ 1931ರಲ್ಲಿ ಜಾತಿ ಗಣತಿ ನಡೆಸಿದ್ದು, ಈ ವೇಳೆ ದೇಶಾದ್ಯಂತ 4,147 ಜಾತಿಗಳು ಮತ್ತು ಉಪಜಾತಿ ಗಳಿವೆ ಎಂಬುದನ್ನು ಗುರುತಿಸಲಾಗಿತ್ತು.

1941ರಲ್ಲಿ ಜನಗಣತಿಯಲ್ಲಿ ಜಾತಿ ಗಣತಿ ನಡೆದಿದ್ದರೂ ಆ ಕುರಿತಾದ ಅಂಕಿ-ಅಂಶಗಳನ್ನು ಬ್ರಿಟಿಷ್ ಅಧಿಕಾರಿಗಳು ಬಿಡುಗಡೆ ಮಾಡಲಿಲ್ಲ. ದೇಶದ ಸ್ವಾತಂತ್ರ್ಯದ ಬಳಿಕ ಅಧಿಕಾರಕ್ಕೆ ಬಂದ ಸರಕಾರವು ಜನಗಣತಿಯನ್ನು ಮಾತ್ರ ನಡೆಸಿತು. ಪರಿಶಿಷ್ಟ ಜಾತಿ, ಪಂಗಡ, ಬುಡಕಟ್ಟು ಸಮುದಾಯದವರ ಅಂಕಿ-ಅಂಶಗಳನ್ನು ಮಾತ್ರ ಸಂಗ್ರಹ ಮಾಡಿತ್ತು, ಜಾತಿ ಗಣತಿಯು ಸಮಾಜದಲ್ಲಿ ವಿಭಜನೆಯನ್ನು ಉಂಟು ಮಾಡಬಹುದು ಎಂಬ ಭೀತಿಯು ಹೆಚ್ಚಿನವರ ವಾದವಾಗಿತ್ತು.

1931ರಲ್ಲಿ ನಡೆಸಿದ ಜಾತಿ ಗಣತಿಯ ಆಧಾರದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ, ಅಂದರೆ ಸರಿಸುಮಾರು ಅರ್ಧ ಶತಮಾನದ ಅನಂತರ ಮೀಸಲಾತಿ ಕಾನೂನುಗಳನ್ನು ಜಾರಿಗೆ ತರಲಾಯಿತು. ಜಾತಿಯ ಹೆಸರು, ಭೌಗೋಳಿಕ ಪ್ರದೇಶಗಳಲ್ಲಿ ಜಾತಿ ಹೆಸರುಗಳಲ್ಲಿನ ವ್ಯತ್ಯಾಸಗಳನ್ನು ಈ ಸಂದರ್ಭದಲ್ಲಿ ಗುರುತಿಸಲಾಗಿತ್ತು. ಹೀಗಾಗಿ ಹಿಂದುಳಿದ ವರ್ಗದ (ಒಬಿಸಿ) ಅಡಿಯಲ್ಲಿ ದೇಶದ ಜನಸಂಖ್ಯೆಯ ಶೇ. 52ರಷ್ಟು ಮಂದಿ ಇದ್ದಾರೆ ಎಂಬ ವರದಿ ಅದರಲ್ಲಿತ್ತು. ಶಿಕ್ಷಣ ಮತ್ತು ಸರಕಾರಿ ಉದ್ಯೋಗಗಳಲ್ಲಿ ಹಿಂದುಳಿದವರಿಗೆ ಶೇ.27 ಮೀಸಲಾತಿಯನ್ನು ನೀಡಲು ಮಂಡಲ್ ಆಯೋಗವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿತು.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು 2011ರಲ್ಲಿ ವಿಭಿನ್ನವಾಗಿ ಜಾತಿ ಗಣತಿಯನ್ನು ನಡೆಸಿತು. ಸಾಮಾಜಿಕ, ಆರ್ಥಿಕ ಮತ್ತು ಜಾತಿ ಜನಗಣತಿಯಲ್ಲೇ ವಿಭಿನ್ನ ರೀತಿಯಲ್ಲಿ ಜಾತಿ ಎಣಿಕೆಯ ಪ್ರಾರಂಭಿಸಿತು. ಅದರಲ್ಲಿ ಸಂಗ್ರಹಿಸಲಾದ ಅಂಕಿ-ಅಂಶವನ್ನು ವಿವಿಧ ಅಭಿವೃದ್ಧಿ ಮತ್ತು ಕಲ್ಯಾಣ ಯೋಜನೆಗಳ ವಿನ್ಯಾಸ ಮತ್ತು ಕಾರ್ಯಗತಗೊಳಿಸಲಷ್ಟೇ ಬಳಸಲಾಯಿತು. ಆ ಅಂಕಿ ಅಂಶದ ಕೆಲವು ಭಾಗಗಳನ್ನು 2016ರಲ್ಲಿ ಪ್ರಕಟಿಸಲಾಗಿದ್ದರೂ ನಿರ್ದಿಷ್ಟ ಜಾತಿ ಗಣತಿಯ ಅಂಕಿ-ಅಂಶ ಸಂಗ್ರಹಿಸಿಲ್ಲ.

ಯಾಕೆ ಮುಖ್ಯ?

ಜಾತಿ ಜನಗಣತಿಯು ಸಾಮಾಜಿಕವಾಗಿ ಮಾತ್ರವಲ್ಲ, ರಾಜಕೀಯವಾಗಿಯೂ ಆಳವಾಗಿ ಪ್ರಭಾವ ಬೀರುವ ವಿಷಯವಾಗಿದೆ. ಅದು ಮೀಸಲಾತಿ ನೀತಿಗಳು, ರಾಜಕೀಯ ಪ್ರಾತಿನಿಧ್ಯ ಮತ್ತು ಸಾಮಾಜಿಕ ನ್ಯಾಯದ ಮೇಲೆ ಪರಿಣಾಮಗಳನ್ನು ಬೀರುವ ಸಾಧ್ಯತೆ ಇದೆ. ರಾಜಕೀಯ ಪಕ್ಷಗಳು ಜಾತಿ ಸಂಘಟನೆಗಳಿಂದ ಬೆಂಬಲಿತವಾಗಿರುವುದರಿಂದ ಚುನಾವಣಾ ತಂತ್ರಗಳನ್ನು ಮರುರೂಪಿಸುವಂತೆ ರಾಜಕೀಯ ಪಕ್ಷಗಳ ಮೇಲೆ ಒತ್ತಡ ಹಾಕುವ ಸಾಧ್ಯತೆ ಇದೆ. ನಿಖರವಾದ ಜಾತಿ ಅಂಕಿ-ಅಂಶಗಳು ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಪರಿಹರಿಸಲು ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ನೀಡಲು ನೀತಿಗಳನ್ನು ರೂಪಿಸಲು ಸಹಾಯ ಮಾಡುತ್ತದೆ, ಅಲ್ಲದೇ ಅಳಿವಿನಂಚಿನಲ್ಲಿರುವ ಸಮುದಾಯಗಳನ್ನು ಗುರುತಿಸಲು ಮತ್ತು ಮೇಲಕ್ಕೆತ್ತಲು ಜಾತಿ ಜನಗಣತಿ ಅತ್ಯಗತ್ಯ.

ಜಾತಿ ಜನಗಣತಿ ಎಂದರೇನು?

ಜನ ಗಣತಿ ಸಮಯದಲ್ಲಿ ವ್ಯಕ್ತಿಗಳ ಜಾತಿ ಗುರುತು ಗಳ ಕುರಿತು ಮಾಹಿತಿ ಮತ್ತು ದತ್ತಾಂಶ ಸಂಗ್ರಹವೇ ಜಾತಿ ಗಣತಿಯಾಗಿದೆ. ಜಾತಿಗಳು ದೇಶದಲ್ಲಿ ಸಾಮಾ ಜಿಕ, ಆರ್ಥಿಕ ಮತ್ತು ರಾಜಕೀಯದ ಮೇಲೆ ಗಮ ನಾರ್ಹ ಪರಿಣಾಮ ಬೀರುತ್ತಿದೆ. ಆ ಅಂಕಿ-ಅಂಶವು ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ, ಮಾತ್ರ ವಲ್ಲದೆ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳು ಮತ್ತು ವಿವಿಧ ಜಾತಿ ಗುಂಪುಗಳ ಪ್ರಾತಿನಿಧ್ಯದ ಬಗ್ಗೆಯೂ ವಿವರಣೆ ಯನ್ನು ಒದಗಿಸುತ್ತದೆ. ಅದು ಮೀಸಲಾತಿ ಮತ್ತು ಸಾಮಾಜಿಕ ನ್ಯಾಯದ ಕುರಿತು ನೀತಿಗಳನ್ನು ರೂಪಿ ಸಲು ಸಹಾಯ ಮಾಡುತ್ತದೆ.

ಜಾತಿ ಜನಗಣತಿ ಮತ್ತು ರಾಜಕೀಯ

1980ರಲ್ಲಿ ಕೇಂದ್ರ ಸರಕಾರಿ ಉದ್ಯೋಗಗಳಲ್ಲಿ ಇತರ ಹಿಂದುಳಿದ ವರ್ಗದವರಿಗೆ (ಒಬಿಸಿ) ಶೇಕಡಾ 27ರಷ್ಟು ಮೀಸಲಾತಿಯನ್ನು ಒದಗಿಸಬೇಕೆಂಬ ಮಂಡಲ್ ಆಯೋಗದ ಶಿಫಾರಸಿನ ಬಳಿಕ, ಜಾತಿಗಳ ಲೆಕ್ಕಾಚಾರವು ರಾಜಕೀಯದಲ್ಲಿ ಪ್ರಭಾವ ಬೀರಲು ಪ್ರಾರಂಭಿಸಿತ್ತು. ಹೀಗಾಗಿ ಜಾತಿ ಜನಗಣತಿಯ ಬೇಡಿಕೆಗಳು ಹೆಚ್ಚಾಯಿತು. 2011ರಲ್ಲಿ ಯುಪಿಎ ಸರಕಾರವು ದೇಶದಲ್ಲಿ ಕೊನೆಯದಾಗಿ ಸಾಮಾಜಿಕ, ಆರ್ಥಿಕ ಲೆಕ್ಕಾಚಾರದಲ್ಲಿ ಜಾತಿ ಜನಗಣತಿಯನ್ನು ನಡೆಸಿದೆ, ಅದು 1931ರ ಬಳಿಕ ದೇಶಾದ್ಯಂತ ನಡೆದ ಮೊದಲ ಜಾತಿ ಗಣತಿಯಾಗಿದೆ, ಆದರೆ ಇದನ್ನು ಸಂಪೂರ್ಣವಾಗಿ ಸರಕಾರವು ಬಿಡುಗಡೆ ಮಾಡಿಲ್ಲ. ಅದರಿಂದಾಗಿ ವಿರೋಧ ಪಕ್ಷಗಳು ಮತ್ತು ಜಾತಿ ಆಧಾರಿತ ಸಂಘಟನೆಗಳಿಂದ ಸರಕಾರವು ಟೀಕೆಯನ್ನು ಎದುರಿಸಬೇಕಾಯಿತು. ರಾಷ್ಟ್ರೀಯ ಜಾತಿ ಜನಗಣತಿ ನಡೆಯದೇ ಇದ್ದರೂ ಬಿಹಾರ, ತೆಲಂಗಾಣ ರಾಜ್ಯಗಳು ತಮ್ಮದೇ ಆದ ರೀತಿಯಲ್ಲಿ ಜಾತಿ ಸಮೀಕ್ಷೆಗಳನ್ನು ನಡೆಸಿವೆ, ಆ ಮೂಲಕ ಮೀಸಲಾತಿ ನೀತಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಬಳಸುವ ಗುರಿಯನ್ನು ಅವು ಹೊಂದಿವೆ.

ಜಾತಿ ಗಣತಿ ಪಟ್ಟಿಯ ಪ್ರಶ್ನೆಗಳನ್ನು ಬರೆಯಲು ಮುಕ್ತ ಅವಕಾಶ ನೀಡಿದ್ದರಿಂದ ಹೆಚ್ಚಿನವರು ತಮ್ಮ ಉಪನಾಮಗಳನ್ನು ನಮೂದಿಸಿದ್ದರು, ಹೀಗಾಗಿ ಇದರಲ್ಲಿ ಗಣತಿದಾರರು 46 ಲಕ್ಷಕ್ಕೂ ಹೆಚ್ಚು ವಿವಿಧ ಜಾತಿಗಳನ್ನು ಗುರುತಿಸಿದ್ದರು.

ರಾಜ್ಯವಾರು ಜಾತಿ ಎಣಿಕೆ

ಬಿಹಾರ, ತೆಲಂಗಾಣ ಮತ್ತು ಕರ್ನಾಟಕಗಳಲ್ಲಿ ಜಾತಿ ಗಣತಿ ನಡೆಸಲಾಗಿದೆ. ಬಿಹಾರದಲ್ಲಿ 2023ರಲ್ಲಿ ನಡೆದ ಜಾತಿ ಗಣತಿಯಲ್ಲಿ ಶೇ. 63ಕ್ಕಿಂತ ಹೆಚ್ಚು ಒಬಿಸಿ ಮತ್ತು ಅತ್ಯಂತ ಹಿಂದು ಳಿದ ವರ್ಗಗಳನ್ನು (ಇಬಿಸಿಗಳು) ಗುರುತಿಸಲಾ ಯಿತು. ಇದರಿಂದ ರಾಜಕೀಯ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಈ ಜಾತಿಗಳು ಹೆಚ್ಚಿನ ಪ್ರಾತಿನಿಧ್ಯ ಕ್ಕಾಗಿ ಬೇಡಿಕೆಗಳನ್ನು ಇರಿಸಿದ್ದರಿಂದ ರಾಜ್ಯ ಸರಕಾರದ ಮೇಲೆ ಒತ್ತಡ ಹೆಚ್ಚಾಯಿತು. ತೆಲಂಗಾಣದಲ್ಲಿ 2024ರಲ್ಲಿ ಪ್ರಕಟವಾದ ಜಾತಿ ಗಣತಿಯಲ್ಲಿ ರಾಜ್ಯದ ಜನಸಂಖ್ಯೆಯ ಶೇ. 56ಕ್ಕಿಂತ ಹೆಚ್ಚು ಹಿಂದುಳಿದ ವರ್ಗಗಳನ್ನು ಗುರುತಿಸಲಾಯಿತು.

ಅಂಕಿ-ಅಂಶಗಳ ಪರಿಣಾಮ

ಶಿಕ್ಷಣ, ಕಲ್ಯಾಣ ಕಾರ್ಯಕ್ರಮಗಳ ಹೊರತಾಗಿ ಜಾತಿ ಗಣತಿಯು ಸಾರ್ವಜನಿಕ ಮತ್ತು ರಾಜಕೀಯ ಮೀಸಲಾತಿ ನೀತಿಗಳ ಮೇಲೂ ಪರಿಣಾಮ ಬೀರುತ್ತದೆ. ಈಗಾಗಲೇ ಶಿಕ್ಷಣ ಮತ್ತು ಸರಕಾರಿ ಉದ್ಯೋಗಗಳಿಗೆ ಶೇ. 27 ಒಬಿಸಿ ಮೀಸಲಾತಿ ಇದ್ದು, ಈ ಬಾರಿ ಜಾತಿ ಗಣತಿಯಾದರೆ ಮೀಸಲಾತಿ ಬೇಡಿಕೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಮಂಡಲ್ ಆಯೋಗದ ಪರಿಣಾಮ

ಜಾತಿ ತಾರತಮ್ಯವನ್ನು ನಿವಾರಿಸಲು ಉದ್ಯೋಗ ಮೀಸಲಾತಿ ಮತ್ತು ಕೋಟಾಗಳ ಪ್ರಶ್ನೆಯನ್ನು ಪರಿಗಣಿಸಲು ಸಾಮಾಜಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಮೊರಾರ್ಜಿ ದೇಸಾಯಿ ಸರಕಾರವು 1979ರ ಜನವರಿಯಲ್ಲಿ ಮಂಡಲ್ ಆಯೋಗವನ್ನು ಸ್ಥಾಪಿಸಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಲಯಗಳಲ್ಲಿ ಅದರ ಸಾಧಕ-ಭಾದಕಗಳನ್ನು ತಿಳಿಯಲೆತ್ನಿಸಿತು. ಕೇಂದ್ರ ಸರಕಾರ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಉದ್ಯೋಗಗಳಲ್ಲಿ ಇತರ ಹಿಂದುಳಿದ ಜಾತಿಯವರಿಗೆ (ಒಬಿಸಿಯವರಿಗೆ) ಶೇ. 27ರಷ್ಟು ಮೀಸಲಾತಿ ನೀಡಬೇಕೆಂದು ಮಂಡಲ್ ಆಯೋಗವು ತನ್ನ ವರದಿಯಲ್ಲಿ ಶಿಫಾರಸು ಮಾಡಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಟ್ಟು ಮೀಸಲಾತಿ ಸಂಖ್ಯೆಯನ್ನು ಶೇ. 49ಕ್ಕೆ ತರಬೇಕೆಂಬ ಶಿಫಾರಸು ಅದರಲ್ಲಿತ್ತು.

1990ರಲ್ಲಿ, ಆಗಿನ ಪ್ರಧಾನಿ ವಿ.ಪಿ. ಸಿಂಗ್ ಅವರು ಮಂಡಲ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವುದಾಗಿ ಸಂಸತ್ತಿನಲ್ಲಿ ಘೋಷಿಸಿದರು. ಅದರ ಪರಿಣಾಮವಾಗಿ ತಮಗೆ ಮುಂದಿನ ದಿನಗಳಲ್ಲಿ ಉದ್ಯೋಗಾವಕಾಶಗಳಲ್ಲಿ ಸಮಸ್ಯೆ ತಲೆದೋರುವುದು ಖಚಿತ ಮತ್ತು ಸರಕಾರಿ ಸೇವೆಗಳ ಉದ್ಯೋಗಾವಕಾಶ ದೊರೆಯುವುದಿಲ್ಲ ಎಂದು ಯೋಚಿಸಿದ ಮೇಲ್ಜಾತಿಯ ಯುವಕ-ಯುವತಿ ಯರು ಬೀದಿಗಿಳಿದು ಪ್ರತಿಭಟನೆ ಮಾಡಿದರು. ಉತ್ತರ ಭಾರತ ಮತ್ತು ಪಶ್ಚಿಮ ಭಾರತದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ಆ ವೇಳೆ ನಡೆದವು. ಪ್ರತಿಭಟನೆಯಲ್ಲಿ ಭಾಗಿಯಾದ ಅನೇಕ ವಿದ್ಯಾರ್ಥಿಗಳು ದೇಹಕ್ಕೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಶರಣಾಗಲು ಮುಂದಾದರು, ಅವರಲ್ಲಿ ಕೆಲವರು ಸಾವನ್ನಪ್ಪಿದರು.

ಸವಾಲು ಯಾಕೆ?

ಕೇಂದ್ರ ಸರಕಾರವು ಜನಗಣತಿಯೊಂದಿಗೆ ಜಾತಿ ಗಣತಿ ನಡೆಸುವುದಾಗಿ ಹೇಳಿದ್ದರೂ ಸದ್ಯ ಅದರ ದಿನಾಂಕಗಳನ್ನು ನಿಗದಿಪಡಿಸಿಲ್ಲ. ಕೋವಿಡ್ ಸಾಂಕ್ರಾಮಿಕ ರೋಗದ ಕಾರಣ 2021ರ ಜನ ಗಣತಿಯನ್ನು ಅನಿರ್ದಿಷ್ಟವಾಗಿ ಮುಂದೂಡಲಾಯಿತು. ಹೀಗಾಗಿ ಜನಗಣತಿಯೊಂದಿಗೆ ಜಾತಿ ಗಣತಿ ನಡೆದರೆ ಗಣತಿ ಅಧಿಕಾರಿಗಳಿಗೆ ಕೆಲಸದ ಹೊರೆ ಹೆಚ್ಚಾಗಲಿದೆ. ಅದಕ್ಕಾಗಿ ಜನ ಗಣತಿಯಲ್ಲಿ ಬಳಸಬೇಕಾದ ಜಾತಿಗಳ ಕೋಡ್ ಡೈರೆಕ್ಟರಿಯನ್ನು ರಚಿಸಬೇಕು, ಜಾತಿಗಳ ಡ್ರಾಪ್‌ಡೌನ್ ಪಟ್ಟಿಯನ್ನು ಸಿದ್ಧಪಡಿಸಬೇಕಿದೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ವಿಭಿನ್ನ ಹಿಂದುಳಿದ ಜಾತಿಗಳ ಪಟ್ಟಿಗಳನ್ನು ಹೊಂದಿದ್ದು, ಅದನ್ನು ಹೊಂದಿಸುವುದು ರಾಜಕೀಯವಾಗಿಯೂ ಸವಾಲನ್ನು ತಂದೊಡ್ಡಬಹುದು. ಜಾತಿ, ಉಪಜಾತಿಗಳ ವಿಭಜನೆ, ನಿರ್ದಿಷ್ಟ ಜಾತಿಗಳು ಎಸ್ ಸಿ, ಒಬಿಸಿ ಅಥವಾ ಸಾಮಾನ್ಯ ವರ್ಗಗಳಿಗೆ ಹೊಂದಿಕೊಳ್ಳುತ್ತವೆಯೇ ಎಂಬುದರ ಕುರಿತು ಇರುವ ಭಿನ್ನಾಭಿಪ್ರಾಯಗಳು ಇರುವುದರಿಂದ ಅವೆಲ್ಲವೂ ಸವಾಲಾಗಿ ಪರಿಣಮಿಸಲಿದೆ.

ಸೈಕ್ಲಿಸ್ಟ್‌ಗಳ ತವರು ವಿಜಯಪುರ ವೆಲ್ಲೋಡ್ರೋಮ್ ಆಗಲಿ ಸಾಕಾರ

ಜಿಲ್ಲಾ ನೋಟ

ಬಸವರಾಜ್‌ಉಳ್ಳಾಗಡ್ಡಿ, ವಿಜಯಪುರ

ಬಸವರಾಜ್‌ಉಳ್ಳಾಗಡ್ಡಿ, ವಿಜಯಪುರ

'ಸೈಕ್ಲಿಸ್ಟ್‌ಗಳ ತವರು' ಎಂದೇ ಕರೆಯಲಾಗುವ ವಿಜಯಪುರ ಜಿಲ್ಲೆಯಲ್ಲಿ ಕಳೆದೊಂದು ದಶಕದ ಹಿಂದೆ ಆರಂಭಿಸಲಾದ ರಾಜ್ಯದ ಏಕೈಕ ಸೈಕ್ಲಿಂಗ್ ವೆಲ್ಲೋಡ್ರೋಮ್ ಕಾಮಗಾರಿ ನಾನಾ ಕಾರಣಗಳಿಂದ ನಿಧಾನವಾಗುತ್ತಿದೆ. ಶೇ.95ರಷ್ಟು ಕಾಮಗಾರಿ ಪೂರ್ಣಗೊಂಡಿದ್ದರೂ, ಬಾಕಿ ಅಲ್ಪ ಕೆಲಸ ಪೂರ್ಣಗೊಳಿಸಲು ಜಿಲ್ಲಾಡಳಿತ ನಿರ್ಲಕ್ಷ್ಯ ತೋರುತ್ತಿದೆ.

ವೆಲ್ಲೋಡ್ರೋಮ್‌ಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಭೇಟಿ ನೀಡಿರುವುದು.

ಭೂತನಾಳ ಕೆರೆ ಬಳಿ ಭೂಮಿ

ಅಖಂಡ ವಿಜಯಪುರ ಭಾಗದ ನೂರಾರು ಸೈಕ್ಲಿಸ್ಟ್‌ಗಳು ರಾಜ್ಯ, ರಾಷ್ಟ್ರ ಮಟ್ಟದಲ್ಲೂ ಸಾಧನೆ ಮಾಡಿದ್ದಾರೆ. ಉತ್ತಮ ಸಾಧನೆ ಮಾಡಲು ತರಬೇತಿಗೆ ಅನುಕೂಲವಾಗಲೆಂದು ವಿಜಯಪುರ ನಗರ ಹೊರ ವಲಯದ ಭೂತನಾಳ ಕೆರೆ ಬಳಿ ಸುಮಾರು ಎಂಟು ಎಕರೆ ಪ್ರದೇಶದಲ್ಲಿ ಅಂದಾಜು 7.5 ಕೋಟಿ ವೆಚ್ಚದಲ್ಲಿ ಸೈಕ್ಲಿಂಗ್ ವೆಲ್ಲೋಡ್ರೋಮ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಯಿತು.

ಮಾಹಿತಿ ಕೊರತೆಗೆ ಸ್ಥಗಿತ

2004ರಲ್ಲಿ ಇಲ್ಲಿ ಸೈಕ್ಲಿಂಗ್ ವೆಲ್ಲೋಡ್ರೋಮ್ ನಿರ್ಮಿಸಲು ಭೂಮಿ ಮಂಜೂರಾಗಿತ್ತು. 2009ರಲ್ಲಿ ಅಂದಿನ ಬಿಜೆಪಿ ಸರಕಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಗೋವಿಂದ ಕಾರಜೋಳ ಹಾಗೂ ಕ್ರೀಡಾ ಸಚಿವರಾಗಿದ್ದ ಗೂಳಿಹಟ್ಟಿ ಶೇಖರ್ ಇಲ್ಲಿ ಸೈಕ್ಲಿಂಗ್ ವೆಲ್ಲೋಡ್ರೋಮ್ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ್ದರು. 2011ರಲ್ಲಿ ಭೂಸೇನಾ ನಿಗಮಕ್ಕೆ ಕಾಮಗಾರಿ ವಹಿಸಲಾಗಿತ್ತಾದರೂ ವೆಲ್ಲೋಡ್ರೋಮ್ ಮಾಹಿತಿ ಕೊರತೆಯಿಂದ ಸ್ಥಗಿತವಾಯಿತು.

ಮಾರುತಿ ಕನ್‌ಸ್ಟ್ರನ್‌ಗೆ ಗುತ್ತಿಗೆ

ನಾಲ್ಕೈದು ಬಾರಿ ಟೆಂಡರ್ ಕರೆದರೂ ಯಾರೂ ಆಸಕ್ತಿ ತೋರಿಸದ ಕಾರಣ, ಜಿಲ್ಲಾ ಸೈಕ್ಲಿಂಗ್ ಅಸೋಸಿಯೇಷನ್ ಒತ್ತಾಯದ ಮೇರೆಗೆ 2015ರಲ್ಲಿ ಆಗಿನ ಕಾಂಗ್ರೆಸ್ ಸರಕಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಂ.ಬಿ.ಪಾಟೀಲ, ಕ್ರೀಡಾ ಸಚಿವ ಅಭಯಚಂದ್ರ ಜೈನ್ ಕಾಮಗಾರಿ ಚುರುಕುಗೊಳಿಸಲು ದಾವಣಗೆರೆ ಮೂಲದ ಮಾರುತಿ ನಿರ್ಮಾಣ ಕಂಪನಿಗೆ ಗುತ್ತಿಗೆ ಕಾಮಗಾರಿ ನೀಡಿತ್ತು. ಜಿಲ್ಲಾ ಸೈಕ್ಲಿಂಗ್ ಸಂಸ್ಥೆಯನ್ನು ಈ ಕಾಮಗಾರಿ ಸೂಕ್ತ ನಿರ್ವಹಣೆಗಾಗಿ ಥರ್ಡ್ ಪಾರ್ಟಿಯನ್ನಾಗಿ ನೇಮಕ ಮಾಡಲಾಗಿತ್ತು. ತಾಂತ್ರಿಕ ಸಮಸ್ಯೆ ಹಾಗೂ ನಾನಾ ಸಬೂಬು ಹೇಳುತ್ತಾ ಕಾಮಗಾರಿ ಆಮೆಗತಿಯಲ್ಲೇ ಸಾಗುತ್ತಿತ್ತು.

ಜಿಲ್ಲಾಧಿಕಾರಿ ಕಾಳಜಿ

2021 ಜಿಲ್ಲಾಧಿಕಾರಿಗಳಾಗಿದ್ದ ಬಿ. ಸುನಿಲ ಕುಮಾರ್ ಅವರು ಸೈಕ್ಲಿಂಗ್ ವೆಲ್ಲೋಡ್ರೋಮ್ ಕಾಮಗಾರಿ ಬಗ್ಗೆ ಸಿಎಂ ನೇತೃತ್ವದ ಸಭೆಯಲ್ಲಿ ಪ್ರಸ್ತಾಪಿಸಿದರು. ಇದನ್ನು ಮರು ಪರಿಶೀಲಿಸಿ ಮತ್ತೆ ಕಾಮಗಾರಿ ಚುರುಕುಗೊಳಿಸಲು ಕ್ರೀಡಾ ಆಯುಕ್ತರ ನೇತೃತ್ವದ ವಿಶೇಷ ಕಮಿಟಿ ರಚಿಸಲಾಯಿತು. ಜಿಲ್ಲಾಧಿಕಾರಿ ಟಿ.ಸುನೀಲಕುಮಾರ್ ಖುದ್ದಾಗಿ ಚೆನ್ನೈ ಮತ್ತು ಹೈದ್ರಾಬಾದ್ ಸೈಕ್ಲಿಂಗ್ ವೆಲ್ಲೋಡ್ರೋಮ್‌ಗಳಿಗೆ ಭೇಟಿ ಕೊಟ್ಟು ಮಾಹಿತಿ ಹೊತ್ತು ತಂದರು.

ಪರಿಣಿತ ಉಸ್ತುವಾರಿ

ನಂತರ ವಿಜಯಪುರದಲ್ಲಿ ಸಭೆ ಮಾಡಿ ಕೊಲ್ಕತ್ತಾದ ಸೈಕ್ಲಿಂಗ್ ಪರಿಣಿತ ಪಿನಾಕಿ ಬೈಸಿಕಿ ಅವರನ್ನು 2022ರಲ್ಲಿ ಇದರ ತಾಂತ್ರಿಕ ಸಲಹೆಗಾರರನ್ನಾಗಿ ಸರಕಾರದಿಂದಲೇ ನೇಮಕ ಮಾಡಿಕೊಂಡರು. ಪಿನಾಕಿ ಅವರು ವೆಲ್ಲೋಡ್ರೋಮ್ ಕಾಮಗಾರಿ ಬಗ್ಗೆ ತಮಗೆ ನೀಡಿದ್ದ ಜವಾಬ್ದಾರಿ ಪೂರ್ಣಗೊಳಿಸಿದ್ದಾರೆ. ಸದ್ಯ ಕಾಮಗಾರಿ ಭಾಗಶಃ ಪೂರ್ಣಗೊಂಡಿದೆ.

> ವೆಲ್ಲೋಡ್ರೋಂ ಕಾಮಗಾರಿ ಪೂರ್ಣಗೊಂಡ ನಂತರ ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾದವರು ಅನುಮತಿ ನೀಡಿದ ಬಳಿಕವೇ ಇಲ್ಲಿ ಸೈಕ್ಲಿಂಗ್ ಚಾಂಪಿಯನ್‌ಶಿಪ್ ನಡೆಸಲು ಸಾಧ್ಯ. ನಾನೊಬ್ಬ ರಾಷ್ಟ್ರೀಯ ಸೈಕ್ಲಿಂಗ್ ಕ್ರೀಡಾ ಪಟುವಾಗಿದ್ದು, ಈ ಭಾಗದ ಸೈಕ್ಲಿಸ್ಟ್‌ಗಳ 3 ದಶಕಗಳ ಕನಸಾಗಿರುವ ಸೈಕ್ಲಿಂಗ್ ವೆಲ್ಲೋಡ್ರೋಮ್ ಶೀಘ್ರ ಸಾಕಾರಗೊಳ್ಳಬೇಕು. ನಮ್ಮ ಭಾಗದ ಸೈಕ್ಲಿಂಗ್ ಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚುವಂತಾಗಬೇಕು.
>
> -ರಾಜು ಬಿರಾದಾರ, ಚೇರ್ಮನ್, ರಾಜ್ಯ ಸೈಕ್ಲಿಂಗ್ ಸಂಸ್ಥೆ

> ವಿಜಯಪುರ ಸೈಕ್ಲಿಂಗ್ ವೆಲ್ಲೋಡ್ರೋಮ್ ಕಾಮಗಾರಿ ಪೂರ್ಣಗೊಂಡು ಅನುಮತಿ ಪಡೆಯಲು ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾಗೆ ಕ್ರೀಡಾ ಆಯುಕ್ತಾಲಯದಿಂದ ಪತ್ರ ವ್ಯವಹಾರ ಸಹ ಮಾಡಲಾಗಿದೆ. ಕೇಂದ್ರ ತಂಡ ಶೀಘ್ರ ಭೇಟಿ ನೀಡಿ ಅನುಮತಿ ನೀಡುತ್ತಾರೆಂಬ ನಿರೀಕ್ಷೆಯಲ್ಲಿದ್ದೇವೆ.
>
> -ರಾಜಶೇಖರ ದೈವಾಡಿ, ಸಹಾಯಕ ನಿರ್ದೇಶಕರು, ಕ್ರೀಡಾ ಇಲಾಖೆ, ವಿಜಯಪುರ

- » ಸೈಕ್ಲಿಂಗ್ ವೆಲ್ಲೋಡ್ರೋಮ್ ಬಗ್ಗೆ ನಿರ್ಲಕ್ಷ್ಯ
- » ಭೂತನಾಳ ಕೆರೆ ಬಳಿ ಎಂಟು ಎಕರೆ ಪ್ರದೇಶ
- » ಅಂದಾಜು 7.5 ಕೋಟಿ ವೆಚ್ಚದ ಕಾಮಗಾರಿ
- » ಈವರೆಗೆ ಶೇ.95ರಷ್ಟು ಕಾಮಗಾರಿ ಪೂರ್ಣ

ಬೇಕಿದೆ ಅನುಮತಿ

ಮುಖ್ಯವಾಗಿ ಇದಕ್ಕೆ ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾದವರು ಕಾಮಗಾರಿ ಪರಿಶೀಲಿಸಿ ಅನುಮತಿ ಕೊಡಬೇಕು. ಆಗ ಮಾತ್ರ ಇಲ್ಲಿ ರಾಜ್ಯ-ರಾಷ್ಟ್ರ ಮಟ್ಟದ ಸೈಕ್ಲಿಂಗ್ ಚಾಂಪಿಯನ್‌ಶಿಪ್ ಹಮ್ಮಿಕೊಳ್ಳಲು ಸಾಧ್ಯವಾಗಲಿದೆ. ಬೇಗ ಫೈನಲ್ ಟಚಪ್ ಫಿನಿಷಿಂಗ್ ಮಾಡಿ ಪೂರ್ಣಗೊಳಿಸಲು ಜಿಲ್ಲಾಡಳಿತ ಯಾಕೆ ನಿರ್ಲಕ್ಷಿಸುತ್ತಿದೆ ಎಂದು ಹಿರಿಯ ಸೈಕ್ಲಿಂಗ್ ತರಬೇತುದಾರ ದುಂಡಪ್ಪ ಅಥಣಿ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ತವರು ಸಾಧನೆ ಸಚಿವಗೆ ಸಮಾಧಾನ ಜಿಲ್ಲೆ ಮಾನ ಉಳಿಸಿದ 4ನೇ ಸ್ಥಾನ..!

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಅನೇಕ ಕಠಿಣ ಕ್ರಮಗಳ ಫಲದಿಂದಲೋ ಏನೋ ಗೊತ್ತಿಲ್ಲ, ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಶಿವಮೊಗ್ಗ ಜಿಲ್ಲೆ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದಿರುವುದು ಖುದ್ದು ಶಿಕ್ಷಣ ಸಚಿವರಿಗೆ ಒಂದಷ್ಟು ಸಮಾಧಾನ ತಂದಿದೆ. ರಾಜ್ಯದ ಫಲಿತಾಂಶ ಏನೇ ಇರಲಿ. ಆದರೆ ತಮ್ಮ ತವರು ಜಿಲ್ಲೆಯ ಫಲಿತಾಂಶ ಯಾವ ಕಾರಣಕ್ಕೂ ಕುಸಿಯಬಾರದು. ಒಂದು ವೇಳೆ ಕುಸಿದರೆ ಅದಕ್ಕೆ ರಾಜ್ಯ ಮಟ್ಟದಲ್ಲಿ ತಾವು ಎದುರಿಸಬೇಕಾದ ಮುಜುಗರ, ಟೀಕೆ ಟಿಪ್ಪಣಿಗಳ ಬಗ್ಗೆ ಮೊದಲೇ ತಮ್ಮ ಇಲಾಖೆ ಅಧಿಕಾರಿಗಳಿಗೆ ಎಚ್ಚರಿಸಿದ್ದರು. ಒಟ್ಟಾರೆ ಇಲಾಖೆ ಪರಿಶ್ರಮ, ಮಕ್ಕಳ ಶ್ರದ್ಧೆ, ಪೋಷಕರ ಕಾಳಜಿ, ಈ ಎಲ್ಲ ಪ್ರಯತ್ನಗಳ ಫಲದಿಂದಾಗಿ ಉತ್ತಮ ಫಲಿತಾಂಶ ಜಿಲ್ಲೆಗೆ ಲಭಿಸಿದೆ. ಸಚಿವರಿಗೆ ಆಗಬಹುದಾಗಿದ್ದ ಮುಜುಗರವನ್ನು ತಪ್ಪಿಸಿದಂತಾಗಿದೆ..!

ಮಾನ ಉಳಿಸಿದ 4ನೇ ಸ್ಥಾನ

ಶಿವಮೊಗ್ಗ ಜಿಲ್ಲೆಯೂ ಕಳೆದ ಬಾರಿ ಮೂರನೇ ಸ್ಥಾನ ಪಡೆದಿದತ್ತಾದರೂ, ಈ ಬಾರಿ ಶೇ.80ಕ್ಕಿಂತ ಹೆಚ್ಚು ಫಲಿತಾಂಶ ಪಡೆದ ನಾಲ್ಕು ಜಿಲ್ಲೆಗಳ ಸಾಲಿನಲ್ಲಿ ಶಿವಮೊಗ್ಗವೂ ಇದೆ ಎಂಬುದು ಸಮಾಧಾನದ ಸಂಗತಿ. ಆಶ್ಚರ್ಯವೆಂದರೆ 2022ರಲ್ಲಿ 29 ನೇ ಸ್ಥಾನ ಹಾಗೂ 2023 ರಲ್ಲಿ 26 ನೇ ಸ್ಥಾನ ಪಡೆದಿದ್ದ ಶಿವಮೊಗ್ಗ ಜಿಲ್ಲೆ 2024 ರಲ್ಲಿ 3 ನೇ ಸ್ಥಾನಕ್ಕೆ ಜಿಗಿದು ಆಚ್ಚರಿ ಹುಟ್ಟಿಸಿತ್ತು. ಒಂದು ವರ್ಷದಲ್ಲಿಯೇ ಇಷ್ಟು ಪ್ರಮಾಣದ ಸ್ಥಾನ ಮೇಲೆ ಬಂದ ಶಿವಮೊಗ್ಗ ಜಿಲ್ಲೆ ತನ್ನ ಶೈಕ್ಷಣಿಕ ಫಲಿತಾಂಶವನ್ನು ಉಳಿಸಿಕೊಳ್ಳುವ ಹಾಗೂ ಇನ್ನಷ್ಟು ಉತ್ತಮ ಪಡಿಸಿಕೊಳ್ಳುವ ಒತ್ತಡದಲ್ಲಿ ಉತ್ತಮ ಕೆಲಸವನ್ನೇ ಮಾಡಿದೆ. ಶಿಕ್ಷಣ ಸಚಿವರ ತವರು ಜಿಲ್ಲೆ ಒಂದು ಸ್ಥಾನವನ್ನು ಕುಸಿತ ಕಂಡರೂ, ಅವರಿಗೆ ಮುಖಭಂಗ ಮಾಡಿಲ್ಲ ಎಂಬುದೇ ಸಮಾಧಾನದ ಸಂಗತಿ.

ಶಿಕ್ಷಣ ಇಲಾಖೆ ಶ್ರಮ

ಜಿಲ್ಲೆಯಲ್ಲಿ ಪರೀಕ್ಷೆ ಬರೆದ 21876 ವಿದ್ಯಾರ್ಥಿಗಳಲ್ಲಿ 18003 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇಡೀ ರಾಜ್ಯದಲ್ಲಿಯೇ ಶಿವಮೊಗ್ಗ ಜಿಲ್ಲೆ 4ನೇ ಸ್ಥಾನಗಳಿಸಿರುವುದಕ್ಕೆ ಡಿಡಿಪಿಐ ಮಂಜುನಾಥ ಸಂತಸ ವ್ಯಕ್ತಪಡಿಸಿದ್ದಾರೆ. ಫಲಿತಾಂಶ ಹೆಚ್ಚಳಕ್ಕಾಗಿ ಅನೇಕ ಕ್ರಮ ಕೈಗೊಳ್ಳಲಾಗಿತ್ತು. ಮೊದಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಡಯಟ್ ಸಹಯೋಗದಲ್ಲಿ ಶೇ.70ಕ್ಕಿಂತ ಕಡಿಮೆ ಫಲಿತಾಂಶ ಪಡೆದಿದ್ದ ಶಾಲೆಗಳನ್ನು ಗುರುತಿಸಲಾಯಿತು. ವಿದ್ಯಾರ್ಥಿಗಳನ್ನು 3 ಭಾಗಗಳಾಗಿ ವಿಂಗಡಿಸಿ ಅವರ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಯಿತು ಎಂದರು.

> ಶಾಲೆಗಳ ಶಿಕ್ಷಕರು ಹಾಗೂ ಅಧಿಕಾರಿಗಳ ಸಹಕಾರದಿಂದ ಈ ಬಾರಿಯೂ ಉತ್ತಮ ಫಲಿತಾಂಶ ಪಡೆಯುವಲ್ಲಿಯಶಸ್ವಿಯಾಗಿದ್ದೇವೆ. ಅಲ್ಲದೇ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಕಾರಣದಿಂದ ಪರೀಕ್ಷೆಗೆ ಮಕ್ಕಳನ್ನು ಮಾನಸಿಕವಾಗಿ ಸಿದ್ಧಪಡಿಸುವಲ್ಲಿ ನಮ್ಮ ಶಿಕ್ಷಕರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರೆಲ್ಲರ ಶ್ರಮದಿಂದ ಜಿಲ್ಲೆಗೆ ನಾಲ್ಕನೇ ಅಂದರೆ ಉತ್ತಮ ಸ್ಥಾನ ಲಭಿಸಿದೆ
>
> - ಮಂಜುನಾಥ, ಡಿಡಿಪಿಐ, ಶಿವಮೊಗ್ಗ

- » ಶಾಲಾ ಶಿಕ್ಷಣ ಸಚಿವರಿಗೆ ತಪ್ಪಿದ ಮುಜುಗರ
- » ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ
- » ಈ ಬಾರಿ ಲಭಿಸಿದೆ ಜಿಲ್ಲೆಗೆ ನಾಲ್ಕನೇ ಸ್ಥಾನ
- » 2022ರಲ್ಲಿ 29ನೇ ಸ್ಥಾನಕ್ಕಿದ್ದ ಜಿಲ್ಲೆ ಜಂಪ್
- » ಜಿಲ್ಲೆಯ ಸರಕಾರಿ ಶಾಲೆಗಳಲ್ಲಿಯೂ ಸಾಧನೆ

ಶಿವಮೊಗ್ಗ ಜಿಲ್ಲಾ ಡಿಡಿಪಿಐ ಕಚೇರಿ ಹೊರ ನೋಟ.

ವಿದ್ಯಾರ್ಥಿಗಳ ಸಮೀಕ್ಷೆ

ಶಿಕ್ಷಕರ ತಂಡಗಳು ಪ್ರತಿ ವಿದ್ಯಾರ್ಥಿಯ ಸಮೀಕ್ಷೆ ನಡೆಸಿ ಅವರು ಯಾವ ವಿಷಯದಲ್ಲಿ ಹಿಂದುಳಿದಿದ್ದಾರೆ ಎಂಬುವುದನ್ನು ಪರಿಶೀಲಿಸಿ ನಂತರ ಅವರಿಗೆ ಅಗತ್ಯವಾದ ಮಾರ್ಗದರ್ಶನ ನೀಡಲಾಯಿತು. ಇದರಿಂದ ಫಲಿತಾಂಶದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಕಳೆದ ಬಾರಿ ಫಲಿತಾಂಶದ ಆಧಾರದಲ್ಲಿಯೇ ಎಲ್ಲ ಶಾಲೆಗಳಿಗೆ ಸೂಕ್ತ ಸೂಚನೆ ನೀಡಲಾಗಿತ್ತು. ಅಂತಹ ಶಾಲೆಗಳ ಫಲಿತಾಂಶ ಸುಧಾರಣೆಗೆ ಅಧಿಕಾರಿಗಳ ನೆರವು ಮುಖ್ಯವಾಗಿತ್ತು.

ಸುಧಾರಣೆ ಕ್ರಮಗಳು

ಕಡಿಮೆ ಫಲಿತಾಂಶ ಬಂದ ಶಾಲೆಗಳಲ್ಲಿ ಕೈಗೊಂಡ ಸುಧಾರಣೆ ಕ್ರಮಗಳಿಂದಾಗಿ ಈ ಬಾರಿ ಹೆಚ್ಚಿನ ಫಲಿತಾಂಶ ಬಂದಿದೆ. ಫಲಿತಾಂಶ ಹೆಚ್ಚಳಕ್ಕಾಗಿ ರಚಿಸಲಾಗಿದ್ದ ಅಧಿಕಾರಿಗಳು, ಶಿಕ್ಷಕರ ತಂಡ ಮಕ್ಕಳ ಕಲಿಕೆಗೆ ಒತ್ತು ನೀಡುವ ಜತೆ ಜನವರಿಯಿಂದಲೇ ಪುನರಾವರ್ತನೆ ಆರಂಭಿಸಿದರು. ಶಾಲಾ ಹಂತ, ತಾಲೂಕು ಹಂತ ಜಿಲ್ಲಾ ಮಟ್ಟದಲ್ಲಿ ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಲಾಯಿತು. ಇವುಗಳು ಫಲಿತಾಂಶ ಹೆಚ್ಚಳಕ್ಕೆ ಕಾರಣವಾಗಿವೆ.

ಪಾಸಿಂಗ್ ಪ್ಯಾಕೇಜ್

ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅವರು ಉತ್ತೀರ್ಣರಾಗಲು ಅವಶ್ಯಕವಾದ ಕಲಿಕೆಯ ಮಾರ್ಗದರ್ಶನ ನೀಡಲಾಯಿತು. ಪಾಸಿಂಗ್ ಪ್ಯಾಕೇಜ್ ರೂಪಿಸಿ ಪ್ರಶ್ನೆ ಪತ್ರಿಕೆಗಳನ್ನು ರಚಿಸಿ ನೀಡಲಾಯಿತು. ಇದು ಕೂಡ ಫಲಿತಾಂಶ ಹೆಚ್ಚಳಕ್ಕೆ ಕಾರಣವಾಯಿತು. ಬಹಳ ಮುಖ್ಯವಾಗಿ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನಿಂದ ಪರೀಕ್ಷೆ ಸಿಸಿ ಕ್ಯಾಮೆರಾ, ವೆಬ್ ಕ್ಯಾಮ್ ಮೂಲಕವೂ

ವೆಬ್ ಕ್ಯಾಮರಾ ಪ್ರಯೋಗ

ಪರೀಕ್ಷೆಯಲ್ಲಿ ಯಾವುದೇ ಅಕ್ರಮಕ್ಕೆ ಅವಕಾಶವಿಲ್ಲದಂತೆ ನಿಗಾ ವಹಿಸಲಾಗಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ವೆಬ್ ಕ್ಯಾಮರಾ ಅಳವಡಿಸಿ 11 ಲ್ಯಾಪ್‌ಟಾಪ್‌ಗಳ ಮೂಲಕ ವೀಕ್ಷಿಸಲಾಯಿತು ಎಂದು ಶಿಕ್ಷಣ ಅಧಿಕಾರಿಗಳು ಹೇಳುತ್ತಾರೆ. ಕಡಿಮೆ ಫಲಿತಾಂಶ ಪಡೆದ ಶಾಲೆಗಳನ್ನು ಮೊದಲೇ ಗುರುತಿಸಿ ಅಲ್ಲಿನ ಮಕ್ಕಳ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಯಿತು.

ಸರಕಾರಿ ಶಾಲೆಗಳ ಸಾಧನೆ

ಒಂದು ವರ್ಷದಿಂದ ನಿರಂತರವಾಗಿ ಪಾಠ ಕಲಿಕೆ ಪರೀಕ್ಷೆ ಪುನರ್ ಮನನ ಸೇರಿ ಹಲವು ಕ್ರಮಗಳನ್ನು ಕೈಗೊಂಡಿದ್ದರಿಂದ ಫಲಿತಾಂಶ ಬಹುತೇಕ ಸುಧಾರಿಸಿತು. ಈ ಬಾರಿ ಹೆಚ್ಚಿನ ಸಂಖ್ಯೆಯ ಸರಕಾರಿ ಶಾಲೆಗಳಲ್ಲೂ ಕೂಡ ಉತ್ತಮ ಫಲಿತಾಂಶ ಪಡೆದಿರುವುದು ವಿಶೇಷವಾಗಿದೆ . ಎಲ್ಲದಕ್ಕಿಂತ ಮುಖ್ಯವಾಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೇಮಂತ ಅವರು ಫಲಿತಾಂಶ ಯಾವುದೇ ಕಾರಣಕ್ಕೂ ಕುಸಿಯಬಾರದು ಎಂಬ ಕಟ್ಟುನಿಟ್ಟಿನ ಸೂಚನೆ ನೀಡಿ ಶಿಕ್ಷಕರಿಗೆ ಸೂಕ್ತ ತರಬೇತಿ ಹಾಗೂ ಪರೀಕ್ಷಾ ಗುಣಮಟ್ಟ ಸುಧಾರಿಸಲು ಪೂರ್ವ ಸಿದ್ಧತಾ ಪರೀಕ್ಷೆ ನಡೆಸುವಂತೆ ನಿರ್ದೇಶನ ನೀಡಿದ್ದರು.

ಅನುದಿನವೂ ವಿರಾಮಕ್ಕೆ ಒಂದು ನೆಪ

ವಿರಾಮ

ವಿಶ್ವವಾಣಿ
@vishwavaninews
ಬೆಂಗಳೂರು
06-05-2025, ಮಂಗಳವಾರ

ಥ್ರೋಬಾಲ್ ಪಿತಾಮಹ ಡಾ. ರಾಮಣ್ಣ

ಸುರಕ್ಷಿತ ಮತ್ತು ಆರೋಗ್ಯಕರ ಕ್ರೀಡೆ ಎನಿಸಿರುವ ಥ್ರೋಬಾಲ್ ಕ್ಷೇತ್ರದಲ್ಲಿ ಇವರ ಅನನ್ಯವಾದ ಸಾಧನೆ ಲಕ್ಷಾಂತರ ಕ್ರೀಡಾಪ್ರಿಯರಿಗೆ ಮಾದರಿ. ಥ್ರೋಬಾಲ್ ಕ್ರೀಡೆಗೆ ಅಂತಾರಾಷ್ಟ್ರೀಯ ಮಾನ್ಯತೆ ದೊರಕಿಸಲು ಇವರು ಮಾಡಿದ ಶ್ರಮ ಅಭೂತಪೂರ್ವ.

● ಸಂಪೂರ್ಣ ಹೆಗಡೆ

ಡಾ. ಟಿ. ರಾಮಣ್ಣ, ಅಂತರರಾಷ್ಟ್ರೀಯ ಥ್ರೋಬಾಲ್ ಒಕ್ಕೂಟದ (ಐ.ಟಿ.ಎಫ್.) ಸ್ಥಾಪಕರು ಮತ್ತು ಪ್ರಧಾನ ಕಾರ್ಯದರ್ಶಿಗಳು. ಭಾರತವೂ ಸೇರಿದಂತೆ ವಿಶ್ವದ 55 ಕ್ಕೂ ಹೆಚ್ಚು ದೇಶಗಳಲ್ಲಿ ಥ್ರೋಬಾಲ್ ಕ್ರೀಡೆಯ ಬಗ್ಗೆ ಜನಜಾಗೃತಿ ಮೂಡಿಸಿದ ಯಶಸ್ಸು, ಬೆಂಗಳೂರಿನ ರಾಮಣ್ಣ ಅವರಿಗೆ ಸಲ್ಲುತ್ತದೆ. 1989 ರಲ್ಲಿಯೇ ಇಂಡಿಯನ್ ಥ್ರೋಬಾಲ್ ಫೆಡರೇಷನ್ ಸ್ಥಾಪಿಸಿದ್ದ ರಾಮಣ್ಣ ಅವರು, 1996 ರಲ್ಲಿ ಏಷಿಯನ್ ಥ್ರೋಬಾಲ್ ಸಂಸ್ಥೆ ಮತ್ತು 2008 ರಲ್ಲಿ ಅಂತರರಾಷ್ಟ್ರೀಯ ಥ್ರೋಬಾಲ್ ಸಂಸ್ಥೆಯನ್ನು ಸ್ಥಾಪಿಸಿದರು. ಹೀಗಾಗಿ ರಾಮಣ್ಣ ಅವರನ್ನ ಥ್ರೋಬಾಲ್ ಕ್ರೀಡೆಯ ಪಿತಾಮಹ ಎಂದೇ ಪ್ರೀತಿಯಿಂದ ಕರೆಯುತ್ತಾರೆ.

ಕಳೆದ ನಾಲ್ಕು ದಶಕಗಳಿಂದ ಭಾರತದ ಅನೇಕ ಹಳ್ಳಿಗಳಲ್ಲಿ ಇವರು ವೃತ್ತಿಪರ ಥ್ರೋಬಾಲ್ ನಿಯಮಗಳನ್ನು ಅಳವಡಿಸಿ, ಬೆಳೆಸಿ ಪ್ರತೀ ರಾಜ್ಯದ ತಂಡಗಳೂ ಭಾಗವಹಿಸುವಂತೆ 100 ಕ್ಕೂ ಹೆಚ್ಚು ಥ್ರೋಬಾಲ್ ಪಂದ್ಯಾವಳಿಗಳನ್ನು ಆಯೋಜನೆ ಮಾಡಿದ್ದಾರೆ. ಈ ಆಟವನ್ನು ಕೇವಲ ಭಾರತಕ್ಕೆ ಸೀಮಿತಗೊಳಿಸದೇ, ಶ್ರೀಲಂಕಾ, ಬಾಂಗ್ಲಾದೇಶಗಳಲ್ಲಿ ಥ್ರೋಬಾಲ್ ತರಬೇತಿ ಕೊಟ್ಟು ಅಲ್ಲಿಯೂ ಈ ಕ್ರೀಡೆ ಜನಜನಿತವಾಗುವಂತೆ ಮಾಡಿದರು. ಹಾಗೆಯೇ, ಮಲೇಶಿಯ, ಥೈಲ್ಯಾಂಡ್, ಸಿಂಗಾಪುರ, ದುಬೈ, ಜಪಾನ್, ದಕ್ಷಿಣ ಕೋರಿಯಾ, ಕೊಲ್ಲಿ ರಾಷ್ಟ್ರಗಳು ಇತ್ಯಾದಿ ದೇಶಗಳಿಗೆ ಸಂಚರಿಸಿ, ಥ್ರೋಬಾಲ್ ತರಬೇತಿ ನೀಡಿ ಅಲ್ಲಿಯೂ ಅಂತರರಾಷ್ಟ್ರೀಯ ಪಂದ್ಯಾವಳಿಗಳನ್ನು ಆಯೋಜಿಸಿದರು.

ಒಲಂಪಿಕ್ಸ್‌ಗೆ ಪ್ರಯತ್ನ

ಈಗ ಅಂತರರಾಷ್ಟ್ರೀಯ ಥ್ರೋಬಾಲ್ ಸಂಸ್ಥೆಯಲ್ಲಿ ಏಷಿಯಾ, ಯುರೋಪ್, ಉತ್ತರ ಅಮೇರಿಕ, ದಕ್ಷಿಣ ಅಮೇರಿಕಾ, ಆಸ್ಟ್ರೇಲಿಯ, ಆಫ್ರಿಕಾ ಸೇರಿದಂತೆ ಹಲವು ಖಂಡಗಳಿಗೂ ವಿಸ್ತರಿಸಿ 55 ದೇಶಗಳ ಸದಸ್ಯತ್ವವನ್ನು ಗಳಿಸುವಂತೆ ಮಾಡಿದ್ದಾರೆ. ಈ ಕ್ರೀಡೆಯನ್ನು ಒಲಂಪಿಕ್ಸ್ ಗೆ ತೆಗೆದುಕೊಂಡು ಹೋಗುವ ಉದ್ದೇಶದಿಂದ , ಅಂತರರಾಷ್ಟ್ರೀಯ ಒಲಂಪಿಕ್ಸ್ ಸಂಸ್ಥೆಯ ಅಂಗಸಂಸ್ಥೆ ಆಯೋಜಿಸಿದ ಸ್ಪೋರ್ಟ್ ಅಕಾರ್ಡ್, ಯು.ಕೆ.ಯಲ್ಲಿ ಭಾಗವಹಿಸಿ ಒಂಲಪಿಕ್ಸ್ ಸೇರ್ಪಡೆಗೆ ಮಾತುಕತೆ ಆಡಿದ್ದಾರೆ.

ಥ್ರೋಬಾಲ್ ಗಾಯಮಾಡಿಕೊಳ್ಳದೇ ಆಡಬಹುದಾದ ಹೊರಾಂಗಣ ಆಟ. ಈ ನಿಟ್ಟಿನಲ್ಲಿ 'ಪ್ರತಿಯೊಬ್ಬರಿಗೂ ಥ್ರೋಬಾಲ್, ಆರೋಗ್ಯಕ್ಕಾಗಿ ಥ್ರೋಬಾಲ್' ಎಂಬ ವಿಭಿನ್ನ ಕಾರ್ಯಕ್ರಮಗಳನ್ನು ಚಾಲನೆಗೊಳಿಸಿ ಹಲವಾರು ಸಂಶೋಧನೆಗಳನ್ನು ಈ ಸಂಸ್ಥೆಯ ಮೂಲಕ ಮಾಡಿಸಿದರು ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು.

ಥ್ರೋಬಾಲ್ ಒಂದು ವೈಜ್ಞಾನಿಕ ಆಟ

ಮೊದಲನೆಯದಾಗಿ, ಆಟದ ಮೈದಾನವೇ ವಿಜ್ಞಾನ ಮತ್ತು ಗಣಿತದ ನಿಜವಾದ ಪ್ರಯೋಗಾಲಯಗಳು. ಥ್ರೋಬಾಲ್ ಚೆಂಡಿನ ರಚನೆ ಮತ್ತು ಆಟದ ನಿಯಮಗಳು ಆಟಗಾರರಿಗೆ ಅಸಾಮಾನ್ಯ ಸಾಮರ್ಥ್ಯ ಕೊಡುತ್ತವೆ.ಥ್ರೋಬಾಲ್‌ನ ನಿಯಮದಂತೆ, ಚೆಂಡನ್ನು ದೇಹದ ಬಲಭಾಗದಲ್ಲಿ ಹಿಡಿದರೆ, ಬಲಗೈಯಿಂದ ಮಾತ್ರ ಮೂರು ಸೆಕೆಂಡಿನೊಳಗೆ ಎಸೆದು ನೆಟ್ ದಾಟಿಸಬೇಕು. ಚೆಂಡನ್ನು ದೇಹದ ಎಡಭಾಗದಲ್ಲಿ ಹಿಡಿದರೆ, ಎಡಗೈಯಿಂದ ಮಾತ್ರ ಮೂರು ಸೆಕೆಂಡಿನೊಳಗೆ ಎಸೆದು ನೆಟ್ ದಾಟಿಸಬೇಕು. 90% ಜನರಿಗೆ ತಕ್ಷಣ ಎಸೆಯಲು ಬರುವುದಿಲ್ಲ. ಚೆಂಡನ್ನು ಎಡದಿಂದ ಬಲಕ್ಕಾಗಲೀ ಬಲದಿಂದ ಎಡಕ್ಕಾಗಲೀ ಬದಲಾಯಿಸಿ ಎಸೆದರೆ ಪಾಯಿಂಟ್ ಕಳೆದುಕೊಳ್ಳುತ್ತಾರೆ.

ಪ್ರಶಸ್ತಿ ಪ್ರದಾನ

ರಷ್ಯಾದಲ್ಲಿ ವಿಶ್ವವಾಣಿ ಆಶ್ರಯದಲ್ಲಿ ನಡೆದ ಗ್ಲೋಬಲ್ ಅಚೀವರ್ಸ್ ಸಮ್ಮೇಳನದಲ್ಲಿ ಡಾ. ರಾಮಣ್ಣ ಅವರ ಕ್ರೀಡಾ ಸೇವೆಯನ್ನು ಗೌರವಿಸಿ ಅವರಿಗೆ 'ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಭಾರತ ಮತ್ತು ರಷ್ಯಾ ದೇಶಗಳ ಸಚಿವರು, ರಾಜತಾಂತ್ರಿಕರು ಮತ್ತು ಗಣ್ಯ ಮಾನ್ಯರು ಭಾಗವಹಿಸಿದ್ದ ಈ ಪ್ರತಿಷ್ಠಿತ ಸಮಾರಂಭದಲ್ಲಿ ರಾಮಣ್ಣನವರ ಕ್ರೀಡಾ ಸಾಧನೆಯ ಕುರಿತು ಕಿರು ಚಿತ್ರ ಪ್ರದರ್ಶಿಸಿ, ಪ್ರಶಂಸಿಸಲಾಯಿತು.

ವೈಜ್ಞಾನಿಕವಾಗಿ ನೋಡಿದಾಗ, ಬಲಗೈಯನ್ನು ನಿಯಂತ್ರಿಸುವುದು ಎಡಮೆದುಳು. ಎಡಗೈಯನ್ನು ನಿಯಂತ್ರಿಸುವುದು ಬಲಮೆದುಳು. ಹೆಚ್ಚಿನ ಜನ ತಮ್ಮ ಬಲ ಜಾಸ್ತಿ ಇರುವ ಕೈ ಬಳಸುವುದರಿಂದ ಒಂದು ಭಾಗದ ಮೆದಳು ಹೆಚ್ಚು ಚುರುಕಾಗಿರುತ್ತದೆ. ಇನ್ನೊಂದು ಸ್ವಲ್ಪ ಕಡಿಮೆ.

ಇಷ್ಟಕ್ಕೂ ಯಾಕೆ ನಾವು ಇನ್ನೊಂದು ಭಾಗದ ಮೆದುಳನ್ನು ಚುರುಕುಗೊಳಿಸಬೇಕು? ಯಾಕೆಂದರೆ, ಎರಡೂ ಭಾಗದ ಕಾರ್ಯ ವೈಖರಿ ಬೇರೆ ಬೇರೆ. ಎಡಮೆದುಳು ನಮಗೆ ವಿಜ್ಞಾನ, ಗಣಿತ, ಭಾಷೆಗಳನ್ನು, ನಿಯಮಿತ ಕಾರ್ಯಗಳನ್ನು ಕಲಿಯಲು ಸಹಾಯ ಮಾಡಿದರೆ, ಬಲಮೆದುಳು ಕ್ಲಿಷ್ಟಕರ ಸಮಸ್ಯೆಗಳನ್ನು ಬಗೆಹರಿಸಲು, ವಿವಿಧ ಆಯಾಮಗಳ ಮೂಲಕ ವಿಚಾರ ಮಾಡುವುದನ್ನು, ಹೊಸ ಮಾರ್ಗಗಳನ್ನು, ಸಂಶೋಧನಾ ದೃಷ್ಟಿಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಬಲಗೊಂಡ ಎಡ, ಬಲ ಮೆದುಳುಗಳು ನಮ್ಮ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸಿ, ನಿಜ ಅರ್ಥದಲ್ಲಿ ನಮ್ಮ ಬೆಳವಣಿಗೆಗೆ ಸಹಕರಿಸುತ್ತವೆ.

ತರಬೇತಿ ಶಿಬಿರ

ಈ ಕುರಿತು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಸಿದ್ಧಿವಿನಾಯಕ ಪ್ರೌಢಶಾಲೆ ಮತ್ತು ಯಲ್ಲಾಪುರದ ವಿಶ್ವದರ್ಶನ ಶಾಲೆಗಳಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸಂಶೋಧನಾ ಕಾರ್ಯಾಗಾರ ನಡೆಸಿ, ಥ್ರೋಬಾಲ್ ತರಬೇತಿ ನೀಡಿದರು. 2023 ಜನವರಿಯಲ್ಲಿ ಆರಂಭಿಸಿದ ಥ್ರೋಬಾಲ್ ತರಬೇತಿ 4-6 ವಾರಗಳ ಕಾಲ ಅಂತರರಾಷ್ಟ್ರೀಯ ಥ್ರೋಬಾಲ್ ಸಂಸ್ಥೆಯ ನೇತೃತ್ವದಲ್ಲಿ, ದೈಹಿಕ ಶಿಕ್ಷಕರ ಸಹಕಾರದೊಂದಿಗೆ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ನಡೆಯಿತು.

ಆಟಕ್ಕಿಂತ ಮೊದಲು ಮತ್ತು ನಂತರದ ಮಕ್ಕಳ ದೈಹಿಕ ದ್ರವ್ಯರಾಶಿ, ಮಾಂಸಖಂಡ, ಕೊಬ್ಬು, ಎಲುಬಿನ ಪ್ರಮಾಣಗಳನ್ನು ವಿದ್ಯುನ್ಮಾನ ತೂಕದ ಯಂತ್ರದ ಸಹಾಯದಿಂದ ದಾಖಲಿಸಲಾಯಿತು. ಹಾಗೆಯೇ, ಮಕ್ಕಳ ತರಬೇತಿಗಿಂತ ಮೊದಲ ಮತ್ತು ನಂತರದ ಪರೀಕ್ಷೆಯ ಅಂಕಗಳನ್ನೂ ನಮೂದಿಸಲಾಯಿತು. ಪರಿಣಾಮವನ್ನು ವಿಶ್ಲೇಷಣೆ ಮಾಡಿದಾಗ ತಿಳಿದ ಅಂಶ ಅದ್ಭುತ! ಥ್ರೋಬಾಲ್ ಆಡಿದ 86% ವಿದ್ಯಾರ್ಥಿಗಳು ಹಿಂದಿನ ಪರೀಕ್ಷೆಗಿಂತ ಹೆಚ್ಚು ಅಂಕಗಳಿಸಿದರು. ಥ್ರೋಬಾಲ್ ಆಡದ ಮಕ್ಕಳು 66% ವಿದ್ಯಾರ್ಥಿಗಳು ಹಿಂದಿನ ಪರೀಕ್ಷೆಗಿಂತ ಹೆಚ್ಚು ಅಂಕಗಳಿಸಿದರು. ಈ ಕಾರ್ಯಾಗಾರ ನಂತರ ಅನುತ್ತೀರ್ಣಗೊಳ್ಳಬಹುದಾಗಿದ್ದ ಹಲವಾರು ಮಕ್ಕಳೂ ಸಹ ಉತ್ತೀರ್ಣರಾಗಿದ್ದು ಥ್ರೋಬಾಲ್ ಕ್ರೀಡೆಯ ಸಾಮರ್ಥ್ಯವನ್ನು ಮನದಟ್ಟು ಮಾಡಿಕೊಡುತ್ತದೆ.

ಕಳೆದ ಮೂರು ದಶಕಗಳಿಂದಲೂ ಥ್ರೋಬಾಲ್ ಕಲಿತ ಮಕ್ಕಳು ಓದುವುದರಲ್ಲೂ ಮುಂಚೂಣಿಯಲ್ಲಿದ್ದಾರೆ. ಪದಕ ಗಳಿಸಿದ ಆಟಗಾರರೂ ಸಹ, ಸ್ಪರ್ಧಾತ್ಮಕ ಪರೀಕ್ಷೆಗಳನ್ನೆದುರಿಸಿ ಈಗ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ಥ್ರೋಬಾಲ್ ಆಟ, ಜೀವನದ ನಿಜವಾದ ಪರೀಕ್ಷೆಗಳನ್ನೂ ಗೆದ್ದು ಯಶಸ್ವಿಯಾಗಲು ನಮ್ಮನ್ನು ತಯಾರು ಮಾಡುತ್ತದೆ.

ಸುರಕ್ಷಿತ ಆಟ

ಈ ಆಟ ಆಡುವಾಗ ಗಾಯಗಳಾಗುವ ಸಾಧ್ಯತೆ ತುಂಬಾ ಕಡಿಮೆ. ಆದ ಕಾರಣ, ಬಹಳ ಜನ ಆಟ ಆಡಿ ಆರೋಗ್ಯವಂತರೂ ಆಗಿದ್ದಾರೆ. ಈ ಕಾರಣದಿಂದ ಬುದ್ಧಿಮಾಂದ್ಯ ಮಕ್ಕಳಿಗೆ ದೈಹಿಕ ಮತ್ತು ಮಾನಸಿಕ ಬೆಳವಣಿಗಾಗಿ ಈ ಆಟ ಸಹಕಾರಿ. ಕುಡಿತದ ಚಟಕ್ಕೊಳಗಾದವರು ಥ್ರೋಬಾಲ್ ಆಡಿ ಆರೋಗ್ಯವಾಗಿ ಸಮಾಜಮುಖಿಗಳಾಗಿ ಬಂದ ಸಂಶೋಧನಾ ಪ್ರಬಂಧಗಳು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಯು.ಕೆ. ಯಲ್ಲಿ, ಆಸ್ಟ್ರೇಲಿಯದ ಸೈನ್ಸ್ ನೆಟ್ ಸಮ್ಮೇಳನದಲ್ಲಿ ಮಂಡಿಸಲ್ಪಟ್ಟಿವೆ.

ಹಾಗೆಯೇ, ರೋಗಿಗಳಿಗೆ, ವಯಸ್ಸಾದವರಿಗೆ, ತೃತೀಯ ಲಿಂಗಿಗಳಿಗೆ, ದಿವ್ಯಾಂಗರಿಗೆ ಥ್ರೋಬಾಲ್ ಆಡಿಸಿ ಅವರ ಆರೋಗ್ಯ

ಮತ್ತು ಸಂತೋಷಕ್ಕೆ ಮುನ್ನುಡಿಯಾಗಿದ್ದಾರೆ. ಇಳಿ ವಯಸ್ಸಿನ ಜನ ಥ್ರೋಬಾಲ್ ಆಡಿ ರಕ್ತದೊತ್ತಡ, ಮಧುಮೇಹ, ನರದೌರ್ಬಲ್ಯ, ಗಂಟುನೋವು, ಬೆನ್ನು, ಸೊಂಟ ನೋವುಗಳನ್ನು ನಿವಾರಣೆ ಮಾಡಿಕೊಳ್ಳುವುದರೊಂದಿಗೆ, ಚರ್ಮದ ಸುಕ್ಕಿನ ನಿವಾರಣೆಯೂ ಆಗಿದೆ.

ರಾಮಣ್ಣ ಅವರು ತಮ್ಮೊಂದಿಗೆ ಪ್ರಪಂಚದಾದ್ಯಂತ ಹಲವಾರು ಜನರಿಗೆ ಮಾರ್ಗದರ್ಶನ ನೀಡಿದ್ದಾರೆ. ಡಾ. ಮಣಿ ಎಸ್, ಏಷ್ಯನ್ ಥ್ರೋಬಾಲ್ ಸಂಸ್ಥೆ, ಡಾ. ರಾಮು ಪಿ., ಡಾ. ಟಿ. ಎಸ್. ಪ್ರಭು ಕುಮಾರ್, ಡಾ. ದಯಾನಂದ ಅಗ್ಸರ್, ಸುಬ್ರಹ್ಮಣ್ಯ ನಂಜನಗೂಡು, ಗೋವಿಂದರಾಜ, ಶ್ರೀಕಾಂತ, ಸತ್ಯನಾರಾಯಣ, ಸಂತೋಷ, ಸಂಪೂರ್ಣ ಹೆಗಡೆ, ನೇತ್ರಾ ಭಾರತೀಯರಾದರೆ, ಯಶಾ ರಾಮಚಂದ್ರ (ಶ್ರೀಲಂಕಾ), ಶಮೀಮ್ ಮಾಮುನ್ (ಬಾಂಗ್ಲಾದೇಶ), ಲೀ ಜಾಂಗ್ ಯಂಗ್ (ದಕ್ಷಿಣ ಕೋರಿಯಾ), ಡಾ. ಇಗರ್ ಲ್ಯಾಂಘ್ರೋನಿ(ಇಟಲಿ), ಅಬ್ದುಲ್ ಹಲೀಂ(ಸಿಂಗಾಪುರ), ಡಾ. ಚಲರ್ಮ್ (ಥೈಲ್ಯಾಂಡ್), ಹಿಲೇರಿಯೋ(ಬ್ರೆಝಿಲ್), ಒಸೈನೋ (ಸೆನೆಗಲ್) , ಅಲಿಮಾಮಿ (ಕೆನಡ), ಕೆನ್(ಸಿಯೆರಾ ಲಿಯೋನ್) ಮುಂತಾದವರು ಇತರ ದೇಶದ ರೂವಾರಿಗಳು.

ಡಾ. ರಾಮಣ್ಣ ಅವರ ಈ ಎಲ್ಲ ಸಾಧನೆಗಳೂ ಯಾವುದೇ ವಿಶೇಷ ಅನುದಾನ ಪಡೆಯದೇ ಕೇವಲ ಥ್ರೋಬಾಲ್ ಆಟಗಾರರು ಮತ್ತು ತರಬೇತಿದಾರರನ್ನು ಹುರಿದುಂಬಿಸಿ ಮುನ್ನಡೆಸಿದ್ದಾರೆ. ಈ ಕಾರ್ಯಕ್ಕೆ ಅನುದಾನದ ಕೊರತೆಯಿದ್ದು ಎಲ್ಲರೂ ಸಹಕರಿಸಿದರೆ, ಇನ್ನೂ ಹೆಚ್ಚಿನ ಯಶಸ್ಸನ್ನು ಪ್ರಪಂಚದ ಒಳಿತಿಗಾಗಿ ಮಾಡಲು ಸಾಧ್ಯ ಎಂಬುದು ಅವರ ನಂಬಿಕೆ.

ಮೋಹ, ಮಮತೆ ಎಂಬ ಬಂಧಗಳು

ಕ್ಷಣವೊಂದರೊಳೆ ಪೂರ್ತಿ ಕೊಲ್ಲುವುದು ಯಮಶೂಲ
ಕ್ಷಣವನುಕ್ಷಣ ಕೊಲ್ಲುವುವು ಮೋಹಮಮತೆ
ಕುಣಿಕೆಯನು ನಿನ್ನ ಕೊರಳಿಗೆ ಹೂಡಿ ಚಿರಕಾಲ
ವಣುವಣುವೆ ಬಿಗಿಯುವುವೊ

- ಮಂಕುತಿಮ್ಮ॥

ಕ್ಷಣವೊಂದರಲ್ಲಿ ಯಮನ ಶೂಲವು ನಮ್ಮನ್ನು ಪೂರ್ತಿಇಡಿಯಾಗಿ ಕೊಲ್ಲುತ್ತದೆ. ಆದರೆ ಮನದೊಳಗಿನ ಮೋಹ, ಮಮತೆ, ಸಂಬಂಧಗಳ ನೆಂಟೆಂಬುದು ನಮಗೆ ಅಂಟಿಕೊಂಡು ನಮ್ಮನ್ನು ಕ್ಷಣ ಕ್ಷಣವೂ ಕೊಲ್ಲುತ್ತವೆ. ಸಂಬಂಧಗಳೆಂಬ ಪಾಶವನ್ನು ನಮ್ಮ ಕುತ್ತಿಗೆಗೆ ಸುತ್ತಿ, ಕ್ಷಣ ಕ್ಷಣವೂ ನಮ್ಮ ದೇಹದ ಅಣು ಅಣುವನ್ನೂ ಬಿಗಿಯುತ್ತಾ ನಮ್ಮನ್ನು ಕೊಲ್ಲುತ್ತಿರುತ್ತವೆ. ಈ ಭಾಂಧವ್ಯದ ಕುಣಿಕೆಗಳು ಯಮನ ಪಾಶಕ್ಕಿಂತಲೂ ಅಪಾಯಕಾರಿಯಾಗಿರುತ್ತವೆ.

ಮಾನವನು ಸಂಘ ಜೀವಿ. ಆತನ ಜೀವನದಲ್ಲಿ ಹಲವಾರು ಜನರು ಭಾಂಧವರಾಗಿಯೋ, ಸ್ನೇಹಿತರಾಗಿಯೋ, ನೆಂಟರಿಸ್ಟರಾಗಿಯೋ ಪ್ರವೇಶಿಸುತ್ತಾರೆ. ನಡತೆ ಕಲಿಸುವ ಗುರು, ಸಂಸ್ಕಾರ ಕಲಿಸುವ ಅಪ್ಪ ಅಮ್ಮ, ಅರ್ಥ ಮಾಡಿಕೊಳ್ಳುವ ಸಂಗಾತಿ, ಹೇಳಿದ ಮಾತು ಕೇಳುವ ಪುತ್ರ ಪುತ್ರಿಯರು, ನಿಸ್ವಾರ್ಥದ ಸ್ನೇಹಿತರುಗಳು, ಏಳಿಗೆ ಬಯಸುವ ಬಂಧುವರ್ಗದವರು ನಮಗೆ ಸಿಕ್ಕಿದರೆ ಅದೊಂದು ಸಂತೋಷದ ಸಂಗತಿ. ಅದೊಂದು ಸ್ವರ್ಗ ಸಮಾನವಾದ ಬದುಕು.

ಆದರೆ ಅದಕ್ಕೆ ವ್ಯತಿರಿಕ್ತವಾಗಿ ಸಂಸ್ಕಾರ ಕಲಿಸದ ತಂದೆ ತಾಯಿ, ನಡೆ ತೋರದ ಗುರುವು, ಅರ್ಥ ಮಾಡಿಕೊಳ್ಳದ ಸಂಗಾತಿ, ಮಾತು ಕೇಳದ ಪುತ್ರರು, ಸ್ವಾರ್ಥದ ಸ್ನೇಹಿತರು, ಹಿತದ್ವೇಷಿಗಳಾದ ಬಂಧುಗಳು ಸಿಕ್ಕಿದರೆ ಅಂತಹವನ ಬಾಳು ಒಂದು ರೀತಿಯಲ್ಲಿ ನರಕವೇ ಹೌದು. ಯಮನ ಶೂಲವು ಒಂದು ಬಾರಿ ನಮ್ಮ ಪ್ರಾಣವನ್ನು ತಗೆದರೆ ಇಂಥಹ ಮನಸ್ಥಿತಿಯವರಿಂದ, ಈ ಮೋಹ, ಪ್ರೇಮಗಳ ಬಂಧವು ನಮಗೆ ಕುತ್ತಿಗೆಗೆ ಹಾಕಿಕೊಂಡಂತಹ ನೇಣು. ಆ ನೇಣು ನಮ್ಮನ್ನು ಒಮ್ಮೆ ಮಾತ್ರವೇ ಕೊಲ್ಲದೆ, ದಿನ ದಿನವೂ ಸಹ ತನ್ನ ಕುಣಿಕೆಯನ್ನು ಬಿಗಿಗೊಳಿಸುತ್ತಾ ಅನುಕ್ಷಣವೂ ಕೊಲ್ಲುತ್ತವೆ. ನಮ್ಮನ್ನು ಜೀವ ಶವವನ್ನಾಗಿ ಮಾಡಿ ಬಿಡುತ್ತವೆ. ನಮಗೆ ನಮ್ಮ ಸಂಬಂಧಗಳು ಬಿಟ್ಟೆನೆಂದರೂ ಬಿಡದೆ ಅವುಗಳು ಪಾಶವಾಗಿ ನಮ್ಮನ್ನು ಕೊಲ್ಲುತ್ತಲಿರುತ್ತವೆ. ನಮ್ಮ ಈ ಸಂಬಂಧಗಳು ಎಲ್ಲಿಯತನಕ ತಮ್ಮ ಶುದ್ಧತೆಯನ್ನು ಉಳಿಸಿಕೊಳ್ಳುತ್ತವೋ ಅಲ್ಲಿಯ ತನಕ ಅವು ಎಲ್ಲರಿಗೂ ಆನಂದವನ್ನು ನೀಡುತ್ತಿರುತ್ತವೆ. ಎಂದು ಈ ಬಂಧಗಳಿಗೆ, ಸ್ವಾರ್ಥದ, ಮೋಹದ, ಅಹಂಕಾರದ, ದೈನ್ಯತೆಯ ಲೇಪನವಾಗುತ್ತದೋ ಅಂದು ಆಪ್ಯಾಯಮಾನವಾಗಿದ್ದ ಸಂಬಂಧಗಳು ಕಲುಷಿತವಾಗಿ ನಮಗೆ ನೋವಿಗೆ ಕಾರಣವಾಗುತ್ತದೆ. ಸುಲಭದಲ್ಲಿ ಬಿಡಲಾಗದ ಬಂಧಗಳು, ಸಂಬಂಧಗಳಂತೂ ಪ್ರತಿ ನಿತ್ಯ ವೇದನೆಯನ್ನು ಕೊಡುವ ಕುತ್ತಿಗೆಯ ಕುಣಿಕೆಯಂತಾಗುತ್ತದೆ. ನಮ್ಮನ್ನು ಜಗ್ಗೀ ಜಗ್ಗೀ ಹತಾಶರನ್ನಾಗಿಸುತ್ತದೆ. ಇದಕ್ಕೆ ಕಾರಣ ನಾವು ಕಟ್ಟಿ ಕೊಂಡ ಸಂಬಂಧಗಳು. ಹಾಗಾಗಿಯೇ ಇಂಥಹ ಸಂಬಂಧಗಳಿಂದ ಜಾಗೃತನಾಗಿರುವುದು ಉಚಿತ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಶ್ರೀರಂಗನಿಗೆ ನೈವೇದ್ಯವಾದ ಬೆಲ್ಲದ ತುಂಡು

ಶ್ರೀರಂಗನ ದೇವಾಲಯ ಗರ್ಭಗುಡಿ ಯಲ್ಲಿ ಧ್ಯಾನಸ್ತರಾಗಿ ಕುಳಿತಿದ್ದ ರಾಮಾನುಜಾಚಾರ್ಯರಿಗೆ ಯಾರೋ ಕೂಗಿದಂತೆ ಅನುಭವವಾಯಿತು. ದೇವಾಲಯದ ಆಚೆ ದೇಶದ ನಾನಾ ಕಡೆಯಿಂದ ಬಂದಂತಹ ಭಕ್ತಾದಿಗಳು ಅವರನ್ನು ಒಮ್ಮೆಯಾದರೂ ನೋಡುವ ತವಕ ದಿಂದ ನಾನಾ ವಿಧವಾದ ಕಾಣಿಕೆಗಳನ್ನು ತಂದು ಕಾಯುತ್ತಾ ನಿಂತಿದ್ದರು. ಹಾಗೆಯೇ ಶ್ರೀರಂಗನಾಥ ನಿಗೆ ನಾನಾ ವಿಧವಾದ ವಸ್ತ್ರ ಫಲ ಪುಷ್ಪಗಳನ್ನೂ ಅರ್ಪಿಸಲು ತಂದಿದ್ದರು. ಆಚೆ ಬಂದ ರಾಮಾನುಜರು ನೇರ ಒಬ್ಬ ವೃದ್ಧೆಯ ಕಡೆ ನಡೆದರು. (ಅವರು ಧ್ಯಾನದಲ್ಲಿ ಕುಳಿತಾಗ ಧ್ವನಿ ಕೇಳಿದ್ದು ಈ ವೃದ್ಧೆಯದ್ದೆ). ರಾಮಾನುಜರ ಕಂಡು ಆ ವೃದ್ಧೆ ಕಣ್ಣು ತುಂಬಿ ನಿಮ್ಮನ್ನು ಕಾಣಲು ಬಹಳ ದೂರದಿಂದ ಬಂದಿದ್ದೇನೆ ಎಂದಳು.

ಆ ವೃದ್ಧೆಯ ಹರಕು ಸೀರೆ, ಕಾಲಿಗೆಲ್ಲ ಚುಚ್ಚಿದ ಮುಳ್ಳುಗಳನ್ನು ಕಂಡು ಏನು ತಾಯಿ ನಿನ್ನ ಸಮಸ್ಯೆ ಎಂದು ರಾಮಾನುಜರು ಕೇಳಿದರು. ಆ ವೃದ್ಧೆ ನನಗ್ಯಾರೂ ದಿಕ್ಕು ದೆಸೆಯಿಲ್ಲ ಇರೋದು ಒಬ್ಬನೇ ಮೊಮ್ಮಗ. ಅವನು ಕೂಡ ಮೂಗ. ಚಿಕ್ಕ ಮಗು ಬೇರೆ. ಅವನಿಗೆ ನಿಮ್ಮ ಅನುಗ್ರಹವಾಗಬೇಕು ಮಾತುಬರಬೇಕು ಎಂದು ಕೇಳಿಕೊಂಡಳು. ಅವರು ಆಗ ಆತ ಪುಟ್ಟ ಬಾಲಕನನ್ನು ನೋಡಿ ತಲೆಯ ಮೇಲೆ ಕೈ ಇಟ್ಟು ಆಯ್ತು. ಅಮ್ಮ ನಿನ್ನ ಮೊಮ್ಮಗನಿಗೆ ಮಾತು ಬರುವಂತೆ ಮಾಡುತ್ತೇನೆ. ಈಗ ಹೇಳು ನಿನ್ನ ಮೊಮ್ಮಗು ಮಾತಾಡಿದರೆ ನನ್ನ ರಂಗನಾಥನಿಗೆ ಏನು ಕೊಡ್ತಿಯಾ? ಎಂದು ಕೇಳಿದರು. ಆ ವೃದ್ಧೆ ನನ್ನ ಬಳಿ ಏನಿದೆ ಸ್ವಾಮಿ! ನಾನೊಬ್ಬ ತಿರುಕಿ ತಿನ್ನಲು ಸಹ ಗತಿ ಇಲ್ಲದವಳು. ನಾನೇನು ಕೊಟ್ಟೇನು ಎಂದಳು. ರಾಮಾನುಜರು ಅದೆಲ್ಲ ಗೊತ್ತಿಲ್ಲ, ನನ್ನ ರಂಗನಾಥ ತುಂಬಾ ಸ್ವಾರ್ಥಿ ನೀನೇನಾದರೂ ಕೊಟ್ಟರೆ ಮಾತ್ರ ಅನುಗ್ರಹಿಸುವ ಎಂದರು. ಆ ವೃದ್ಧೆಗೆ ಏನೂ ತೋಚುವದಿಲ್ಲ. ಮತ್ತೆ ರಾಮಾನುಜರು ಅದೇನದು ನಿನ್ನ ಸೆರಗಿನಲ್ಲಿ ಗಂಟು ಇದೆಯಲ್ಲ, ಅದರಲ್ಲಿ ಏನಿದೆ? ಎಂದರು. ಆಗ ಆ ವೃದ್ಧೆ ಅಳುಕುತ್ತಾ ಇದು ನನ್ನ ಮೊಮ್ಮಗನಿಗೆ ತಂದಿದ್ದ ಬೆಲ್ಲದ ತುಂಡು. ಅರ್ಧ ತಿಂದಿದ್ದಾನೆ ಮಿಕ್ಕಿದ್ದು ಅರ್ಧ ಉಳಿದಿದೆ ಎಂದಳು. ರಾಮಾನುಜರು ಸರಿ ಅದನ್ನೇ ಕೊಡು ನನ್ನ ಸ್ವಾಮಿಗೆ ಅದನ್ನೇ ಕೊಡುವೆಎಂದರು ನಗುತ್ತಾ. ಅಲ್ಲಿದ್ದ ಜನರು ಆಶ್ಚರ್ಯ ಕೋಪದಿಂದ ನಾವು ನಾನಾ ವಿಧ ಫಲ ಪುಷ್ಪ ತಂದರೂ ನೋಡದ ಗುರುಗಳು ನೈವೇದ್ಯಕ್ಕಾಗಿ ಆ ಎಂಜಲು ಬೆಲ್ಲವನ್ನು ಕೇಳಿದ್ದಾರೆ. ಇದು ಯಾಕೋ ಅತಿಯಾಯಿತು ಎಂದು ಆಡಿಕೊಳ್ಳಲು ಪ್ರಾರಂಭಿಸಿದರು.

ವೃದ್ಧೆ ಬೇಡ ಸ್ವಾಮಿ ಇದು ಎಂಜಲು ಈಗಲೇ ನನ್ನ ಪಾಪ ಸಾಕಷ್ಟು ಇದೆ ಈ ಪಾಪವನ್ನೂ ಹೊರಲಾರೆ ಎಂದಳು. ರಾಮಾನುಜರು ಪ್ರಪಂಚದಲ್ಲಿ ಎಲ್ಲವೂ ಎಂಜಲೇ ತಾಯಿ, ಆ ರಂಗನಿಗೆ ಹಾಲಿನ ಅಭಿಷೇಕ ಮಾಡುವ ಹಾಲು ಕರು ಬಿಟ್ಟ ಎಂಜಲು... ಪಂಚಾಮೃತದಲ್ಲಿ ಒಂದಾದ ಜೇನು ತುಪ್ಪ, ಜೇನು ನೊಣದ ಎಂಜಲು, ರಂಗನಿಗೆ ಹೂಮಾಲೆಯಾಗುವ ಹೂವು... ಪಾತರಗಿತ್ತಿಯ ಎಂಜಲು.. ಇನ್ನು ಜಲ ರಂಗನಿಗೆ ಅಭಿಷೇಕ ಮಾಡುವ ಕಾವೇರಿ ನೀರು ಮೀನು ಮೊಸಳೆ ಹಲವು.. ಜಲಚರಗಳ ಎಂಜಲು.

ಇಲ್ಲಿ ಜಾತಿ ಮಡಿ ಮೈಲಿಗೆ ಕನಿಷ್ಠ ದನಿಷ್ಠ ಮುಖ್ಯವಲ್ಲ ಭಗವಂತನಲ್ಲಿ ಭಕ್ತಿ ಮುಖ್ಯ ಎಂದರು. ಅವರ ಮಾತನ್ನು ಕೆಲವರು ಒಪ್ಪುವದಿಲ್ಲ. ಆಗ ರಾಮಾನುಜರು. ಆ ಬೆಲ್ಲದ ತುಂಡನ್ನು ಹಿಡಿದು... ನಾರಾಯಣ ಸ್ವಿಕೃತಮ್ ಎಂದರು. ಬೆಲ್ಲದ ತುಂಡು ಸ್ವೀಕೃತವಾಗಿ ವೃದ್ಧೆಯ ಮೊಮ್ಮಗು ಜೋರಾಗಿ 'ನಮೋ ನಾರಾಯಣಾಯ' ಅಂತ ಕೂಗತ್ತೆ. ಇದನ್ನು ಕಣ್ಣಾರೆ ಕಂಡ ಎಲ್ಲರೂ ಮೂಕವಿಸ್ಮಿತ ರಾಗಿ ರಾಮಾನುಜರ ಪಾದಕ್ಕೆ ಬೀಳುತ್ತಾರೆ. ಭಕ್ತಿ ಇರುವೆಡೆ ಯಾವ ಮೈಲಿಗೆಯೂ ಸೋಕುವುದಿಲ್ಲ. ದೇಹದ ಶುದ್ಧಿಯ ಜೊತೆ ಜೊತೆಗೆ ಮನಸ್ಸಿನ ಶುದ್ದಿಯು ಕೂಡ ಭಗವಂತನಿಗೆ ಸಮರ್ಪಿತವಾಗಬೇಕು. ಆಗ ಮಾತ್ರ ನಮ್ಮ ಭಕ್ತಿ ಅವನಿಗೆ ಸ್ವೀಕೃತವಾಗುವುದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV
Special
ಯೂಟ್ಯೂಬ್
ಚಾನೆಲ್‌ನಲ್ಲಿ

ಭ್ರಮಾತೀತನಾಗುವುದು

ಪ್ರಕೃತಿಯಿಂದ ಹುಟ್ಟಿದ ಮೂರು ಗುಣಗಳ ಬಗ್ಗೆ ಕೃಷ್ಣ ಹೇಳಿದ್ದಾನೆ ಮತ್ತು ನಾವೆಲ್ಲರೂ ಅವುಗಳಿಂದಾಗಿಯೇ ವಿವಿಧ ಕರ್ಮಗಳನ್ನು ವಿವಿಧ ರೀತಿಯಲ್ಲಿ ಮಾಡಬೇಕಾ ಗುತ್ತದೆ.(3.5) ನಿಜವಾಗಿ ಹೇಳುವುದಾದರೆ ಗುಣಗಳೇ ಕರ್ಮವನ್ನು ಮಾಡುತ್ತವೆ. (3.27) ಹಾಗೂ ಈ ಕರ್ಮಗಳು ಗುಣಗಳಲ್ಲಿ ಪರಸ್ಪರ ಪ್ರಕ್ರಿಯೆ ಅಲ್ಲದೆ ಮತ್ತೇನೂ ಅಲ್ಲ. ಸತ್ವಗುಣ ಜ್ಞಾನಕ್ಕೆ ಸಂಬಂಧಿಸಿದ, ರಜೋಗುಣ ಕರ್ಮಕ್ಕೆ ಸಂಬಂಧಿಸಿದ್ದು ಹಾಗೂ ತಮೋಗುಣ ಅಜ್ಞಾನ ಹಾಗೂ ಆಲಸ್ಯಕ್ಕೆ ಸಂಬಂಧಿಸಿದ್ದು. ಇದಕ್ಕೆ ಸಂಬಂಧಪಟ್ಟಂತೆ ಕೃಷ್ಣ ಹೇಳುತ್ತಾನೆ ಸತ್ವ, ತಮ ಹಾಗೂ ರಜೋಗುಣಗಳ ಎಲ್ಲಾ ಅಭಿವ್ಯಕ್ತಿಗಳು ನನ್ನಿಂದಲೇ ಹುಟ್ಟುತ್ತವೆ. ಅವು ನನ್ನಲ್ಲಿ ಇದ್ದರೂ ನಾನು ಅವುಗಳಲ್ಲಿ ಇಲ್ಲ (7.12)

ಈ ವಿರೋಧಾಭಾಸದ ಶ್ಲೋಕವನ್ನು ಮೋಡ ಮತ್ತು ಆಕಾಶದ ಉದಾಹರಣೆಯಿಂದ ನಾವು ತಿಳಿಯಬಹುದು. ಮೋಡಗಳು ಆಕಾಶದಲ್ಲಿ ಇರುತ್ತವೆ ಆದರೆ ಆಕಾಶ ಮೋಡದಲ್ಲಿ ಇರುವುದಿಲ್ಲ ಹಾಗೂ ಆಕಾಶವಿಲ್ಲದೆ ಮೋಡಗಳು ಇರುವುದಿಲ್ಲ. ಇದು ಅಲೆಗಳು ಮಹಾಸಾಗರದಲ್ಲಿದ್ದರೂ ಮಹಾಸಾಗರ ಅಲೆಗಳಲ್ಲಿ ಇರುವುದಿಲ್ಲ ಎಂಬಂತಿದೆ. ಈ ಮೂರು ರೀತಿಯ ಗುಣಗಳಿಂದ ಭ್ರಮಿತ ಗೊಂಡಿರುವ ನಶ್ವರ ಜೀವಿಗಳು ನಾವು ಅಮರ ಮತ್ತು ಗುಣಾತೀತ ಎನ್ನುವುದನ್ನು ತಿಳಿಯಲು ಅಸಮರ್ಥವಾಗಿವೆ (7.13)ಎಂದು ಕೃಷ್ಣ ವಿವರಿಸುತ್ತಾನೆ. ಈ ಮೊದಲು ಕೂಡ ಕೃಷ್ಣ ಹೇಳಿದ್ದೇನೆಂದರೆ ಈ ಗುಣಗಳು ನಮ್ಮನ್ನು ವಶೀಕರಣಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು.(3.29). ಸಾಮಾನ್ಯ ತಿಳುವಳಿಕೆ ಎಂದರೆ ರಜೋ ಹಾಗೂ ತಮೋ ಗುಣಗಳನ್ನು ಬಿಟ್ಟು ಬಿಡುವುದರಿಂದ ಸತ್ವ ಗುಣವನ್ನು ಪಡೆಯಬಹುದು ಎಂಬುದು. ಆದರೆ ಪ್ರತಿ ಗುಣಕ್ಕೂ ಹಿಡಿತವಿರುತ್ತದೆ ಎಂಬುದನ್ನು ನಾವು ಗಮನಿಸಬೇಕು. ಹಾಗಾಗಿ ಶಾಶ್ವತ ಪದವಿಯನ್ನು ಪಡೆಯಲು ನಾವು ಈ ಎಲ್ಲ ಗುಣಗಳಿಗೆ ಅತೀವವಾಗಿ ಇರಬೇಕೆಂಬುದರ ಬಗ್ಗೆ ಎಚ್ಚರವಿರಬೇಕು

ಕೃಷ್ಣ ಹೇಳುತ್ತಾನೆ ಈ ಗುಣಗಳಿಂದ ಉಂಟಾದ ನನ್ನ ದೈವೀ ಮಾಯೆಯನ್ನು ಗೆಲ್ಲುವುದು ಕಷ್ಟ. ಆದರೆ ಯಾರು ನನಗೆ ಶರಣಾಗುತ್ತಾರೋ ಅವರು ಈ ಮಾಯೆಗೆ ಹೊರತಾಗಿರುತ್ತಾರೆ (7.14). ಮುಖ್ಯವಾಗಿ ಮಾಯೆಯನ್ನು ಗೆದ್ದು ಆನಂದಮಯ ಜೀವನವನ್ನು ಪರಮಾತ್ಮನಿಗೆ ಶರಣಾಗುವುದ ರಿಂದ ನಾವು ಆಯ್ಕೆ ಮಾಡಿಕೊಳ್ಳಬಹುದು ಅಥವಾ ಅದರ ಪ್ರಭಾವದಿಂದಾಗಿ ದುಃಖಕ್ಕೆ ಕಾರಣವಾದ ಮಾಯೆ ಎಂಬ ಮರೀಚಿಕೆಯನ್ನು ಬೆನ್ನತ್ತಿ ಸಂಘರ್ಷದ ಜೀವನವನ್ನು ಆಯ್ಕೆ ಮಾಡಿಕೊಳ್ಳಬಹುದು.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ನಿರ್ದಿಷ್ಟವಾದ ಸಮಯ ಅಥವಾ ಗಡುವು (3)
4. ಇದೊಂದು ಹಂತ (3)
6. ಬಾಣದೊಂದಿಗೆ ಬಂದಿರುವ ಸಮುದ್ರ (3)
8. ವಿನುತಾದೇವಿಯ ಮಗನೀತ (4)
9. ಮೋಸದ ಬಲೆಯಿದು (4)
10. ಚಿನ್ನದ ಮತ್ತೊಂದು ಹೆಸರು (3)
12. ಪ್ರತಿಯಾಗಿ ದೊರೆತ ವಿಗ್ರಹ (3)
16. ಅಡ್ಡಿ, ಆಕ್ಷೇಪಣೆ (4)
17. ಇವನು ಕನಿಕರವುಳ್ಳವನು (4)
19. ವೇಗವಾಗಿ, ಶೀಘ್ರವಾಗಿ (3)
21. ಮತ್ತೊಬ್ಬ ಮಿತ್ರನಿವನು (3)
22. ಜನರ ಮಧ್ಯೆ ಜೋಪಾನ (3)

ಮೇಲಿಂದ ಕೆಳಕ್ಕೆ

2. ಮಾತನಾಡುವುದು ಅಥವಾ ಶಿವಶರಣರ ನುಡಿ (3)
3. ಹರಿತಗೊಳಿಸುವ ಸಾಧನ (2)
5. ಮಂದಿಯನ್ನು ಎಚ್ಚರಗೊಳಿಸುವಿಕೆ (5)
6. ನಿದ್ರೆ ಮಾಡುವಿಕೆ (3)
7. ಇದೆಂತಹ ಸೊಕ್ಕು (3)
8. ವಿದೇಹ ರಾಜನ ಮಗಳು (3)
11. ಯುದ್ಧದ ಆರಂಭವನ್ನು ಸೂಚಿಸುವ ವಾದ್ಯ (5)
13. ತಲೆಯೊಳಗಿನ ಬಹುಮುಖ್ಯ ಅಂಗ (3)
14. ಹಿರಿತನ ಅಥವಾ ಘನತೆ (3)
15. ತಲೆಕೆಳಗಾಗಿರುವ ನೂಲನ್ನು ತೆಗೆಯುವ ಯಂತ್ರ (3)
18. ಅಡಿಮೇಲಾದ ಯುವಕ ಕೊನೆಗೆ ದೀರ್ಘವಾಗಿದ್ದಾನೆ (3)
20. ಪುರದಲ್ಲಿ ದೊರೆತ ಶತ್ರು (2)

ಸರಿಯುತ್ತರಗಳು

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	11	08	03	16
ಪಂಜಾಬ್	11	07	03	15
ಮುಂಬೈ	11	07	04	14
ಗುಜರಾತ್	10	07	03	14
ಡೆಲ್ಲಿ	10	06	04	12
ಕೋಲ್ಕತ್ತಾ	11	05	05	11
ಲಖನೌ	11	05	06	10
ರಾಜಸ್ಥಾನ್	12	03	09	06
ಹೈದರಾಬಾದ್	10	03	07	06
ಚೆನ್ನೈ	11	02	09	04

ಇಂದಿನ ಪಂದ್ಯ

7.30 PM

ಮುಂಬೈ ಇಂಡಿಯನ್ಸ್ VS ಗುಜರಾತ್ ಟೈಟನ್ಸ್

ವಾಂಖೆಡೆ ಸ್ಟೇಡಿಯಂ, ಮುಂಬೈ

ಪ್ರಭ್‌ಸಿಮ್ರಾನ್ ಜೂನಿಯರ್ ಧೋನಿ..

'ಪ್ರಭ್‌ಸಿಮ್ರಾನ್ ಅವರಲ್ಲಿ ಅದ್ಭುತ ಶಕ್ತಿ ಇದೆ, 2010ರಲ್ಲಿ ಎಂಎಸ್ ಧೋನಿ ಹೇಗಿದ್ದರೋ ಈಗ ಪ್ರಭ್‌ಸಿಮ್ರಾನ್ ಹಾಗೆಯೇ ಇದ್ದಾರೆ, ಹಾಗಾಗಿ ಅವರನ್ನು ಜೂನಿಯರ್ ಧೋನಿ ಎಂದು ಕರೆಯಲೂ ನನಗೆ ನಿಜಕ್ಕೂ ಹೆಮ್ಮೆಯಾಗುತ್ತಿದೆ. ಕೊನೆಯ ಓವರ್‌ನಲ್ಲಿ ಚೆಂಡನ್ನು ಎಲ್ಲಾ ಕಡೆಗೂ ಹೊಡೆಯುವ ಸಾಮರ್ಥ್ಯವನ್ನು ಪ್ರಭ್‌ಸಿಮ್ರನ್ ಹೊಂದಿದ್ದು, ಅವರ ಬ್ಯಾಟ್‌ನ ವೇಗ ಅದ್ಭುತವಾಗಿದೆ. ಪ್ರಭ್‌ಸಿಮ್ರಾನ್ ಜಾಸ್ತಿ ಎತ್ತರ ಇಲ್ಲವಾದರೂ ಗ್ಯಾಪ್‌ಗಳನ್ನು ನೋಡಿ ಚೆಂಡನ್ನು ಭಯಮುಕ್ತವಾಗಿ ಹೊಡೆಯುತ್ತಾರೆ. ಲಖನೌ ಸೂಪರ್ ಜಯಂಟ್ಸ್ ತಂಡದಲ್ಲಿ ಅವರಿಂದ ಮೂಡಿಬಂದ ಇನಿಂಗ್ಸ್ ಆಟದಲ್ಲಿ ಅವರು ಸಂಪೂರ್ಣವಾಗಿ ನಿಯಂತ್ರಣ ಸಾಧಿಸಿದ್ದರು ಎಂಬುದನ್ನು ತೋರಿಸಿಕೊಡುತ್ತದೆ..'

ಮ್ಯಾಥ್ಯೂ ಹೇಡನ್, ಮಾಜಿ ಕ್ರಿಕೆಟಿಗ

ಆರ್‌ಸಿಬಿ ಅರ್ಜಿ ವಜಾ

ದೆಹಲಿ: ಈ ಬಾರಿಯ ಐಪಿಎಲ್‌ನಲ್ಲಿ ಕ್ರೀಡಾಂಗಣದಲ್ಲಿ ಗೆಲುವಿನ ನಗೆ ಬೀರುತ್ತಿರುವ ಆರ್‌ಸಿಬಿ ತಂಡಕ್ಕೆ ದೆಹಲಿ ಹೈಕೋರ್ಟ್‌ನಲ್ಲಿ ಹಿನ್ನಡೆಯಾಗಿದೆ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಸನ್ ರೈಸರ್ಸ್ ಹೈದರಾಬಾದ್(ಎಸ್‌ಆರ್ ಎಚ್) ಪರವಾಗಿ ಆಡುತ್ತಿರುವ ಟ್ರಾವಿಸ್ ಹೆಡ್ ಕಾಣಿಸಿಕೊಂಡಿರುವ ಉಬರ್‌ನ ಹೊಸ ಜಾಹೀರಾತಿನಿಂದ ತನ್ನ ಬ್ರಾಂಡ್‌ಗೆ ದಕ್ಕೆಯಾಗಿದೆ ಎಂದು ಆರೋಪಿಸಿ, ಆರ್‌ಸಿಬಿ ಮಧ್ಯಂತರ ಆದೇಶಕ್ಕಾಗಿ ಕೋರ್ಟ್ ಮೆಟ್ಟಿಲು ಹತ್ತಿತ್ತು. ನ್ಯಾಯಮೂರ್ತಿ ಸೌರಬ್ ಬ್ಯಾನರ್ಜಿ ಅವರು, ಈ ಜಾಹೀರಾತು ಕ್ರಿಕೆಟ್ ಕುರಿತಾಗಿದ್ದು, ಕ್ರೀಡಾಸ್ಫೂರ್ತಿಯಿಂದ ಕೂಡಿದೆ. ಇದರಿಂದ ಇದುವರೆಗೂ ಯಾವುದೇ ತೊಂದರೆಯಾಗಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ ಎನ್ನುವ ಕಾರಣಕೊಟ್ಟು, ಮಧ್ಯಂತರ ಅರ್ಜಿ ವಜಾಗೊಳಿಸಿದ್ದಾರೆ. ಉಬರ್‌ನ 'ಬಡೀಸ್ ಇನ್ ಬೆಂಗಳೂರು ಎಫ್‌ಟಿ. ಟ್ರಾವೀಸ್ ಹೆಡ್' ಎನ್ನುವ ಜಾಹೀರಾತಿನಿಂದ ತನ್ನ ಟ್ರೇಡ್‌ಮಾರ್ಕ್‌ಗೆ ಪೆಟ್ಟುಬಿದ್ದಿದೆ ಎಂದು ಉಬರ್ ಇಂಡಿಯಾ ಪ್ರೈ.ಲಿಮಿಟೆಡ್ ವಿರುದ್ಧ ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಪ್ರೈ ಲಿಮಿಟೆಡ್ ಪ್ರಕರಣ ದಾಖಲಿಸಿತ್ತು.

ಪಂಕಜ್‌ಗೆ ಸತತ ಮೂರನೇ ಸಲ ಪ್ರಶಸ್ತಿ

ಮುಂಬೈ: ನಿಧಾನಗತಿಯ ಆರಂಭದ ನಂತರ ಲಯ ಕಂಡುಕೊಂಡ ಅನುಭವಿ ಪಂಕಜ್ ಅಡ್ವಾಣಿ ಅವರು ಧ್ರುವ್ ಸಿತ್ವಾಲಾ ಅವರನ್ನು 5-2ರಿಂದ ಸೋಲಿಸಿ ಸಿಸಿಐ ಬಿಲಿಯರ್ಡ್ಸ್ ಕ್ಲಾಸಿಕ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಈ ಪ್ರಶಸ್ತಿಯನ್ನು ಅವರು ಸತತ ಮೂರನೇ ಬಾರಿ ಗೆದ್ದುಕೊಂಡಂತೆ ಆಗಿದೆ. ಭಾನುವಾರ ತಡರಾತ್ರಿ ನಡೆದ ಫೈನಲ್‌ನ ಮೊದಲ ಮೂರು ಫ್ರೇಮ್‌ಗಳಲ್ಲಿ ಪಂಕಜ್ ತಮ್ಮ ಎಂದಿನ ರೀತಿಯ ಆಟ ಕಂಡುಕೊಳ್ಳಲು ಪರದಾಡಿದರು, ಆದರೆ ನಂತರ ಹೊಂದಿಕೊಂಡು ಮೇಲುಗೈ ಸಾಧಿಸಿದರು.

ಮೊಹಮ್ಮದ್ ಶಮಿಗೆ ಕೊಲೆ ಬೆದರಿಕೆ

ಲಖನೌ: ಐಪಿಎಲ್‌ನ ಹೈದರಾಬಾದ್ ತಂಡದ ಆಟಗಾರ, ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರಿಗೆ ಜೀವ ಬೆದರಿಕೆ ಕರೆ ಬಂದಿದೆ. ಮೇಲ್ ಮೂಲಕ ಬೆದರಿಕೆ ಸಂದೇಶ ಬಂದಿದ್ದು, ಶಮಿ ಅವರ ಸಹೋದರ ಹಸೀಬ್ ಘಟನೆಯ ಬಗ್ಗೆ ಉತ್ತರ ಪ್ರದೇಶದ ಅಮ್ರೋಹಾ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ಆನಂದ್ ಅವರ ಆದೇಶದ ಮೇರೆಗೆ, ಸೈಬರ್ ಸೆಲ್‌ನಲ್ಲಿ ಎಫ್‌ಐಆರ್ ಕೂಡ ದಾಖಲಿಸಲಾಗಿದೆ

ಅಮ್ರೋಹಾ ಪೊಲೀಸ್ ವರಿಷ್ಠಾಧಿಕಾರಿಯ ಬಳಿ ತೆರಳಿ, ಮೇಲ್‌ನಲ್ಲಿ ಬಂದಿರುವ ಸಂದೇಶದ ಬಗ್ಗೆ ಪೂರ್ಣ ಮಾಹಿತಿ ನೀಡಿರುವ ಶಮಿ ಅವರ ಸಹೋದರ ಹಸೀಬ್, ಭಾನುವಾರ ಮೊಹಮ್ಮದ್ ಶಮಿ ಅವರ ಮೇಲ್‌ಗೆ ರಜಪೂತ್ ಸಿಂಧರ್ ಎಂಬ ಮೇಲ್ ಐಡಿಯಿಂದ ಒಂದು ಮೇಲ್ ಬಂದಿದೆ. ಈ ಮೇಲ್‌ನಲ್ಲಿ ಅವರಿಗೆ ಕೊಲೆ ಬೆದರಿಕೆ ಹಾಕಲಾಗಿದೆ. ನಿನ್ನನ್ನು ಕೊಲ್ಲುತ್ತೇವೆ, ಯಾರಿಗೂ ಏನೂ ಮಾಡಲು ಸಾಧ್ಯವಾಗುವುದಿಲ್ಲ ಎಂದು ಈ ಮೇಲ್‌ನಲ್ಲಿ ಬರೆಯಲಾಗಿದೆ, ಮೇಲ್ ಆಧಾರದ ಮೇಲೆ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ಮೊಹಮ್ಮದ್ ಶಮಿ ಅವರ ಸಹೋದರ ಹಸೀಬ್ ತಿಳಿಸಿದ್ದಾರೆ.

ಮತ್ತೊಂದೆಡೆ, ಪೊಲೀಸ್ ವರಿಷ್ಠಾಧಿಕಾರಿ ಅಮ್ರೋಹಾ ಅಮಿತ್ ಕುಮಾರ್ ಆನಂದ್ ಘಟನೆಯ ಬಗ್ಗೆ ಮಾತನಾಡಿ, ಮೇಲಿನ ಪ್ರಕರಣದಲ್ಲಿ ಶಮಿ ಅವರ ಸಹೋದರ ಹಸೀಬ್ ದೂರು ನೀಡಿದ್ದು, ಆರೋಪಿಗಳು ಮೇಲ್‌ನಲ್ಲಿ 1 ಕೋಟಿ ರು.ಗಳಿಗೆ ಬೇಡಿಕೆ ಇಟ್ಟಿದ್ದಾರೆ. ಒಂದು ವೇಳೆ 1 ಕೋಟಿ ನೀಡದಿದ್ದರೆ ಪರಿಣಾಮಗಳು ಕೆಟ್ಟದಾಗಿರಲಿದ್ದು, ಕೊಲ್ಲುತ್ತೇವೆ ಎಂದು ಬರೆದಿದ್ದಾರೆ. ಇದೀಗ ಶಮಿ ಸಹೋದರ ಹಸೀಬ್ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ ಎಂದಿದ್ದಾರೆ.

ಮೊಹಮ್ಮದ್ ಶಮಿ ಇದುವರೆಗೆ ಭಾರತ ಪರ 64 ಟೆಸ್ಟ್, 108 ಏಕದಿನ ಮತ್ತು 25 ಟಿ20 ಪಂದ್ಯಗಳನ್ನು ಆಡಿದ್ದಾರೆ. ಅವರು ಟೆಸ್ಟ್‌ನಲ್ಲಿ 229 ವಿಕೆಟ್, ಏಕದಿನದಲ್ಲಿ 206 ವಿಕೆಟ್ ಮತ್ತು ಟಿ20ಯಲ್ಲಿ 27 ವಿಕೆಟ್‌ಗಳನ್ನು ಪಡೆದಿದ್ದಾರೆ. ಇತ್ತೀಚೆಗೆ ನಡೆದಿದ್ದ ಚಾಂಪಿಯನ್ಸ್ ಟ್ರೋಫಿಯಲ್ಲಿ ಟೀಂ ಇಂಡಿಯಾ ಗೆಲುವಿನಲ್ಲಿ ಮೊಹಮ್ಮದ್ ಶಮಿ ಪ್ರಮುಖ ಪಾತ್ರ ವಹಿಸಿದ್ದರು.

ಮೇ 25ರಂದು ಇಂಗ್ಲೆಂಡ್‌ಗೆ ಟೀಮ್ ಇಂಡಿಯಾ ಪಯಣ

ದೆಹಲಿ: ಐಪಿಎಲ್ ಫೈನಲ್ ಪಂದ್ಯ ಕೋಲ್ಕತ್ತಾದಲ್ಲಿ ಮೇ 25ರಂದು ನಡೆಉಲಿದ್ದು, ಅದೇ ದಿನ ಭಾರತ-ಎ ತಂಡ ಇಂಗ್ಲೆಂಡ್‌ಗೆ ಹೊರಡಲಿದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಕೂಡ ಇದಕ್ಕಾಗಿ ಸಿದ್ಧತೆಗಳನ್ನು ಪ್ರಾರಂಭಿಸಿದೆ. ತಂಡವನ್ನು ಇನ್ನೂ ಆಯ್ಕೆ ಮಾಡಿಲ್ಲವಾದರೂ ಬಿಸಿಸಿಐ ಅನೇಕ ಆಟಗಾರರನ್ನು ಸಂಪರ್ಕಿಸಿದ್ದು, ಅವರ ಪಾಸ್‌ಪೋರ್ಟ್ ಮತ್ತು ಜೆರ್ಸಿ ಸೈಜ್‌ಗಳನ್ನು ಲಾಜಿಸ್ಟಿಕ್ಸ್ ತಂಡವು ತೆಗೆದುಕೊಂಡಿದೆ ಎಂದು ವರದಿಯಾಗಿದೆ. ಐಪಿಎಲ್ ನಾಕೌಟ್ ಪಂದ್ಯಗಳಲ್ಲಿ ಆಡದ ಆಟಗಾರರು ಮೇ 25ರಂದು ಇಂಗ್ಲೆಂಡ್‌ಗೆ ತೆರಳುತ್ತಾರೆ. ಲೀಗ್ ಮುಗಿದ ನಂತರ ಉಳಿದ ಆಟಗಾರರು ಹೊರಡುತ್ತಾರೆ. ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ಕೂಡ ಶೀಘ್ರದಲ್ಲೇ ತಂಡವನ್ನು ಆಯ್ಕೆ ಮಾಡಲಿದೆ. ಭಾರತ-ಎ ವಿರುದ್ಧ ಇಂಗ್ಲೆಂಡ್ ಲಯನ್ಸ್ ಸರಣಿ ಮೇ 30ರಿಂದ ಆರಂಭವಾಗಲಿದೆ. ಸರಣಿಯ ಮೊದಲ ಪಂದ್ಯ ಕ್ಯಾಂಟರ್ಬರಿಯಲ್ಲಿ ನಡೆಯಲಿದೆ. ಹಿರಿಯರ ತಂಡವು ಜೂನ್ 20ರಿಂದ ಇಂಗ್ಲೆಂಡ್ ವಿರುದ್ಧ 5 ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡಲಿದ್ದು, ಅದು 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಮೊದಲ ಸರಣಿಯೂ ಆಗಿರುತ್ತದೆ.

ಕಮಿನ್ಸ್ ದಾಳಿಗೆ ಡೆಲ್ಲಿ ಧೂಳಿಪಟ | ಸ್ಟಬ್ಸ್, ಆಶುತೋಷ್ ಶರ್ಮಾ ಬ್ಯಾಟಿಂಗ್ ಆಸರೆ

ಹೈದರಾಬಾದ್‌ಗೆ 134 ರನ್‌ಗಳ ಗುರಿ

ಹೈದರಾಬಾದ್: ಸೋಮವಾರ ಇಲ್ಲಿನ ರಾಜೀವ್ ಗಾಂಧಿ ಸ್ಟೇಡಿಯಂನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರ ದಾಳಿ ಎದುರಿಸಲಾಗದೆ ಪರದಾಡಿ, ಅಂತಿಮವಾಗಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರವಾಗಿ ಯಾವುದೇ ಬ್ಯಾಟರ್ ಕೂಡ ಕ್ರೀಸ್‌ನಲ್ಲಿ ಕಚ್ಚಿ ನಿಂತು ಆಡುವಲ್ಲಿ ವಿಫಲರಾದರು. ಕಮಿನ್ಸ್ ಬೌಲಿಂಗ್ ದಾಳಿ ಎದುರಿಸಲಾಗದೆ ಒಬ್ಬರ ಹಿಂದೆ ಒಬ್ಬರಂತೆ ಡೆಲ್ಲಿ ಬ್ಯಾಟಸ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು.

ಡೆಲ್ಲಿ ತಂಡದ ಆರಂಭಿಕ ಆಟಗಾರನಾಗಿ ಕಣಕ್ಕಿಳಿದ ಕರುಣ್ ನಾಯರ್ ಅವರು ಇಶಾನ್ ಕಿಶನ್‌ಗೆ ಕ್ಯಾಚ್ ನೀಡಿ ಯಾವುದೇ ರನ್ ಗಳಿಸದೆ ಕಮಿನ್ಸ್ ಅವರ ಮೊದಲ ಬಾಲ್‌ನಲ್ಲಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಡು ಪ್ಲೆಸಿಸ್ ಹಾಗೂ ಪೋರೆಲ್ ಅವರ ಜತೆಯಾಟವೂ ಹೆಚ್ಚು ಹೊತ್ತು ಸಾಗಲಿಲ್ಲ. 8 ಬಾಲ್‌ಗಳಲ್ಲಿ ಕೇವಲ 3 ರನ್ ಗಳಿಸಿ ಡು ಪ್ಲೆಸಿಸ್ ಕಮಿನ್ಸ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ದಾರಿ ಹಿಡಿದರು. ಕನ್ನಡಿಗ ಕೆಎಲ್ ರಾಹುಲ್ ಕೂಡಾ ಪಂದ್ಯದಲ್ಲಿ ವೈಫಲ್ಯವನ್ನು ಕಂಡರು. 14 ಬಾಲ್ ಎದುರಿಸಿ ಕೇವಲ 10 ರನ್ ಗಳಿಸಿ ಕಮಿನ್ಸ್ ಬೌಲಿಂಗ್‌ನಲ್ಲಿ ಈಶಾನ್ ಕಿಶನ್‌ಗೆ ವಿಕೆಟ್ ಒಪ್ಪಿಸಿದರು.

ಮೊದಲು 7 ಓವರ್‌ಗಳಲ್ಲಿ ಪ್ರಮುಖ 5 ವಿಕೆಟ್ ಕಳೆದುಕೊಂಡು ಒಂದು ಹಂತದಲ್ಲಿ 100 ರನ್ ಗಳಿಸುವುದು ಕಷ್ಟ ಎಂಬ ಸ್ಥಿತಿಗೆ ಡೆಲ್ಲಿ ಕ್ಯಾಪಿಟಲ್ಸ್ ಬಂದು ತಲುಪಿತು.

ಆದರೆ 8ನೇ ವಿಕೆಟ್‌ಗೆ ಜತೆಯಾದ ತ್ರಿಸ್ಟನ್ ಸ್ಟಬ್ಸ್ ಹಾಗೂ ಆಶುತೋಷ್ ಶರ್ಮಾ 66 ರನ್‌ಗಳ ಜತೆಯಾಟ ಆಡುವ ಮೂಲಕ ಡೆಲ್ಲಿಯ ಹಠಾತ್ ಕುಸಿತವನ್ನು ತಡೆದವರು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರವಾಗಿ ಕೊನೆಯಲ್ಲಿ ಅಬ್ಬರಿಸಿದ ತ್ರಿಸ್ಟನ್ ಸ್ಟಬ್ಸ್ ಅಜೇಯ 41 ಹಾಗೂ ಆಶುತೋಷ್ ಶರ್ಮಾ ಸ್ಫೋಟಕ 41 ರನ್ ಸಿಡಿಸುವ ಮೂಲಕ ತಂಡದ ಮೊತ್ತವನ್ನು 130ರ ಗಡಿ ಮುಟ್ಟಿಸಿದರು. ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 133 ರನ್ ಕಲೆ ಹಾಕಿ ಹೈದರಾಬಾದ್ ತಂಡಕ್ಕೆ 134 ರನ್‌ಗಳ ಗುರಿ ನೀಡಿತು.

ಸನ್‌ರೈಸರ್ಸ್ ಹೈದರಾಬಾದ್ ಪರ ಮಿಂಚಿನ ಬೌಲಿಂಗ್ ದಾಳಿ ನಡೆಸಿದ ಪ್ಯಾಟ್ ಕಮಿನ್ಸ್ 3 ವಿಕೆಟ್ ಪಡೆದು ಮಿಂಚಿದರು. ಅವರಿಗೆ ಜತೆಯಾದ ಜಯದೇವ್ ಉನಾದ್ಕತ್, ಹರ್ಷಲ್ ಪಟೇಲ್ ಹಾಗೂ ಮಲಿಂಗಾ ತಲಾ ಒಂದು ವಿಕೆಟ್ ಪಡೆದು ಮಿಂಚಿದರು.

ಕಮಿನ್ಸ್ ದಾಖಲೆ

ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಐಪಿಎಲ್ ಇತಿಹಾಸದಲ್ಲಿ ಸೋಮವಾರ ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಹೊಸ ದಾಖಲೆ ನಿರ್ಮಿಸಿದ್ದಾರೆ. ತಮ್ಮ ಮೊದಲು ಮೂರು ಓವರ್‌ಗಳ ಎಲ್ಲಾ ಮೊದಲ ಎಸೆತಗಳಲ್ಲಿ ವಿಕೆಟ್ ಪಡೆಯುವ ಮೂಲಕ ವಿಶೇಷ ದಾಖಲೆ ಮಾಡಿದ್ದಾರೆ. ಈ ರೀತಿ ಮೂರು ಬೇರೆ ಬೇರೆ ಓವರ್‌ಗಳಲ್ಲಿ ಎಲ್ಲಾ ಮೊದಲ ಎಸೆತದಲ್ಲಿ ವಿಕೆಟ್ ಪಡೆದ ವಿಶ್ವದ ಮೊದಲ ಬೌಲರ್ ಎಂಬ ಖ್ಯಾತಿಗೆ ಅವರು ಭಾಜನರಾದರು. ಐಪಿಎಲ್ ಇತಿಹಾಸದಲ್ಲೇ ಪವರ್‌ಪ್ಲೇಯ ಒಂದು ಇನ್ನಿಂಗ್ಸ್‌ನಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ಖ್ಯಾತಿಗೂ ಅವರು ಪಾತ್ರರಾದರು. ಇದಕ್ಕೂ ಮೊದಲು ಅಕ್ಷರ್ ಪಟೇಲ್ ಅವರು ಮೊದಲ 6 ಓವರ್‌ನಲ್ಲಿ 2 ವಿಕೆಟ್ ಪಡೆದುಕೊಂಡಿದ್ದರು ಹಾಗೂ 2008ರಲ್ಲಿ ಮುಂಬೈ ನಾಯಕರಾಗಿದ್ದ ಶಾನ್ ಪೊಲಾಕ್ 2 ವಿಕೆಟ್ ಪಡೆದು ಮಿಂಚಿದ್ದರು.

ಪಾಂಡ್ಯ ಬಳಗಕ್ಕೆ ಪ್ಲೇ ಆಫ್ ಖಾತರಿಪಡಿಸುವಾಸೆ | ಗಿಲ್ ಪಡೆಯ ಚಿತ್ತ ಮತ್ತೊಂದು ಗೆಲುವಿನತ್ತ

ಇಂದು ಮುಂಬೈಗೆ ಗುಜರಾತ್ ಸವಾಲು

ಗುಜರಾತ್ ತಂಡ

ಶುಭ್‌ಮನ್ ಗಿಲ್ (ನಾಯಕ)
ಸಾಯಿ ಸುದರ್ಶನ್
ಜೋಸ್ ಬಟ್ಲರ್
ಶಾರುಖ್ ಖಾನ್
ರಾಹುಲ್ ತೆವಾಟಿಯಾ
ಅರ್ಷದ್ ಖಾನ್
ರಶೀದ್ ಖಾನ್
ಸಾಯಿ ಕಿಶೋರ್
ಮೊಹಮ್ಮದ್ ಸಿರಾಜ್
ಪ್ರಸಿದ್ಧ್ ಕೃಷ್ಣ
ಇಶಾಂತ್ ಶರ್ಮಾ
ಕುಮಾರ್ ಕುಶಾಗ್ರ
ವಾಷಿಂಗ್ಟನ್ ಸುಂದರ್
ಜಯಂತ್ ಯಾದವ್

ಮುಂಬೈ ತಂಡ

ಹಾರ್ದಿಕ್ ಪಾಂಡ್ಯ (ನಾಯಕ)
ರೋಹಿತ್ ಶರ್ಮಾ
ವಿಲ್ ಜ್ಯಾಕ್ಸ್
ಸೂರ್ಯಕುಮಾರ್ ಯಾದವ್
ತಿಲಕ್ ವರ್ಮಾ
ನಮನ್ ಧಿರ್
ಮಿಚೆಲ್ ಸ್ಯಾಂಟ್ನರ್
ದೀಪಕ್ ಚಹರ್
ಟ್ರೆಂಟ್ ಬೌಲ್ಟ್
ಅಶ್ವಿನ್ ಕುಮಾರ್
ಜಸ್‌ಪ್ರೀತ್ ಬುಮ್ರಾ
ರಿಯಾನ್ ರಿಕೆಲ್ಟನ್
ಸತ್ಯನಾರಾಯಣ ರಾಜು
ಅರ್ಜುನ್ ತೆಂಡೂಲ್ಕರ್

ಮುಂಬೈ: ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ಮಂಗಳವಾರ ನಡೆಯಲಿರುವ ಐಪಿಎಲ್ ಟೂರ್ನಿಯ ಲೀಗ್ ಹಂತದ ಪಂದ್ಯದಲ್ಲಿ ಆತಿಥೇಯ ಮುಂಬೈ ಇಂಡಿಯನ್ಸ್ ತಂಡವು ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ. ಈಗಾಗಲೇ ಮುಂಬೈ ಮತ್ತು ಗುಜರಾತ್ ತಲಾ 14 ಅಂಕಗಳನ್ನು ಗಳಿಸಿದ್ದು, ಎರಡೂ ತಂಡಗಳು ಸಮಬಲದ ಹೋರಾಟ ಪ್ರದರ್ಶಿಸುವ ನಿರೀಕ್ಷೆಯನ್ನು ಹೊಂದಿವೆ.

ಮಾರ್ಚ್-23ರಂದು ನಡೆದಿದ್ದ ಪಂದ್ಯದಲ್ಲಿ ಮುಂಬೈ ತಂಡವನ್ನು ಚೆನ್ನೈ ತಂಡವು 4 ವಿಕೆಟ್‌ಗಳಿಂದ ಸೋಲಿಸಿತ್ತು. ಮಾರ್ಚ್-29ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಮುಂಬೈಯನ್ನು ಗುಜರಾತ್ ತಂಡವು 36 ರನ್‌ಗಳಿಂದ ಪರಾಭವಗೊಳಿಸಿತ್ತು.

ಆದರೆ ಮಾರ್ಚ್-31ರಂದು ಜರುಗಿದ ಪಂದ್ಯದಲ್ಲಿ ಮುಂಬೈ ತಂಡವು ಕೋಲ್ಕತ್ತಾ ವಿರುದ್ಧ 8 ವಿಕೆಟ್‌ಗಳ ಸುಲಭ ಗೆಲುವನ್ನು ಪಡೆದಿತ್ತು. ಏಪ್ರಿಲ್-4ರಂದು ನಡೆದ ಪಂದ್ಯದಲ್ಲಿ ಮುಂಬೈ ತಂಡವು ಲಖನೌ ವಿರುದ್ಧ ಮತ್ತು ಏಪ್ರಿಲ್-7ರಂದು ನಡೆದ ಪಂದ್ಯದಲ್ಲಿ ಮುಂಬೈ ತಂಡವು ಆರ್‌ಸಿಬಿ ವಿರುದ್ಧವೂ ಪರಾಭವಗೊಂಡಿತ್ತು.

ಆದರೆ ಆ ಬಳಿಕ ಮುಂಬೈ ತಂಡ ಅದೃಷ್ಟದ ಬಾಗಿಲನ್ನು ತೆರೆದುಕೊಂಡು ಸತತ ಆರು ಪಂದ್ಯಗಳನ್ನು ಗೆದ್ದು ತನ್ನ ಪರಾಕ್ರಮ ಮರೆಯಿತು. ಏಪ್ರಿಲ್-13ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ, ಏಪ್ರಿಲ್-17ರಂದು ಹೈದರಾಬಾದ್ ತಂಡದ ವಿರುದ್ಧ, ಏಪ್ರಿಲ್-20ರಂದು ಚೆನ್ನೈ ತಂಡದ ವಿರುದ್ಧ, ಏಪ್ರಿಲ್-23ರಂದು ಮತ್ತೆ ಹೈದರಾಬಾದ್ ವಿರುದ್ಧ, ಏಪ್ರಿಲ್-27ರಂದು ಲಖನೌ ವಿರುದ್ಧ ಹಾಗೂ ಮೇ-1ರಂದು ರಾಜಸ್ಥಾನ ತಂಡದ ಎದುರು ಜಯ ಗಳಿಸಿ ತನ್ನ ಜೈತ್ರಯಾತ್ರೆಯನ್ನು ಮುಂದುವರಿಸಿತ್ತು. ಆಡಿರುವ ಒಟ್ಟು 11 ಪಂದ್ಯಗಳಲ್ಲಿ 7ರಲ್ಲಿ ಗೆದ್ದಿರುವ ಮುಂಬೈ ತಂಡಕ್ಕೆ ಪ್ಲೇ ಆಫ್ ಸ್ಥಾನ ದೊರೆಯುವುದು ಬಹುತೇಕ ಖಚಿತ.

ಈ ಐಪಿಎಲ್ ಟೂರ್ನಿಯಲ್ಲಿ 10 ಪಂದ್ಯಗಳನ್ನು ಆಡಿರುವ ಗುಜರಾತ್, ತನ್ನ ಮೊದಲ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋತಾಗ ಎಲ್ಲರೂ ಅದೊಂದು ದುರ್ಬಲ ತಂಡವೇನೋ ಎಂದೇ ತಿಳಿದುಕೊಂಡಿದ್ದರು, ಆದರೆ ತನ್ನ ಎರಡನೇ ಪಂದ್ಯದಿಂದಾಚೆಗೆ ಸತತ 4 ಪಂದ್ಯಗಳನ್ನು ಗೆದ್ದಿರುವುದು ಅದರ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ.

ಮಾರ್ಚ್-29ರಂದು ಮುಂಬೈ ವಿರುದ್ಧ, ಏಪ್ರಿಲ್-2ರಂದು ಆರ್‌ಸಿಬಿ ವಿರುದ್ಧ, ಏಪ್ರಿಲ್-6ರಂದು ಹೈದರಾಬಾದ್ ವಿರುದ್ಧ ಮತ್ತು ಏಪ್ರಿಲ್-9ರಂದು ರಾಜಸ್ಥಾನ ರಾಯಲ್ ವಿರುದ್ಧ ಗುಜರಾತ್ ಟೈಟನ್ಸ್ ಗೆದ್ದು ತನ್ನ ಪ್ರಾಬಲ್ಯ ಮೆರೆಯಿತು. ಆದರೆ ಏಪ್ರಿಲ್-12ರಂದು ಲಖನೌ ವಿರುದ್ಧ ಗುಜರಾತ್ ಪರಾಭವವನ್ನು ಎದುರಿಸಿತು.

ಏಪ್ರಿಲ್-19ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಗುಜರಾತ್ ತಂಡವು ಡೆಲ್ಲಿ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತ್ತು. ಏಪ್ರಿಲ್-21 ನಡೆದ ಪಂದ್ಯದಲ್ಲೂ ಗುಜರಾತ್ ತಂಡವು ಕೋಲ್ಕತ್ತಾ ವಿರುದ್ಧ ಗೆದ್ದು ಬೀಗಿತು. ಏಪ್ರಿಲ್-28ರಂದು ಜರುಗಿದ ಪಂದ್ಯದಲ್ಲಿ ಗುಜರಾತ್ ತಂಡವನ್ನು ರಾಜಸ್ಥಾನ ತಂಡವು 8 ವಿಕೆಟ್‌ಗಳಿಂದ ಸೋಲಿಸಿತ್ತು, ಆದರೆ ಮೇ-2ರಂದು ನಡೆದ ಪಂದ್ಯದಲ್ಲಿ ಗುಜರಾತ್ ತಂಡವು ಹೈದರಾಬಾದ್ ವಿರುದ್ಧ ಮತ್ತೆ ಗೆದ್ದು ಪಾರಮ್ಯ ಮೆರೆಯಿತು.

ಮಂಗಳವಾರದ ಪಂದ್ಯವು ಮುಂಬೈ ಮತ್ತು ಗುಜರಾತ್ ತಂಡಗಳೆರಡಕ್ಕೂ ಮುಖ್ಯವಾಗಿದೆ. ಮುಂಬೈಗೆ ತವರಿನ ಪ್ರೇಕ್ಷಕರ ಅಪಾರ ಬೆಂಬಲ ಖಚಿತವಾದರೂ, ಗುಜರಾತ್ ಕೂಡಾ ಇದೀಗ ಅಂಕಪಟ್ಟಿಯಲ್ಲಿ ಎತ್ತರಕ್ಕೆ ಮುನ್ನುಗ್ಗಲು ಸಿದ್ದತೆ ಮಾಡಿಕೊಂಡಿರುವ ಕಾರಣ ಪಂದ್ಯವು ರೋಚಕ ಹಣಾಹಣಿಯಿಂದ ಕೂಡಿರುವ ಸಾಧ್ಯತೆಯೇ ಹೆಚ್ಚು.

ಪಿಚ್ ರಿಪೋರ್ಟ್

ಮುಂಬೈ ಇಂಡಿಯನ್ಸ್ ಹಾಗೂ ಗುಜರಾತ್ ಟೈಟನ್ಸ್ ತಂಡಗಳ ನಡುವಣ ಪಂದ್ಯ ನಡೆಯುವ ಮುಂಬೈನ ವಾಂಖೆಡೆ ಕ್ರೀಡಾಂಗಣದ ಪಿಚ್ ಬ್ಯಾಟ್ಸ್‌ಮನ್‌ಗಳ ಸ್ನೇಹಿಯಾಗಿದೆ. ಈ ಹಿನ್ನೆಲೆಯಲ್ಲಿ ಮಂಗಳವಾರದ ಪಂದ್ಯ ಹೈಸ್ಕೋರಿಂಗ್ ಆಗಲಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ತಂಡದ ನಾಯಕ ಚೇಸಿಂಗ್ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಇದೆ, ಏಕೆಂದರೆ ದ್ವಿತೀಯ ಇನಿಂಗ್ಸ್‌ನಲ್ಲಿ ಇಬ್ಬನಿ ಬೀಳುವ ಕಾರಣ ಬೌಲ್ ಮಾಡುವುದು ಕಷ್ಟ.

ಮುಖಾಮುಖಿ ದಾಖಲೆ: ಒಟ್ಟು ಆಡಿರುವ ಪಂದ್ಯಗಳು: 06
ಮುಂಬೈ ಇಂಡಿಯನ್ಸ್ ಗೆಲುವು: 02
ಗುಜರಾತ್ ಟೈಟನ್ಸ್ ಗೆಲುವು: 04

ಏಕದಿನ ಮತ್ತು ಟಿ20 ವಿಶ್ವ ಕ್ರಿಕೆಟ್ ಶ್ರೇಯಾಂಕದಲ್ಲಿ ಭಾರತಕ್ಕೆ ಮೊದಲ ಸ್ಥಾನ

ಟೆಸ್ಟ್ ಶ್ರೇಯಾಂಕ: ಟೀಮ್ ಇಂಡಿಯಾಕ್ಕೆ 4ನೇ ಸ್ಥಾನ

ದೆಹಲಿ: ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸೋಮವಾರದಂದು ಪ್ರಕಟಿಸಿದ ಐಸಿಸಿ ಟೆಸ್ಟ್ ತಂಡಗಳ ಶ್ರೇಯಾಂಕದಲ್ಲಿ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡಕ್ಕೆ ಹಿನ್ನಡೆಯಾಗಿದೆ. ಟೀಮ್ ಇಂಡಿಯಾ 105 ರೇಟಿಂಗ್ ಪಾಯಿಂಟ್ಸ್ ಮೂಲಕ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ನ್ಯೂಜಿಲೆಂಡ್ ಹಾಗೂ ಆಸ್ಟ್ರೇಲಿಯಾ ತಂಡಗಳ ವಿರುದ್ಧ ಕಳೆದ ಎರಡು ಟೆಸ್ಟ್ ಸರಣಿಗಳಲ್ಲಿನ ಹೀನಾಯ ಸೋಲಿನ ಕಾರಣ ಟೀಮ್ ಇಂಡಿಯಾ ಟೆಸ್ಟ್ ಶ್ರೇಯಾಂಕದಲ್ಲಿ ಕುಸಿದಿದೆ.

ಕಳೆದ ವರ್ಷದ ಅಂತ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ಭಾರತ ತಂಡ 0-3 ಅಂತರದಲ್ಲಿ ಸರಣಿ ಸೋಲು ಅನುಭವಿಸಿತ್ತು, ಆ ಮೂಲಕ ತವರು ಅಂಗಣದಲ್ಲಿ ಮೊದಲ ಬಾರಿ ಭಾರತ ತಂಡ ಸೋಲು ಅನುಭವಿಸಿದಂತಾಗಿತ್ತು. ಅದಾದ ಬಳಿಕ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದ ಟೀಮ್ ಇಂಡಿಯಾ, 5 ಪಂದ್ಯಗಳ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯನ್ನು 1-3 ಅಂತರದಲ್ಲಿ ಸೋತಿತ್ತು. 2017ರ ಬಳಿಕ ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿನ ಮೊದಲ ಸೋಲು ಅದಾಗಿತ್ತು. ಈ ಎರಡೂ ಟೆಸ್ಟ್ ಸರಣಿಯಲ್ಲಿನ ಸೋಲಿನ ಕಾರಣ ಭಾರತ ತಂಡ ಮೂರವ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಸತತ ಮೂರನೇ ಬಾರಿ ಅರ್ಹತೆ ಪಡೆಯಲು ವಿಫಲವಾಗಿತ್ತು.

ಇಂಗ್ಲೆಂಡ್ ತಂಡ 113 ಅಂಕಗಳಿಂದ ಪಾಯಿಂಟ್ಸ್ ಟೇಬಲ್‌ನಲ್ಲಿ ಎರಡನೇ ಸ್ಥಾನಕ್ಕೆ ಲಗ್ಗೆ ಇಟ್ಟಿದೆ. ಕಳೆದ ವರ್ಷ ವೆಸ್ಟ್ ಇಂಡೀಸ್, ಶ್ರೀಲಂಕಾ ಹಾಗೂ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಗಳಲ್ಲಿ ಬೆನ್ ಸ್ಟೋಕ್ಸ್ ನಾಯಕತ್ವದ ಇಂಗ್ಲೆಂಡ್ ತಂಡ ಗೆಲುವು ಪಡೆದಿತ್ತು.

ಆಸ್ಟ್ರೇಲಿಯಾಕ್ಕೆ ಅಗ್ರಸ್ಥಾನ: ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ಗೆ ಫೈನಲ್‌ಗೆ ಪ್ರವೇಶ ಮಾಡಿರುವ ಆಸ್ಟ್ರೇಲಿಯಾ ತಂಡವು 126 ಅಂಕಗಳ ಮೂಲಕ ಐಸಿಸಿ ಟೆಸ್ಟ್ ಶ್ರೇಯಾಂಕದಲ್ಲಿ ಅಗ್ರ ಸ್ಥಾನದಲ್ಲಿ ಮುಂದುವರಿದಿದೆ. ಆಸ್ಟ್ರೇಲಿಯಾ ಎದುರು ಫೈನಲ್‌ನಲ್ಲಿ ಕಾದಾಟ ನಡೆಸಲಿರುವ ದಕ್ಷಿಣ ಆಫ್ರಿಕಾ ತಂಡ 111 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ಇಳಿದಿದೆ.

ವೈಟ್‌ಬಾಲ್ ಕ್ರಿಕೆಟ್‌ನಲ್ಲಿ ಭಾರತಕ್ಕೆ ಅಗ್ರ ಸ್ಥಾನ

ಟೆಸ್ಟ್ ಶ್ರೇಯಾಂಕದಲ್ಲಿ ಕುಸಿದರೂ ಭಾರತ ತಂಡ, ವೈಟ್‌ಬಾಲ್ ಕ್ರಿಕೆಟ್‌ನಲ್ಲಿ ಪ್ರಾಬಲ್ಯ ಮೆರೆದಿದೆ. ಏಕದಿನ ಹಾಗೂ ಟಿ20 ಕ್ರಿಕೆಟ್ ತಂಡಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನಗಳನ್ನು ಕಾಯ್ದುಕೊಂಡಿದೆ. 124 ಅಂಕಗಳೊಂದಿಗೆ ಟೀಮ್ ಇಂಡಿಯಾ, ಏಕದಿನ ತಂಡಗಳ ಶ್ರೇಯಾಂಕದಲ್ಲಿ ಅಗ್ರ ಸ್ಥಾನವನ್ನು ಅಲಂಕರಿಸಿದೆ. ಇತ್ತೀಚೆಗೆ ಭಾರತ ತಂಡ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದಿತ್ತು. ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ಟಿ20 ಯುವ ತಂಡ ಐಸಿಸಿ ಟಿ20 ತಂಡಗಳ ಶ್ರೇಯಾಂಕದಲ್ಲಿಯೂ ಅಗ್ರ ಸ್ಥಾನದಲ್ಲಿದೆ. 2024ರಿಂದ ಇಲ್ಲಿಯವರೆಗೂ ಭಾರತ ಟಿ20 ತಂಡ ಸೋಲಿಲ್ಲದೆ ಮುನ್ನುಗ್ಗುತ್ತಿದೆ. ಐಸಿಸಿ ಚಾಂಪಿಯನ್ಸ್ ಟ್ರೋಫಿ ರನ್ನರ್ ಅಪ್ ನ್ಯೂಜಿಲೆಂಡ್ ತಂಡ ಎರಡನೇ ಸ್ಥಾನಕ್ಕೆ ಲಗ್ಗೆ ಇಟ್ಟಿದೆ.

ಹೈದರಾಬಾದ್ ತಂಡಕ್ಕೆ ಹರ್ಷ್ ದುಬೆ ಸೇರ್ಪಡೆ

ದೆಹಲಿ: ಐಪಿಎಲ್ ಆರಂಭವಾದ ಕೆಲವು ದಿನಗಳಲ್ಲೇ ಆಸ್ಟ್ರೇಲಿಯಾ ಸ್ಪಿನ್ನರ್ ಆ್ಯಡಂ ಝಂಪ ಗಾಯಗೊಂಡು ಇಡೀ ಟೂರ್ನಿಯಿಂದ ಹೊರಗುಳಿದಿದ್ದರು. ಅವರ ಸ್ಥಾನದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಸ್ಮರಣ್ ರವಿಚಂದ್ರನ್ ಸೇರ್ಪಡೆಯಾಗಿದ್ದರು. ಆದರೆ ಈಗ ಸ್ಮರಣ್ ಕೂಡ ಗಾಯಗೊಂಡು ಐಪಿಎಲ್ ಟೂರ್ನಿಯ ಇನ್ನುಳಿದ ಭಾಗದಿಂದ ಹೊರಗುಳಿದಿದ್ದಾರೆ. ಸ್ಮರಣ್ ಬದಲಿಗೆ ಹೈದರಾಬಾದ್ ತಂಡಕ್ಕೆ ವಿದರ್ಭ ತಂಡದ ಆಲ್‌ರೌಂಡರ್ ಹರ್ಷ್ ದುಬೆಗೆ ಎಸ್‌ಆರ್‌ಎಚ್ ತಂಡದಲ್ಲಿ ಸ್ಥಾನವನ್ನು ನೀಡಲಾಗಿದೆ.

ಹರ್ಷ್ ದುಬೆ 16 ಟಿ20, 20 ಲಿಸ್ಟ್ ಎ ಮತ್ತು 18 ಪ್ರಥಮ ದರ್ಜೆ ಪಂದ್ಯಗಳಲ್ಲಿ ಒಟ್ಟು 127 ವಿಕೆಟ್‌ಗಳನ್ನು ಪಡೆದಿದ್ದಾರೆ ಮತ್ತು 941 ರನ್‌ಗಳನ್ನು ಗಳಿಸಿದ್ದಾರೆ. ಅವರನ್ನು ಹೈದರಾಬಾದ್ ಫ್ರಾಂಚೈಸಿ ಮೂಲ ಬೆಲೆ 30 ಲಕ್ಷ ರೂಗೆ ತೆಗೆದುಕೊಂಡಿದೆ. ಇತ್ತೀಚಿನ ರಣಜಿ ಟ್ರೋಫಿಯಲ್ಲಿ ಹರ್ಷ್ ದುಬೆ ಅದ್ಭುತ ಪ್ರದರ್ಶನ ನೀಡಿದ್ದರು. ಈ ವರ್ಷದ ಆರಂಭದಲ್ಲಿ ಅವರನ್ನು ಟೂರ್ನಿ ಶ್ರೇಷ್ಠ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಆ ಟೂರ್ನಿಯಲ್ಲಿ ಅವರು 476 ರನ್ ಗಳಿಸಿ 69 ವಿಕೆಟ್‌ಗಳನ್ನು ಕಬಳಿಸಿದರು. ಅವರ ಪ್ರದರ್ಶನದಿಂದಾಗಿ ವಿದರ್ಭ ತಂಡವು ರಣಜಿ ಟ್ರೋಫಿಯನ್ನು ಗೆದ್ದುಕೊಂಡಿತ್ತು.

ಹರ್ಷ್ ದುಬೆ 2021ರ ಫೆಬ್ರವರಿಯಲ್ಲಿ ವಿಜಯ್ ಹಝಾರೆ ಟ್ರೋಫಿಯಲ್ಲಿ ತಮಿಳುನಾಡು ವಿರುದ್ಧ ಲಿಸ್ಟ್-ಎ ಪಂದ್ಯಕ್ಕೆ ಪದಾರ್ಪಣೆ ಮಾಡಿದ್ದರು, ಬಳಿಕ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಅರುಣಾಚಲ ಪ್ರದೇಶ ವಿರುದ್ಧ ಟಿ20ಯಲ್ಲೂ ಆಡಿದ್ದರು. 18 ಪ್ರಥಮ ದರ್ಜೆ ಪಂದ್ಯಗಳಲ್ಲಿ 24.44 ಸರಾಸರಿಯಲ್ಲಿ 709 ರನ್ ಗಳಿಸಿದ್ದಾರೆ. ಹರ್ಷ್ ದುಬೆ ಎಡಗೈ ಸ್ಪಿನ್ ಬೌಲರ್ ಆಗಿದ್ದು, 18 ಪಂದ್ಯಗಳಲ್ಲಿ 97 ವಿಕೆಟ್‌ಗಳನ್ನು ಪಡೆದಿದ್ದಾರೆ.

ಕಂಬಳಕ್ಕೆ ಗ್ರಾಮೀಣ ಕ್ರೀಡಾ ಮಾನ್ಯತೆ

ಬೆಂಗಳೂರು: ಕರಾವಳಿ ಭಾಗದ ಸಾಂಪ್ರದಾಯಿಕ ಕ್ರೀಡೆಯಾಗಿರುವ ಕಂಬಳಕ್ಕೆ ಗ್ರಾಮೀಣ ಕ್ರೀಡೆಯ ಸ್ಥಾನಮಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶೀಲನಾ ಸಭೆಯಲ್ಲಿ, ಕ್ರೀಡಾಕೂಟ ಅನುದಾನಕ್ಕೆ ಆನ್‌ಲೈನ್ ದಾಖಲೆ ಕಂಬಳವನ್ನು ಗ್ರಾಮೀಣ ಕ್ರೀಡೆ ಎಂದು ಮಾನ್ಯತೆ ನೀಡಿ ಪ್ರೋತ್ಸಾಹಿಸುವ ಕುರಿತು ಚರ್ಚಿಸಲಾಯಿತು.

ಕರ್ನಾಟಕದಲ್ಲಿ ಕ್ರೀಡಾ ಪ್ರಾಧಿಕಾರವನ್ನು ರಚಿಸಿದರೂ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಕಾಣುತ್ತಿಲ್ಲ ಎಂದು ಅಧಿಕಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡರು. ಅಧಿಕಾರಿಗಳ ನಿರ್ಲಕ್ಷ್ಯವನ್ನು ತರಾಟೆಗೆ ತೆಗೆದುಕೊಂಡ ಅವರು, ಪ್ರಾಧಿಕಾರ ಮಾಡಿದ ಉದ್ದೇಶವೇ ಈಡೇರದಿದ್ದರೆ ಇದನ್ನು ಮಾಡಿ ಪ್ರಯೋಜನವೇನು? ಆರ್ಥಿಕ ಇಲಾಖೆ 176 ತರಬೇತು ದಾರರ ನೇಮಕಾತಿಗೆ ಸೂಚಿಸಿ ಒಂದು ವರ್ಷ ಆಗಿದೆ. ಪ್ರಾಧಿಕಾರ ಈ ವರೆಗೂ ಅಗತ್ಯ ತರಬೇತುದಾರರನ್ನು ನೇಮಕ ಮಾಡಿ ಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಸಿಎಂ ಸಿದ್ದರಾಮಯ್ಯ ಅವರು ನಡೆಸಿದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪರಿಶೀಲನಾ ಸಭೆ

ಅಧಿಕಾರಿಗಳಿಗೆ ಎಚ್ಚರಿಕೆ: ನಿಗದಿತವಾಗಿ ಪ್ರಾಧಿಕಾರದ ಸಭೆಗಳನ್ನು ನಡೆಸಬೇಕು. ಸ್ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಕಾರ್ಯ ಚಟುವಟಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅದಕ್ಕಿಂತ ಉತ್ತಮ ರೀತಿಯಲ್ಲಿ ನಮ್ಮ ಮಿತಿಯೊಳಗೆ ಕ್ರೀಡಾ ಕಾರ್ಯ ಚಟುವಟಿಕೆ ನಡೆಸುವ ಸಲುವಾಗಿ, ಪ್ರತಿ ಜಿಲ್ಲೆಯಲ್ಲೂ ಕಡ್ಡಾಯವಾಗಿ ಉಪ ನಿರ್ದೇಶಕರು ಇರಬೇಕು. ಮುಂದಿನ ಐದಾರು ತಿಂಗಳಲ್ಲಿ, ದಸರಾ ಕ್ರೀಡಾಕೂಟ ಆರಂಭವಾಗುವುದರೊಳಗೆ ಪ್ರಾಧಿಕಾರ ಕ್ರಿಯಾಶೀಲವಾಗಿ ಕಾರ್ಯಪ್ರವೃತ್ತರಾಗಬೇಕು. ರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸಲು ಅನುಧಾನ ನಿಗಧಿ ಪಡಿಸಲು ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸುವ ಮೊದಲು ಕನಿಷ್ಠ 15 ರಾಷ್ಟ್ರಗಳ ಪಾಲ್ಗೊಳ್ಳುವಿಕೆ ಖಚಿತಪಡಿಸಿಕೊಳ್ಳುವ ಜತೆಗೆ, ಕೇವಲ ಲೆಟರ್ ಹೆಡ್‌ಗಳಲ್ಲಿ ರಾಷ್ಟ್ರೀಯ, ಅಂತಾ ರಾಷ್ಟ್ರೀಯ ಕ್ರೀಡಾಕೂಟ ಎಂದು ಬರುವ ಸಂಸ್ಥೆಗಳಿಗೆ ಕಡಿವಾಣ ಹಾಕಿ ಪ್ರಾಮಾಣಿಕವಾಗಿ ಕ್ರೀಡಾಕೂಟ ನಡೆಸುವವರಿಗೆ ಪ್ರೋತ್ಸಾಹ ನೀಡ ಬೇಕು. ಪ್ರತೀ ವರ್ಷ ಪ್ರಾಧಿಕಾರದ ಸಭೆ, ಆಡಿಟ್, ನೇಮಕಾತಿ ನಡೆಯಬೇಕು. ಈ ಕಾರ್ಯಗಳನ್ನು ಅಧಿಕಾರಿಗಳು ತಪ್ಪಿದರೆ ಸಹಿಸಲ್ಲ ಎಂದು ಎಚ್ಚರಿಕೆ ನೀಡಿದರು.

ಅಗ್ರಸ್ಥಾನದಲ್ಲಿರುವ ಪಾಟೀದಾರ್ ಪಡೆ | ಆಟಗಾರರ ಸ್ಥಿರ ಪ್ರದರ್ಶನ

ಆರ್‌ಸಿಬಿಗೆ ಇನ್ನುಳಿದಿರುವುದು 3 ಪಂದ್ಯಗಳು

ಬೆಂಗಳೂರು: ಈ ಆವೃತ್ತಿಯ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಈವರೆಗೆ 11 ಪಂದ್ಯಗಳನ್ನಾಡಿದೆ. ತಂಡವು 8 ಪಂದ್ಯಗಳಲ್ಲಿ ಜಯ ಸಾಧಿಸಿದರೆ, ಮೂರು ಪಂದ್ಯಗಳಲ್ಲಿ ಮುಗ್ಗರಿಸಿದೆ. ಒಟ್ಟು 16 ಅಂಕಗಳನ್ನು ಸಂಪಾದಿಸಿದೆ.

ರಜತ್ ಪಾಟೀದಾರ್ ಪಡೆಯ ಪಾಲಿಗೆ ಮುಂದಿನ ಮೂರು ಪಂದ್ಯಗಳು ತುಂಬಾ ಮಹತ್ವದ್ದಾಗಿದೆ. ಈ ಮೂರು ಪಂದ್ಯಗಳಲ್ಲಿ ಆರ್‌ಸಿಬಿ ತಂಡವು ಒಂದು ತಂಡದ ವಿರುದ್ಧ ಗೆಲುವು ದಾಖಲಿಸಿದರೆ ಅಧಿಕೃತವಾಗಿ ಪ್ಲೇಆಫ್ ಹಂತಕ್ಕೇರಲಿದೆ. ಒಂದು ವೇಳೆ ಮೂರು ಪಂದ್ಯಗಳಲ್ಲೂ ಜಯ ಗಳಿಸಿದರೆ, ಅಂಕಪಟ್ಟಿಯಲ್ಲಿ ಅಗ್ರಸ್ಥಾನಿಯಾಗುವ ಅವಕಾಶವೂ ದೊರೆಯುತ್ತದೆ.

ಇದೇ ಶುಕ್ರವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡಗಳು ಮುಖಾಮುಖಿಯಾಗಲಿದೆ. ಲಖನೌನಲ್ಲಿರುವ ಏಕಾನ ಸ್ಟೇಡಿಯಂನಲ್ಲಿ ನಡೆಯಲಿರುವ ಆ ಪಂದ್ಯದಲ್ಲಿ ಲಖನೌ ತಂಡದ ಪ್ಲೇಆಫ್ ಭವಿಷ್ಯವೂ ನಿರ್ಧಾರವಾಗಲಿದೆ. ಆರ್‌ಸಿಬಿ ತಂಡ ಆ ಪಂದ್ಯದಲ್ಲಿ ಗೆದ್ದರೆ ಆಗ ಒಟ್ಟು 18 ಅಂಕ ಆಗಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್‌ರೈಸರ್ಸ್ ಹೈದರಾಬಾದ್ ನಡುವಿನ ಪಂದ್ಯವು 13ರಂದು ನಡೆಯಲಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಆ ಪಂದ್ಯವನ್ನು ಗೆಲ್ಲುವ ಮೂಲಕ ಆರ್‌ಸಿಬಿ ತನ್ನ ಪ್ಲೇಆಫ್ ಪ್ರವೇಶವನ್ನು ಅಧಿಕೃತಗೊಳಿಸಬಹುದು.

ಲೀಗ್ ಹಂತದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕೊನೆಯ ಎದುರಾಳಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವಾಗಿದ್ದು, ಮೇ 17ರಂದು ನಡೆಯಲಿರುವ ಆ ಪಂದ್ಯದ ಮೂಲಕ ಆರ್‌ಸಿಬಿ ತಂಡವು ತನ್ನ ಲೀಗ್ ಹಂತದ ಪಂದ್ಯಗಳನ್ನು ಮುಗಿಸಲಿದೆ.

ಒಂದು ವೇಳೆ ಈ ಮೂರು ಪಂದ್ಯಗಳಲ್ಲೂ ಗೆಲುವು ದಾಖಲಿಸಿದರೆ ಆರ್‌ಸಿಬಿ ತಂಡದ ಒಟ್ಟು ಅಂಕವು 22 ಆಗಲಿದ್ದು, ಆ ಮೂಲಕ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿ ಮೊದಲ ಕ್ವಾಲಿಫೈಯರ್ ಪಂದ್ಯವನ್ನಾಡಬಹುದಾಗಿದೆ.